ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ವಾಯುಮಾಲಿನ್ಯ ನಿಯಂತ್ರಿಸಿ’

ವಾಯುಮಾಲಿನ್ಯ ನಿಯಂತ್ರಣಕ್ಕೆ ಕ್ರಮಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಯಿತು

ಪ್ರಸಾದ್‌ಗೆ ಗೌರವ

ಭಾರತದ ರಘು ಪ್ರಸಾದ್ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ‘2025ನೇ ಸಾಲಿನ ಎಫ್‌ಐಎಚ್ ವರ್ಷದ ಅಂಪೈರ್’ ಗೌರವಕ್ಕೆ ಪಾತ್ರರಾಗಿದ್ದಾರೆ

ಸೆನ್ಸೆಕ್ಸ್ 84,673 | ನಿಫ್ಟಿ 25,910 | $/₹ 88.60 | ಚಿನ್ನ (Std. 10g) ₹1,27,350 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,62,700 (ಬೆಂಗಳೂರು)

ಇಬ್ಬಣ: ಅಧಿಕಾರದ ಪಣ

ಕರ್ನಾಟಕದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ‘ಅಧಿಕಾರ’ಕ್ಕಾಗಿ ನಡೆಯುತ್ತಿರುವ ಇಬ್ಬಣಗಳ ಪಟ್ಟು–ಪ್ರತಿಪಟ್ಟಿನ ರಾಜಕೀಯ ಮತ್ತಷ್ಟು ರಂಗೇರಿದೆ. ‘ವಾಗ್ದಾನ’ದಂತೆ ಅಧಿಕಾರ ಹಸ್ತಾಂತರ ನಡೆಯಲೇಬೇಕು ಎಂದು ಡಿ.ಕೆ. ಶಿವಕುಮಾರ್ ಹಕ್ಕೊತ್ತಾಯ ಮಂಡಿಸಲು ಮುಂದಾಗಿದ್ದರೆ, ಅವಧಿ ಪೂರ್ಣಗೊಳಿಸಲೇಬೇಕೆಂಬ ಉಮೇದಿನಲ್ಲಿರುವ ಸಿದ್ದರಾಮಯ್ಯ ಅವರು, ಸಂಪುಟ ಪುನರ್‌ರಚನೆಯ ಅಸ್ತ್ರ ಹಿಡಿದು, ಎದುರಾಳಿ ಬಣವನ್ನು ಹಿಮ್ಮೆಟ್ಟಿಸುವ ತಯಾರಿಯಲ್ಲಿದ್ದಾರೆ.

ಅಧಿಕಾರ ಹಸ್ತಾಂತರದ ಪಟ್ಟು

ನವದೆಹಲಿ: ‘ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೆ ಮುನ್ನ ನೀಡಿದ್ದ ವಾಗ್ದಾನದಂತೆ ಅಧಿಕಾರ ಹಸ್ತಾಂತರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸ್ಪಷ್ಟ ನಿರ್ದೇಶನ ನೀಡಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಅವರ ತಮ್ಮ ಡಿ.ಕೆ. ಸುರೇಶ್ ಅವರು ಹೈಕಮಾಂಡ್ ಮೇಲೆ ನಿರಂತರ ಒತ್ತಡ ಹೇರುವತ್ತ ಲಕ್ಷ್ಯ ಕೊಟ್ಟಿದ್ದಾರೆ.

ಇದೇ 20ಕ್ಕೆ ಎರಡೂವರೆ ವರ್ಷ ಪೂರೈಸುತ್ತಿರುವ ಸಿದ್ದರಾಮಯ್ಯ ಅವರು ಸಂಪುಟ ಪುನರ್‌ರಚನೆಯ ದಾಳ ಉರುಳಿಸುವ ಮೂಲಕ ‘ಐದು ವರ್ಷಗಳ ಅವಧಿಗೆ ನಾನೇ ಮುಖ್ಯಮಂತ್ರಿ’ ಎಂಬ ಸಂದೇಶ ರವಾನಿಸಲು ಹೊರಟಿದ್ದಾರೆ. ಸಿದ್ದರಾಮಯ್ಯ ಬಣದ ‘ಆಟ’ಕ್ಕೆ ಪ್ರತಿತಂತ್ರ ಹೆಣೆದಿರುವ ಡಿ.ಕೆ. ಸಹೋದರರು ಅಧಿಕಾರ ಹಸ್ತಾಂತರ ವಿಷಯ ಈಗಲೇ ಇತ್ಯರ್ಥವಾಗಬೇಕು ಎಂದು ಪಟ್ಟು ಹಿಡಿದಿದ್ದಾರೆ.

‘ನಿಮ್ಮ ಮಾತಿಗೆ ಒಪ್ಪಿ ಎರಡೂವರೆ ವರ್ಷ ಸಂಯಮದಿಂದ ಕಾದಿದ್ದೇವೆ. ಕೆಲಸಕ್ಕೆ ನ್ಯಾಯಯುತ ‘ಕೂಲಿ’ ನೀಡುವ ಸರದಿ ನಿಮ್ಮದು’ ಎಂಬ ಪ್ರಬಲವಾದವನ್ನು ಹೈಕಮಾಂಡ್ ಮುಂದೆ ಇಟ್ಟಿದ್ದಾರೆ.

▶6

ಸಂಪುಟ ಪುನರ್‌ರಚನೆ ಪ್ರತಿಪಟ್ಟು

ಬೆಂಗಳೂರು: ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ರಾಜ್ಯ ಸಚಿವ ಸಂಪುಟ ಪುನರ್‌ರಚನೆಗೆ ಪಟ್ಟು ಹಿಡಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಆ ಮೂಲಕ ‘ಅಧಿಕಾರ ಹಸ್ತಾಂತರ’ ಕುರಿತ ಚರ್ಚೆಗೆ ಕೊನೆಹಾಡುವ ಶತಪ್ರಯತ್ನ ನಡೆಸಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸಲಹೆಯಂತೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ದೆಹಲಿಯಲ್ಲಿ ಒಂದು ತಾಸು ಚರ್ಚೆ ನಡೆಸಿರುವ ಮುಖ್ಯಮಂತ್ರಿ, ಸಂಪುಟ ಪುನರ್‌ರಚನೆಯ ಅಗತ್ಯವನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಕೆಲವು ಸಚಿವರ ಕಾರ್ಯವೈಖರಿ ತೃಪ್ತಿಕರವಾಗಿಲ್ಲದ ಕಾರಣ, ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡದವರನ್ನು ಕೈಬಿಟ್ಟು, ಹೊಸಬರಿಗೆ ಅವಕಾಶ ನೀಡುವ ಮೂಲಕ ಸರ್ಕಾರ ಮತ್ತು ಪಕ್ಷಕ್ಕೆ ಹೊಸ ಚೈತನ್ಯ ತುಂಬುವ ಅನಿವಾರ್ಯ ಇದೆ ಎಂದೂ ಪ್ರತಿಪಾದಿಸಿದ್ದಾಗಿ ಮೂಲಗಳು ಖಚಿತಪಡಿಸಿವೆ.

ಬಿ. ನಾಗೇಂದ್ರ ಮತ್ತು ಕೆ.ಎನ್. ರಾಜಣ್ಣ ಅವರ ರಾಜೀನಾಮೆಯಿಂದ ತೆರವಾದ ಎರಡು ಸ್ಥಾನಗಳನ್ನು ತುಂಬುವ ಜೊತೆಗೆ, 10ರಿಂದ 12 ಸಚಿವರನ್ನು ಬದಲಿಸಲು ಮುಖ್ಯಮಂತ್ರಿ ಅವರು ಮುಂದಾಗಿದ್ದಾರೆ.

▶6

ಶಬರಿಮಲೆ: ಮಹಿಳೆ ಸಾವು

ತಿರುವನಂತಪುರ: ‘ಮಂಡಲ– ಮಕರವಿಳಕ್ಕು’ ತೀರ್ಥ ಯಾತ್ರೆ ಪ್ರಯುಕ್ತ ಶಬರಿಮಲೆ ದೇವಸ್ಥಾನಕ್ಕೆ ಎರಡು ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸಿದ್ದು, 58 ವರ್ಷದ ಮಹಿಳೆಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ವಿವರ ▶11

ಕಮಲ ಪಡೆಯಲ್ಲೂ ಚಟುವಟಿಕೆ ಬಿರುಸು

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಜಯ ಗಳಿಸಿದ್ದರಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕ ಪ್ರಕ್ರಿಯೆ ನಡೆಯುವ ಸಂಭವ ಇದೆ. ಅದಕ್ಕೂ ಮೊದಲು ಕರ್ನಾಟಕ, ಉತ್ತರ ಪ್ರದೇಶ ಹಾಗೂ ರಾಜಸ್ಥಾನ ರಾಜ್ಯ ಘಟಕಗಳ ಅಧ್ಯಕ್ಷರ ಚುನಾವಣೆ ನಡೆಯಲಿದೆ.

ಈ ಬಗ್ಗೆ ಸುಳಿವು ಪಡೆದಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಇದೇ 22 ಹಾಗೂ 23ರಂದು ದೆಹಲಿ ಪ್ರವಾಸ ಕೈಗೊಂಡು ಪಕ್ಷದ ವರಿಷ್ಠರನ್ನು ಕಾಣಲಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷರಾಗಿ ಈಚೆಗಷ್ಟೇ ಎರಡು ವರ್ಷ ಪೂರ್ಣಗೊಳಿಸಿರುವ ವಿಜಯೇಂದ್ರ ಅವರು, ರಾಜ್ಯ ಘಟಕದಲ್ಲಿನ ಗೊಂದಲವನ್ನು ಶೀಘ್ರ ಬಗೆಹರಿಸುವಂತೆ ವಿನಂತಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪೋಕ್ಸೊ ಪ್ರಕರಣ: ಬಿಎಸ್‌ವೈಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಪ್ರಕರಣದ ಮೊದಲ ಆರೋಪಿಯಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಇಲ್ಲಿನ ವಿಶೇಷ ಸೆಷನ್ಸ್ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿದೆ.

ಪ್ರಕರಣದ ಆರೋಪಿಗಳಾದ ಬಿ.ಎಸ್. ಯಡಿಯೂರಪ್ಪ, ವೈ.ಎಂ.ಅರುಣ, ಎಂ.ರುದ್ರೇಶ ಹಾಗೂ ಜಿ.ಮರಿಸ್ವಾಮಿ ಅವರಿಗೆ ಸಮನ್ಸ್ ಜಾರಿಗೊಳಿಸಿ ಡಿಸೆಂಬರ್ 2ಕ್ಕೆ ಕೋರ್ಟ್‌ಗೆ ಖುದ್ದು ಹಾಜರಾಗಲು ಆದೇಶಿಸಲಾಗಿದೆ.

ಈ ಸಂಬಂಧ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಮಂಗಳವಾರ ಪ್ರಸ್ತುತ ಪಡಿಸಿದ ಅರ್ಜಿಯನ್ನು ಪುರಸ್ಕರಿಸಿದ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಕೋರ್ಟ್–Iರ ನ್ಯಾಯಾಧೀಶೆ ಸುಜಾತಾ ಅವರು 30 ದಿನಗಳ ಒಳಗಾಗಿ ಸಾಕ್ಷಿ ವಿಚಾರಣೆ ಆಗಬೇಕು ಎಂಬ ಕಾರಣಕ್ಕೆ ಸಮನ್ಸ್ ಜಾರಿಗೆ ಆದೇಶಿಸಿದರು.



ಹೈಕೋರ್ಟ್ ಆದೇಶ: ‘ಪೋಕ್ಸೊ ಅಪರಾಧಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧದ ಆರೋಪಗಳನ್ನು ಪರಿಗಣಿಸಿ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಕೋರ್ಟ್–I ಹೊರಡಿಸಿರುವ ಸಮನ್ಸ್ ಜಾರಿ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿ ಯಡಿಯೂರಪ್ಪ, ವೈ.ಎಂ.ಅರುಣ, ಎಂ.ರುದ್ರೇಶ ಹಾಗೂ ಜಿ.ಮರಿಸ್ವಾಮಿ ಸಲ್ಲಿಸಿದ್ದ ಎರಡು ಪ್ರತ್ಯೇಕ ರಿಟ್ ಅರ್ಜಿಗಳನ್ನು ಪುರಸ್ಕರಿಸಲು ಹೈಕೋರ್ಟ್ ಇತ್ತೀಚೆಗಷ್ಟೇ ನಿರಾಕರಿಸಿತ್ತು.

‘ಯಡಿಯೂರಪ್ಪ ಅವರ ಹಾಜರಿ ಅಗತ್ಯವಿಲ್ಲ ಎಂದಾದರೆ ಅವರನ್ನು ವಿಚಾರಣೆಗೆ ಹಾಜರಾಗುವಂತೆ ಒತ್ತಾಯಿಸಬಾರದು. ವಿನಾಯತಿ ಕೋರಿದರೆ ಮನವಿಯನ್ನು ಪುರಸ್ಕರಿಸಬೇಕು. ಈ ನ್ಯಾಯಪೀಠ ಮತ್ತು ಸಕ್ಷಮ ನ್ಯಾಯಾಲಯದ ಆದೇಶಗಳಲ್ಲಿ ಉಲ್ಲೇಖಿಸಲಾದ ಅಂಶಗಳ ಪ್ರಭಾವಕ್ಕೆ ಒಳಗಾಗದೇ ತನ್ನ ಮುಂದಿರುವ ಸಾಕ್ಷ್ಯಾಧಾರಗಳನ್ನು ಆಧರಿಸಿ ಪ್ರಕರಣವನ್ನು ನಿರ್ಧರಿಸಬೇಕು’ ಎಂದು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿತ್ತು.

ಕೈಲಾಸ ಜೀವನ

ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

ಕಾಲಿನ ಬಿರುಕುಗಳು

ಕಾಲುಗಳನ್ನು ಸ್ವಚ್ಛವಾಗಿ ತೊಳೆದು, ತುಸು ಹೊತ್ತು ಬೆಚ್ಚನೆ ನೀರಲ್ಲಿ ಅದ್ದಿಟ್ಟು, ಮೆತ್ತಗೆ ಮಾಡಿ. ಮೆತ್ತನೆ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. ಉಜ್ಜಬೇಡಿ. ಕಾಲಿನ ಬಿರುಕುಗಳು ತುಂಬಿ ಬರಲು ನೆರವಾಗುವುದು. ಕಾಲುಗಳ ಚರ್ಮ ನವುರು ಹಾಗೂ ಮೃದುವಾಗುವುದು.

ಗುಳ್ಳೆಗಳು, ಮೊಡವೆ

ಬೆಚ್ಚನೆ ನೀರಿನಿಂದ ಮುಖಕ್ಕೆ ಶಾಖ ಕೊಟ್ಟು, ಮೆತ್ತನೆಯ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. (ಉಜ್ಜಬೇಡಿ.) ಮೊಡವೆ, ಗುಳ್ಳೆಗಳಿಂದ ಶೀಘ್ರ ಆರಾಮ ಲಭಿಸಲು ನೆರವಾಗುತ್ತದೆ. ಮುಖ ತೇಜಸ್ವಿ, ಆಕರ್ಷಕ, ತಿಳಿಯಾಗಲು ನೆರವಾಗುವುದು.

ಕಣ್ಣುಗಳ ಉರಿತ

ಬೆಚ್ಚನೆ ನೀರಿನಿಂದ ಮುಖ ಮತ್ತು ಕಣ್ಣುಗಳನ್ನು ಸ್ವಚ್ಛ ಮಾಡಿ. ರಾತ್ರಿ ಮಲಗುವಾಗ ಕೈಲಾಸ ಜೀವನವನ್ನು ಲೇಪಿಸಿ ಮೇಲೆ ಹತ್ತಿಯ ಮಡಿಕೆಯನ್ನಿರಿಸಿ. ತಂಪು ಉಂಟಾಗಿ ಕಣ್ಣುಗಳ ಉರಿತ ಮತ್ತು ಕೆಂಪು ಕಡಿಮೆಯಾಗಲು ನೆರವಾಗುವುದು.

ಮೂಲವ್ಯಾಧಿ / ಫಿಶೂರ್

ಒಂದು ಚಮಚೆ ಕೈಲಾಸ ಜೀವನವನ್ನು ಅಷ್ಟೇ ಸಕ್ಕರೆಯೊಂದಿಗೆ ರಾತ್ರಿ 21 ದಿನಗಳ ಕಾಲ ಸೇವಿಸಿ. ಕೆಜೆ ಕ್ರೀಮ್ ಅನ್ನು ಪೀಡಿತ ಪ್ರದೇಶಕ್ಕೆ ದಿನಕ್ಕೆ 2/3 ಬಾರಿ ಅನ್ವಯಿಸಿ. ಇದು ಬಿರುಕುಗಳಿಂದ ಪರಿಹಾರವನ್ನು ತರುತ್ತದೆ. ಎಣ್ಣೆ, ಮಾಂಸ ಮತ್ತು ಮದ್ಯವನ್ನು ತಪ್ಪಿಸಿ.

ಕಾಲಿನ ಬಿರುಕುಗಳು, ಮೊಡವೆ, ಗುಳ್ಳೆಗಳು, ಕಣ್ಣುಗಳ ಉರಿತ, ಸುಡುವಿಕೆ, ಗಾಯ ಮತ್ತು ಕೊಯ್ತಗಳು, ಬಿರುಕುಗಳು... ಇತ್ಯಾದಿಗಳಿಗೆ ಪರಿಣಾಮಕಾರಿ!

ರೋಗ ಹಲವು, ಪರಿಹಾರ ಒಂದು... ಹೀಗಾಗಿ ಮಲ್ಟಿಪರ್ಪಸ್ ! ಇಂದೇ ಖರೀದಿಸಿ !

Also available on amazon | netmeds.com India Ki Pharmacy

Available in: 12g & 20g Tube, 30g, 60g, 120g, 230g Bottle

Manufacturer: ASUM, Pune: 020-24486865 I Customer Care: Prashant: 91300 26070 I asumkj@gmail.com I www.asum.com I

Kan-W25 anunaad.com

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಕರ್ನಾಟಕ KARNATAKA
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
KARNATAKA STATE POLLUTION CONTROL BOARD

50 ವರ್ಷಗಳ ಸಮರ್ಪಣೆ, 31 ಜಿಲ್ಲೆಗಳು, 1 ಧ್ಯೇಯ: ಮಾಲಿನ್ಯ ಮುಕ್ತ ಕರ್ನಾಟಕ

1974ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ದೂರದೃಷ್ಟಿಯ ಫಲವಾಗಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (KSPCB), ಐದು ದಶಕಗಳಿಂದ ನೆಲ ಮತ್ತು ಜಲ ಸಂರಕ್ಷಣೆ ಹಾಗೂ ಪರಿಸರ ಸಮತೋಲನಕ್ಕಾಗಿ ಶ್ರಮಿಸಿದೆ. ಈಗ, ಸಂಸ್ಥೆಯು ತನ್ನ ಸುವರ್ಣ ಮಹೋತ್ಸವವನ್ನು ರಾಜ್ಯದ 31 ಜಿಲ್ಲೆಗಳಲ್ಲಿ ಆಚರಿಸುತ್ತಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರೊಂದಿಗೆ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಅವರು.

ಬನ್ನಿ, ಮಾಲಿನ್ಯ ಸಮಸ್ಯೆಗೆ ಪರಿಹಾರ ಒದಗಿಸುವ ಹಾಗೂ ಜನಜಾಗೃತಿ ಮೂಡಿಸುವ ಈ ಮಹಾ ಅಭಿಯಾನದಲ್ಲಿ ನಮ್ಮೊಂದಿಗೆ ಕೈ ಜೋಡಿಸಿ.

ದಿನಾಂಕ: 19-11-2025 ಬುಧವಾರ ಬೆಳಿಗ್ಗೆ 11.00 ಗಂಟೆಗೆ

ಸ್ಥಳ: ‘ಕೃಷ್ಣ ವಿಹಾರ’, ಗೇಟ್ ನಂ.01, ಅರಮನೆ ಮೈದಾನ, ಮೇಕ್ರಿ ಸರ್ಕಲ್, ಬೆಂಗಳೂರು-560080

ಖ್ಯಾತ ಗಾಯಕ ಶ್ರೀ ವಿಜಯ್ ಪ್ರಕಾಶ್ ಹಾಗೂ ತಂಡದವರಿಂದ ರಸಮಂಜರಿ ಕಾರ್ಯಕ್ರಮ

080-25582559 | kspcbofficial | kspcb_official | kspcbkarnataka | @karnatakakspcb

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಮದೀನಾ ದುರಂತ: ಗನಿ ಕುಟುಂಬಕ್ಕೆ ಜಮೀರ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌದಿ ಅರೇಬಿಯಾದ ಮಕ್ಕಾದಿಂದ ಮದೀನಾಕ್ಕೆ ಉಮ್ರಾ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ ಹೊತ್ತಿ ಉರಿದ ಘಟನೆಯಲ್ಲಿ ಮೃತಪಟ್ಟ ಹುಬ್ಬಳ್ಳಿಯ ಅಬ್ದುಲ್ ಗನಿ ಶಿರಹಟ್ಟಿ ಅವರ ಕುಟುಂಬಕ್ಕೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ನೆರವಾಗಿದ್ದಾರೆ.

ಅಬ್ದುಲ್ ಗನಿ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಸಲು ಅವರ ಕುಟುಂಬದ ಸದಸ್ಯರಾದ ಉಮರ್ ಸಾಬ್, ಮೌಲಾ ಅಲಿ, ಮೈನುದ್ದೀನ್ ಮಖಂದರ್ ಅವರು ಮಂಗಳವಾರ ಬೆಂಗಳೂರಿಂದ ಮದೀನಾಗೆ ತೆರಳಿದರು. ಇವರಿಗೆ ವೀಸಾ ಸೇರಿದಂತೆ ವಿಮಾನ ಟಿಕೆಟ್, ಉಳಿದುಕೊಳ್ಳಲು ಹೋಟೆಲ್ ಹಾಗೂ ಇತರೆ ವ್ಯವಸ್ಥೆಯನ್ನು ಜಮೀರ್ ಅಹಮದ್ ಮಾಡಿಕೊಟ್ಟಿದ್ದಾರೆ.

ಮೃತಪಟ್ಟವರ ಅಂತ್ಯಕ್ರಿಯೆ ನಂತರ, ಉಮರ್, ಮೌಲಾ ಹಾಗೂ ಮೈನುದ್ದೀನ್ ಅವರು ಉಮ್ರಾ ಯಾತ್ರೆ ಮಾಡಿ ವಾಪಸ್ ಬರಲು ಸಚಿವರು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಮಾರ್ಗ ಮಧ್ಯೆ ವೆಚ್ಚಕ್ಕೆ ಆರ್ಥಿಕ ಸಹಾಯವನ್ನೂ ಮಾಡಿದ್ದಾರೆ.

ಅಬ್ದುಲ್ ಗನಿ ಕುಟುಂಬ ಸದಸ್ಯರು ಮದೀನಾಗೆ ತೆರಳಲು ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಮಾಹಿತಿ ಪಡೆದ ಸಚಿವರು, ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ವ್ಯವಸ್ಥೆ ಮಾಡಿದರು. ಅವರ ಕುಟುಂಬಕ್ಕೆ ಅಗತ್ಯವಾದ ಎಲ್ಲ ರೀತಿಯ ನೆರವು ಕಲ್ಪಿಸುವಂತೆ ಹಜ್ ಸಮಿತಿ ಕಾರ್ಯನಿರ್ವಹಣಾಧಿಕಾರಿ ಸರ್ಫರಾಜ್ ಖಾನ್ ಅವರಿಗೆ ಸೂಚನೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಕವಿಪ್ರನಿನಿ/ಮುಇಂ/ಪ್ರ(ಕಾ)/ತು/ಅಇಂ(ಕ)/ಸ.ಕಾನಿಇಂ–2/2025–26/9027–28 ದಿನಾಂಕ:14–11–2025

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕ.ವಿ.ಪ್ರ.ನಿ.ನಿಯ **ಬಿಡ್ ವಿಚಾರಣೆ ಸಂಖ್ಯೆ. ಕವಿಪ್ರನಿನಿ/ಮುಇಂ/ಪ್ರ(ಕಾ)/ತು/ಅಇಂ(ಕ)/ಸ.ಕಾನಿಇಂ–2/25–26/0066** ರ ಅನ್ವಯ ಕವಿಪ್ರನಿನಿ ಚಿತ್ರದುರ್ಗ 220ಕೆ.ವಿ ಸ್ವೀಕರಣಾ ಕೇಂದ್ರದ ವ್ಯಾಪ್ತಿಯ 66/11kV **ಹಾಲುರಾಮೇಶ್ವರ** ವಿದ್ಯುತ್ ಉಪಕೇಂದ್ರದಲ್ಲಿ ಒತ್ತಡದ ವಿಭಜನೆಗಾಗಿ ಹೆಚ್ಚುವರಿಯಾಗಿ 02 ಸಂಖ್ಯೆಯ ನೂತನ 11kV PCVCB ಸ್ವಿಚ್‌ಗೇರ್‌ಗಳನ್ನು ಒದಗಿಸುವುದು. ಉಪಕರಣಗಳು/ಸಾಮಗ್ರಿಗಳ ಪೂರೈಕೆ, ನಿರ್ಮಾಣ (ಸಿವಿಲ್ ಕೆಲಸಗಳು ಸೇರಿದಂತೆ), **ಭಾಗಶಃ ಟರ್ನ್‌ಕೀ ಟೆಂಡರ್ ಆಧಾರದ ಮೇಲೆ,** (KPTCL ನಿಂದ ಸರಬರಾಜು ಮಾಡಲಾಗುವ ಸ್ವಿಚ್‌ಗೇರ್‌ಗಳಂತಹ ಪ್ರಮುಖ ವಸ್ತುಗಳನ್ನು ಹೊರತುಪಡಿಸಿ ಹಾಗೂ ಪರೀಕ್ಷೆ ಮತ್ತು ಕಾರ್ಯಾರಂಭವನ್ನು ಕವಿಪ್ರನಿನಿಯಿಂದ ಕೈಗೊಳ್ಳಲಾಗುವುದು) ಮತ್ತು ಇತರ ಸಂಬಂಧಿತ ಕೆಲಸಗಳನ್ನು ಒಳಗೊಂಡಂತೆ ಬಿಡ್‌ಗಳನ್ನು ಆಹ್ವಾನಿಸಿದೆ

ಟೆಂಡರ್‌ಗಳಿಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ **"E Procurement KPTCL"** ನಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:20.11.2025** ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ, ಪ್ರಸರಣ ಭವನ,
1ನೇ ಮಹಡಿ, ತುಮಕೂರು 66/11ಕೆವಿ ಉಪಕೇಂದ್ರದ ಆವರಣ, ತುಮಕೂರು–572103.

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099

ಫೋನ್: 080–27834655, E-Mail: itstaff_ulb_bommasandra@yahoo.com

ಸಂಖ್ಯೆ: ಪು.ಕಾ.ಬೊ/ಆ.ಶಾ/ಸಿ.ಆರ್/17/2025–26 ದಿನಾಂಕ: 18.11.2025

ಸಾರ್ವಜನಿಕ ಪ್ರಕಟಣೆ

ಬೊಮ್ಮಸಂದ್ರ ಪುರಸಭಾ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ ಮುಖ್ಯಸ್ಥರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ **ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಮುಖ್ಯಾಧಿಕಾರಿ, ಪುರಸಭೆ ಬೊಮ್ಮಸಂದ್ರ ರವರನ್ನು ಸಂಪರ್ಕಿಸಿ ವರದಿ ನೀಡುವುದು.**

1. ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ ವಹಿಸುವುದು.
2. ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗು ಅವುಗಳ ಪ್ರವೇಶ ನಿರ್ಬಂಧಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡುವುದು.
3. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನ: ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದೆಂದು ತಿಳಿಯುವುದು.
4. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದೆಂದು ತಿಳಿಯುವುದು.

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಬೊಮ್ಮಸಂದ್ರ

ವಾಸಾಸಂಇ/ವಾಪ್ರ/ಜಿಎ/3867/2025–26

ಮಕ್ಕಳ ವಚನ ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಗ್ಲಿಷ್ ಮಾಧ್ಯಮ ವಿಜೃಂಭಿಸುತ್ತಿರುವಾಗ ವಚನಗಳ ಸ್ಪರ್ಧೆ ಮೂಲಕ ಕನ್ನಡ ಭಾಷೆ, ಸಂಸ್ಕೃತಿಯನ್ನು ಬಿತ್ತುವ ಮಕ್ಕಳ ವಚನ ಮೇಳ ರಾಜ್ಯದ ಎಲ್ಲೆಡೆ ನಡೆಯಲಿ' ಎಂದು ಶರಣ ಸೇವಾ ಸಮಾಜದ ಅಧ್ಯಕ್ಷ ಎಂ.ಎಸ್. ನಟರಾಜ್ ಹೇಳಿದರು.

ವಚನಜ್ಯೋತಿ ಬಳಗವು ಕಲಾಗ್ರಾಮದಲ್ಲಿ ಆಯೋಜಿಸಿರುವ ಏಳು ದಿನಗಳ ಮಕ್ಕಳ ವಚನ ಮೇಳವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ತಮ್ಮ ತೊದಲು ನುಡಿಯಲ್ಲಿ ವಚನ ಹೇಳುವುದು ಮತ್ತು ಸಾವಿರಾರು ಮಕ್ಕಳ ವಚನ ಕಲರವ ಆಲಿಸುವುದೇ ಬಹು ಚೆಂದ ಎಂದು ವಚನಜ್ಯೋತಿ ಬಳಗದ ಸಾಹಸವನ್ನು ಪ್ರಶಂಸಿಸಿದರು.

ವಚನ ಗಾಯನದಿಂದ ಆರಂಭವಾಗಿ ವಚನ ವೇಷಭೂಷಣದವರೆಗೆ 12 ಸ್ಪರ್ಧೆಗಳಲ್ಲಿ 150ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸುತ್ತಿರುವ ಮಕ್ಕಳ ವಚನ ಮೇಳವು ರಾಜಧಾನಿಯ ವಿಶಿಷ್ಟ ಸಾಂಸ್ಕೃತಿಕ ಉತ್ಸವ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ಮಕ್ಕಳ ವಚನ ಮೇಳದ ಸಮಾರೋಪವು ರವೀಂದ್ರ ಕಲಾಕ್ಷೇತ್ರದಲ್ಲಿ ಜನವರಿ 10ರಂದು ನಡೆಯಲಿದ್ದು, ವಿಜೇತರಿಗೆ ಬಹುಮಾನ ನೀಡಲಾಗುತ್ತದೆ. ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಶಂಸಾಪತ್ರ ನೀಡಲಾಗುವುದು ಎಂದರು.

ಕನ್ನಡ ಸಂಸ್ಕೃತಿ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಡಾ. ಹೊನ್ನಲಿಂಗಯ್ಯ, ಬಳಗದ ರುದ್ರಪ್ಪ ದೇಸಾಯಿ, ಪ್ರಭು ಇಸುವನಹಳ್ಳಿ, ರಾಜಾ ಗುರುಪ್ರಸಾದ್, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಮಧು, ಗಂಗಾಧರ್ ಪಾಲ್ಗೊಂಡಿದ್ದರು.

ಸಂಚಾರ ಪೊಲೀಸ್ ಆದ ಶಾಸಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಂಚಾರ ಪೊಲೀಸರ ವಿನೂತನ ಆಹ್ವಾನಕ್ಕೆ ಸ್ಪಂದಿಸಿದ ರಾಜಾಜಿನಗರ ಕ್ಷೇತ್ರದ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರು ಒಂದು ದಿನದ ಮಟ್ಟಿಗೆ ಸಂಚಾರ ಪೊಲೀಸ್ ಆಗಿ ಮಂಗಳವಾರ ಕೆಲಸ ನಿರ್ವಹಿಸಿದರು.

ಸಾರ್ವಜನಿಕರು ಒಂದು ದಿನದ ಮಟ್ಟಿಗೆ ಸಂಚಾರ ಪೊಲೀಸ್ ಆಗಿ ಕೆಲಸ ಮಾಡಲು ಪೊಲೀಸರು ಅವಕಾಶ ಕಲ್ಪಿಸಿದ್ದಾರೆ. ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಅವರೊಂದಿಗೆ ಚರ್ಚಿಸಿ, ಪೊಲೀಸ್ ಆ್ಯಪ್ ಮೂಲಕ ಸುರೇಶ್ ಕುಮಾರ್ ಅವರು ಹೆಸರು ನೋಂದಣಿ ಮಾಡಿಕೊಂಡಿದ್ದರು.

ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದಲೇ ಸಂಚಾರ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ರಾಜಾಜಿನಗರದ ಭಾಷ್ಯಂ ವೃತ್ತದಲ್ಲಿ ಮೂರು ಗಂಟೆಗಳ ಕಾಲ ಕಾರ್ಯ ನಿರ್ವಹಿಸಿದರು.

ಶಾಸಕ ಎಸ್‌ಸುರೇಶ್ ಕುಮಾರ್ ಅವರು ಕಾರು ಚಾಲಕರೊಬ್ಬರ ಜತೆಗೆ ಚರ್ಚಿಸಿದರು

ಬಳಿಕ ಸುರೇಶ್ ಕುಮಾರ್ ಅವರು ಮಾತನಾಡಿ, 'ಸಂಚಾರ ಪೊಲೀಸರು ಯಾವೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಏನೆಲ್ಲಾ ಸಮಸ್ಯೆಗಳಿವೆ ಎಂಬುದು ನನ್ನ ಅನುಭವಕ್ಕೆ ಬಂದಿದೆ' ಎಂದರು.

ನಗರದಲ್ಲಿ ಕೆನರಾ ಉತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಎರಡನೇ ಹಂತದಲ್ಲಿರುವ ಸೇವಾ ಕ್ಷೇತ್ರ ಆಸ್ಪತ್ರೆಯ ಮಾತೃಛಾಯಾ ಆವರಣದಲ್ಲಿ ಆಯೋಜಿಸಿರುವ ಕೆನರಾ ಉತ್ಸವವನ್ನು ಕೆನರಾ ಬ್ಯಾಂಕ್‌ನ ಮುಖ್ಯ ಮಹಾಪ್ರಬಂಧಕ ಬಿ. ಶಂಭುಲಾಲ್ ಮಂಗಳವಾರ ಉದ್ಘಾಟಿಸಿದರು.

ಕೆನರಾ ಬ್ಯಾಂಕ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಕೆನರಾ ಬ್ಯಾಂಕ್‌ನ ಪರಿಹಾರ ಮತ್ತು ಕಲ್ಯಾಣ ಸೊಸೈಟಿಯ ಸಹಯೋಗದಲ್ಲಿ ಈ ಉತ್ಸವ ಆಯೋಜಿಸಿದ್ದು, ಇದೇ 22ರವರೆಗೆ ನಡೆಯಲಿದೆ.

ಸೊಸೈಟಿಯ ಅಧ್ಯಕ್ಷ ಪ್ರಕಾಶ್ ಮಲ್ಯ ಮಾತನಾಡಿ, 'ಈ ಉತ್ಸವವನ್ನು 12 ವರ್ಷಗಳಿಂದ ಆಯೋಜಿಸುತ್ತಿದ್ದು, ಮಹಿಳಾ ಉದ್ಯಮಿಗಳು, ಮಹಿಳಾ ಸ್ವಸಹಾಯ ಸಂಘಗಳು ಮತ್ತು ಗ್ರಾಮೀಣ ಉದ್ಯಮಿಗಳಿಗೆ ಸೂಕ್ತ ವೇದಿಕೆಯನ್ನು ಕಲ್ಪಿಸಲಾಗುತ್ತಿದೆ' ಎಂದರು.

ಕೆನರಾ ಉತ್ಸವದಲ್ಲಿನ ಆಟಿಕೆ ಮಳಿಗೆಗೆ ಕೆನರಾ ಬ್ಯಾಂಕ್‌ನ ಮುಖ್ಯ ಮಹಾಪ್ರಬಂಧಕ ಬಿ. ಶಂಭುಲಾಲ್, ಕೆನರಾ ಬ್ಯಾಂಕ್‌ನ ಪರಿಹಾರ ಮತ್ತು ಕಲ್ಯಾಣ ಸೊಸೈಟಿಯ ಅಧ್ಯಕ್ಷ ಪ್ರಕಾಶ್ ಮಲ್ಯ ಮತ್ತಿತರರು ಭೇಟಿ ನೀಡಿದರು

ಇದೇ ಸಂದರ್ಭದಲ್ಲಿ ಯಶಸ್ವಿ ಮಹಿಳಾ ಉದ್ಯಮಿಗಳಾದ ಕಮಲಮ್ಮ, ವಿನುತಾ ಹಾಗೂ ಡೊರೆಟ್ಟೆ ಕ್ರಿಸ್ಟೆಬಲ್ ಅವರನ್ನು ಸನ್ಮಾನಿಸಲಾಯಿತು.

ಕೆನರಾ ಬ್ಯಾಂಕ್‌ನ ಉಪಮುಖ್ಯ ಪ್ರಬಂಧಕ ದಲ್ಬೀರ್ ಸಿಂಗ್ ಗ್ರೋವರ್, ಡಿ.ಎಸ್.ಆನಂದಮೂರ್ತಿ, ಕೆ.ಎಸ್.ಎಸ್. ಕಾಮತ್, ಪ್ರೇಮಾ ರತ್ನಾಕರ್, ಶ್ರೀಧರ್ ಸಗಾಬಲ, ಎಸ್.ಟಿ. ರಾಮಚಂದ್ರ, ಶಂಕರ್ ಗೌರಯ್ಯ, ರಾಜಶ್ರೀ ಸತೀಶ್, ಶೀಲಾ ಕಾಮತ್, ಬ್ರಿಜುಷಾ ಬಾಲ್, ಸುಮಂಗಲ ಉಪಸ್ಥಿತರಿದ್ದರು.

ಅಕ್ಷತ್ ಪ್ರಭಾಕರ್ ದಾಳಿಗೆ ಉತ್ತರಾಖಂಡ ತತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಗುವಿನ ದಾಳಿ ನಡೆಸಿದ ಅಕ್ಷತ್ ಪ್ರಭಾಕರ್ (20ಕ್ಕೆ5), 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಉತ್ತರಾಖಂಡ ವಿರುದ್ಧದ ಪಂದ್ಯದಲ್ಲಿ ಕರ್ನಾಟಕದ ಗೆಲುವಿನ ಕನಸಿಗೆ ಬಲ ತುಂಬಿದರು.

ಇಲ್ಲಿನ ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ 2ನೇ ಇನಿಂಗ್ಸ್‌ನಲ್ಲಿ ಉತ್ತರಾಖಂಡ 77.1 ಓವರ್‌ಗಳಲ್ಲಿ 191ರನ್‌ಗಳಿಗೆ ಆಲೌಟ್ ಆಯಿತು. ಆಯುಷ್ ದೇಸ್ವಾಲ್ ಬಳಗ ಮೊದಲ ಇನಿಂಗ್ಸ್‌ನಲ್ಲಿ 202ರನ್‌ಗಳನ್ನು ಕಲೆ ಹಾಕಿತ್ತು. 159 ರನ್‌ಗಳ ಗುರಿ ಬೆನ್ನಟ್ಟಿರುವ ಆತಿಥೇಯರು ಮಂಗಳವಾರ ದಿನದಾಟದ ಅಂತ್ಯಕ್ಕೆ 7 ಓವರ್‌ಗಳಲ್ಲಿ 1 ವಿಕೆಟ್‌ಗೆ 44ರನ್ ಗಳಿಸಿದ್ದಾರೆ. ಅಂತಿಮ ದಿನವಾದ ಬುಧವಾರ, ಗೆಲುವಿಗೆ ರಾಜ್ಯ ತಂಡ 115ರನ್‌ಗಳನ್ನು ದಾಖಲಿಸಬೇಕಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101

ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427

ಇಮೇಲ್:eemidcbpura@gmail.com

ಸಂಖ್ಯೆ : ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ / /2025–26 ದಿನಾಂಕ : 18/11/2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:16/2025–26/ದಿನಾಂಕ: 18/11/2025.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆ.ಸಿ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ಏತ ನೀರಾವರಿ ಯೋಜನೆ ಅಡಿಯಲ್ಲಿ ಅರ್ಹ ಸಮಾಲೋಚಕರಿಂದ ಟೆಂಡರ್ ಕರೆಯಲಾಗಿದೆ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp. karnataka.gov.in ನಲ್ಲಿ ದಿನಾಂಕ: 18/11/2025 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 25–11–2025 ರಂದು ಬೆಳಗ್ಗೆ 11.30 ಗಂಟೆಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಂಗಳೂರು. ಇವರ ಅಧ್ಯಕ್ಷತೆಯಲ್ಲಿ, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದ) ವಲಯ ಕೆ.ಆರ್ ವೃತ್ತ ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 05/12/2025 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06/12/2025ರ ಸಂಜೆ 17:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಡಾಕ್ಟರೇಟ್ ಪದವಿ ಪ್ರಧಾನ

ಡಾ. ಸಣ್ಣಪ್ಪಯ್ಯ ಹೆಚ್.ವಿ.

ಮೈಸೂರು ವಿಶ್ವವಿದ್ಯಾಲಯ, ಇಲ್ಲಿ ಡಾ. ಹೆಚ್.ಎನ್. ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ "ಸಣ್ಣಪ್ಪಯ್ಯ ಹೆಚ್.ವಿ. "ಅವರು ಸಾದರ ಪಡಿಸಿದ **"PLANNING FOR AN EFFECTIVE IMPLEMENTATION OF TOWNPLANNING SCHEMES IN BANGALURU METROPOLITAN REGION"** ಎಂಬ ಮಹಾ ಪ್ರಬಂಧವನ್ನು ನಗರ ಮತ್ತು ಪ್ರಾದೇಶಿಕ ಯೋಜನೆ, ವಿಷಯದಲ್ಲಿ ಪಿಹೆಚ್ ಡಿ ಪದವಿ ಪಡೆದಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿನ ಐಟಂ ನಂ. 1 ರಿಂದ 7 ರಲ್ಲಿ ವಿವರಿಸಿರುವ ಮಾಲೀಕರಿಂದ ಖರೀದಿಸಲು ಇಚ್ಚಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತುಗಳು ಸದರಿ ಷೆಡ್ಯೂಲ್ ನಲ್ಲಿ ನಮೂದಿಸಿರುವ ವ್ಯಕ್ತಿಗಳ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತುಗಳು ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು ಮೇಲೆ ನಮೂದಿಸಿರುವ ವ್ಯಕ್ತಿಗಳ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತುಗಳನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಕುಂದಣ ಹೋಬಳಿ, ತಿಂಡ್ಲು ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 10 ಎಕರೆ 17 ಗುಂಟೆ ಮತ್ತು 25¾ ಗುಂಟೆ ಖರಾಬ್ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತುಗಳು:

ನಂ.	ಸರ್ವೇ ನಂ.	ವಿಸ್ತೀರ್ಣ (ಎ =ಗು)	ಮಾಲೀಕರ ಹೆಸರು	ಚಕ್ಕುಬಂದಿ			
				ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	101/7	21 ಗು (¾ ಗು ಖರಾಬ್)	ಶ್ರೀಮತಿ. ಗೌರಮ್ಮ, ಕೋಂ ದಿವಂಗತ ಮುನಿಸುಬ್ಬಯ್ಯ	ಸರ್ವೆ ನಂ. 101/3 ರ ಜಮೀನು	ಸರ್ವೆ ನಂ. 90/8 ರ ಜಮೀನು	ಸರ್ವೆ ನಂ. 101/2 ರ ಜಮೀನು	ಸರ್ವೆ ನಂ. 92 ಮತ್ತು 100/1 ರ ಜಮೀನುಗಳು
2.	106/4	24¼ ಗು (2 ಗು ಖರಾಬ್)	ಶ್ರೀಮತಿ ನವೀನ್ ಕುಮಾರಿ, ಬಿನ್ ದಿವಂಗತ ನಾರಾಯಣಸ್ವಾಮಿ	ಸರ್ವೆ ನಂ. 105/2 ರ ಜಮೀನು	ಸರ್ವೆ ನಂ. 102/1 ಮತ್ತು 102/2 ರ ಜಮೀನುಗಳು	ಸರ್ವೆ ನಂ. 106/8 ರ ಜಮೀನು	ಸರ್ವೆ ನಂ. 103/1 ರ ಜಮೀನು
3.	169/2	1 ಎ 8¾ ಗು (1 ಗು ಖರಾಬ್)	ಶ್ರೀ. ನಾರಾಯಣಗೌಡ ಬಿನ್ ದಿವಂಗತ ಮುನಿಶಾಮಪ್ಪ	ಸರ್ವೆ ನಂ. 180 ರ ಜಮೀನು	ಸರ್ವೆ ನಂ. 166/3 ರ ಜಮೀನು	ಸರ್ವೆ ನಂ. 169/1 ರ ಜಮೀನು	ಸರ್ವೆ ನಂ. 169/3 ರ ಜಮೀನು
4.	169/3	1 ಎ 8¾ ಗು (1 ಗು ಖರಾಬ್)	ದಿವಂಗತ ಶ್ರೀ. ಮುನಿಶಾಮಪ್ಪ ಮಕ್ಕಳು ಶ್ರೀ. ರಾಮಾಂಜಿನಪ್ಪಾ, ಶ್ರೀ. ನಾರಾಯಣ ಗೌಡ, ಶ್ರೀ.ಕೃಷ್ಣಪ್ಪ ಮತ್ತು ಶ್ರೀ. ಚಂದ್ರಯ್ಯ	ಸರ್ವೆ ನಂ. 180 ರ ಜಮೀನು	ಸರ್ವೆ ನಂ. 166/3 ರ ಜಮೀನು	ಸರ್ವೆ ನಂ. 169/2 ರ ಜಮೀನು	ಸರ್ವೆ ನಂ. 168/1 ಮತ್ತು 168/2 ರ ಜಮೀನುಗಳು
5.	171/5	1 ಎ 9 ಗು (4 ಗು ಖರಾಬ್)	ಶ್ರೀ. ಎಸ್. ರಾಜು ಬಿನ್ ಶ್ರೀ. ಸುಬ್ಬಯ್ಯ	ಸರ್ವೆ ನಂ. 173 ರ ಜಮೀನು	ಸರ್ವೆ ನಂ. 164/6 ರ ಜಮೀನು	ಸರ್ವೆ ನಂ. 171/4 ರ ಜಮೀನು	ಸರ್ವೆ ನಂ. 170/1 ರ ಜಮೀನು
6.	172/1	1 ಎ (5 ಗು ಖರಾಬ್)	ಶ್ರೀ. ಆರ್. ನಟರಾಜನ್ ಬಿನ್ ಶ್ರೀ. ರಾಜಮಾಣಿಕಂ	ಸರ್ವೆ ನಂ. 111 ರ ಜಮೀನು	ಸರ್ವೆ ನಂ. 170/1 ರ ಜಮೀನು	ಸರ್ವೆ ನಂ. 173 ರ ಜಮೀನು	ಸರ್ವೆ ನಂ. 172 ರ ಜಮೀನು
7.	180	4 ಎ – 1 ಗು (10 ಗು ಖರಾಬ)	ಶ್ರೀಮತಿ. ವೆಂಕಟಮ್ಮ, ಕೋಂ ಶ್ರೀ. ಚಿಕ್ಕವೆಂಕಟರಾಯಪ್ಪ	ರಸ್ತೆ	ಸರ್ವೆ ನಂ. 169/1, 169/2 & 169/3 ರ ಜಮೀನುಗಳು	ಸರ್ವೆ ನಂ. 172 ರ ಜಮೀನು	ಸರ್ವೆ ನಂ. 181 & 108/3 ರ ಜಮೀನುಗಳು

ಬೆಂಗಳೂರು ದಿನಾಂಕ : ನವೆಂಬರ್ 19, 2025

ಸಹಿ./- **ವೀಣಾ ಟಿ.ಎಸ್,** ವಕೀಲರು, **ಕ್ರೆಸ್ಟ್ ಲಾ ಪಾರ್ಟ್ನರ್ಸ್,**

33, ರ್ಯುವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು– 560 047. ದೂ: 080-41473535 / 41473536

ಬಂಡೇಶ್ವರ ಸ್ವಾಮಿ ಅದ್ದೂರಿ ತೆಪ್ಪೋತ್ಸವ

ಬಂಡೇಮಠದ ಶ್ರೀ ಬಂಡೇಶ್ವರ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಬಂಡೇ ಮಠದ ಶ್ರೀ ಬಂಡೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ದೀಪೋತ್ಸವ, ತೆಪ್ಪೋತ್ಸವ ಸಂಭ್ರಮದಿಂದ ನಡೆಯಿತು.

ಬೆಳಿಗ್ಗೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ದೇವಸ್ಥಾನದ ಆವರಣದಲ್ಲಿ ವಿವಿಧ ರೀತಿಯ ಕಡಲೇಕಾಯಿ ಮಾರಾಟ ಜೋರಾಗಿತ್ತು.

ಸಾವಿರಾರು ಭಕ್ತಾದಿಗಳು ಸರತಿ ಸಾಲಿನಲ್ಲಿ ಸಾಗಿ ಬಂದು ದೇವರ ದರ್ಶನ ಪಡೆದರು. ಬೆಳಿಗ್ಗೆಯಿಂದಲೇ ಭಕ್ತಾಧಿಗಳಿಗೆ ಶ್ರೀಮಠದ ವತಿಯಿಂದ ಅನ್ನಪ್ರಸಾದವನ್ನು ಏರ್ಪಡಿಸಲಾಗಿತ್ತು.

ಕೋಟೆ ಯುವಕರ ಸಂಘ, ಜನಾಭಿಮಾನ ಮಹಿಳಾ ವೇದಿಕೆ, ದೇವಸ್ಥಾನದ ಭಕ್ತ ಮಂಡಳಿಯವರು ಭಾಗವಹಿಸಿ ಮುಂಜಾನೆಯಿಂದ ತಡರಾತ್ರಿಯವರೆಗೂ ಭಕ್ತಾದಿಗಳಿಗೆ ಅನ್ನಪ್ರಸಾದವನ್ನು ವಿತರಿಸಿದರು.

ಕೋಟೆ ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಸೋಮೇಶ್ವರ ಸ್ವಾಮಿಗೆ ರುದ್ರಾಭಿಷೇಕ ಸಹಿತ ವಿವಿಧ ಪೂಜಾ ಕೈಂಕರ್ಯ ನಡೆದವು.

ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಬಂಡೇಮಠದ ಶ್ರೀ ಸಚ್ಚಿದಾನಂದ ಸ್ವಾಮೀಜಿ, 'ಹಬ್ಬ ಹರಿದಿನಗಳು, ಕಾರ್ತಿಕಮಾಸ, ಶಿವರಾತ್ರಿಯಂದು ಸಾವಿರಾರು ಭಕ್ತರು ಬಂದು ಇಲ್ಲಿ ದೇವರ ದರ್ಶನ ಪಡೆಯುತ್ತಾರೆ. ಕಾರ್ತಿಕ ಮಾಸವು ಕತ್ತಲು, ಕಷ್ಟಗಳನ್ನು ತೊಲಗಿಸುವ ದೀಪಗಳ ರೂಪವೂ ಹೌದು' ಎಂದರು.

ಶಾಸಕ ಎಸ್.ಟಿ.ಸೋಮಶೇಖರ್, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ. ರುದ್ರೇಶ್, ದೇವಸ್ಥಾನ ಟ್ರಸ್ಟಿ ಕೆ.ಎಸ್.ಜಗದೀಶ್, ಪಾಲಿಕೆ ಮಾಜಿ ಸದಸ್ಯರಾದ ಆಂಜನಪ್ಪ, ಶಾರದಾ ಮುನಿರಾಜು, ಸೂಲಿಕೆರೆ ಎಸ್.ಆರ್.ಮೋಹನ್, ಕಾಂಗ್ರೆಸ್ ಮುಖಂಡ ಆರ್.ಶಿವಮಾದಯ್ಯ ಬಿಜೆಪಿ ಮುಖಂಡ ಜೆ.ರಮೇಶ್ ಉಪಸ್ಥಿತರಿದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

JOB VACANCY at DG Renewable Energy. Marketing Officer (1 Position) Sales Executive (2 Positions) Only male candidate. Two wheeler must. Location: Horamavu, Bangalore-560043. Contact: 9481827127

RV UNIVERSITY — **WALK-IN INTERVIEW** At RV University, Bengaluru
Join RV University - Shape Tomorrow's Leaders!
RV University, a premier private institution offering UG/PG in Commerce, Computer Sciences Engineering, Design, Management, Liberal Arts, Economics, Law, Film & Allied Healthcare Professions, invites applications for
TELECALLERS (Multiple Posts)
Eligibility: 12th Pass / Graduate, 0-5 yrs exp, Excellent written and verbal communication skills in English. Knowledge of Kannada & Hindi would be an advantage. Attractive compensation of Rs. 22,000-25000 PM + incentives.
Bring: Updated Resume, Photo ID (Aadhaar / PAN), Educational Certificates, Experience Letters (if any), 2 Passport size Photos to receive OFFER ON THE SPOT
Date: 22nd Nov 2025, Saturday | 28th Nov 2025, Friday | 5th Dec 2025, Friday ; Time: 10:00 AM to 1:00 PM
Venue: RV University Campus, RV Vidyaniketan Post, Mysore Road, Bengaluru - 560059. Adjacent to Pattangere Metro Station.
Walk-In & Secure Your Future!

SILICON CITY COLLEGE AUTONOMOUS (A Unit of MJ Education Trust) Approved by AICTE, New Delhi. Autonomous Re-Accredited By NAAC with 'A' Grade
#26/2 Ravindra Layout, K R Puram, Bengaluru 560036, Karnataka.
PH: 81470 93466, 81470 93467
Email: chairman@siliconcitycollege.ac.in, www.siliconcitycollege.ac.in
Empowerment Through Knowledge
Walk-in-Interview
Faculty Positions: **Professor / Associate Professor / Assistant Professor** in Computer Science
Office Admin, Front Office Executives & Admission Counsellors
Candidates may attend walk-in-interview along with their testimonials, resume and recent photograph and present a demo on 22nd November 2025 and 23rd November 2025 from 10 AM to 3 PM.

WANTED Administrator and Computer Science Lecturer. For a CBSE / State Board Educational Institution Qualification: Retired persons with relevant experience in similar institutions. Location: South / Central Bangalore Contact: bhavanbangalorepressschool@gmail.com

FUTURE KIDS PUBLICATIONS PVT LTD Publisher & Distributors of Educational Children Books required **SR. SALES OFFICER** and **SALES OFFICER** Minimum 1 to 5 Year Exp. in Sales / Marketing Salary - Rs. 25k onwords +ESI+PF+Bonus+ +Conveyance + Incentive + Vehicle Maintenance at No.381/29, 65th Cross, 5th Block, Rajajinagar, Bangalore-10. Mobile No: 9986167032 080-23145345 fkvkbooks@gmail.com

COMPETENT CBSE maths teacher needed, capable of teaching 8th, 9th and 10th classes, for a school near Uppala, kasaragod district, Kerala.(30 kms from mangalore) Call 8921908624

WANTED MANAGERS, Sales Executives, Telecallers to work different parts of Bangalore earn 20,000-30,000: 8867627879

Placement Bureaus/Consultants

ALL HIRING & Placements needs, Contact ANZ Consultants, Malleshwaram, Bengaluru. Call: 8183046799, 08023443555, Email: anzconsultants@yahoo.co.in

Marketing & Sales

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

Accounts & Finance

WANTED EXPERIENCED Accounts Assistant with Tally, GST, Computer Knowledge. Reply mundhralighting@gmail.com 9986033339

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Engg/ Production Technical

REQUIRE: PURCHASE Engineers with Electrical, Mechanical Or equivalent with minimum experience, Senior Marketing Executive for our special pumps Manufacturing Unit at Bangalore. Email: flowoilpumps@hotmail.com

REAL ESTATE BUYING

General

General

WANTED INDUSTRIES Runing or closed in Private or KIADB/ KSSIDC 10Guntas to 4Acres Bangalore Urban/ Rural. Wanted Residential/ Commercial from 4000 to 20000sft, and Agricultural Land 2 to 10Acres and above. Verna Developers, Barton Center, MG Road, Blr. 9620253180.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Tumkur Road

SALE INDUSTRIAL, Warehouse, Commercial, Agriculture Land. 2.5/ 4/ 9.5/ 20 Acres around Nelamangala. 9141326819, 9035334418

RENTAL PROPERTIES

Accommodation Available

Commercial

COMMERCIAL SPACE For Rent 1600sqft, First Floor, ITI Layout Main Road, Sector-7, HSR, Prime Location, Contact Owner: 9343594249 8217449006

BUSINESS

Business Offers

Finance

MSME LOANS Available for any startups companies And Existing Running companies Available for Manufacturing Units, Shops, Establishments Etc Contact- 7204995189

EDUCATIONAL

Coaching Classes

AN EDUCATIONAL trust (Malleswaram),requires M.Sc. Physics/Maths with Computer skills and good typing speed.Send Biodata to:forumforedu@gmail.com

AUTOMOTIVE

Four Wheelers Selling

Maruti

MARUTI IGNIS available for immediate sale. Automatic (2018) 52000 km. Strictly no brokers only genuine buyers. Contact 8870347278.

PUBLIC NOTICE

PUBLIC NOTICE
This is to inform the general public that our client **Mr. S. Victor,** S/o late M. Susainathan, residing at No. 30, Serpentine Street, Richmond Town, Bangalore-560025, has misplaced the original Exchange Deed bearing No. BAS-1-31036-2006-2007, Book-1, stored in CD No. BASD317, registered on 28/03/2007, registered before the Senior Sub registrar, Bangalore South Taluk, Bangalore, in respect of the vacant residential property bearing No. 14, comprised in No. 10/5, situated at Tavarekere Village, Begur Hobli, Bangalore South Taluk. In this regard he has already filed a complaint before the KSP Portal (E-lost) on 18/11/2025.
If anyone has come into possession of the said document, the same may informed or handed over to him at the address stated above or to the undersigned.
M. Arun Ponappa,
Advocate, 2nd Floor, Kasturi Complex, No.76,Mission Road,Bangalore-560 027.
M: +91 98440 43021

PERSONAL

Change of Name

CHANGE OF NAME
I, **SHOBHA LALGE SHYAM** alias **BHANGALE SHOBHA** Residing at # 63, Srikantapura, Anchepalya, Tumkur Road, Nagasandra Post, Bengaluru Rural -560073 have changed my name to **SHOBHA L.S.** vide affidavit dated 12/11/2025, before notary R. Basavaraja, Bengaluru. Henceforth I shall be called **SHOBHA L.S.** only.

I, HEMA CHIDANANDACHAR CHALUVACHARY, Residing at No.07,1st Floor, Lakshmi Residency,100 Feet Road, Narayana Nagara,3rd Block,Doddakallasandra, konanakunte Post, Bengaluru-560062. Have Changed my Name HEMA CHIDANANDACHAR CHALUVACHARY to HEMA CHIDANANDACHAR CHALUVACHAR vide affidavit Dated:18.11.2025 before Notary K.V.Mani, Bengaluru.

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: **ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)**
ನಿವಾಸ: #24, ಗುರುಕೃಪ ನಿಲಯ, 1ನೇ ಅಡ್ಡರಸ್ತೆ, ಕೆ.ಇ.ಬಿ. ಕಛೇರಿ ರಸ್ತೆ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು–560084.
Ph: 98441 65272 / 90365 52207
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಹಗಲು ಬಿರಿಯಾನಿ ಮಾರಾಟ, ರಾತ್ರಿ ಕಳ್ಳತನ

ಬಿ.ಟೆಕ್ ಪದವೀಧರ ಸೇರಿ ಐವರ ಸೆರೆ, 38 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು, ಕಾಂಪೌಂಡ್ ಒಳಗೆ ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಐವರು ಕಳ್ಳರನ್ನು ಬಂಧಿಸಿರುವ ನಗರ ಪೊಲೀಸರು, ₹52.50 ಲಕ್ಷ ಮೌಲ್ಯದ 38 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಮಹದೇವಪುರ ಹಾಗೂ ಬಂಡೇಪಾಳ್ಯ ವ್ಯಾಪ್ತಿಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.

ಅಪರಾಧ ಸುದ್ದಿ

ಮಹದೇವಪುರ ಠಾಣೆ ಪೊಲೀಸರು ಇಬ್ಬರು ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿದ್ದಾರೆ. ಮನುಕುಮಾರ್ ಮತ್ತು ಸಚಿನ್ ಬಂಧಿತರು. ಆರೋಪಿಗಳಿಂದ ₹37.50 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನ ವಶಕ್ಕೆ ಪಡೆದುಕೊಂಡಿದ್ದಾರೆ.

ಇಬ್ಬರೂ ಹಗಲು ವೇಳೆ ತಳ್ಳುವ ಗಾಡಿಯಲ್ಲಿ ಬಿರಿಯಾನಿ ಮಾರಾಟ ಮಾಡುತ್ತಿದ್ದರು. ರಾತ್ರಿ ವೇಳೆ ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದರು. ಮನುಕುಮಾರ್ ಹಾಗೂ ಸಚಿನ್ ಅವರು ಒಂದೇ ಕುಟುಂಬದ ಸಹೋದರಿಯರನ್ನು ಮದುವೆ ಆಗಿದ್ದರು. ಆರೋಪಿಗಳ ಕಳ್ಳತನ ಕೃತ್ಯದ ಬಗ್ಗೆ ಪತ್ನಿಯರಿಗೂ ಅರಿವಿತ್ತು. ಐಷಾರಾಮಿ ಜೀವನಕ್ಕಾಗಿ ಪತಿಯರ ಕೃತ್ಯಕ್ಕೆ ಅಕ್ಕ–ತಂಗಿ ಬೆಂಬಲ ನೀಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ನಗರದ ರಾಮಮೂರ್ತಿನಗರ, ಮಹದೇವಪುರ, ಎಚ್‌ಎಎಲ್, ವೈಟ್‌ಫೀಲ್ಡ್ ಸೇರಿದಂತೆ ಹಲವು ಪೊಲೀಸ್ ಠಾಣೆಗಳಲ್ಲಿ ಕಳ್ಳತನ ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಮಾಹಿತಿ ನೀಡಿದರು.

ಬಿ.ಟೆಕ್ ಪದವೀಧರನೂ ಬೈಕ್ ಕಳ್ಳ: ಬಂಡೇಪಾಳ್ಯ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿದ್ದಾರೆ.

ರಿಷಬ್ ಚಕ್ರವರ್ತಿ, ಅಜೀವುಲ್ಲಾ ಹಾಗೂ ನಜೀವುಲ್ಲಾ ಬಂಧಿತರು. ಆರೋಪಿಗಳಿಂದ ₹20 ಲಕ್ಷ ಮೌಲ್ಯದ ಒಟ್ಟು 18 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ರಿಷಬ್ ಚಕ್ರವರ್ತಿ ಬಿ.ಟೆಕ್ ಪದವಿ ಪಡೆದಿದ್ದರು. ಈ ಹಿಂದೆ ಕಳ್ಳತನ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲಿಗೆ ಹೋಗಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೂ ಮತ್ತೆ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಂಧನದಿಂದ ಬಂಡೇಪಾಳ್ಯ, ಎಲೆಕ್ಟ್ರಾನಿಕ್ ಸಿಟಿ, ಪರಪ್ಪನ ಅಗ್ರಹಾರ, ಗಿರಿನಗರ, ವಿವೇಕ್ ನಗರ, ಬಾಗಲಗುಂಟೆ, ರಾಜಗೋಪಾಲನಗರ, ಇಂದಿರಾನಗರ, ಕೆ.ಎಸ್.ಲೇಔಟ್, ಬಾಗಲಗುಂಟೆ ಹಾಗೂ ಹೆಣ್ಣೂರು ಠಾಣೆಗಳಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಕೆಲಸ ಕೊಡಿಸಿದ್ದ ಪೊಲೀಸರು

‘ಆರೋಪಿ ರಿಷಬ್ ಚಕ್ರವರ್ತಿ ಜೈಲಿನಿಂದ ಬಿಡುಗಡೆಯಾದ ಮೇಲೆ ಪೊಲೀಸರು ಠಾಣೆಗೆ ಕರೆಸಿ ಬುದ್ಧಿಮಾತು ಹೇಳಿ ಕೆಲಸ ಕೊಡಿಸಿದ್ದರು. ಆದರೆ, ರಿಷಬ್ ಮತ್ತೆ ಅದೇ ಕೃತ್ಯಕ್ಕೆ ಮುಂದಾಗಿದ್ದರು. ಕಳವು ಮಾಡಿದ ದ್ವಿಚಕ್ರ ವಾಹನವನ್ನು ಓಡಿಸುತ್ತಿದ್ದ ರಿಷಬ್ ಅವರು ಪೆಟ್ರೋಲ್ ಖಾಲಿಯಾದ ಮೇಲೆ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿ ಪರಾರಿ ಆಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಮೆಟ್ರೊ ನಿಲ್ದಾಣ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ ಆರೋಪಿ ಸೆರೆ

ರಾಜೀವ್

ಬೆಂಗಳೂರು: ನಗರದ ಮೆಟ್ರೊ ನಿಲ್ದಾಣವೊಂದನ್ನು ಸ್ಫೋಟಿಸುವುದಾಗಿ ಇ–ಮೇಲ್ ಮೂಲಕ ಬೆದರಿಕೆ ಸಂದೇಶ ಕಳುಹಿಸಿದ್ದ ಆರೋಪಿಯನ್ನು ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಬೆಳತ್ತೂರಿನ ಎರಡನೇ ಮುಖ್ಯರಸ್ತೆ, ಆರನೇ ಕ್ರಾಸ್ ನಿವಾಸಿ ರಾಜೀವ್ (62) ಬಂಧಿತ.

ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರತೀಶ್ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ 351 (2), 351(3) ಅಡಿ ರಾಜೀವ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ನವೆಂಬರ್ 11ರಂದು ರಾತ್ರಿ 11.25ಕ್ಕೆ ಬಿಎಂಆರ್‌ಸಿಎಲ್ ಅಧಿಕೃತ ಇ–ಮೇಲ್ ವಿಳಾಸಕ್ಕೆ ಬೆದರಿಕೆ ಸಂದೇಶ ಬಂದಿತ್ತು. ರಾಜೀವ್ ಶೆಟ್ಟಿ ಹೆಸರಿನ ಇ–ಮೇಲ್ ವಿಳಾಸದಿಂದ ರಾಜೀವ್ ಸಂದೇಶ ಕಳುಹಿಸಿ ಬೆದರಿಕೆ ಹಾಕಿದ್ದರು.

‘ವಿಚ್ಛೇದಿತ ಪತ್ನಿಗೆ ಮೆಟ್ರೊ ಸಿಬ್ಬಂದಿ ತಮ್ಮ ಕೆಲಸ ಮುಗಿದ ಮೇಲೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಎಚ್ಚರಿಕೆಯಿಂದ ಇರಿ. ಇದು ಮುಂದುವರಿದರೆ ಯಾವುದಾದರೂ ಮೆಟ್ರೊ ನಿಲ್ದಾಣವನ್ನು ಸ್ಫೋಟಿಸುತ್ತೇನೆ’ ಎಂದು ಆರೋಪಿ ಇ–ಮೇಲ್‌ನಲ್ಲಿ ಉಲ್ಲೇಖಿಸಿದ್ದರು.

‘ರಾಜೇಶ್ ಅವರು ಕಳೆದ ಐದು ವರ್ಷದಿಂದ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. 15 ವರ್ಷಗಳ ಹಿಂದೆ ಪತ್ನಿಯಿಂದ ವಿಚ್ಛೇದನ ಪಡೆದುಕೊಂಡಿದ್ದರು. ಪತ್ನಿ ಪ್ರತ್ಯೇಕವಾಗಿ ಬಾಡಿಗೆ ಮನೆಯಲ್ಲಿ ನೆಲಸಿದ್ದಾರೆ. ವಿಚ್ಛೇದಿತ ಪತ್ನಿ ಮೆಟ್ರೊ ಉದ್ಯೋಗಿ ಅಲ್ಲ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಮಾನಸಿಕ ಅಸ್ವಸ್ಥನಾಗಿರುವ ಕಾರಣಕ್ಕೆ ಇ–ಮೇಲ್‌ನಲ್ಲಿ ಬೆದರಿಕೆ ಸಂದೇಶ ಕಳುಹಿಸಿದ್ದಾರೆ ಎಂಬುದು ಗೊತ್ತಾಗಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ಬಿಡದಿ: ಇಸ್ಪೀಟ್ ಚಟಕ್ಕೆ ಅಮಾಯಕನ ಕೊಲೆ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಸ್ಪೀಟ್ ಜೂಜಾಟದ ಚಟಕ್ಕೆ ಬಿದ್ದ ಹೋಟೆಲ್‌ನ ಅಡುಗೆ ಕೆಲಸಗಾರನೊಬ್ಬ, ಹಣಕ್ಕಾಗಿ ಅದೇ ಹೋಟೆಲ್‌ನಲ್ಲಿ ರಾತ್ರಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ಯುವಕನನ್ನು ಕೊಲೆ ಮಾಡಿ ಇದೀಗ ಬಿಡದಿ ಠಾಣೆ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ಈ ಘಟನೆ ನಡೆದಿದ್ದು ನ. 15ರಂದು ಬಿಡದಿ ಹೊರವಲಯದ ಲಕ್ಷ್ಮಿಸಾಗರ ಗೇಟ್‌ನಲ್ಲಿರುವ ಕದಂಬ ಹೋಟೆಲ್‌ನಲ್ಲಿ. ಚನ್ನಪಟ್ಟಣ ತಾಲ್ಲೂಕಿನ ಕೊಂಡಾಪುರ ಗ್ರಾಮದ ನಿಶಾಂತ್ (25) ಕೊಲೆಯಾದ ಯುವಕ. ರಾಮನಗರ ತಾಲ್ಲೂಕಿನ ಚಿಕ್ಕಗಂಗವಾಡಿ ಗ್ರಾಮದ ವೀರಭದ್ರಸ್ವಾಮಿ (32) ಕೊಲೆ ಆರೋಪಿ.

ವೀರಭದ್ರಸ್ವಾಮಿ

ನಿಶಾಂತ್

ಚಟಕ್ಕಾಗಿ ಸಾಲ ಮಾಡಿದ್ದ: ಆರೋಪಿ ವೀರಭದ್ರಸ್ವಾಮಿ ವಿವಾಹಿತನಾಗಿದ್ದು, ಮೂರೂವರೆ ವರ್ಷದ ಪುತ್ರ ಕೂಡ ಇದ್ದಾನೆ. ಹೋಟೆಲ್‌ನಲ್ಲಿ ದೋಸೆ ತಯಾರಿಸುವ ಕೆಲಸ ಮಾಡುತ್ತಿದ್ದ ಆತ, ಇಸ್ಪೀಟ್ ಜೂಜಾಟದ ಚಟ ಹೊಂದಿದ್ದ. ಜೂಜಾಡಿ ಹಲವೆಡೆ ಸಾಲ ಮಾಡಿಕೊಂಡಿದ್ದ ಎಂದು ಪೊಲೀಸರು ತಿಳಿಸಿದರು.

ಸಿಸಿಬಿ ಮಾದಕ ದ್ರವ್ಯ ವಿಭಾಗದಿಂದ ₹7.7 ಕೋಟಿ ಮೊತ್ತದ ಡ್ರಗ್ಸ್ ಜಪ್ತಿ

ವಿದೇಶಿ ಪ್ರಜೆಗಳೂ ಸೇರಿ 19 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತಲೆಮರೆಸಿಕೊಂಡವರ ಪತ್ತೆಗೆ ಶೋಧ
- ಎಂಡಿಎಂಎ ಕ್ರಿಸ್ಟಲ್, ಮೊಬೈಲ್ ಜಪ್ತಿ
- ನಗರದ ವಿವಿಧೆಡೆ ಕಾರ್ಯಾಚರಣೆ

ಬೆಂಗಳೂರು: ಸುದ್ದಗುಂಟೆಪಾಳ್ಯ, ಮಹದೇವಪುರ, ವರ್ತೂರು, ಕೆ.ಜಿ. ನಗರ ಸೇರಿದಂತೆ ನಗರದ ಹಲವು ಕಡೆ ಕಾರ್ಯಾಚರಣೆ ನಡೆಸಿದ ಸಿಸಿಬಿಯ ಮಾದಕ ವಸ್ತುಗಳ ನಿಯಂತ್ರಣ ಘಟಕದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಡ್ರಗ್ಸ್ ಮಾರಾಟ ಮಾಡುತ್ತಿದ್ದ 14 ವಿದೇಶಿ ಪೆಡ್ಲರ್‌ಗಳೂ ಸೇರಿದಂತೆ 19 ಮಂದಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ ₹7.7 ಕೋಟಿ ಮೌಲ್ಯದ 2 ಕೆ.ಜಿ. 804 ಗ್ರಾಂ ಎಂಡಿಎಂಎ ಕ್ರಿಸ್ಟಲ್, 2 ಕೆ.ಜಿ. 100 ಗ್ರಾಂ ಹೈಡ್ರೊ ಗಾಂಜಾ, ಒಂದು ಬೈಕ್, ಏಳು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಸುದ್ದಗುಂಟೆಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ನೈಜೀರಿಯಾದ ಅನ್ಯುವಿಲ್ ಮಾರ್ವೆಲಸ್ ಗ್ಲೋರಿ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹75 ಲಕ್ಷ ಮೌಲ್ಯದ 760 ಗ್ರಾಂ ಎಂಡಿಎಂ ಕ್ರಿಸ್ಟಲ್ ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ಮಹದೇವಪುರ ಠಾಣಾ ವ್ಯಾಪ್ತಿಯಲ್ಲಿರುವ ಪೇಯಿಂಗ್ ಗೆಸ್ಟ್ ಹಾಗೂ ಹಾಸ್ಟೆಲ್‌ನಲ್ಲಿ ನೆಲಸಿದ್ದವರಿಗೆ ಡ್ರಗ್ಸ್ ಪೂರೈಸುತ್ತಿದ್ದ ಐವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಪ್ರವೀಣ್‌ಕುಮಾರ್ (25), ಯಶವಂತ್, ರಾಹುಲ್ ಕೃಷ್ಣ (27), ಅಕ್ಷಯ್ (28), ಸಂತೋಷ್ ಕುಮಾರ್ (27) ಹಾಗೂ ರೋಷನ್ ಕುಮಾರ್ (28) ಬಂಧಿತರು.

ಪೊಬೀನಾ


ಬಿಹನಿ ಕ್ಲಾವರಿ

ರಿಚರ್ಡ್

ಮೆರ್ಸಿ

ಬಂಧಿತರಿಂದ ₹60 ಲಕ್ಷ ಮೌಲ್ಯದ 600 ಗ್ರಾಂ ಹೈಡ್ರೊಗಾಂಜಾ ಹಾಗೂ ಐದು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಾಡಿಗೆ ಮನೆಯಲ್ಲಿ ಡ್ರಗ್ಸ್ ದಾಸ್ತಾನು: ಡ್ರಗ್ಸ್ ಪೆಡ್ಲಿಂಗ್ ಮಾಡುವ ಉದ್ದೇಶದಿಂದ ಮಹದೇವಪುರದ ಬಿ.ನಾರಾಯಣಪುರದಲ್ಲಿ ಆರೋಪಿಗಳು ಬಾಡಿಗೆ ಮನೆ ಪಡೆದುಕೊಂಡಿದ್ದರು. ಆ ಮನೆಯಲ್ಲಿ ಹೈಡ್ರೊ ಗಾಂಜಾ ದಾಸ್ತಾನು ಮಾಡಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ವರ್ತೂರು ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಕೆನ್ಯಾದ ಪೊಬೀನಾ ಮುಸಿಯೊ (27) ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಇಬುಕಾ ಹಾಗೂ ತಾಂಜೇನಿಯಾದ ನೊರಾ ಜೋಸೆಫ್ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ₹2.15 ಕೋಟಿ ಮೌಲ್ಯದ ಎಂಡಿಎಂಎ ಕ್ರಿಸ್ಟಲ್, ಎರಡು ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ.

ಪ್ರವಾಸಿ ವೀಸಾ ಪಡೆದು ಪೊಬೀನಾ ಮುಸಿಯೊ ಭಾರತಕ್ಕೆ ಬಂದಿದ್ದರು. ಕಮ್ಮನಹಳ್ಳಿಯಲ್ಲಿ ಹೇರ್‌ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದರು. ಇಬುಕಾ ಹಾಗೂ ನೊರಾ ಜೋಸೆಫ್ ಅವರಿಂದ ಕಡಿಮೆ ಬೆಲೆಗೆ ಡ್ರಗ್ಸ್ ಖರೀದಿಸಿ, ಕಮ್ಮನಹಳ್ಳಿ ಸುತ್ತಮುತ್ತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

ಉಳಿದೆಡೆ 12 ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಡ್ರಗ್ಸ್ ಪರಿಶೀಲಿಸಿದ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್

ವಿದೇಶಿ ಪ್ರಜೆಗಳ ಅನಧಿಕೃತ ವಾಸ

ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಸಿಬಿಯ ಮಾದಕದ್ರವ್ಯ ನಿಗ್ರಹ ದಳದ ಅಧಿಕಾರಿ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅನಧಿಕೃತವಾಗಿ ನೆಲಸಿದ್ದ 12 ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.

ತಾಂಜೇನಿಯಾದ ಬಿಹನಿ ಕ್ಲಾವರಿ, ನೈಜೀರಿಯಾದ ರಿಚರ್ಡ್, ಉಗಾಂಡದ ಮೆರ್ಸಿ ಸೇರಿದಂತೆ ಪಾಸ್‌ಪೋರ್ಟ್ ಹಾಗೂ ವೀಸಾ ಇಲ್ಲದೇ ಅನಧಿಕೃತವಾಗಿ ನಗರದಲ್ಲಿ ನೆಲಸಿದ್ದ 12 ಮಂದಿಯನ್ನು ಬಂಧಿಸಲಾಗಿದೆ.

ಬಂಧಿತ ವಿದೇಶಿ ಪ್ರಜೆಗಳನ್ನು ಎಫ್‌ಆರ್‌ಆರ್‌ಒ ಆದೇಶದಂತೆ ನೆಲಮಂಗಲ ಸಮೀಪದ ಸೊಂಡೇಕೊಪ್ಪದ ವಲಸಿಗರ ಬಂಧನ ಕೇಂದ್ರದಲ್ಲಿ ಬಿಡಲಾಗಿದೆ. ಅವರ ದೇಶಕ್ಕೆ ಕಳುಹಿಸುವ ಪ್ರಕ್ರಿಯೆಗಳು ಆರಂಭವಾಗಿವೆ ಎಂದು ಪೊಲೀಸರು ಹೇಳಿದರು.

ಅಡ್ಡಾದಿಡ್ಡಿ ಚಾಲನೆ ಪ್ರಶ್ನಿಸಿದ್ದಕ್ಕೆ ಚಾಕು ಚುಚ್ಚಿದ ಮಹಿಳೆ

ಚಿಕ್ಕಬಳ್ಳಾಪುರ: ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಕೂಟಿ ಅಡ್ಡಾದಿಡ್ಡಿ ಚಲಾಯಿಸಿದ್ದನ್ನು ಪ್ರಶ್ನಿಸಿದ ವ್ಯಕ್ತಿಗೆ ಮಹಿಳೆಯರೊಬ್ಬರು ಚಾಕುವಿನಿಂದ ಇರಿದಿರುವ ಘಟನೆ ನಗರದಲ್ಲಿ ಮಂಗಳವಾರ ನಡೆದಿದೆ.

ವಾಪಸಂದ್ರ ಮೇಲ್ಸೇತುವೆ ಬಳಿ ಸ್ಕೂಟಿಯಲ್ಲಿ ಬಾಗೇಪಲ್ಲಿ ಕಡೆಯಿಂದ ರಿಂಬಿಕಾ (28) ಬರುತ್ತಿದ್ದರು. ತಮಿಳುನಾಡು ಮೂಲದ ಅವರು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಡ್ಡಾದಿಡ್ಡಿ ಚಾಲನೆ ಮಾಡಿದ್ದನ್ನು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ನಿಖಿಲ್ ಹಾಗೂ ನರಸಿಂಹಮೂರ್ತಿ ಪ್ರಶ್ನಿಸಿದರು. ‘ನಿಮ್ಮನ್ನು ಪೊಲೀಸರಿಗೆ ಒಪ್ಪಿಸುತ್ತೇವೆ’ ಎಂದು ಯುವಕರು ಹೇಳಿದರು. ಆಗ ತನ್ನ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಸಣ್ಣ ಚಾಕುವಿನಿಂದ ನಿಖಿಲ್ ಮೇಲೆ ರಿಂಬಿಕಾ ದಾಳಿ ಮಾಡಿದ್ದು, ಅವರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಹಣ, ಮೊಬೈಲ್ ಸುಲಿಗೆ: ಬಂಧನ

ಬೆಂಗಳೂರು: ದುಶ್ಚಟಗಳಿಗೆ ಹಣ ಹೊಂದಿಸಲು ರಸ್ತೆಯಲ್ಲಿ ತೆರಳುವ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಐವರನ್ನು ಕೆಂಗೇರಿ ಠಾಣೆಯ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ಬನ್ನೇರುಘಟ್ಟದ ಶಿಕೆಪಾಳ್ಯ ಸಾಯಿ ಲೇಔಟ್‌ನ ಆರ್.ವಿಘ್ನೇಶ್ (29), ಕೋಣನಕುಂಟೆಯ ಕೆ. ಹೇಮಂತ್ (23), ಕೆಂಗೇರಿ ಕೃಷ್ಣಗಾರ್ಡನ್ ನಿವಾಸಿ ಎಸ್.ಬಾಲಾಜಿ (21), ಆರ್.ಆರ್. ನಗರದ ಕೆ.ಆರ್.ಪ್ರಜ್ವಲ್ (23), ಪಟ್ಟಣಗೆರೆಯ ವಿಶಾಲ್ ಮೂರ್ತಿ (23) ಬಂಧಿತರು.

‘ಆರೋಪಿಗಳು ಸಾರ್ವಜನಿಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹಣ, ದ್ವಿಚಕ್ರ ವಾಹನ, ಮೊಬೈಲ್ ಫೋನ್ ದೋಚಿ ಪರಾರಿ ಆಗುತ್ತಿದ್ದರು. ಆರೋಪಿಗಳ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ನಾಲ್ಕು ಹಾಗೂ ಆರ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ನ.16ರಂದು ರಾತ್ರಿ 11.45ರ ಸುಮಾರಿಗೆ ಠಾಣಾ ವ್ಯಾಪ್ತಿಯ ಗ್ಲೋಬಲ್ ವಿಲೇಜ್ ಹಿಂಭಾಗದ ಗೇಟ್ ಸಮೀಪ ನಿಂತಿದ್ದ ನಂದೀಶ್‌ಕುಮಾರ್ ಹಾಗೂ ಪುರುಷೋತ್ತಮ್ ಅವರ ಮೇಲೆ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿ ಆಗಿದ್ದರು. ನ.17ರ ಮುಂಜಾನೆ ನಿಖಿಲ್ ಜಿ. ಗೌಡ ಅವರ ಮೊಬೈಲ್ ಹಾಗೂ ದ್ವಿಚಕ್ರ ವಾಹನ ಕಸಿದುಕೊಂಡು ಆರೋಪಿಗಳು ಪರಾರಿ ಆಗಿದ್ದರು. ಅಂದೇ ಮಧ್ಯಾಹ್ನ 12ರ ಸುಮಾರಿಗೆ ಇದೇ ತಂಡವು ಹರಿಪ್ರಸಾದ್ ಅವರ ಮೊಬೈಲ್ ಸುಲಿಗೆ ಮಾಡಿಕೊಂಡು ಪರಾರಿ ಆಗಿತ್ತು’ ಎಂದು ಎಂದು ಪೊಲೀಸರು ಹೇಳಿದರು.

ವಿಮಾನ ನಿಲ್ದಾಣದಲ್ಲಿ ₹15 ಕೋಟಿಯ ಹೈಡ್ರೊ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ತಡ ರಾತ್ರಿ ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕರಿಂದ 14.70 ಕೆ.ಜಿ ಹೈಡ್ರೊ ಗಾಂಜಾ ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯ ₹15 ಕೋಟಿ ಎಂದು ಅಂದಾಜಿಸಲಾಗಿದೆ.

ಬ್ಯಾಂಕಾಕ್‌ನಿಂದ ಏರ್‌ಏಷ್ಯಾ ವಿಮಾನದಲ್ಲಿ ಟರ್ಮಿನಲ್ 2ಕ್ಕೆ ಬಂದಿಳಿದ ಭಾರತೀಯ ಮೂಲದ ಗುರ್ಜಿತ್ ಸಿಂಗ್, ಇಂದ್ರಜೀತ್ ಕುಮಾರ್ ಎಂಬ ಪ್ರಯಾಣಿಕರಿಂದ ಗಾಂಜಾ ಜಪ್ತಿ ಮಾಡಲಾಗಿದೆ. ಈ ಇಬ್ಬರೂ ಹೈಡ್ರೊ ಗಾಂಜಾ ಕಳ್ಳಸಾಗಣೆ ಮಾಡುತ್ತಿರುವ ಬಗ್ಗೆ ವೈಮಾನಿಕ ಗುಪ್ತಚರ ದಳದ(ಎಐಯು) ಸಿಬ್ಬಂದಿಗೆ ಮಾಹಿತಿ ಬಂದಿತ್ತು.

ಜಪ್ತಿಯಾಗಿರುವ ಗಾಂಜಾ

ONGC MRPL

ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು

ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್, ಮಂಗಳೂರು ಮತ್ತು ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್)

CIPET

ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಸಂಸ್ಥೆಯು 2025–26 ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಯೋಜನೆಯಡಿ (CSR) ಮೈಸೂರಿನಲ್ಲಿರುವ ಭಾರತ ಸರ್ಕಾರದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (CIPET) ಸಂಸ್ಥೆಯ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ನಿರುದ್ಯೋಗಿ ಯುವಕ, ಯುವತಿಯರುಗಳಿಗೆ 3.5 ತಿಂಗಳ ಉಚಿತ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಿದೆ.

ತರಬೇತಿ ಹಾಗೂ ಅರ್ಹತೆಗಳ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಅವಧಿ	ವಿದ್ಯಾರ್ಹತೆ	ಫಲಾನುಭವಿಗಳ ಸಂಖ್ಯೆ
ಮೆಷಿನ್ ಆಪರೇಟರ್ ಇಂಜೆಕ್ಷನ್ ಮೌಲ್ಡಿಂಗ್ (MO-IM) NSQF ಲೆವಲ್–3.5	3.5 ತಿಂಗಳು (600Hrs)	PUC / Degree / ITI / Diploma / BE	ಎಲ್ಲಾ ವರ್ಗದ ನಿರುದ್ಯೋಗಿ ಯುವಕ, ಯುವತಿಯರು 33 ಅಭ್ಯರ್ಥಿಗಳು
ಮೆಷಿನ್ ಆಪರೇಟರ್ – ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ (MO-PP) NSQF ಲೆವಲ್–3.5	3.5 ತಿಂಗಳು (600Hrs)	PUC / Degree / ITI / Diploma / BE	ಎಲ್ಲಾ ವರ್ಗದ ನಿರುದ್ಯೋಗಿ ಯುವಕ, ಯುವತಿಯರು 33 ಅಭ್ಯರ್ಥಿಗಳು

ವಯೋಮಿತಿ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ 18 ರಿಂದ 35 ವರ್ಷಗಳು, ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 18 ರಿಂದ 33 ವರ್ಷಗಳು, (OBC), ಸಾಮಾನ್ಯ ಹಾಗೂ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ 18 ರಿಂದ 30 ವರ್ಷಗಳು (EWS)

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ, ಜನ್ಮ ದಿನಾಂಕದ ಪ್ರೂಫ್ (SSLC Marks Card), ಜಾತಿ ಹಾಗೂ ಆದಾಯಕ್ಕೆ ಸಂಬಂಧಿಸಿದ ಎಲ್ಲಾ ಒರಿಜಿನಲ್ ದಾಖಲೆಗಳು, ಸ್ವವಿವರ ಹೊಂದಿದ ಬ್ಯಾಂಕ್ ದಾಖಲೆ ಜೆರಾಕ್ಸ್ ಪ್ರತಿಗಳು ಮತ್ತು 06 ಕಲರ್ ಫೋಟೊಗಳೊಂದಿಗೆ **ಮೈಸೂರಿನ CIPET ಸಂಸ್ಥೆಯಲ್ಲಿ** ನಡೆಯುವ ನೇರ ಸಂದರ್ಶನ ಮತ್ತು ದಾಖಲಾತಿಗೆ ಹಾಜರಾಗಲು ಸೂಚಿಸಲಾಗಿದೆ. ಮೊದಲು ಬಂದವರಿಗೆ ಆದ್ಯತೆ.

ತರಬೇತಿಗೆ ನೋಂದಾಯಿಸಲು ಈ QR ಕೋಡ್ ಅನ್ನು ನಿಮ್ಮ ಮೊಬೈಲ್ ನಿಂದ ಸ್ಕ್ಯಾನ್ ಮಾಡಿ

ತರಬೇತಿ ನಡೆಯುವ ಸಂಸ್ಥೆಯ ವಿಳಾಸ:
ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಾಜಿ (CIPET)
437/ಂ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
93807 56024, 98865 18246, 97417 19645, 0821-2510619.
E-mail: vtc-mysore@cipet.gov.in
Web: www.cipet.gov.in



ಆಶಾ ಕಾರ್ಯಕರ್ತೆಯರ ಸೇವೆ ನಗರ ಪ್ರದೇಶಕ್ಕೂ ವಿಸ್ತರಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಶಶಿಧರ ಕೋಸಂಬೆ

ಬೆಂಗಳೂರು: 'ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಸೇವೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಆಶಾ ಕಾರ್ಯಕರ್ತೆಯರನ್ನು ನಗರ ಪ್ರದೇಶಗಳಲ್ಲೂ ನೇಮಿಸಿಕೊಳ್ಳಬೇಕು' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಹಂಗಾಮಿ ಅಧ್ಯಕ್ಷ ಶಶಿಧರ ಕೋಸಂಬೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, 'ನಗರ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಸಮುದಾಯ ಹಾಗೂ ಆರೋಗ್ಯ ಕೇಂದ್ರಗಳ ನಡುವೆ ಸೇತುವೆಯಾಗಿ ಕೆಲಸ ಮಾಡಲು ಕಾರ್ಯಕರ್ತರು ಇಲ್ಲದಂತಾಗಿದೆ' ಎಂದಿದ್ದಾರೆ.

'ಸಾಂಪ್ರದಾಯಿಕ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಮತ್ತು ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಆಶಾ ಕಾರ್ಯಕರ್ತೆಯರ ಕೊಡುಗೆ ಮಹತ್ವದ್ದಾಗಿದೆ. ಇವರನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳ ಮಾದರಿಯಲ್ಲಿಯೇ ನಗರ ಪ್ರದೇಶಗಳಲ್ಲೂ ಆಶಾ ಕಾರ್ಯಕರ್ತೆಯರನ್ನು ನೇಮಿಸಿಕೊಳ್ಳಬೇಕು. ಈ ಬಗ್ಗೆ ಆರೋಗ್ಯ ಇಲಾಖೆ ಕೈಗೊಂಡ ಕ್ರಮದ ಕುರಿತು ಆಯೋಗಕ್ಕೆ ವರದಿ ಸಲ್ಲಿಸಬೇಕು' ಎಂದು ತಿಳಿಸಿದ್ದಾರೆ.

'ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರು ಸಮುದಾಯ ಆರೋಗ್ಯ, ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಅದರ ಜೊತೆಗೆ ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಸಲಹೆಗಳನ್ನು ನೀಡುತ್ತಿದ್ದಾರೆ. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–379/3122/2025–26 ದಿನಾಂಕ: 18.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಕೆ.ಎನ್. ಮಂಜುನಾಥ ಬಿ.ಹೊಸಹಳ್ಳಿ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು. ಬೆಂಗಳೂರು ನಗರ ಜಿಲ್ಲೆ	ಆನೇಕಲ್	ಸರ್ಜಾಪುರ	ಬಿ.ಹೊಸಹಳ್ಳಿ	110/9	0–12	ವ್ಯವಸಾಯ ವಲಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ಬಾಡಿಗೆಗೆ ದೊರಕುವುದಲ್ಲದೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಈ ಜಮೀನಿನಲ್ಲಿ ವಾಣಿಜ್ಯ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಯಾಗಿ ಅಭಿವೃದ್ದಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/49/2025–26 ದಿನಾಂಕ: 18–11–2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಅಟ್ಟೂರು ಗ್ರಾಮ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ	'ಎ' ಖರಾಬು ಗುಂ
1	ಶ್ರೀ ಇ. ಪ್ರಭಾಕರ್ ಬಿನ್ ಇ. ನರಸರಾಜು	12/2ರ ಪೈಕಿ	00-11 1/2	
2	ಶ್ರೀಮತಿ ಸರಸ್ವತಮ್ಮ ಕೋಂ ವಿಶ್ವನಾಥ್	12/3	00-05	
3	ಶ್ರೀಮತಿ ಮಂಜುಳ ಕೋಂ ಎಂ.ಎನ್. ಕಾಶೀನಾಥ್	12/4	00-06	
4	ಮೆ॥ ಆಶಾ ಸ್ಪೇಸಸ್ ಅಂಡ್ ಡೆವಲಪರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ಆದ ಶ್ರೀ ಕೆ.ವಿ.ಎಸ್. ರೆಡ್ಡಿ ಬಿನ್ ಲೇಟ್ ಕೆ. ರಂಗನಾಥ ರೆಡ್ಡಿ,	13/2	00-29	00 1/2
5		13/3	00-29 1/2	00 1/2
6		13/5	00-21 3/4	00 1/2
7		13/6	00-23 3/4	00 1/2
8	ಶ್ರೀ ರಮೇಶ ಕೆ ಎಂ ಬಿನ್ ಮುನಿಶ್ಯಾಮಿ; ಶ್ರೀ ಪಿ. ಎನ್. ದಿವಾಕರ್ ನಾಯ್ಡು ಬಿನ್ ಪಿ. ನಾಗರಾಜಪ್ಪ & ಶ್ರೀಮತಿ ಕೆ. ಭಾಗ್ಯಲಕ್ಷ್ಮಿ ಕೋಂ ಎಸ್.ಆರ್. ದಿಲೀಪ್	33/9	00-20	
9	ಶ್ರೀಮತಿ ಸುನಿತ ಕೋಂ ಅಶ್ವಥ್ ಎಂ.	35/6	00-11 1/2	
10	ಶ್ರೀ ಎನ್.ಹೆಚ್. ದಿನೇಶ್ ರೆಡ್ಡಿ ಬಿನ್ ಎನ್. ಹೆಚ್.ಆರ್. ಪ್ರಸಾದ್ ರೆಡ್ಡಿ	35/7	00-03	
11	ಶ್ರೀಮತಿ ಸುನಿತ ಕೋಂ ಅಶ್ವಥ್ ಎಂ.	35/8	00-06	
12	ಶ್ರೀ ಎನ್.ಹೆಚ್. ದಿನೇಶ್ ರೆಡ್ಡಿ ಬಿನ್ ಎನ್. ಹೆಚ್.ಆರ್. ಪ್ರಸಾದ್ ರೆಡ್ಡಿ	35/9	00-06	
13		35/10	00-02	
14		35/11	00-02	
15		35/12	00-02	
16		35/13	00-03	
17		35/14	00-03	
18		35/15	00-03	
19	ಶ್ರೀ ಸಾದಪ್ಪ ಬಿನ್ ಮುನಿಮಾರಪ್ಪ	36	01-02	02
20	ಶ್ರೀ ಡಿ. ಉದಯ್ ಕುಮಾರ್ ಬಿನ್ ಲೇಟ್ ಎನ್. ದ್ಯಾವಯ್ಯ	39/2	00-10	
21		39/4	00-17 1/2	
22	ಶ್ರೀಮತಿ ನೀಲಮ್ಮ ಬಿನ್ ನಂಜಪ್ಪ	39/5	00-17 1/2	
23	ಡಾ॥ ಎಂ. ಗೌರಿ ಕೋಂ ಕೆ.ವಿ. ಎಸ್. ರೆಡ್ಡಿ	39/3	01-28	
24		40/3	00-02 1/2	
25		51/2	00-09 3/4	
26		51/4	00-09 3/4	
27		51/5	00-10	
28		51/6	00-10	
29	ಶ್ರೀಮತಿ ಜಯಮ್ಮ ಬಿನ್ ಲೇಟ್ ವೆಂಕಟಪ್ಪ	52/7	00-03	

ಷರಾ:– ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆ / ವಸತಿ ಸಮುಚ್ಚಯ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನ / ಮನೆಗಳನ್ನು ಒದಗಿಸಿಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3891/2025–26

ಶಸ್ತ್ರಾಸ್ತ್ರ ಸ್ಥಳ ಪತ್ತೆ ಮಾಡುವ ರೇಡಾರ್

ಟೆಕ್ ಶೃಂಗದಲ್ಲಿ ತಂತ್ರಜ್ಞಾನ ಕ್ಷೇತ್ರದ ಆವಿಷ್ಕಾರಗಳ ಅನಾವರಣ

● ಕೆ.ಎಸ್.ಸುನಿಲ್

ಮುಖ್ಯಾಂಶಗಳು
- ವಿಕೋಪದ ವೇಳೆ ಅವಶೇಷಗಳಡಿ ಸಿಲುಕಿದವರ ರಕ್ಷಣೆಗೆ ರೋಬೋಟ್ ಡಾಗ್
- ವಿವಿಧ ದೇಶಗಳ ಪ್ರತಿನಿಧಿಗಳು ಭಾಗಿ

ಬೆಂಗಳೂರು: ಶಸ್ತ್ರಾಸ್ತ್ರ ಸ್ಥಳ ಪತ್ತೆ ರೇಡಾರ್, ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅವಶೇಷಗಳಡಿ ಸಿಲುಕಿರುವವರ ಪತ್ತೆ ಹಾಗೂ ರಕ್ಷಣೆ ಮಾಡುವ ರೋಬೊ ಡಾಗ್, ಶತ್ರು ರಾಷ್ಟ್ರಗಳ ಡ್ರೋನ್‌ಗಳ ಪತ್ತೆ ಮಾಡಿ ಲೇಸರ್ ಮೂಲಕ ಸುಟ್ಟು ಹಾಕುವ ಡ್ರೋನ್ ಪ್ರತಿರೋಧಕ ವ್ಯವಸ್ಥೆ...

ಇವು ತುಮಕೂರು ರಸ್ತೆಯ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ವಸ್ತು ಪ್ರದರ್ಶನದಲ್ಲಿ ಪ್ರಮುಖ ಆಕರ್ಷಣೆಯಾಗಿವೆ.

ಭಾರತ, ಉತ್ತರ ಕೊರಿಯಾ, ಉರುಗ್ವೆ, ರಷ್ಯಾ, ಇಂಗ್ಲೆಂಡ್, ಇಸ್ರೇಲ್, ಫ್ರಾನ್ಸ್, ಬೆಲ್ಜಿಯಂ, ಫಿನ್‌ಲ್ಯಾಂಡ್, ಜರ್ಮನಿ, ಸಿಂಗಪುರ, ಜಪಾನ್, ದಕ್ಷಿಣ ಕೊರಿಯಾ ಸೇರಿದಂತೆ ಹಲವು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು, ತಂತ್ರಜ್ಞಾನ ಕ್ಷೇತ್ರದ ಹೊಸ ಆವಿಷ್ಕಾರಗಳನ್ನು ಅನಾವರಣಗೊಳಿಸಲಾಗಿದೆ. 'ಭವಿಷ್ಯೋದಯ' ಘೋಷವಾಕ್ಯದಡಿ ನಡೆಯುತ್ತಿರುವ ಈ ಶೃಂಗದಲ್ಲಿ ಐಟಿ, ಬಿಟಿ, ಕೃಷಿ, ಆರೋಗ್ಯ, ಲಸಿಕೆ, ಸೈಬರ್ ಸೆಕ್ಯುರಿಟಿ, ವೈದ್ಯಕೀಯ ಮತ್ತು ಆರ್ಥಿಕ ತಂತ್ರಜ್ಞಾನಗಳಿಗೆ ಒತ್ತು ನೀಡಲಾಗಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) 'ವೆಪನ್ ಲೊಕೇಟಿಂಗ್ ರೇಡಾರ್' (ಡಬ್ಲ್ಯುಎಲ್‌ಆರ್) ಅಭಿವೃದ್ಧಿಪಡಿಸಿದೆ. ಇದು ಶಸ್ತ್ರಾಸ್ತ್ರ ಸ್ಥಳ ಪತ್ತೆಹೆಚ್ಚುವ ಸಾಮರ್ಥ್ಯ ಹೊಂದಿದೆ. ಶತ್ರು ರಾಷ್ಟ್ರಗಳು ಭೂ, ವಾಯು ಹಾಗೂ ಜಲ ಮಾರ್ಗಗಳ ಮೂಲಕ ರಾಕೆಟ್, ಬಾಂಬ್ ದಾಳಿ ನಡೆಸಿದ ಸಂದರ್ಭದಲ್ಲಿ ಅವರ ಸ್ಥಳಗಳನ್ನು ಪತ್ತೆ ಮಾಡಲಿದೆ. ಇದರಿಂದ ಶತ್ರುಗಳ ಮೇಲೆ ಪ್ರತಿದಾಳಿ ನಡೆಸಲು ಸಹಕಾರಿಯಾಗಲಿದೆ.

'ದಾಳಿ ಮಾಡುವ ಡ್ರೋನ್ ಪತ್ತೆ ಮಾಡುವುದಕ್ಕೆ ರೇಡಾರ್, ಇಒ ಸೆನ್ಸರ್‌ಗಳನ್ನು ಬಳಸಲಾಗುತ್ತದೆ. ಬಹು ಅಪಾಯಗಳ ಗ್ರಹಿಕೆ ಮತ್ತು ಬಹುಸಂವೇದಿ ತಂತ್ರಜ್ಞಾನ ಹೊಂದಿದ್ದು, ಎಲ್ಲ ಬಗೆಯ ಶಸ್ತ್ರಾಸ್ತ್ರ ನಾಶ ಮಾಡುವ ಸಾಮರ್ಥ್ಯ, ಗುರಿಯನ್ನು ನಿಖರವಾಗಿ ಪತ್ತೆ ಹಚ್ಚಿ, ಕಾರ್ಯಾಚರಣೆಗೆ ಅನುಕೂಲ ಮಾಡಿಕೊಡಲಿದೆ. ಶತ್ರು ದೇಶದ ಶಸ್ತ್ರಾಸ್ತ್ರಗಳನ್ನು ಗುರುತಿಸಿ, ಅವುಗಳ ಕಾರ್ಯಾಚರಣೆ ಸ್ಥಗಿತಗೊಳಿಸಬಲ್ಲ ಜಾಮಿಂಗ್ ವ್ಯವಸ್ಥೆ ಹೊಂದಿದೆ. ಶಸ್ತ್ರಾಸ್ತ್ರ ನಾಶ ಮಾಡುವ ಲೇಸರ್ ಆಧಾರಿತ ವ್ಯವಸ್ಥೆ ಸಹ ಇದೆ' ಎಂದು ಡಿಆರ್‌ಡಿಒ ಅಧಿಕಾರಿ ವಿವರಿಸಿದರು.

ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅವಶೇಷಗಳಡಿ ಸಿಲುಕಿರುವವರನ್ನು ಪತ್ತೆಹಚ್ಚಲು ಹಾಗೂ ರಕ್ಷಣೆ ಮಾಡುವ ಸಲುವಾಗಿ 'ರೋಬೊ ಡಾಗ್' ಅನ್ನು ಸ್ಟ್ರೈಡ್ಸ್ ರೊಬೋಟಿಕ್ಸ್ ಸಂಸ್ಥೆ ಅಭಿವೃದ್ಧಿಪಡಿಸಿದೆ.

'ಕೈಗಾರಿಕೆಗಳಲ್ಲಿ ಅನಿಲ ಸೋರಿಕೆ ಉಂಟಾದಾಗ ಮನುಷ್ಯರು ತೆರಳಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಕಾರ್ಯಾಚರಣೆಗೆ ಈ ರೋಬೊ ಬಳಸಲಾಗುತ್ತದೆ. ಇದಕ್ಕೆ ಕ್ಯಾಮೆರಾ ಅಳವಡಿಸಿದ್ದು, ಘಟನಾ ಸ್ಥಳದ ಮಾಹಿತಿಯನ್ನು ಚಿತ್ರ ಸಮೇತ ರವಾನಿಸುತ್ತದೆ. ಇದರ ಆಧಾರದ ಮೇಲೆ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಬಹುದು. ಅದೇ ರೀತಿ ಭೂಕಂಪದ ಸಂದರ್ಭದಲ್ಲಿ ಅವಶೇಷಗಳಡಿ ಸಿಲುಕಿಕೊಂಡಿರುವವರನ್ನು ರಕ್ಷಣೆ ಮಾಡಲು ಸಹಕಾರಿಯಾಗಲಿದೆ. ಒಂದೂವರೆ ವರ್ಷದಲ್ಲಿ ಮಾರುಕಟ್ಟೆಗೆ ಬರಲಿದೆ' ಎಂದು ಸಂಸ್ಥೆಯ ಸಿಇಒ ಆದಿತ್ಯ ತಿಳಿಸಿದರು.

ವೆಪನ್ ಲೊಕೇಟಿಂಗ್ ರೇಡಾರ್

ರೋಬೋಟ್ ಡಾಗ್

ಅತ್ಯಾಧುನಿಕ ಡ್ರೋನ್ 'ಕೃಷಿಕ 2ಐ'

ಜನರಲ್ ಏರೋನಾಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಐಟಿಐ ಸಂಸ್ಥೆಯು ಕೃಷಿ ಚಟುವಟಿಕೆಗಳಿಗೆ ಬಳಸುವ ಅತ್ಯಾಧುನಿಕ ಡ್ರೋನ್ 'ಕೃಷಿಕ 2ಐ' ಅನ್ನು ಅಭಿವೃದ್ಧಿಪಡಿಸಿದೆ. ಸ್ಪ್ರೇ ಟ್ಯಾಂಕ್ ಸಾಮರ್ಥ್ಯ ಹತ್ತು ಲೀಟರ್ ಇದ್ದು, ನೀರು, ಕೀಟನಾಶಕ ಸಿಂಪಡಣೆ, ಬೀಜ ಬಿತ್ತನೆಗೆ ಬಳಸಬಹುದು. ಒಮ್ಮೆ ಬ್ಯಾಟರಿ ಚಾರ್ಜ್ ಮಾಡಿದರೆ 27 ನಿಮಿಷದಲ್ಲಿ ನಾಲ್ಕು ಎಕರೆ ಪ್ರದೇಶದಲ್ಲಿ ಕೀಟನಾಶಕ ಸಿಂಪಡಣೆ ಮಾಡುವ ಸಾಮರ್ಥ್ಯ ಹೊಂದಿದೆ.

'ರೈತರ ಅನುಕೂಲಕ್ಕಾಗಿ ಕೃಷಿಕ 2ಐ ಡ್ರೋನ್ ಅಭಿವೃದ್ಧಿಪಡಿಸಲಾಗಿದೆ. ಇದರ ಬೆಲೆ ₹5.5 ಲಕ್ಷ. ಸಬ್ಸಿಡಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ' ಎಂದು ಐಟಿಐ ಸಂಸ್ಥೆಯ ಅಧಿಕಾರಿ ವಿವರಿಸಿದರು.



ಅತ್ಯಾಧುನಿಕ ಕೃಷಿ ಡ್ರೋನ್ 'ಕೃಷಿಕ2ಐ'

ಚಿಟಿಕೆ ಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಸಾರಕ್ಕಿ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ನ.19ರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಶಾಕಂಬರಿ ನಗರ, ಪೈಪ್‌ಲೈನ್ ರಸ್ತೆ, ರಾಘವೇಂದ್ರ ಸ್ವಾಮಿ ಮಠ, ಜೆ.ಪಿ. ನಗರ ಮೊದಲನೇ ಹಂತ, 14ನೇ ಅಡ್ಡ ರಸ್ತೆ, ಸಲಾರಪುರಿಯಾ ಅಪಾರ್ಟ್‌ಮೆಂಟ್, ನಾಗಾರ್ಜುನ ಅಪಾರ್ಟ್‌ಮೆಂಟ್ ಪುಟ್ಟೇನಹಳ್ಳಿ, ಜಯನಗರ 8, 5, 7ನೇ ಬ್ಲಾಕ್, ಐಟಿಐ ಲೇಔಟ್, ಎಸ್.ಬಿ.ಐ ಕಾಲೊನಿ, ಅರ್. ವಿ.ಡೆಂಟಲ್ ಕಾಲೇಜ್ ಸುತ್ತಮುತ್ತಲಿನ ಪ್ರದೇಶಗಳು.

ಎಲ್‌ಐಸಿ ಕಚೇರಿ ಹಿಂಭಾಗ, ಎಲ್‌ಐಸಿ ಕಾಲೊನಿ, ಕೆ.ಆರ್.ಲೇಔಟ್, ವೆಂಕಟಾದ್ರಿ ಲೇಔಟ್, ಜೆ.ಪಿ.ನಗರ 5ನೇ ಹಂತ, ಜೆ.ಪಿ. ನಗರ 6ನೇ ಹಂತ, 15ನೇ ಕ್ರಾಸ್, ಆದರ್ಶ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬನ್ನೇರುಘಟ್ಟ ರಸ್ತೆ, ಡಾಲರ್ಸ್ ಲೇಔಟ್, ಕಲ್ಯಾಣಿ ಮ್ಯಾಗ್ನಮ್ ಅಪಾರ್ಟ್‌ಮೆಂಟ್, ಕಲ್ಯಾಣಿ ಕೃಷ್ಣ ಮ್ಯಾಗ್ನಮ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜಲಮಂಡಳಿಯಲ್ಲಿ ನೇಮಕಾತಿಗೆ ಅರ್ಜಿ ಆಹ್ವಾನ

ಜಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಕಲ್ಯಾಣ ಕರ್ನಾಟಕೇತರ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಬೆಂಗಳೂರು ಜಲಮಂಡಳಿಯ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ ಸಿ.ಮದನಮೋಹನ್ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ನ.25 ಹಾಗೂ ಶುಲ್ಕ ಪಾವತಿಸಲು ನ.26 ಕೊನೆಯ ದಿನವಾಗಿದೆ. ನೇಮಕಾತಿಯ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ https://cetonline.karnataka.gov.in/kea ದಲ್ಲಿ ಪಡೆಯಬಹುದು ಎಂದು ತಿಳಿಸಿದ್ದಾರೆ.

ಉದ್ದಿಮೆ ಪರವಾನಗಿ ಅಭಿಯಾನ ಯಶಸ್ವಿ

ಕೆ.ಆರ್.ಪುರ: ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪೂರ್ವ ನಗರಪಾಲಿಕೆ ವತಿಯಿಂದ ಆರು ದಿನಗಳ ಕಾಲ ಹಮ್ಮಿಕೊಂಡಿದ್ದ ಉದ್ದಿಮೆ ಪರವಾನಗಿ ಅಭಿಯಾನವು ಯಶಸ್ಸು ಕಂಡಿದೆ.

ಬೆಂಗಳೂರು ಪೂರ್ವ ನಗರಪಾಲಿಕೆಯ 17 ವಾರ್ಡ್‌ಗಳಲ್ಲಿ ಏಕ ಗವಾಕ್ಷಿ ಮಾದರಿಯಲ್ಲಿ 466 ಉದ್ದಿಮೆದಾರರು ದಾಖಲೆಯ ₹25,52,800 ತೆರಿಗೆ ಪಾವತಿಸಿದರು. ಅಲ್ಲದೇ ಸ್ವಯಂ ಪ್ರೇರಿತರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮಧ್ಯವರ್ತಿಗಳಿಲ್ಲದೆ ಉದ್ದಿಮೆ ಪರವಾನಗಿ ಪಡೆದುಕೊಂಡರು.

ಹೆಚ್ಚುವರಿ ಆಯುಕ್ತರಾದ ಸ್ನೇಹಲ್ ಲೋಖಂಡೆ, ಅರೋಗ್ಯಧಿಕಾರಿ ಡಾ.ಸವಿತಾರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಿತು.

ಎಐ ಚಮತ್ಕಾರ: ಯುವಜನರ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ಆಧರಿಸಿದ ಉತ್ಪನ್ನಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೊಸ ಶೋಧನೆಗಳು ಶೃಂಗಸಭೆಯ ವಸ್ತು ಪ್ರದರ್ಶನದಲ್ಲಿ ಒಂದೇ ಸೂರಿನಡಿ ಲಭ್ಯ ಇವೆ.

ಟೆಕ್ ಶೃಂಗದ ವಸ್ತುಪ್ರದರ್ಶನದಲ್ಲಿ ಮೂರು ಸಭಾಂಗಣದಲ್ಲಿ ಸಾವಿರಕ್ಕೂ ಅಧಿಕ ಮಳಿಗೆಗಳನ್ನು ತೆರೆಯಲಾಗಿದೆ. ನವೋದ್ಯಮಗಳು, ಕೈಗಾರಿಕೆ, ಹೊಸ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್, ಅಂತರರಾಷ್ಟ್ರೀಯ ಉಪಕರಣಗಳ ಪ್ರದರ್ಶನ ಮಳಿಗೆಗೆ ಗಣ್ಯರು, ವಿದ್ಯಾರ್ಥಿಗಳು, ಯುವಜನರು, ಆಸಕ್ತರು, ಉದ್ಯಮಿಗಳು ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಕೇಂದ್ರದ ಆವರಣದಲ್ಲಿ ತಂತ್ರಜ್ಞಾನ ಆಧಾರಿತ ಸೆಲ್ಫಿ ಪಾಯಿಂಟ್‌ಗಳನ್ನು ನಿರ್ಮಿಸಲಾಗಿದ್ದು, ವಿದ್ಯಾರ್ಥಿಗಳು, ಸಾರ್ವಜನಿಕರು ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದ ದೃಶ್ಯ ಕಂಡುಬಂತು.

ವಸ್ತು ಪ್ರದರ್ಶನದಲ್ಲಿ ಮಾದರಿಯೊಂದರನ್ನು ಯುವತಿಯರು ಕುತೂಹಲದಿಂದ ವೀಕ್ಷಿಸಿದರು

ಭಾರತ, ಅಮೆರಿಕ, ಜಪಾನ್, ಇಸ್ರೇಲ್ ಸೇರಿದಂತೆ ಹಲವು ದೇಶಗಳ ತಂತ್ರಜ್ಞಾನ ಕಂಪನಿಗಳು ತಮ್ಮ ತಂತ್ರಜ್ಞಾನದ ಮಾದರಿಗಳನ್ನು ಪ್ರದರ್ಶಿಸುತ್ತಿವೆ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕುತೂಹಲ ತಣಿಸಿಕೊಂಡರು.

ಟೆಕ್ ಶೃಂಗ ಉದ್ಘಾಟನೆಗೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕಿಯೊನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಅವರು ವಸ್ತುಪ್ರದರ್ಶನಕ್ಕೆ ಭೇಟಿ ನೀಡಿ ಹೊಸ ಆವಿಷ್ಕಾರಗಳ ಕುರಿತು ಮಾಹಿತಿ ಪಡೆದುಕೊಂಡರು.

ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಐಎಡಿಬಿ), ಇನ್ವೆಸ್ಟ್ ಕರ್ನಾಟಕ ಫೋರಂ ಮಳಿಗೆಗಳಿಗೆ ಸಚಿವ ಎಂ. ಬಿ. ಪಾಟೀಲ ಭೇಟಿ ನೀಡಿ ವೀಕ್ಷಿಸಿದರು. ಭಾರತೀಯ ದೂರವಾಣಿ ಕಾರ್ಖಾನೆ (ಐಟಿಐ), ಎಸ್‌ಬಿಐ ಮುಂತಾದ ಮಳಿಗೆಗಳಿಗೂ ಭೇಟಿ ನೀಡಿ, ಅಲ್ಲಿಯ ವೈಶಿಷ್ಟ್ಯಗಳ ಬಗ್ಗೆ ತಿಳಿದುಕೊಂಡರು.

ಐಟಿಐ ಅಭಿವೃದ್ಧಿಪಡಿಸಿರುವ ಉತ್ಕೃಷ್ಟ ಗುಣಮಟ್ಟದ ವೈರ್ ಲೆಸ್ ಸೆಟ್ ನೋಡಿ ಅವುಗಳ ಮೂಲಕ ಸಂವಹನ ಕೂಡ ನಡೆಸಿದರು. ಹಾಗೆಯೇ ಐಟಿಐ ತಯಾರಿಸಿರುವ ಡ್ರೋನ್‌ಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬೀದಿನಾಯಿ ಸ್ಥಳಾಂತರ ಬೇಡ

ಪ್ರಜಾವಾಣಿ ಚಿತ್ರ

ಬೀದಿನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಂದ ಅವುಗಳಿಗೆ ನಿಗದಿಪಡಿಸಿದ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರ ಮಾಡಬೇಕು. ಅದಕ್ಕೂ ಮುನ್ನ ಅವುಗಳ ಸಂತಾನಶಕ್ತಿಹರಣ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದ್ದು, ಅದನ್ನು ಮರುಪರಿಶೀಲಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರಾಣಿಪ್ರಿಯರು ಪ್ರತಿಭಟನೆ ನಡೆಸಿದರು

ದುಂಡು ಮೇಜಿನ ಸಭೆ ನಾಳೆ

ಬೆಂಗಳೂರು: ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ವತಿಯಿಂದ ನ.20 ರಂದು ಶಾಸಕರ ಕಚೇರಿ-1, 2ನೇ ಮಹಡಿಯಲ್ಲಿ 'ಸಂವಿಧಾನದ ಭರವಸೆ ಎಲ್ಲಿದೆ? ಶೋಷಣಾತ್ಮಕ ಒಪ್ಪಂದ ಕಾರ್ಮಿಕ ವ್ಯವಸ್ಥೆ- ಗೌರವಯುತವೇತನದ ಭ್ರಮೆ' ಎಂಬ ವಿಷಯದ ಕುರಿತು ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ.

ಕನ್ನಡಿಗ ಕಾರ್ಮಿಕ ವರ್ಗದ ಎರಡು ತುರ್ತು ಪ್ರಶ್ನೆಗಳಾದ 'ಶೋಷಣಾ ಗುತ್ತಿಗೆ ಕಾರ್ಮಿಕ ವ್ಯವಸ್ಥೆಯ ನಿರಂತರತೆ ಮತ್ತು ನ್ಯಾಯಯುತ, ಗೌರವಾನ್ವಿತ ಕನಿಷ್ಠ ವೇತನದ ನಿರಂತರ ನಿರಾಕರಣೆ' ಕುರಿತು ಚರ್ಚಿಸಲಿದ್ದು, ಕಾರ್ಮಿಕ ಸಂಘಟನೆಗಳ ನಾಯಕರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಡಾ. ವ್ಯಾಲೂವೇಟರ್' ಎಐ ಆಧಾರಿತ ಮೌಲ್ಯಮಾಪನ ವ್ಯವಸ್ಥೆಗೆ ಚಾಲನೆ: ವೂಡೇ ಪಿ. ಕೃಷ್ಣ, ಆಯೋಜನೆ: ಎಕ್ಸ್‌ಪ್ಲೋರ್. ಎಐ, ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 8

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗೃಹರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಗಳ ವೃತ್ತಿಪರ ಹಾಗೂ ಕ್ರೀಡಾಕೂಟ–2025: ಉದ್ಘಾಟನೆ: ಪ್ರಶಾಂತ್ ಕುಮಾರ್ ಠಾಕೂರ್, ಅತಿಥಿಗಳು: ಅರ್ಜುನ್ ಹಾಲಪ್ಪ, ಎಂ. ನಂಜುಂಡಸ್ವಾಮಿ, ಆಯೋಜನೆ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಗೃಹರಕ್ಷಕ ದಳ, ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆ: ಬೆನ್ನಿ ಥಾಮಸ್, ಅತಿಥಿ: ಪ್ರಸಾತ್ ಜೆ., ಅಧ್ಯಕ್ಷತೆ: ಕೆ.ವಿ. ಮುನಿಸ್ವಾಮಿ, ಆಯೋಜನೆ: ಶ್ರೀ ವೆಂಕಟೇಶ್ವರ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಐಟಿಐ ಅಂಬೇಡ್ಕರ್ ಕ್ರೀಡಾಂಗಣ, ಕೆ.ಆರ್. ಪುರ, ಬೆಳಿಗ್ಗೆ 9

ಮಕ್ಕಳ ವಚನ ಮೇಳ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

15ನೇ ವಾರ್ಷಿಕ ಘಟಿಕೋತ್ಸವ: ಅತಿಥಿಗಳು: ಸರ್ವೇಂದ್ರನಾಥ್ ಶುಕ್ಲಾ, ಕೊನ್ರಾಡ್ ಎನ್.ಕೆ.ಎ., ಬಿ.ಕೆ. ವೆಂಕಟೇಶ ಪ್ರಸಾದ್, ಉಪಸ್ಥಿತಿ: ಚೆನ್‌ರಾಜ್ ರಾಯ್‌ಚಂದ್, ಜಿತೇಂದ್ರ ಕುಮಾರ್ ಮಿಶ್ರಾ, ದಿನೇಶ್ ನಿಲಕಂಠ, ಎನ್. ಎಸ್. ಮಂಜುನಾಥ್, ಆಯೋಜನೆ: ಜೈನ್ ಡೀಮ್ಡ್ ವಿಶ್ವವಿದ್ಯಾಲಯ, ಸ್ಥಳ: ಪ್ರೆಸ್ಟಿಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 9.30

ಸಂಗೀತ ಸಮ್ಮೇಳನ: ಬೆಳಿಗ್ಗೆ 10ರಿಂದ 'ಗುರುಗುಹಾಸ್ಯ ದಾಸೋಹಂ': ಕೆ. ಅರುಣ್ ಪ್ರಕಾಶ್, 'ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ತಾಳ ಪ್ರಕ್ರಿಯೆ' ಗಾಯನ: ನಿರಂಜನ್ ದಿಂಡೋಡಿ, ಪಿಟೀಲು: ಅದಿತಿ ಕೃಷ್ಣಪ್ರಕಾಶ್, 'ದೀಕ್ಷಿತರ ಕೃತಿಗಳಲ್ಲಿ ಕ್ಷೇತ್ರದರ್ಶನ': ಎಂ.ಎಸ್. ಶೀಲ, ಸಂಜೆ 6ರಿಂದ ಗಾಯನ: ತಿರುಮಲೆ ಶ್ರೀನಿವಾಸ್, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ಗಿರಿಧರ್ ಉಡುಪ, ಮೋರ್ಸಿಂಗ್: ಟಿ.ಎಸ್. ಗೋಪಿಶ್ರವಣ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ರಾಜಶ್ರೀ ಕಿಶೋರ್, ಎಸ್. ಶಿವಕುಮಾರ್, ಟಿ.ಎಂ. ಧರ್ಮೇಂದ್ರ, ಟಿ.ವಿ. ರಾಜು, ಅಧ್ಯಕ್ಷತೆ: ಟಿ.ಎ. ಬಾಲಕೃಷ್ಣ, ಜಾನಪದ ಕಲಾ ಪ್ರದರ್ಶನ: ಲಿಂಗರಾಜು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ವಿಜಯ ಕಾಲೇಜು, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10

'ವಸಾಹತುಶಾಹಿ ಪರಂಪರೆ–ಆಧುನಿಕ ಬೆಂಗಳೂರು ನಗರ ನಿರ್ಮಿಸುವಲ್ಲಿ ಬ್ರಿಟಿಷ್ ಗವರ್ನರ್ ಜನರಲ್‌ಗಳ ಕೊಡುಗೆಗಳು' ಒಂದು ದಿನದ ವಿಚಾರಸಂಕಿರಣ: ಉದ್ಘಾಟನೆ: ಮಂಜುಳಾ ಅರವಿಂದ ಲಿಂಬಾವಳಿ, ಅಧ್ಯಕ್ಷತೆ: ರವಿ ಜಿ., ಪ್ರಧಾನ ಭಾಷಣ: ಎಂ.ಎಸ್. ದುರ್ಗಾಪ್ರವೀಣ, ಅತಿಥಿಗಳು: ಶೋಭಾ ಜಿ., ರಾಮಕೃಷ್ಣ ರೆಡ್ಡಿ, ಗವಿಸಿದ್ಧಯ್ಯ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣ, ಕಾಡುಗೋಡಿ, ಬೆಳಿಗ್ಗೆ 10

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ಶಿವಶರಣರ ಪರಂಪರೆ–1 ಬಸವ ಯುಗ': ನಿಂಗಪ್ಪ ಮುದೇನೂರು, 'ಶಿವಶರಣರ ಪರಂಪರೆ–1 ಬಸವೋತ್ತರ ಯುಗ': ಎಫ್.ಟಿ. ಹಳ್ಳಿಕೇರಿ, 'ಗುಜರಾತ್ ಮತ್ತು ರಾಜಸ್ಥಾನದ ಸಂತರು': ಸ್ವಾಮಿ ಮೇಧಾಜನಂದ ಮಹಾರಾಜ, 'ಬಂಗಾಳದ ಸಂತರು': ಸ್ವಾಮಿ ವೇದಾತೀತಾನಂದ, 'ಪ್ರೇಮ, ಭಕ್ತಿ, ಮುಕ್ತಿ' ನೃತ್ಯರೂಪಕ– ಮೀರಾಬಾಯಿ ಜೀವನ ದರ್ಶನ: ಪರಿಕಲ್ಪನೆ, ನೃತ್ಯ ಸಂಯೋಜನೆ: ಲಲಿತಾ ಶ್ರೀನಿವಾಸನ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

ಸಂಸ್ಥಾಪಕರ ದಿನ: ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಪಿ. ಗೋಪಾಲಕೃಷ್ಣ, ಸಿ. ಹೊನ್ನಪ್ಪ ಗೌಡ, ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಬಾಗಲೂರು, ಬೆಳಿಗ್ಗೆ 10.30

ಡಾ.ಎಸ್. ರಾಮಚಂದ್ರ ಸ್ಮಾರಕ ದತ್ತಿ ಉಪನ್ಯಾಸ: ಬಿ.ಕೆ. ರವಿ, ಆಯೋಜನೆ ಮತ್ತು ಸ್ಥಳ: ಡಾ.ಎಸ್. ರಾಮಚಂದ್ರ ಸಭಾಂಗಣ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೋಟೆ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ–2025: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಈಶ್ವರ ಬಿ. ಖಂಡ್ರೆ, ಪ್ರಾಸ್ತಾವಿಕ ನುಡಿ: ಪಿ.ಎಂ. ನರೇಂದ್ರಸ್ವಾಮಿ, ಆಯೋಜನೆ: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಳ: ಕೃಷ್ಣ ವಿಹಾರ, ಗೇಟ್ ಸಂಖ್ಯೆ–01, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಳಿಗ್ಗೆ 11

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಥಮ ಅಧ್ಯಕ್ಷರಾದ ಎಲ್.ಜಿ. ಹಾವನೂರ ವರದಿ ಸಲ್ಲಿಕೆಯ ಸುವರ್ಣ ಮಹೋತ್ಸವದ ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಶಿವರಾಜ ತಂಗಡಗಿ, ಪ್ರಸ್ತಾವಿಕ ನುಡಿ: ಕೆ.ಎಂ. ರಾಮಚಂದ್ರಪ್ಪ, ವಿಷಯ ಮಂಡನೆ: ರವಿವರ್ಮ ಕುಮಾರ್, ಆಯೋಜನೆ: ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ಉದ್ದಿಮೆದಾರರ ದಿನಾಚರಣೆ: ಅತಿಥಿಗಳು: ಆರತಿ ಕೃಷ್ಣ, ಅನುಪಮಾ ಹೊಸಕೆರೆ, ರೇವತಿ ಕಾಮತ್, ಅಧ್ಯಕ್ಷತೆ: ಉಮಾ ರೆಡ್ಡಿ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

IN LOVING MEMORY

Dr. Natasha Sagar

29 JUNE 1989 – 18 NOVEMBER 2025

Granddaughter of the Late. R. Dayananda Sagar & Dr. Chandramma Sagar
Daughter of Dr D. Hemachandra Sagar & Mrs. Geetha H Sagar

With deep love and profound sadness, we share the passing of **Dr. Natasha Sagar,** who left us on **18 November 2025**.
Dr. Natasha lived her 36 years with a radiant spirit and an unwavering zest for life. Ambitious, funny, and endlessly generous, she had a way of making every space lighter and every person she met feel seen and valued.

Dr. Natasha Sagar was a devoted daughter, a cherished sister, and a doting aunt whose laughter and warmth were the heart of her family. Her presence brought joy, steadiness, and humour in equal measure. She approached life with curiosity, compassion, and a quiet strength that inspired those around her. A dedicated professional and a deeply caring human being, Natasha touched countless lives - not only through her work, but through her simple everyday kindness. Her ability to lift others, to listen without judgement, and to celebrate life's small moments will be remembered always.

Qualified as a lawyer, Dr. Natasha specialised in digital and mental health laws in India. Her passion for addressing the mental health crisis led her to establish **The Happiness Project**, enhancing accessibility to mental health support throughout India. She was also the recipient of prestigious accolades, including Entrepreneur Today's 40 Under 40 and Fortune India's 100 Most Dynamic Personalities, to name a few.

She was a decorated athlete who represented India in the Asian Grand Prix and held 18 national medals and 2 national records. Dr. Natasha Sagar will also be remembered as the beloved Joint Secretary of Dayananda Sagar Institutions. She leaves behind a loving family and many friends whose lives are forever enriched by having known her. While her time with us feels far too short, her love, her light, and her laughter remain with us, guiding and comforting in the days ahead.

The family requests that those who wish to honour her memory do so through acts of kindness - something she believed in deeply and practised effortlessly. May her spirit remain a blessing to all who knew and loved her.

Dayananda Sagar Institutions

Dayananda Sagar University

Dr. Chandramma Dayananda Sagar Institute of Medical Education and Research

Sagar Chandramma Hospitals

Sagar Hospitals

ಕಸ ನಿರ್ವಹಣೆ: 'ಗ್ರೇಟರ್' ದ್ವಿಮುಖ ನೀತಿ

ರಸ್ತೆ ಕಸ ಗುಡಿಸುವ ವಾಹನ: ಬಿಎಸ್‌ಡಬ್ಲ್ಯುಎಂಎಲ್‌ನಿಂದ ₹82 ಲಕ್ಷ • ಜಿಬಿಎಯಿಂದ ₹3 ಕೋಟಿ ವೆಚ್ಚ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ತಜ್ಞರ ಸಮಿತಿಯ ಸಲಹೆಯನ್ನು ಮೀರಿ ರಸ್ತೆ ಕಸ ಗುಡಿಸಲು ದುಬಾರಿ ವೆಚ್ಚದಲ್ಲಿ ಯಂತ್ರಗಳನ್ನು ಬಾಡಿಗೆಗೆ ಪಡೆಯಲು ಮುಂದಾಗಿದೆ. ಆದರೆ, ಅದೇ ಕೆಲಸಕ್ಕೆ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಒಂದು ಯಂತ್ರಕ್ಕೆ ₹82 ಲಕ್ಷ ವೆಚ್ಚ ಮಾಡುತ್ತಿದೆ.

ತಜ್ಞರ ತಾಂತ್ರಿಕ ವರದಿಯನ್ನು ನಿರ್ಲಕ್ಷಿಸಿ ಈ ಯೋಜನೆಯನ್ನು ರೂಪಿಸಿದ್ದ ಜಿಬಿಎ ಎಂಜಿನಿಯರ್‌ಗಳು ವರದಿಯನ್ನೇ ಆಧರಿಸಿ, ಕಸ ಗುಡಿಸುವ ಯಂತ್ರಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು ನಿರ್ಧರಿಸಿದೆ.

1,682.10 ಕಿ.ಮೀ. ಉದ್ದದ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಕಸ ಗುಡಿಸಲು ಬಾಡಿಗೆ ಆಧಾರದಲ್ಲಿ ವಾಹನಗಳನ್ನು ಏಳು ವರ್ಷಕ್ಕೆ ಪಡೆದುಕೊಳ್ಳಲು ಬಿಬಿಎಂಪಿಯಾಗಿದ್ದಾಗ ಪ್ರಸ್ತಾವ ಸಲ್ಲಿಸಲಾಗಿತ್ತು. 2025ರ ಏಪ್ರಿಲ್ 17ರಂದು, ಅಂದಿನ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ಪ್ರಸ್ತಾವ ಸಲ್ಲಿಸಿದ್ದರು. ಜಿಬಿಎ ಪ್ರಕ್ರಿಯೆಯಲ್ಲಿ ತಣ್ಣಗಾಗಿದ್ದ ಈ ಪ್ರಸ್ತಾವವನ್ನು ಮುಂದುವರಿಸಲು ಆಗಸ್ಟ್‌ನಿಂದ ಹೆಚ್ಚಿನ ಚಾಲನೆ ನೀಡಲಾಯಿತು.

ಸರ್ಕಾರ ರಚಿಸಿದ್ದ ತಜ್ಞರ ಸಮಿತಿ, ಬಾಡಿಗೆ ಆಧಾರದಲ್ಲಿ ವಾಹನಗಳನ್ನು ಪಡೆಯುವುದು ಸರಿಯಲ್ಲ ಎಂದೂ ಸೂಚಿಸಿತ್ತು. ಈ ವರದಿಯನ್ನು ಪರಿಗಣಿಸಲು, ಇದೀಗ ಜಿಬಿಎ ಮುಖ್ಯ ಎಂಜಿನಿಯರ್ ಆಗಿರುವ ಬಿ.ಎಸ್. ಪ್ರಹ್ಲಾದ್ ನೇತೃತ್ವದಲ್ಲಿ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್, ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನ ತಂಡದಿಂದ ತಾಂತ್ರಿಕ ವರದಿಯನ್ನು ಪಡೆಯಲಾಗಿದೆ. ಸಹಜವಾಗಿ, ಪ್ರಹ್ಲಾದ್ ಅವರು ಬಾಡಿಗೆಗೆ ವಾಹನಗಳನ್ನು ಪಡೆಯುವುದೇ ಸೂಕ್ತ ಎಂದು ಸೆಪ್ಟೆಂಬರ್ 22ರಂದು ವರದಿ ನೀಡಿದ್ದಾರೆ.

ಒಂದು ಕಸ ಗುಡಿಸುವ ವಾಹನದ ವೆಚ್ಚ ₹2.24 ಕೋಟಿ, ಹುಕ್ ಲೋಡರ್‌ಗೆ ₹44 ಲಕ್ಷ, ಎರಡು ಕಂಟೈನರ್‌ಗೆ ₹15 ಲಕ್ಷ ಸೇರಿ ಪ್ರತಿ ವಾಹನದ ವೆಚ್ಚ ₹3 ಕೋಟಿ. ಪಾಲಿಕೆಯೇ ಇವುಗಳನ್ನು ಖರೀದಿಸಿದ ಮೇಲೆ, ಇಂಧನ, ಸಿಬ್ಬಂದಿ ಸೇರಿದಂತೆ ನಿರ್ವಹಣೆ, ಆರ್‌ಟಿಒ, ಸದೃಢತೆ ಪ್ರಮಾಣಪತ್ರ, ಬ್ಯಾಟರಿ, ಟೈರ್ ಎಲ್ಲದರ ವೆಚ್ಚವನ್ನೂ ಕಾಲಕಾಲಕ್ಕೆ ಭರಿಸಬೇಕಾಗುತ್ತದೆ. ಬಿಬಿಎಂಪಿಯೇ ಎಲ್ಲವನ್ನೂ ಭರಿಸಿದರೆ, ಅದು ಬಾಡಿಗೆ ಆಧಾರದಲ್ಲಿ ಪಡೆದಷ್ಟೇ ಆಗುತ್ತದೆ. ಹೀಗಾಗಿ ಪ್ರತಿ ಕಿ.ಮೀಗೆ ₹924ರ ಬದಲು ₹894.53 ವೆಚ್ಚ ಭರಿಸಿ, ಬಾಡಿಗೆ ಆಧಾರದಲ್ಲೇ ಪಡೆದುಕೊಳ್ಳಬಹುದು ಎಂದು ಪ್ರಹ್ಲಾದ್ ಸಮಿತಿ ತಿಳಿಸಿದೆ.

ಸರ್ಕಾರ ರಚಿಸಿದ್ದ ತಜ್ಞರ ತಾಂತ್ರಿಕ ಸಮಿತಿಯ ವರದಿಗೆ ವಿರುದ್ಧವಾಗಿ, ಪ್ರಹ್ಲಾದ್ ಅವರು ನೀಡಿದ ವರದಿಗೆ ಜಿಬಿಎ ಹಾಗೂ ನಗರಾಭಿವೃದ್ಧಿ ಇಲಾಖೆ ಮಣೆ ಹಾಕಿದೆ. ಏಳು ವರ್ಷಗಳ ಅವಧಿಗೆ ಬಾಡಿಗೆ ಆಧಾರದಲ್ಲೇ 46 ವಾಹನಗಳಿಗೆ ₹613 ಕೋಟಿ ವೆಚ್ಚ ಮಾಡಲು ಸಚಿವ ಸಂಪುಟವೂ ಸಮ್ಮತಿಸಿದೆ.

ಅಂಕಿ ಅಂಶಗಳು

1,682 ಕಿ.ಮೀ
ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ಉದ್ದ

₹613.25 ಕೋಟಿ
ಬಾಡಿಗೆ ಆಧಾರದಲ್ಲಿ ಕಸ ಗುಡಿಸಲು ಏಳು ವರ್ಷದ ವೆಚ್ಚ

₹24,32,539
ಪ್ರತಿದಿನ ಕಸ ಗುಡಿಸಲು ಭರಿಸಬೇಕಾದ ವೆಚ್ಚ

ಕಸ ಗುಡಿಸುವ ಯಂತ್ರಗಳ ಮೂಲಕ ನಾಗರಿಕರ ತೆರಿಗೆ ಹಣವನ್ನು ಲೂಟಿ ಮಾಡಲಾಗುತ್ತಿದೆ. ಹೆಚ್ಚಿನ ಹಣವನ್ನು ಬಾಡಿಗೆ ರೂಪದಲ್ಲಿ ನೀಡಿ, ಯಾರ ಜೇಬಿಗೆ ತುಂಬಲಾಗುತ್ತಿದೆ? ಎಂಬುದನ್ನು ರಾಜ್ಯ ಸರ್ಕಾರ ತಿಳಿಸಬೇಕು

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ತಾಂತ್ರಿಕ ವರದಿಯ ಪ್ರಮುಖಾಂಶ

ಬಿಬಿಎಂಪಿಯ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಸ್ವಚ್ಛತೆಗೆ ಕಸ ಗುಡಿಸುವ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ನಿಯೋಜಿಸಲು ಸಿದ್ಧಪಡಿಸಿರುವ ಟೆಂಡರ್ ಮಾದರಿ ಹಾಗೂ ಅಂದಾಜು ಪಟ್ಟಿ ಬಗ್ಗೆ ಪರಿಶೀಲಿಸಿ ತಾಂತ್ರಿಕ ವರದಿ ನೀಡುವಂತೆ ಮೂವರ ತಜ್ಞರ ಸಮಿತಿಯನ್ನು ರಾಜ್ಯ ಸರ್ಕಾರ 2025ರ ಮೇ 27ರಂದು ರಚಿಸಿತ್ತು. ಈ ಸಮಿತಿ ಆಗಸ್ಟ್ 8ರಂದು ವರದಿ ನೀಡಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (ಕೆಯುಡಬ್ಲ್ಯುಎಸ್‌ಡಿಬಿ) ವ್ಯವಸ್ಥಾಪಕ ನಿರ್ದೇಶಕ ಸೆಲ್ವಮಣಿ ಅವರು ಅಧ್ಯಕ್ಷರಾಗಿದ್ದ ಈ ತಜ್ಞರ ಸಮಿತಿಯಲ್ಲಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ (ಕೆಯುಐಡಿಎಫ್‌ಸಿ) ಮುಖ್ಯ ಎಂಜಿನಿಯರ್ ಜೆ.ಆರ್. ನಂದೀಶ್ ಹಾಗೂ ಲೋಕೋಪಯೋಗಿ ಇಲಾಖೆಯ ಬೆಂಗಳೂರು ದಕ್ಷಿಣದ (ಸಿಆ್ಯಂಡ್‌ಬಿ) ಮುಖ್ಯ ಎಂಜಿನಿಯರ್ ಮಂಜಪ್ಪ ಅವರು ಸದಸ್ಯರಾಗಿದ್ದರು.

- ರೈಟ್ಸ್ ಮತ್ತು ಬಿಸಿಜಿ ಸಂಸ್ಥೆಗಳು ಅನೌಪಚಾರಿಕವಾಗಿ ಲೆಕ್ಕ ಹಾಕಿರುವ ವಿವರಗಳು ಪ್ರಸ್ತಾವದಲ್ಲಿ ಲಭ್ಯವಿಲ್ಲ
- ಬಿಬಿಎಂಪಿ ಸಿದ್ಧಪಡಿಸಿರುವ ಅಂದಾಜು ಪಟ್ಟಿಯಲ್ಲಿ ಡೀಸೆಲ್ ದರಗಳ ಅಂದಾಜನ್ನು ವಾಹನ ಚಲಿಸಬಹುದಾದ ಗರಿಷ್ಠ ಮಿತಿಗೆ ಪ್ರತಿದಿನದಂತೆ ಅಂದಾಜಿಸಲಾಗಿದೆ. ಇದು ನಿತ್ಯ ಬದಲಾವಣೆಯಾಗುತ್ತಿರುತ್ತದೆ
- ರಸ್ತೆ ಗುಡಿಸುವ ಯಂತ್ರದ ಜೊತೆಗೆ ಒಂದು ಹುಕ್ ಲೋಡರ್, ಎರಡು ಘನಮೀಟರ್ ಸಾಮರ್ಥ್ಯದ ಕಸ ಸಂಗ್ರಹ ಕಂಟೈನರ್ ಹಾಗೂ ಒಬ್ಬ ಕೂಲಿ ಆಳನ್ನು ನೇಮಿಸಿಕೊಂಡು ಅಂದಾಜಿಸಲಾಗಿದೆ. ಇದನ್ನು ಇತರೆ ನಗರಗಳು ಅಳವಡಿಸಿಕೊಂಡಿಲ್ಲ. ಆದರೂ ಅವುಗಳೊಂದಿಗೆ ತಾಳೆ ಹಾಕಿರುವುದು ಸಮಂಜಸವಲ್ಲ
- ಅಂತರರಾಷ್ಟ್ರೀಯ ಮಟ್ಟದ ದೊಡ್ಡ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುಣಮಟ್ಟದ ಕಸ ಗುಡಿಸುವ ಯಂತ್ರ/ವಾಹನಗಳನ್ನು ಪಾಲಿಕೆಯೇ ನೇರವಾಗಿ ಖರೀದಿಸುವುದು ಸೂಕ್ತ
- ಪಾಲಿಕೆಯಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ ಬಳಸಿಕೊಂಡು ನಿರ್ವಹಿಸಿದರೆ, ಗುತ್ತಿಗೆದಾರರ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ
- ಪಾಲಿಕೆಯ ಮೂಲ ಬಂಡವಾಳದಿಂದ ವಾಹನಗಳನ್ನು ಖರೀದಿಸಿ, ಕಾರ್ಯಾಚರಣೆ, ನಿರ್ವಹಣೆ ಜವಾಬ್ದಾರಿಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನೀಡುವುದನ್ನು ಎರಡನೇ ಆಯ್ಕೆಯಾಗಿ ಪರಿಗಣಿಸಬಹುದು
- ವಾಹನಗಳ ಸಂಪೂರ್ಣ ಸೇವೆಯನ್ನು ಬಾಡಿಗೆ ಆಧಾರದ ಮೇಲೆ ಪಡೆಯುವುದು ಸೂಕ್ತ ಪ್ರಸ್ತಾವವಲ್ಲ. ಗುತ್ತಿಗೆದಾರರು ಒದಗಿಸುವ ಯಂತ್ರಗಳ ತಾಂತ್ರಿಕ ವಿಶಿಷ್ಟ ಅಂಶಗಳನ್ನು ಪರಿಶೀಲಿಸುವುದು ಕಷ್ಟಸಾಧ್ಯ. ಪ್ರತಿ ಯಂತ್ರದ ಮೇಲೆ ನಿಗಾವಹಿಸಿ ಕಾರ್ಯನಿರ್ವಹಿಸುವುದು ಕಾರ್ಯಸಾಧುವಲ್ಲ



24 ವಾಹನ ಖರೀದಿ

ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆ ಕಸ ಗುಡಿಸಲು 24 'ಸ್ವೀಪಿಂಗ್ ಮಷಿನ್'ಗಳನ್ನು ಖರೀದಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಟೆಂಡರ್ ಆಹ್ವಾನಿಸಿದೆ. ಪ್ರತಿಯೊಂದು ವಾಹನಕ್ಕೆ ಅಂದಾಜು ₹82 ಲಕ್ಷ ವೆಚ್ಚವಾಗಲಿದೆ.

'ಸ್ವಚ್ಛ ಭಾರತ ಮಿಷನ್' ಅನುದಾನದಲ್ಲಿ ಬಿಎಸ್‌ಡಬ್ಲ್ಯುಎಂಎಲ್ 'ಸ್ವೀಪಿಂಗ್ ಮಷಿನ್'ಗಳನ್ನು ಖರೀದಿಸುತ್ತದೆ. ಅವುಗಳನ್ನು ಐದೂ ನಗರ ಪಾಲಿಕೆಗಳಿಗೆ ನೀಡುತ್ತದೆ. ಅವುಗಳನ್ನು ಪಾಲಿಕಗಳೇ ನಿರ್ವಹಣೆ ಮಾಡಿಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಕಸ ಗುಡಿಸಲು ಯಂತ್ರಗಳ ಬಾಡಿಗೆ: ನಿಖಿಲ್ ಕುಮಾರಸ್ವಾಮಿ ಆಕ್ಷೇಪ

ಬೆಂಗಳೂರು: ನಗರದಲ್ಲಿ ಕಸ ಗುಡಿಸುವ 46 ಯಂತ್ರಗಳನ್ನು ಏಳು ವರ್ಷಗಳ ಕಾಲ ಬಾಡಿಗೆ ಆಧಾರದ ಮೇಲೆ ಪಡೆಯಲು ಸಚಿವ ಸಂಪುಟ ಒಪ್ಪಿಗೆ ನೀಡಿರುವುದಕ್ಕೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕಿಡಿಕಾರಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, 'ಬಾಡಿಗೆ ನೆಪದಲ್ಲಿ ಕಮಿಷನ್ ಗೋಲ್‌ಮಾಲ್ ನಡೆದಿದೆ. ಜಿಬಿಎ ಯಾರ್ಡ್‌ಗಳಲ್ಲಿ ಕಸ ಗುಡಿಸುವ 26 ಯಂತ್ರಗಳು ಬಳಕೆಯಾಗದೆ ಬಿದ್ದಿವೆ. ಆದರೂ ಸರ್ಕಾರ ₹613 ಕೋಟಿ ಖರ್ಚು ಮಾಡಿ, 46 ವಾಹನಗಳನ್ನು ಬಾಡಿಗೆಗೆ ಪಡೆಯಲು ಹೊರಟಿದೆ. ಇದರ ಬದಲು ಯಂತ್ರಗಳನ್ನು ಖರೀದಿಸಿದರೆ ಕಡಿಮೆ ವೆಚ್ಚವಾಗುತ್ತದೆ' ಎಂದಿದ್ದಾರೆ.

'ತ್ಯಾಜ್ಯ ಆಯುವವರ ಮಕ್ಕಳಿಗೂ ಇದೆ ಘನತೆ'

ಬೆಂಗಳೂರು: ತ್ಯಾಜ್ಯ ಆಯುವವರ ಮಕ್ಕಳ ಹಕ್ಕನ್ನು ಕಾಪಾಡಬೇಕು. ಆ ಮಕ್ಕಳಿಗೂ ಶಿಕ್ಷಣ ನೀಡಿ ಪ್ರೋತ್ಸಾಹಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೊಸಂಬೆ ಹೇಳಿದರು.

ತ್ಯಾಜ್ಯ ಆಯುವ ಕುಟುಂಬಗಳ ಮಕ್ಕಳ ಸಮಗ್ರ ಅಭಿವೃದ್ಧಿ ಬಗ್ಗೆ ಸ್ಪರ್ಶ ಟ್ರಸ್ಟ್ ಶನಿವಾರ ಹಮ್ಮಿಕೊಂಡಿದ್ದ 'ಸಾಮೂಹಿಕ ಶಕ್ತಿ' ಯೋಜನೆಯ ಮಧ್ಯಂತರ ಸಮಾಲೋಚನೆ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು. ಹೊರಗುಳಿದ ಮಕ್ಕಳನ್ನು ಪತ್ತೆ ಹಚ್ಚಿ ಶಿಕ್ಷಣ ನೀಡಲು ಕ್ರಮ ವಹಿಸಬೇಕು ಎಂದು ಹೇಳಿದರು.

ಶಾಲೆಯಿಂದ ಹೊರಗುಳಿದ ಐದು ಮಕ್ಕಳನ್ನು ಗುರುತಿಸಲಾಗಿದೆ. ಈಗ ಅವರನ್ನು ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆಗೆ(ಎನ್‌ಐಒಎಸ್) ದಾಖಲಿಸಿ, ಅವರಿಗೆ ಶಿಕ್ಷಣದ ಕಿಟ್ ನೀಡಲಾಗಿದೆ ಎಂದು ಟ್ರಸ್ಟ್‌ನವರು ಮಾಹಿತಿ ನೀಡಿದರು.

ಡಿಡಬ್ಲ್ಯುಸಿಡಿ ಉಪ ನಿರ್ದೇಶಕಿ ಸುಮಂಗಲಾ ಮಾಲಾಪುರ, ಪತ್ರಕರ್ತೆ ನಂದಿನಿ ಚಂದ್ರಶೇಖರ್, ಕರ್ನಾಟಕ ಶಿಕ್ಷಕರ ಸಂಘದ ಅಧ್ಯಕ್ಷ ಗೋವಿಂದಪ್ಪ ಭಾಗವಹಿಸಿದ್ದರು.

ಕೆ–ಸೆಟ್: ಮಾನದಂಡ ಮರು ಪರಿಶೀಲಿಸಿ–ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷಾ (ಕೆ-ಸೆಟ್) ಫಲಿತಾಂಶಗಳ ಘೋಷಣೆಯ ಕಾರ್ಯವಿಧಾನ ಮತ್ತು ಮಾನದಂಡಗಳನ್ನು ಮರು ಪರಿಶೀಲಿಸಿ' ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷಾ ಕೇಂದ್ರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗಕಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ನಗರದ ಎ.ಗೋಪಾಲ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 2021ರಲ್ಲಿ ಕೆ-ಸೆಟ್‌ಗೆ ಹಾಜರಾಗಿದ್ದ ಅರ್ಜಿದಾರರನ್ನು ಯಶಸ್ವಿ ಎಂದು ಘೋಷಿಸಿ ಪ್ರಮಾಣ ಪತ್ರವನ್ನು ನೀಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

'ಫಲಿತಾಂಶಗಳನ್ನು ಘೋಷಿಸುವಾಗ, ಅಭ್ಯರ್ಥಿಗಳನ್ನು ವಿಷಯವಾರು ಮತ್ತು ವರ್ಗವಾರು ಅರ್ಹರು ಎಂದು ಪ್ರಮಾಣೀಕರಿಸುವಾಗ 1990ರ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ (ಮೀಸಲು ಮತ್ತು ನೇಮಕ ಇತ್ಯಾದಿ) ಕಾಯ್ದೆಯಲ್ಲಿ ಕಡ್ಡಾಯವಾಗಿ ನಿಗದಿಪಡಿಸಿರುವ ಮೀಸಲಾತಿ ನಿಯಮಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ವಿಷಯವಾರು ಮತ್ತು ಪ್ರವರ್ಗವಾರು ಹಂಚಿಕೆ ನಿಯಮಗಳಲ್ಲಿ 1990ರ ಪರಿಶಿಷ್ಟರ ಮೀಸಲು ಕಾಯ್ದೆಯಲ್ಲಿ ಎಸ್‌ಸಿಗೆ ನಿಗದಿಪಡಿಸಿರುವ ಶೇ 15, ಎಸ್‌ಟಿಗೆ ಶೇ3ರ ಮೀಸಲು ನೀತಿಯನ್ನು ಪಾಲನೆ ಮಾಡುತ್ತಿಲ್ಲ. ಇದರಿಂದ ಅನ್ಯಾಯವಾಗುತ್ತಿದೆ' ಎಂದು ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಶ್ರೀಧರ ಪ್ರಭು ವಾದ ಮಂಡಿಸಿದ್ದರು.

ರಮೇಶ್ ಕುಮಾರ್ ಪ್ರಕರಣ: ವರದಿ ಸಲ್ಲಿಕೆಗೆ ಆದೇಶ

'ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಹೊಸಹುಡ್ಯ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದ ಸರ್ವೆ ನಂಬರ್ 1 ಮತ್ತು 2ರಲ್ಲಿ ಕಂದಾಯ ಭೂಮಿ ಹಾಗೂ ಅರಣ್ಯ ಪ್ರದೇಶದ ಗಡಿಯನ್ನು ಗುರುತಿಸಿ ಸೀಮಿತ ಅವಧಿಯಲ್ಲಿ ಸರ್ವೆ ನಕ್ಷೆ ಸಿದ್ಧಪಡಿಸಬೇಕು ಎಂಬ ಕಂದಾಯ ಇಲಾಖೆ ಆದೇಶಕ್ಕೆ ಸಂಬಂಧಿಸಿದಂತೆ ವಸ್ತುಸ್ಥಿತಿ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಶ್ರೀನಿವಾಸಪುರ ತಾಲ್ಲೂಕಿನ ಕುಂದಿಟಿವಾರಪಲ್ಲಿ ನಿವಾಸಿಯೂ ಆದ ಹೈಕೋರ್ಟ್ ವಕೀಲ ಕೆ.ವಿ.ಶಿವಾರೆಡ್ಡಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ಎಸ್.ನರೇಂದ್ರಬಾಬು ಅವರ ವಾದ ಆಲಿಸಿದ ನ್ಯಾಯಪೀಠ, 'ವಸ್ತುಸ್ಥಿತಿ ವರದಿ ಸಲ್ಲಿಸಿ' ಎಂದು ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿದೆ. ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ (74) ಅವರು ಈ ಪ್ರಕರಣದಲ್ಲಿ ಅರಣ್ಯ ಒತ್ತುವರಿ ಆರೋಪ ಎದುರಿಸುತ್ತಿರುವ ಪ್ರತಿವಾದಿಯಾಗಿದ್ದಾರೆ.

ಮೃತ ವ್ಯಕ್ತಿಯ ಬೆರಳಚ್ಚು: ದತ್ತಾಂಶ ಮನವಿ ತಿರಸ್ಕೃತ

'ಮೃತ ವ್ಯಕ್ತಿಯ ಬೆರಳಚ್ಚಿನ ಮೂಲಕ ಗುರುತು ಪತ್ತೆಹಚ್ಚಲಿಕ್ಕಾಗಿ, ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದ (ಯುಐಡಿಎಐ) ಬಳಿ ಇರುವ ದತ್ತಾಂಶ ಹೋಲಿಕೆಗೆ ಅವಕಾಶ ಕಲ್ಪಿಸಬೇಕು' ಎಂಬ ರಾಜ್ಯ ಸರ್ಕಾರದ ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಈ ಸಂಬಂಧ ಬ್ಯಾಟರಾಯನಪುರ ಪೊಲೀಸರು ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ದೃಢೀಕರಣಕ್ಕೆ ಜೀವಂತ ವ್ಯಕ್ತಿಯ ಬೆರಳಚ್ಚು ಅಗತ್ಯ' ಎಂದು ಸ್ಪಷ್ಟಪಡಿಸಿದೆ.

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪರ ವಾದ ಮಂಡಿಸಿದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, 'ಗುರುತು ಪತ್ತೆ ಹಚ್ಚಲು ಬೆರಳಚ್ಚು ಬಳಕೆ ಮಾಡಬೇಕಾದರೆ ಅಂತಹ ವ್ಯಕ್ತಿ ಜೀವಂತವಾಗಿರಬೇಕು. ಯುಐಡಿಎಐ ದತ್ತಾಂಶದಲ್ಲಿ ಮೃತ ವ್ಯಕ್ತಿಯ ಗುರುತು ಪತ್ತೆ ಮಾಡಲು ಬೆರಳಚ್ಚನ್ನು ಬಳಕೆ ಮಾಡಲಾಗದು' ಎಂದು ಪ್ರತಿಪಾದಿಸಿದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಮೃತ ವ್ಯಕ್ತಿಯ ಬೆರಳಚ್ಚು ಹೊಂದಿಸಲು ತಾಂತ್ರಿಕ ನಿರ್ಬಂಧಗಳಿವೆ. ವ್ಯಕ್ತಿಗತ ಖಾಸಗಿತನವನ್ನು ಕಾಪಾಡುವುದು ಅವಶ್ಯ. ಹೀಗಾಗಿ, ಯುಐಡಿಎಐ ದತ್ತಾಂಶದಲ್ಲಿ ಮೃತ ವ್ಯಕ್ತಿಯ ಬೆರಳಚ್ಚು ಶೋಧಿಸಲು ನಿರ್ದೇಶಿಸಲು ಆಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣವೇನು?: ಬ್ಯಾಟರಾಯನಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕಾಲುವೆಯಲ್ಲಿ ಮೃತ ಮಹಿಳೆಯೊಬ್ಬರ ದೇಹ ಪತ್ತೆಯಾಗಿತ್ತು. ಇದನ್ನು ಕೊಲೆ ಪ್ರಕರಣ ಎಂದು ದಾಖಲು ಮಾಡಿಕೊಳ್ಳಲಾಗಿತ್ತು. ಮೃತ ಮಹಿಳೆಯ ಗುರುತನ್ನು ಪತ್ತೆ ಹಚ್ಚದ ಹೊರತಾಗಿ ತನಿಖೆ ಮುಂದುವರಿಸಲು ಕಷ್ಟವಾಗಿತ್ತು. ಹೀಗಾಗಿ, ಠಾಣಾಧಿಕಾರಿ ಆಧಾರ್ ದತ್ತಾಂಶದ ಜೊತೆ ಮೃತ ಮಹಿಳೆಯ ಬೆರಳಚ್ಚು ಹೊಂದಿಸುವಂತೆ ಯುಐಡಿಎಐಗೆ ಮನವಿ ಸಲ್ಲಿಸಿದ್ದರು. ಆದರೆ ಯುಐಡಿಎಐ, 'ಹೈಕೋರ್ಟ್ ಆದೇಶ ನೀಡದ ಹೊರತು ಆಧಾರ್ ಕಾಯ್ದೆಯಡಿ ಯಾವುದೇ ವಿಚಾರ ಬಹಿರಂಗಪಡಿಸಲಾಗದು' ಎಂದು ಮನವಿಯನ್ನು ತಿರಸ್ಕರಿಸಿತ್ತು.

ಕಲ್ಲುತೂರಾಟ ಪ್ರಕರಣ: ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಅಂಕುಶ

ಕಲಬುರಗಿ: ಅಕ್ರಮ ಜಾನುವಾರು ಸಾಗಣೆಗೆ ಸಂಬಂಧಿಸಿದಂತೆ ಚಿತ್ತಾಪುರದಲ್ಲಿ ನಡೆದಿದ್ದ ಪೊಲೀಸರ ಮೇಲಿನ ಕಲ್ಲು ತೂರಾಟ ಹಾಗೂ ಜೀಪಿಗೆ ಬೆಂಕಿ ಹಚ್ಚಿದ್ದ ಆರೋಪಿಗಳ ಮೇಲಿನ ಪ್ರಕರಣ ಹಿಂಪಡೆದಿದ್ದ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಮಂಗಳವಾರ ತಡೆಯಾಜ್ಞೆ ನೀಡಿದೆ.

2019ರ ಆಗಸ್ಟ್‌ನಲ್ಲಿ ಚಿತ್ತಾಪುರದಲ್ಲಿ ಈ ಘಟನೆ ನಡೆದಿತ್ತು. ಪ್ರಕರಣದಲ್ಲಿ ಹಲವು ಆರೋಪಿಗಳ ಮೇಲೆ ಗುರುತರ ಆರೋಪವಿತ್ತು. ಸಚಿವ ಪ್ರಿಯಾಂಕ್ ಖರ್ಗೆ ಅವರು ಇದೇ ವರ್ಷ ಈ ಪ್ರಕರಣ ಹಿಂಪಡೆಯಲು ಸಂಪುಟ ಸಭೆಯ ಗಮನ ಸೆಳೆದಿದ್ದರು. ಈ ಸಂಬಂಧ ರಾಜ್ಯ ಸರ್ಕಾರ ಕಾನೂನು ಅಭಿಪ್ರಾಯವನ್ನೂ ಪಡೆದಿತ್ತು.

'ಆರೋಪಿಗಳ ವಿರುದ್ಧ ಗುರುತರ ಕೃತ್ಯದ ಪುರಾವೆಗಳಿದ್ದು, ಪ್ರಕರಣ ಹಿಂಪಡೆಯಲು ಯೋಗ್ಯವಲ್ಲ' ಎಂದು ಕಾನೂನು ಅಭಿಪ್ರಾಯ ನೀಡಿತ್ತು. ಅದಾಗ್ಯೂ ಸರ್ಕಾರ ಈ ಪ್ರಕರಣ ಹಿಂಪಡೆಯಲು ತೀರ್ಮಾನಿಸಿತ್ತು. ಅದರಂತೆ ಸರ್ಕಾರದ ಪರ ವಕೀಲರು ಚಿತ್ತಾಪುರ ನ್ಯಾಯಾಲಯದಲ್ಲಿ ಸಿಆರ್‌ಪಿಸಿ ಕಲಂ 321ರಡಿ ಅರ್ಜಿ ಸಲ್ಲಿಸಿದ್ದರು. ಅದನ್ನು ಪರಿಗಣಿಸಿದ್ದ ನ್ಯಾಯಾಲಯ ಪ್ರಕರಣವನ್ನು ವಜಾಗೊಳಿಸಿತ್ತು' ಎಂದು ಮೂಲಗಳು ಹೇಳಿವೆ.

ಈ ಪ್ರಕರಣ ಹಿಂಪಡೆಯುವ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿ ಬೆಂಗಳೂರಿನ ಗಿರೀಶ್ ಭಾರದ್ವಾಜ್ ಎಂಬುವವರು ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಮ್ ಅವರಿದ್ದ ಏಕಸದಸ್ಯ ಪೀಠವು ನ.14ರಂದು ವಿಚಾರಣೆಗೆ ಕೈಗೆತ್ತಿಕೊಂಡಿತ್ತು. ಬಳಿಕ ನ.18ರಂದು (ಮಂಗಳವಾರ) ಅರ್ಜಿ ವಿಚಾರಣೆ ಮುಂದುವರಿಸಿದ ನ್ಯಾಯಪೀಠ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿತು. ಮುಂದಿನ ವಿಚಾರಣೆಯನ್ನು ಡಿಸೆಂಬರ್ 4ಕ್ಕೆ ಮುಂದೂಡಿದೆ.

ಅರ್ಜಿದಾರರ ಪರವಾಗಿ ಹೈಕೋರ್ಟ್ ವಕೀಲ ಯಶಸ್ ಎಸ್. ದೀಕ್ಷಿತ್ ವಾದ ಮಂಡಿಸಿದರು. ಸರ್ಕಾರದ ಪರವಾಗಿ ಎಚ್‌ಜಿಪಿ ಗೋಪಿ ಯಾದವ್ ಹಾಜರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರ 'ಶಿವಲೀಲಾ' ಚಿತ್ರ ಜ.1ಕ್ಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): '300ಕ್ಕೂ ಅಧಿಕ ಲಿಂಗತ್ವ ಅಲ್ಪಸಂಖ್ಯಾತರು ನಟಿಸಿರುವ, ಅವರ ಬದುಕಿನ ಕಥನವುಳ್ಳ 'ಶಿವಲೀಲಾ' ಸಿನಿಮಾ ಜ. 1ರಂದು 150ಕ್ಕೂ ರಾಜ್ಯದಾದ್ಯಂತ ತೆರೆಕಾಣಲಿದೆ' ಎಂದು ರಂಗಭೂಮಿ ಕಲಾವಿದೆ ಮಂಜಮ್ಮ ಜೋಗತಿ ಹೇಳಿದರು.



ಮಂಜಮ್ಮ ಜೋಗತಿ

'ಲಿಂಗತ್ವ ಅಲ್ಪಸಂಖ್ಯಾತರ ನೋವು, ಅವಮಾನ ಸೇರಿ ಹಲವು ಆಯಾಮಗಳನ್ನು ಈ ಚಿತ್ರ ಒಳಗೊಂಡಿದೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. ಲಿಂಗತ್ವ ಅಲ್ಪಸಂಖ್ಯಾತರ ಬದುಕಿನ ಕುರಿತು ಈ ಹಿಂದೆ 'ನಾನು ಅವನಲ್ಲ, ಅವಳು' ಚಲನಚಿತ್ರ ತೆರೆ ಕಂಡಿತ್ತು.

ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಅಶೋಕ್ ಜೈರಾಮ್, 'ಹಲವು ಸಂಕಷ್ಟ, ಸವಾಲುಗಳನ್ನು ಎದುರಿಸಿ ಈ ಚಿತ್ರ ನಿರ್ಮಿಸಿದ್ದೇವೆ' ಎಂದು ಹೇಳಿದರು.

ಚಿತ್ರಾವಳಿ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕೊಪ್ಪಳ ಜಿಲ್ಲೆಯ ಹನುಮಸಾಗರದ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘ ಹಾಗೂ ಕೊಪ್ಪಳದ ಪತ್ರಕರ್ತರ ಬಳಗವು ನಾಟಕಕಾರ ಪಿ.ಬಿ.ಧುತ್ತರಗಿ ಹಾಗೂ ರಂಗನಟಿ ಸರೋಜಮ್ಮ ಧುತ್ತರಗಿ ಅವರ ಸ್ಮರಣಾರ್ಥ ಪಿ.ಬಿ.ಧುತ್ತರಗಿ ವಿರಚಿತ 'ಸಂಪತ್ತಿಗೆ ಸವಾಲ್' ನಾಟಕ ಪ್ರದರ್ಶನ ಏರ್ಪಡಿಸಿತ್ತು

'ಫುಲ್‌ಮೀಲ್ಸ್' ಚಲನಚಿತ್ರದಲ್ಲಿ ಛಾಯಾಚಿತ್ರಗ್ರಾಹಕರ ಕುರಿತು ಬಳಸಿರುವ ಆಕ್ಷೇಪಾರ್ಹ ಪದವನ್ನು ಕೂಡಲೇ ತೆಗೆದುಹಾಕಬೇಕು ಎಂದು ಆಗ್ರಹಿಸಿ ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘದ ವತಿಯಿಂದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಮನವಿ ಸಲ್ಲಿಸಲಾಯಿತು. ಸಂಘದ ಅಧ್ಯಕ್ಷ ನಾಗೇಶ್, ಕಾರ್ಯದರ್ಶಿ ಮುರುಳಿ, ರವಿಶಂಕರ್, ನಿರ್ದೇಶಕ ಪಳನಿ ಇದ್ದರು

ವೈಟ್‌ಫೀಲ್ಡ್ ಸಮೀಪದ ಕಲ್ಕುಂಟೆ ಅಗ್ರಹಾರದಲ್ಲಿ 'ಹಸಿರು ಸ್ನೇಹಿ' ಚಂದ್ರಶೇಖರ್ ರೆಡ್ಡಿ ಅವರು ಪ್ರತಿ ವರ್ಷದಂತೆಯೇ ಈ ಬಾರಿಯೂ ತಮ್ಮ ಜನ್ಮದಿನದ ಅಂಗವಾಗಿ ವನಮಹೋತ್ಸವ ಆಯೋಜಿಸಿ ಗಿಡ ನೆಟ್ಟರು. ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಈಸ್ಟ್, ವಿಮೋವೇ ಫೌಂಡೇಷನ್ ಮತ್ತು ಫರ್ಸ್ಟ್ ಪ್ಯಾರಡೈಸ್ ನಿವಾಸಿಗಳ ಸಹಕಾರದಲ್ಲಿ ಈ ಕಾರ್ಯಕ್ರಮ ನಡೆಯಿತು

22ರಂದು ಪಹಲ್ಗಾಮ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನ.22ರಂದು 'ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ' ಆಯೋಜಿಸಲಾಗಿದೆ.

'ಪಹಲ್ಗಾಮ್‌ನಲ್ಲಿ ಹತ್ಯೆಯಾದವರಿಗೆ ಇದೇ ಸಂದರ್ಭದಲ್ಲಿ 'ನುಡಿ ನಮನ ಕಾರ್ಯಕ್ರಮ' ಹಾಗೂ ಕರುನಾಡು ಸಾಧಕರು ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ತಿಳಿಸಿದರು.

'ಕನ್ನಡ ಭಾಷೆ ಉಳಿಸಿ, ಬೆಳೆಸಬೇಕು, ವಿಶ್ವಭಾಷೆಯಾಗಿ ಮಾಡಬೇಕು ಎಂಬ ಉದ್ದೇಶದಿಂದ 2022ರಲ್ಲಿ ಕಾಶಿಯಲ್ಲಿ 'ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ', 2023ರಲ್ಲಿ ನೇಪಾಳದ ಪಶುಪತಿ ದೇವಾಲಯ ಸನ್ನಿಧಾನದಲ್ಲಿ 'ಅಂತರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ' ಮತ್ತು 2024ರಲ್ಲಿ ಹರಿದ್ವಾರದಲ್ಲಿ 'ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ' ಆಯೋಜಿಸಲಾಗಿತ್ತು. ಈ ಬಾರಿ ಪಹಲ್ಗಾಮ್‌ನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಜಿಬಿಎ ಅಧಿಕಾರಿಗಳು, ನೌಕರರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಹಿನ್ನೆಲೆ ಗಾಯಕಿ ಅನುರಾಧ ಭಟ್ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್.ಸಂಪತ್ ರಾಜ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಮಾಜಿ ಮೇಯರ್ ಎಂ.ಗೌತಮ್ ಕುಮಾರ್, ಬೆಂಗಳೂರು ದೂರದರ್ಶನ ಕೇಂದ್ರದ ಮುಖ್ಯಸ್ಥೆ ಆರತಿ ಎಚ್.ಎನ್, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗ, ವಕೀಲ ವಿ.ಶ್ರೀನಿವಾಸ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಅವರ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಂಘದ ಪದಾಧಿಕಾರಿಗಳಾದ ಸಾಯಿಶಂಕರ್, ಕೆ.ಜಿ.ರವಿ, ಕೆ.ಮಂಜೇಗೌಡ, ಎಚ್.ಬಿ.ಹರೀಶ್, ಮಂಜುನಾಥ್, ಎಸ್.ಜಿ.ಸುರೇಶ್, ಸಂತೋಷ್ ಕುಮಾರ್ ನಾಯ್ಕ್, ಎಸ್.ಎನ್.ಸೋಮಶೇಖರ್, ಎಲ್.ಆರ್, ಮಂಜುನಾಥ್, ನರಸಿಂಹ, ಶ್ರೀಧರ್, ಡಾ.ಶೋಭ, ರೇಣುಕಾಂಬ, ವಾಣಿ, ಮಹಾದೇವಿ, ಅಕ್ಕಮಹದೇವಿ ಉಪಸ್ಥಿತರಿದ್ದರು.

ಪಹಲ್ಗಾಮ್‌ನಲ್ಲಿ ನಡೆಯುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಪೋಸ್ಟರ್ ಅನ್ನು ಸಂಘದ ಪದಾಧಿಕಾರಿಗಳು ಮಂಗಳವಾರ ಬಿಡುಗಡೆ ಮಾಡಿದರು

ಯಾದಗಿರಿ: ಅಕ್ರಮ ಸಾಗಣೆ 301 ಕ್ವಿಂಟಲ್ ಪಡಿತರ ಅಕ್ಕಿ ವಶ

ಪ್ರಜಾವಾಣಿ ವಾರ್ತೆ

ಯಾದಗಿರಿ: ಜಿಲ್ಲೆಯ ಗುರುಮಠಕಲ್ ಪಟ್ಟಣದಲ್ಲಿ ಪಡಿತರ ಅಕ್ಕಿ ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಆರೋಪದಡಿ ಲಾರಿ ಮಾಲೀಕ ಮತ್ತು ಚಾಲಕನ ವಿರುದ್ಧ ಮಂಗಳವಾರ ಪ್ರಕರಣ ದಾಖಲಾಗಿದ್ದು, 301 ಕ್ವಿಂಟಲ್ ಅಕ್ಕಿ ವಶಕ್ಕೆ ಪಡೆಯಲಾಗಿದೆ.

ಪಟ್ಟಣದ ಎಪಿಎಂಸಿ ಗಂಜ್ ಆವರಣದಲ್ಲಿ ಲಾರಿಯೊಂದು ನಿಂತಿತ್ತು. ಕಾಳ ಸಂತೆಯಲ್ಲಿ ಪಡಿತರ ಅಕ್ಕಿ ಮಾರಲು ದಾಸ್ತಾನು ಮಾಡಿದ್ದಾಗಿ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದ್ದರು. ₹10.43 ಲಕ್ಷ ಮೌಲ್ಯದ 301 ಕ್ವಿಂಟಲ್ ಪಡಿತರ ಅಕ್ಕಿ ಹಾಗೂ ಲಾರಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾಶಂಕರ್ ಪ್ರತಿಷ್ಠಾನದಿಂದ ಪ್ರಶಸ್ತಿ, ಪುರಸ್ಕಾರ ಪ್ರದಾನ

'ಕನ್ನಡ ಸಂಶೋಧಕರು ಎಲೆಮರೆ ಕಾಯಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಪ್ರಿಯ ಸಾಹಿತ್ಯ ಬರವಣಿಗೆಗಳಿಗಿಂತ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರು ಎಲೆಮರೆ ಕಾಯಿಗಳ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ಕನ್ನಡ ಭವನದಲ್ಲಿ ಆಯೋಜಿಸಿದ್ದ ವಿದ್ಯಾಶಂಕರ ಪ್ರಶಸ್ತಿ ಹಾಗೂ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬರವಣಿಗೆಗಿಂತ ಸಂಶೋಧನೆ ಕೆಲಸ ಕಷ್ಟಕರವಾದದ್ದು. ಕ್ಷೇತ್ರ ಕಾರ್ಯ ಮಾಡದೇ ಇದ್ದರೆ ಹೊಸತನ್ನು ನೀಡಲು ಆಗುವುದಿಲ್ಲ. ಹಸ್ತ ಪ್ರತಿ ಸಂಗ್ರಹ, ಶಾಸನಗಳ ಸಂಶೋಧನೆಯಲ್ಲಿ ಸದ್ದಿಲ್ಲದೇ ಹಲವರು ತೊಡಗಿಸಿಕೊಂಡು ಕನ್ನಡ ಸಂಶೋಧನಾ ವಲಯವನ್ನು ಶ್ರೀಮಂತಗೊಳಿಸಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ಆರ್.ಸಿ.ಹಿರೇಮಠ್ ಸಹಿತ ಹಲವರ ಶ್ರಮ ಇದರಲ್ಲಿ ಇದೆ' ಎಂದು ಹೇಳಿದರು.

'ಹೋರಾಟದ ಫಲವಾಗಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆಯಿತು. ಇದರ ಹಿಂದೆ ಇದ್ದುದು ಸಂಶೋಧನಾ ಚಟುವಟಿಕೆಗಳೇ. ಇದರಿಂದಲೇ ಭಾಷೆಯ ಮಹತ್ವ ಅರಿವಾಯಿತು. ಮುಂದಿನ ಪೀಳಿಗೆಗೆ ಕನ್ನಡ ಭಾಷೆ, ಸಾಹಿತ್ಯ, ಮಹತ್ವ ತಿಳಿಸಿ ಕೊಡುವ ಕೆಲಸ ಭಾರತದ ಇತರೆ ಭಾಷೆಗಳಿಗಿಂತ ಕನ್ನಡದಲ್ಲಿ ಹೆಚ್ಚು ಆಗುತ್ತಿರುವುದು ಶ್ಲಾಘನೀಯ' ಎಂದರು.

'ವೀರಶೈವ ಸಾಹಿತ್ಯ ಚರಿತ್ರೆಯನ್ನು ನಾಲ್ಕು ಸಂಪುಟಗಳ ಆರು ಭಾಗಗಳಲ್ಲಿ ಹೊರ ತರುವಲ್ಲಿ ವಿದ್ಯಾಶಂಕರ ಅವರ ಪ್ರಯತ್ನ ಹಿರಿದು. ಅವರು ನಿಧನರಾದ ನಂತರ ಒಂದು ಸಂಪುಟ ಹೊರತರಲು ನಮ್ಮಿಂದ ಆಗಿಲ್ಲ' ಎಂದು ಪರಮಶಿವಮೂರ್ತಿ ತಿಳಿಸಿದರು.

ಕಾರ್ತಿಕ್, ಕಾ ವೆಂ ಶ್ರೀನಿವಾಸ ಮೂರ್ತಿ, ಶಿವಕುಮಾರಸ್ವಾಮಿ ಸಿ, ಪ್ರತಿಷ್ಠಾನದ ಅಧ್ಯಕ್ಷ ನಲ್ಲೂರು ಪ್ರಸಾದ್ ಆರ್.ಕೆ. ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಮಹೇಶ್, ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ ಅವರ ಪತ್ನಿ ನಾಗರತ್ನ ಉಪಸ್ಥಿತರಿದ್ದರು.

ನಗರದಲ್ಲಿ ಮಂಗಳವಾರ ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ ಕಾರ್ಯಕ್ರಮದಲ್ಲಿ ವಿದ್ಯಾಶಂಕರ ಪ್ರಶಸ್ತಿಯನ್ನು ಸಂಗಮೇಶ ಸವದತ್ತಿಮಠ ಹಾಗೂ ವಿದ್ಯಾಶಂಕರ ಪುರಸ್ಕಾರವನ್ನು ಜಯಲಲಿತಾ ಅವರಿಗೆ ಪ್ರದಾನ ಮಾಡಲಾಯಿತು

ಉಲ್ಲಂಘನೆ: 14 ಪಿ.ಜಿಗಳಿಗೆ ಬೀಗ

ನಿಯಮ ಪಾಲಿಸದ ವಸತಿ ಗೃಹಗಳು ಆರೋಗ್ಯ ಅಧಿಕಾರಿಗಳ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರ್ಗಸೂಚಿ ಪಾಲಿಸದ 14 ವಸತಿಗೃಹಗಳಿಗೆ (ಪಿಜಿ) ಸಾರ್ವಜನಿಕ ಆರೋಗ್ಯ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಬೀಗ ಹಾಕಲಾಗಿದೆ.

ಪರವಾನಗಿ ಪಡೆಯದೇ ಎಸ್.ಒ.ಪಿ ಮಾನದಂಡಗಳನ್ನು ಉಲ್ಲಂಘಿಸಿ, ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಪಿ.ಜಿಗಳ ವಿರುದ್ಧ ಕಾರ್ಯಾಚರಣೆ ಹಾಗೂ ಉದ್ದಿಮೆ ಪರವಾನಗಿ ವಿಶೇಷ ಅಭಿಯಾನ ನಡೆಸುವಂತೆ ಆಯುಕ್ತ ಡಿ.ಎಸ್.ರಮೇಶ್ ಸೂಚಿಸಿದ್ದಾರೆ. ಅದರಂತೆ, ಆರೋಗ್ಯ ವಿಭಾಗದ ಅಧಿಕಾರಿಗಳು ಮಂಗಳವಾರ ಕಾರ್ಯಾಚರಣೆ ನಡೆಸಿದರು.

ವಸತಿ ಪ್ರದೇಶಗಳಲ್ಲಿ ನಿಯಮಬಾಹಿರವಾಗಿ ವಾಣಿಜ್ಯ/ವಸತಿಯೇತರ ಚಟುವಟಿಕೆಗಳನ್ನು ನಡೆಸುತ್ತಿರುವ ಮತ್ತು ಜಿಬಿಜಿಎ ಕಾಯ್ದೆ ಪ್ರಕಾರ ವಿಧಿಸಿರುವ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸದ 14 ಪಿ.ಜಿಗಳ ವಿರುದ್ಧ ಅಭಿವೃದ್ಧಿ ವಿಭಾಗದ ಹೆಚ್ಚುವರಿ ಆಯುಕ್ತರಾದ ಲೋಖಂಡೆ ಸ್ನೇಹಲ್ ಸುಧಾಕರ್ ಮಾರ್ಗದರ್ಶನದಲ್ಲಿ ಅಧಿಕಾರಿಗಳು ಕ್ರಮ ಕೈಗೊಂಡರು.

ಬೀಗ ಹಾಕಲಾದ ಪಿ.ಜಿಗಳು: ಮಹದೇವಪುರ ವಿಧಾನಸಭಾ ಕ್ಷೇತ್ರ: ವ್ಯಾಪ್ತಿಯ ಎಸ್.ವಿ.ಕೆ. ಪಿಜಿ, ಪಟ್ಟಂದೂರು ಅಗ್ರಹಾರ; ವಂಶಿ ಕೃಷ್ಣ ಪಿ.ಜಿ, ಪಟ್ಟಂದೂರು ಅಗ್ರಹಾರ; ಡ್ವೆಲ್ ಕೋ-ಲಿವಿಂಗ್ ಪಿ.ಜಿ, ಲಕ್ಷ್ಮಿನಾರಾಯಣಪುರ; ರಾಯಲ್ ಹೋಮ್ ಸ್ಟೇಸ್ ಪಿ.ಜಿ, ಮೈತ್ರಿ ಲೇಔಟ್; ಡ್ರೀಮ್ ಲ್ಯಾಂಡ್ ಪಿ.ಜಿ, ಪ್ರಶಾಂತ್ ಲೇಔಟ್; ಝೋಲೋ ಅಸ್ಮಿ ಜೆಂಟ್ಸ್ ಪಿ.ಜಿ, ರಾಘವೇಂದ್ರ ಲೇಔಟ್; ಕೆ.ಆರ್. ಜೆಂಟ್ಸ್ ಪಿ.ಜಿ, ರಾಮಾಂಜನೇಯ ಲೇಔಟ್.

ಕೆ.ಆರ್. ಪುರ ವಿಧಾನಸಭಾ ಕ್ಷೇತ್ರ: ಶ್ರೀ ಎಸ್.ಜಿ. ಜೆಂಟ್ಸ್ ಅಂಡ್ ಲೇಡೀಸ್ ಪಿ.ಜಿ, ಮುನಿಯಪ್ಪ ಲೇಔಟ್; ಸೇಂಟ್ ಮರಿಯಾ ಲೇಡೀಸ್ ಪಿ.ಜಿ, ನಾಗಪ್ಪ ರೆಡ್ಡಿ ಲೇಔಟ್; ಎಸ್.ಎಲ್.ವಿ ಕಂಫರ್ಟ್ಸ್ ಜೆಂಟ್ಸ್ ಪಿ.ಜಿ, ಶರಾವತಿ ಲೇಔಟ್; ಗಣೇಶ ಜೆಂಟ್ಸ್ ಪಿ.ಜಿ, ಬಸವನಪುರ; ಎಸ್.ಎಸ್.ವಿ ಟವರ್ ಪಿ.ಜಿ, ಲಕ್ಷ್ಮೀ ಸಾಗರ ಲೇಔಟ್; ಬ್ಲಿಸ್ ಕೋ-ಲಿವಿಂಗ್ ಪಿ.ಜಿ; ಬಿ, ನಾರಾಯಣಪುರ; ವಿ.ಡಿ.ಎಸ್ ಲಕ್ಷುರಿ ಪಿ.ಜಿ ಫಾರ್ ಲೇಡೀಸ್, ಸತ್ಯ ಬಡಾವಣೆ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರ್ಗಸೂಚಿ ಪಾಲಿಸದ ಪಿ.ಜಿಗಳಿಗೆ ಅಧಿಕಾರಿಗಳು ಬೀಗ ಹಾಕಿದರು

466 ಉದ್ದಿಮೆದಾರರಿಗೆ ಪರವಾನಗಿ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನ.10ರಿಂದ 15ರವರೆಗೆ ಉದ್ದಿಮೆ ಪರವಾನಗಿ ವಿಶೇಷ ಅಭಿಯಾನವನ್ನು 17 ವಾರ್ಡ್ ಕಚೇರಿಗಳಲ್ಲಿ ನಡೆಸಲಾಗಿತ್ತು. ಈ ಅವಧಿಯಲ್ಲಿ 466 ಉದ್ದಿಮೆದಾರರು 'ಏಕ ಗವಾಕ್ಷಿ' ಅಡಿಯಲ್ಲಿ ಒಟ್ಟು ₹25,52,800 ಶುಲ್ಕ ಪಾವತಿಸಿ, ಎಲ್ಲ ಅಗತ್ಯ ದಾಖಲೆಗಳನ್ನು ಮಧ್ಯವರ್ತಿಗಳ ಯಾವುದೇ ಹಸ್ತಕ್ಷೇಪವಿಲ್ಲದೇ ಅರ್ಜಿ ಸಲ್ಲಿಸಿದ ದಿನದಂದೇ ಉದ್ದಿಮೆ ಪರವಾನಗಿಯನ್ನು ಪಡೆದುಕೊಂಡರು ಎಂದು ಆಯುಕ್ತರು ತಿಳಿಸಿದರು.

'ತುಮಕೂರಿಗೆ ಮೆಟ್ರೊದಿಂದ ಬೆಂಗಳೂರಿನ ಒತ್ತಡ ಕಡಿಮೆ'

ಎರಡು ವರ್ಷದ ಹಿಂದೆಯೇ ಪ್ರಸ್ತಾಪಿಸಿದ್ದೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು-ತುಮಕೂರು ಮೆಟ್ರೊ ಯೋಜನೆಯ ಅನೇಕ ವಿಚಾರಗಳು ಸಂಸದ ತೇಜಸ್ವಿ ಸೂರ್ಯ ಅವರ ಗಮನದಲ್ಲಿಲ್ಲ. ಇದೇ ಕಾರಣದಿಂದ ಈ ಯೋಜನೆಯ ಬಗ್ಗೆ ಅವರು ಆತಂಕ ವ್ಯಕ್ತಪಡಿಸಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತುಮಕೂರಿನಿಂದ ನಿತ್ಯ ಸಾವಿರಾರು ಜನರು ಪ್ರಯಾಣ ಮಾಡುತ್ತಾರೆ. ನೆಲಮಂಗಲ, ದಾಬಸ್ ಪೇಟೆ, ಕ್ಯಾತ್ಸಂದ್ರ ಭಾಗ ವೇಗವಾಗಿ ಬೆಳೆಯುತ್ತಿದೆ. ರಾಮನಗರ, ಕೋಲಾರ, ತುಮಕೂರು ನಗರಗಳನ್ನು ಬೆಳೆಸುವ ಜೊತೆಗೆ, ರಸ್ತೆ, ಮೆಟ್ರೊ, ರೈಲು ಸಂಪರ್ಕ ಇದ್ದರೆ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ ಎಂಬುದು ನಮ್ಮ ಉದ್ದೇಶ' ಎಂದರು.

'ತುಮಕೂರಿನಲ್ಲಿ 20 ಸಾವಿರ ಎಕರೆಯಲ್ಲಿ ಏಷ್ಯಾದ ಅತಿದೊಡ್ಡ ಕೈಗಾರಿಕಾ ಪ್ರದೇಶ ನಿರ್ಮಿಸಲಾಗಿದೆ. ಈಗಾಗಲೇ 200 ಕೈಗಾರಿಕೆಗಳು ಬಂದಿವೆ. ಫುಡ್‌ಪಾರ್ಕ್, ಟೈಮೆಕ್ ಜಪಾನೀಸ್ ಫ್ಯಾಕ್ಟರಿ, ಜಪಾನೀಸ್ ಟೌನ್‌ಶಿಪ್‌ಗೆ ಜಾಗ ಕೊಟ್ಟಿದ್ದೇವೆ. ಇಷ್ಟು ವೇಗವಾಗಿ ಬೆಳೆಯುತ್ತಿರುವಾಗ ಸಂಪರ್ಕ ವ್ಯವಸ್ಥೆ ಬೇಕಲ್ಲವೇ' ಎಂದು ಪ್ರಶ್ನಿಸಿದರು.

ಮೆಟ್ರೊ ಯೋಜನೆಯನ್ನು ತುಮಕೂರಿಗೆ ತೆಗೆದುಕೊಂಡು ಹೋಗಬೇಕೆಂದು ಎರಡು ವರ್ಷದ ಹಿಂದೆಯೇ ಪ್ರಸ್ತಾಪ ಮಾಡಿದ್ದೆ. ಕಾರ್ಯಸಾಧ್ಯತೆ ಅಧ್ಯಯನ ಮಾಡಿಸುವುದಾಗಿ 2024ರ ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು. ಈ ಅಧ್ಯಯನ ವರದಿಯಲ್ಲಿ ತುಮಕೂರು ಮೆಟ್ರೊ ಯೋಜನೆ ಬಗ್ಗೆ ಸಕಾರಾತ್ಮಕ ಅಭಿಪ್ರಾಯವಿದೆ. ಎಲ್ಲರೊಂದಿಗೆ ಚರ್ಚಿಸಿ, ಡಿಪಿಆರ್ ಮಾಡಲು ಅವರು ಅನುಮತಿ ನೀಡಿದ್ದಾರೆ' ಎಂದರು.

'ಹೂಡಿಕೆಗೆ ಮೂರು ಕಂಪನಿಗಳ ಆಸಕ್ತಿ'

'ಪಿಪಿಪಿ ಮಾದರಿಯಲ್ಲಿ ಹೂಡಿಕೆ ಮಾಡಲು ಎರಡು-ಮೂರು ಕಂಪನಿಗಳು ಮುಂದೆ ಬಂದಿವೆ' ಎಂದು ಪರಮೇಶ್ವರ ಹೇಳಿದರು.

'ಈ ಯೋಜನೆಗೆ ಹೂಡಿಕೆ ಮಾಡುವುದಾಗಿ ಕತಾರ್‌ನ ಒಂದು ಕಂಪನಿಯವರು ಮುಖ್ಯಮಂತ್ರಿಗೆ ಅಧಿಕೃತವಾಗಿ ಪತ್ರ ನೀಡಿದ್ದಾರೆ. ಇಷ್ಟೆಲ್ಲ ಆಗಿರುವಾಗ, ತೇಜಸ್ವಿ ಸೂರ್ಯ ಅವರು ಯಾವ ಉದ್ದೇಶಕ್ಕಾಗಿ ವಿರೋಧ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗುತ್ತಿಲ್ಲ. ಇದು ಸಂಘರ್ಷದ ಪ್ರಶ್ನೆಯಲ್ಲ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕು' ಎಂದರು.

'ಸಾಧ್ಯತೆಗಳ ಅಧ್ಯಯನ'

'ತುಮಕೂರು ಮೆಟ್ರೊ ಮಾರ್ಗಕ್ಕೆ ಬಂದ ಮನವಿ ಪರಿಗಣಿಸಿ ಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸಲು ಸೂಚಿಸಲಾಗಿದೆ. ಗೃಹ ಸಚಿವ ಜಿ.ಪರಮೇಶ್ವರ ಸೇರಿದಂತೆ ಕೆಲವರು ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನಗೊಳಿಸಲು ಸಲಹೆ ನೀಡಿದ್ದಾರೆ. ಹೂಡಿಕೆಗೆ ಯಾರಾದರೂ ಮುಂದೆ ಬಂದರೆ ಹೊಸ ಮಾರ್ಗಗಳ ಅಧ್ಯಯನ ಮಾಡಲಾಗುವುದು. ವಿರೋಧ ಏಕೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ನೀರಿನ ಸೋರಿಕೆ ತಡೆಗೆ ರೋಬೋಟಿಕ್ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ ನೀರಿನ ಸೋರಿಕೆ ತಡೆಯಲು ಬೆಂಗಳೂರು ಜಲಮಂಡಳಿ ರೋಬೋಟಿಕ್ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿದೆ.

ಇದಲ್ಲದೇ ನೀರು ಹಾಗೂ ಒಳಚರಂಡಿಯ ಅನಧಿಕೃತ ಸಂಪರ್ಕಗಳನ್ನು ಪತ್ತೆ ಹಚ್ಚಲು ಈ ಹಿಂದೆ ಘೋಷಿಸಿದ್ದ ನೀಲಿ ಕಾರ್ಯಪಡೆ ಸೇವೆ ಆರಂಭಿಸಲಿದೆ.

'ಸೋರಿಕೆಯ ನಿಖರ ಸ್ಥಳವನ್ನು ಪತ್ತೆಹಚ್ಚಿ ಅನಗತ್ಯ ರಸ್ತೆ ತೋಡುವಿಕೆಗೆ ಕಡಿವಾಣ ಹಾಕಲು ಮಂಡಳಿಯು ಪ್ರಮುಖ ರೋಬೋಟಿಕ್ ತಂತ್ರಜ್ಞಾನ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಈ ತಂತ್ರಜ್ಞಾನ ಕಾರ್ಯ ನಿರ್ವಹಿಸಲಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಈ ಎರಡೂ ಯೋಜನೆಗಳಿಗೆ ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರು ನ.19ರಂದು ಚಾಲನೆ ನೀಡುವರು ಎಂದು ಹೇಳಿದ್ದಾರೆ

ಬೆಂಗಳೂರು ಜಲಮಂಡಳಿ ಬ್ಲೂ ಫೋರ್ಸ್ ವಾಹನ

ಪ್ರಮುಖಾಂಶಗಳು

- ಪೈಪ್‌ಲೈನ್ ಒಳಭಾಗದ ನಿಖರ ಪರಿಶೀಲನೆ
- ಎಐ ನಿಂದ ನಿಖರವಾದ ಲೀಕೇಜ್ ಸ್ಥಳ ಪತ್ತೆ
- ಆಧಾರಿತ ದೋಷ ಪತ್ತೆಹಚ್ಚುವಿಕೆ
- ಪೈಪ್‌ಲೈನ್ ಜಾಲದ ಡಿಜಿಟಲ್ ಮ್ಯಾಪಿಂಗ್

ಭೂ ತಕರಾರು ಪ್ರಕರಣ: ಸಚಿವರ ಕ್ರಮಕ್ಕೆ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ತಕರಾರು ಪ್ರಕರಣಗಳ ವಿಲೇವಾರಿ ಸಂಬಂಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಕೈಗೊಂಡಿರುವ ಕ್ರಮಗಳು ದಿಟ್ಟತನದ್ದು. ಇದು ಜಾರಿಯಾದರೆ ವರ್ಷಾನುಗಟ್ಟಲೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರು, ಬಡ ರೈತರು ಕೋರ್ಟ್ ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಹೇಳಿದೆ.

ಭೂ ಸಂಬಂಧಿತ ತಕರಾರು ಪ್ರಕರಣಗಳನ್ನು ಎ.ಸಿ ನ್ಯಾಯಾಲಯದಿಂದ ತಹಶೀಲ್ದಾರ್ ಅವರಿಗೆ ಮರು ಪರಿಶೀಲನೆ ಮಾಡುವಂತೆ ಹಿಂತಿರುಗಿಸಲಾಗುತ್ತಿದೆ. ಇಂತಹ ಪ್ರಕರಣಗಳಲ್ಲಿ ಕಕ್ಷಿದಾರರಿಗೆ ಅನ್ಯಾಯ ಆಗುತ್ತಿರುವುದನ್ನು ಸಚಿವರು ಗಂಭೀರವಾಗಿ ಪರಿಗಣಿಸಿ 15 ದಿನ ಒಳಗೆ ಇತ್ಯರ್ಥ ಮಾಡಬೇಕೆಂದು ಆದೇಶ ಹೊರಡಿಸಿರುವುದು ಕ್ರಾಂತಿಕಾರಿ ತೀರ್ಮಾನ ಎಂದು ಪಕ್ಷದ ರಾಜ್ಯ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ಲಂಚ ಕೊಡದ ಪ್ರಕರಣಗಳನ್ನು ಪರಿಶೀಲನೆಗೆ ವರ್ಗಾವಣೆ ಮಾಡಲಾಗುತ್ತಿದ್ದು, ಎ.ಸಿ, ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಪ್ರಕರಣ ಶೀಘ್ರ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದ್ದಾರೆ.

ವೈದ್ಯಕೀಯ ನಿರ್ಲಕ್ಷ್ಯ: ₹30 ಲಕ್ಷ ಪರಿಹಾರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಹಾಸನ: ವೈದ್ಯರ ನಿರ್ಲಕ್ಷ್ಯದಿಂದ ಸೋಂಕು ತಗುಲಿ ಮಹಿಳೆ ಮೃತಪಟ್ಟ ಪ್ರಕರಣದಲ್ಲಿ ಬೆಂಗಳೂರಿನ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರಿಗೆ ನಗರದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹30 ಲಕ್ಷ ಪರಿಹಾರ ನೀಡಲು ಆದೇಶಿಸಿದೆ.

ಇಲ್ಲಿನ ವಿದ್ಯಾನಗರದ ನಿವಾಸಿ ನಾಗೇಶ್ ಅವರ ತಾಯಿ ಗಂಗಮ್ಮ ಅವರು ಪಿತ್ತಕೋಶದಲ್ಲಿ ಕಲ್ಲಿನ ಸಮಸ್ಯೆಯಿಂದ ಆಸ್ಪತ್ರೆಗೆ 2023ರ ಜನವರಿ 5ರಂದು ದಾಖಲಾಗಿದ್ದರು. ಆಸ್ಪತ್ರೆಯ ಡಾ. ಸೈಯದ್ ಶಫಿಕ್ ಅವರು 6 ರಂದು ಶಸ್ತ್ರ-ಚಿಕಿತ್ಸೆ ಮಾಡಿ ಸ್ಟಂಟ್ ಅಳವಡಿಸಿದ್ದರು. ನಂತರ ಸೋಂಕು ತಗುಲಿ ಗಂಗಮ್ಮ ಅದೇ ತಿಂಗಳ 30ರಂದು ಮೃತಪಟ್ಟಿದ್ದರು.

'ಆಸ್ಪತ್ರೆಯವರ ನಿರ್ಲಕ್ಷ್ಯದಿಂದ ತಾಯಿ ಮೃತಪಟ್ಟಿದ್ದು, ಸೇವಾ ನ್ಯೂನ್ಯತೆ, ಖರ್ಚಿನ ಪರಿಹಾರವಾಗಿ ₹50 ಲಕ್ಷ ಪರಿಹಾರ ಕೊಡಿಸಬೇಕು' ಎಂದು ಕೋರಿ ನಾಗೇಶ್ ಅವರು ಆಯೋಗದಲ್ಲಿ ಅದೇ ವರ್ಷ ನವೆಂಬರ್ 3ರಂದು ದೂರು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಚಂಚಲಾ ಸಿ.ಎಂ., ಸದಸ್ಯೆ ಅನುಪಮಾ ಆರ್. ಅವರನ್ನು ಒಳಗೊಂಡ ಪೀಠ, 'ಶಸ್ತ್ರಚಿಕಿತ್ಸೆಯ ನಂತರ ಉಂಟಾದ ಸೋಂಕಿನ ಬಗ್ಗೆ ನಿಗಾ ವಹಿಸಿಲ್ಲ. ಬ್ಯಾಕ್ಟೀರಿಯಾ ಸೋಂಕಿನಿಂದ ರೋಗಿಯು ಮೃತಪಟ್ಟಿದ್ದು, ಸುಪ್ರೀಂ ಕೋರ್ಟ್ ಹಾಗೂ ರಾಷ್ಟ್ರೀಯ ಆಯೋಗದ ಹಲವಾರು ತೀರ್ಪಿನ ಪ್ರಕಾರ ವೈದ್ಯಕೀಯ ನಿರ್ಲಕ್ಷ್ಯವಾಗಿದೆ' ಎಂದು ತೀರ್ಮಾನಿಸಿದೆ.

ಆಸ್ಪತ್ರೆಯ ನಿರ್ದೇಶಕರು, ವೈದ್ಯರಾದ ಡಾ.ಭುವನ ಕೃಷ್ಣ ಮತ್ತು ಡಾ.ಸೈಯದ್ ಶಫಿಕ್ ಅವರು ಜಂಟಿಯಾಗಿ ಅಥವಾ ಬೇರೆ-ಬೇರೆಯಾಗಿ ಒಟ್ಟು ಪರಿಹಾರದ ಮೊತ್ತವನ್ನು 6 ವಾರದೊಳಗೆ ನೀಡಬೇಕು. ತಪ್ಪಿದ್ದಲ್ಲಿ ವಾರ್ಷಿಕ ಶೇ 10 ಬಡ್ಡಿಯೊಂದಿಗೆ ಪಾವತಿಸಬೇಕು ಎಂದು ನವೆಂಬರ್ 7ರಂದು ಆದೇಶ ಹೊರಡಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಅಂತರಶಾಲಾ ಟಿಟಿ ಚಾಂಪಿಯನ್‌ಷಿಪ್‌ನ ಜೂನಿಯರ್ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ (ನಿಂತವರು) ಶ್ರೀಕುಮಾರನ್ ಚಿಲ್ಡ್ರನ್ಸ್ ಹೋಮ್ ಶಾಲಾ ತಂಡ. (ಕುಳಿತವರು) ಸಬ್ ಜೂನಿಯರ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಜೈನ್ ಹೆರಿಟೇಜ್ ಸ್ಕೂಲ್ (ಬಾಲಕಿಯರು) ಮತ್ತು ಡೆಲ್ಲಿ ಪಬ್ಲಿಕ್ ಸ್ಕೂಲ್ ತಂಡ (ಬಾಲಕರು)

ಮೈಸೂರು ರೇಸ್

ಕನ್ಯಾ ರಾಶಿ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕನ್ಯಾ ರಾಶಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐಯ್ ದಿ ಮೈಂಡ್ 9, ಪರ್ಲ್ ಆಫ್ ಮೈಸೂರು 6, ಸಿಟಿ ಆಫ್ ಹಸ್ಲ್ 10
2ನೇ ರೇಸ್: ಚಾಯ್ಸ್ 2, ವಾಲ್ಟರ್ 4, ಅನುಸ್ತುಭ 10
3ನೇ ರೇಸ್: ಸೆಲ್ಮಾ 1, ಪ್ಲಾನೆಟ್ ಸೂಪರ್ 2, ಬಾಲಹಕ 6
4ನೇ ರೇಸ್: ಕ್ಲಿಮ್ಟ್ 2, ಮೋನ 12, ಶೀಬಾ 6
5ನೇ ರೇಸ್: ಕನ್ಯಾ ರಾಶಿ 2, ಟ್ರೂ ಪಂಚ್ 10, ಸ್ಪೆಕ್ಟಾಕ್ಯುಲರ್ 6
6ನೇ ರೇಸ್: ನಾಟಿ ಇನ್ ಬ್ಲೂ 8, ಬ್ಯೂಟಿಫುಲ್ ಬ್ಲೂಮ್ 1, ಅಥೆಂಟಿಕ್ ಬೆಲ್ 4
7ನೇ ರೇಸ್: ನ್ಯಾಚುರಲ್ ಟೋರ್ನಾಡೊ 2, ರೀನ್ ಆಫ್ ಟೆರರ್ 10, ಹ್ಯಾವೆಲಾಕ್ ಕ್ರ್ಯೂಝ್ 5

ಉತ್ತಮ ಬೆಟ್: ನಾಟಿ ಇನ್ ಬ್ಲೂ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	4,5,6

ಸತ್ಯಮೇವ ಜಯತೇ

ಉನ್ನತ ಕೃಷಿ, ಸಮೃದ್ಧ ಕೃಷಿಕ
ವಿಕಸಿತ ಭಾರತದ ನಿರ್ಮಾಣ

ಪ್ರಧಾನಮಂತ್ರಿ
ನರೇಂದ್ರ ಮೋದಿ ಇವರಿಂದ

ಪಿಎಂ ಕಿಸಾನ್ ಸಮ್ಮಾನ್ ನಿಧಿಯ 21ನೇ ಕಂತಿನ ಮೂಲಕ ರೂ.18,000 ಕೋಟಿಗೂ ಅಧಿಕ ಸಮ್ಮಾನ ಮೊಬಲಗು 9 ಕೋಟಿಗೂ ಅಧಿಕ ಕೃಷಿಕರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ ಮತ್ತು ದಕ್ಷಿಣ ಭಾರತ ನೈಸರ್ಗಿಕ ಕೃಷಿ ಸಮಿತಿ 2025ರ ಉದ್ಘಾಟನೆ

19 ನವಂಬರ್ | ಮ.1 ಗಂಟೆ | ಕೊಯಂಬತ್ತೂರು, ತಮಿಳನಾಡು

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ
- ಕೃಷಿಕರ ಖಾತೆಗಳಿಗೆ ಮೂರು ಸಮಾನ ಕಂತುಗಳಲ್ಲಿ ವಾರ್ಷಿಕ **ರೂ.6,000** ನೇರ ವರ್ಗಾವಣೆ
- ಇಲ್ಲಿಯವರೆಗೆ **ರೂ.3.90 ಕೋಟಿಗೂ** ಅಧಿಕ ಮೊತ್ತವನ್ನು ನೇರವಾಗಿ ಕೃಷಿಕರ ಬ್ಯಾಂಕ್ ಖಾತೆಗೆ ವರ್ಗಾವಣ ಮಾಡಲಾಗಿದೆ
- ಪಿಎಂ ಕಿಸಾನ್ ಯೋಜನೆಯಲ್ಲಿ **25% ಮಹಿಳಾ ಕೃಷಿಕರು** ಫಲಾನುಭವಿಗಳಾಗಿದ್ದಾರೆ
- ವಿಶ್ವದ ಅತಿದೊಡ್ಡ ನೇರ ಲಾಭ ವರ್ಗಾಣೆ (ಡಿಬಿಟಿ) ಯೋಜನೆಗಳಲ್ಲಿ ಇದು ಒಂದಾಗಿದೆ
- ಪಿಎಂ ಕಿಸಾನ್ ಯೋಜನೆಯ **85%+** ಫಲಾನುಭವಿಗಳು ಸಣ್ಣ ಮತ್ತು ಸೀಮಾಂತ ಕೃಷಿಕರಾಗಿದ್ದಾರೆ

ಕೃಷಿಯಲ್ಲಿ ಅಭೂತಪೂರ್ವ ಪ್ರಯೋಜನಗಳು
- ಕಳೆದ 11 ವರ್ಷಗಳಲ್ಲಿ ಸಿರಿಧಾನ್ಯ ಉತ್ಪಾದನೆಯು 246 ಮಿಲಿಯನ್ ಟನ್‌ನಿಂದ **354 ಮಿಲಿಯನ್ ಟನ್** ಪ್ರಗತಿ ಸಾಧಿಸಿದೆ
- **25 ಕೋಟಿಗೂ ಅಧಿಕ ಮಣ್ಣು** ಆರೋಗ್ಯ ಕಾರ್ಡ್ ವಿತರಿಸಲಾಗಿದೆ
- **100 ಲಕ್ಷ ಹೆಕ್ಟೇರ್‌ಗಳಲ್ಲಿ ಸೂಕ್ಷ್ಮ ಸಿಂಚಾಯಿ ವಿಸ್ತರಿಸಲಾಗಿದೆ.**
- **ರೂ. 2 ಲಕ್ಷ ಕೋಟಿ** ಫಸಲು ವಿಮಾ ಯೋನೆ ಮೂಲಕ ನೀಡಲಾಗಿದೆ
- ರಾಷ್ಟ್ರೀಯ ಸಾಂಪ್ರದಾಯಿಕ ಖೇತಿ ಮಿಷನ್ ಮುಖಾಂತರ **55 ಸಾವಿರಕ್ಕೂ ಅಧಿಕ ಕೃಷಿಕರಿಗೆ** ಪ್ರಮಾಣಪತ್ರ ನೀಡಲಾಗಿದೆ
- ಕಳೆದ 11 ವರ್ಷಗಳಲ್ಲಿ ಋಣ ಪ್ರವಾಹ ರೂ. 6.35 ಲಕ್ಷ ಕೋಟಿಗೂ ಅಧಿಕ ಸುಮಾರು 6.35 ಲಕ್ಷ ಕೋಟಿಗೂ ಅಧಿಕವಾಗಿ ಸುಮಾರು **ರೂ.16 ಕೋಟಿ ಆಗಿದೆ**
- ನೂತನ ತಂತ್ರಜ್ಞಾಣ, ಎಫ್‌ಪಿಒ, ಕೃಷಿಕರ ಡಿಜಿಟಲ್ ಐಡಿ, ಪಿಎಂ ಆಶಾ ಮತ್ತು ಎಐಡಿ, ಪಿಎಂ ಆಶಾ ಮತ್ತು ಎಫ್‌ಐಎಫ್ ಜೊತೆಗೆ ಗ್ರಾಮೀಣ ಭಾರತದಲ್ಲಿ ಸಕಾರಾತ್ಮಕ ಬದಲಾವಣೆ

ಕೃಷಿ ಕ್ಷೇತ್ರದಲ್ಲಿ ಐತಿಹಾಸಿಕ ಹೂಡಿಕೆ
- ರೂ. 24,000 ಕೋಟಿಗೂ ಅಧಿಕ ಮೊಬಲಗನ್ನು ಪ್ರಧಾನಮಂತ್ರಿ **ಧನ–ಧಾನ್ಯ ಕೃಷಿ ಯೋಜನೆಗೆ** ಜೋಡಿಸಲಾಗಿದೆ
- **ದಲಹನ್ ಆತ್ಮನಿರ್ಭರತಾ ಮಿಷನ್‌ಗೆ** ರೂ. 11,440 ಕೋಟಿ ಮೊತ್ತದ ನೆರವು ನೀಡಲಾಗಿದೆ
- ಕಳೆದ 11 ವರ್ಷಗಳಲ್ಲಿ ಕೃಷಿ ಆಯವ್ಯಯದಲ್ಲಿ ಸುಮಾರು 5 ಪಟ್ಟು ಹೆಚ್ಚಳ, ರೂ. 22,000 ಕೋಟಿಯಿಂದ **ರೂ. 1.27 ಲಕ್ಷ ಕೋಟಿ** ಮೊಬಲಗು ಭರಿಸಲಾಗಿದೆ
- ಕಳೆದ 11 ವರ್ಷಗಳಲ್ಲಿ ಸುಮಾರು **ರೂ.14 ಲಕ್ಷ ಕೋಟಿಗೂ** ಅಧಿಕ ಮೊಬಲಗಿನ ರಸಗೊಬ್ಬರ ಸಬ್ಸಿಡಿ ಮುಖಾಂತರ, ಸಮಯಕ್ಕೆ ಸರಿಯಾಗಿ ಮತ್ತು ರಿಯಾಯತಿ ದರದಲ್ಲಿ ಬೆಳೆಗಳಿಗೆ ಪರಿಪೂರ್ಣತೆ ನೀಡಲಾಗಿದೆ.

CBC 01102/13/0007/2526

ಬೀಜದಿಂದ ಮಾರುಕಟ್ಟೆವರೆಗೆ ಭಾರತ ಸರ್ಕಾರವು ರೈತರ ಜೊತೆಗಿದೆ

ಈ ಕಾರ್ಯಕ್ರಮದ ನೇರಪ್ರಸಾರವನ್ನು ಡಿಡಿ ನ್ಯೂಸ್ ಅಥವಾ ಡಿಡಿ ಕಿಸಾನ್ ವಾಹಿನಿಯಲ್ಲಿ ಲಭ್ಯ www.youtube/@AgriGoi
न्यूज़ किसान
ನಮ್ಮನ್ನು ಅನುಸರಿಸಿ @AgriGoI
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

ಸೂರ್ಯನಿಗೇ ಟಾರ್ಚ್ ಹಾಕುವ ಕಾಲ ಬಂತೆ!



ಹಾಸ್ಯ ಚಟಾಕಿಯಾಗಿ ಬಳಕೆಯಾಗುವ 'ಸೂರ್ಯನಿಗೇ ಟಾರ್ಚಾ' ಎಂಬುದನ್ನು ನಿಜವಾಗಿಸಬಲ್ಲ ಸಂಶೋಧನೆಯೊಂದು ಪ್ರಗತಿಯಲ್ಲಿದೆ; ಸೂರ್ಯನ ಪ್ರಖರ ಕಿರಣಗಳನ್ನು ಮಂದಗೊಳಿಸುವಂಥ ಸಂಶೋಧನೆಯೊಂದನ್ನು ವಿಜ್ಞಾನಿಗಳು ನಡೆಸುತ್ತಿದ್ದಾರಂತೆ!

• ರಾಕೇಶ ವಿ. ತಾಳಿಕೋಟಿ

ಜಾಗತಿಕವಾಗಿ ಪರಿಸರದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ತಿಳಿಯಲು, ತಡೆಗಟ್ಟಲು ವಿಶ್ವಸಂಸ್ಥೆಯ ಆಯೋಜಿತ 'ಕೊಪ್30' (ಸಿಒಪಿ30) ಶೃಂಗಸಭೆ ಬ್ರೆಝಿಲ್‌ನ ಬೆಲೆಂನಲ್ಲಿ ಇದೇ 10ರಿಂದ 21ರವರೆಗೆ ನಡೆಯುತ್ತಿದೆ. ಇಲ್ಲಿ ಪ್ರಮುಖ ಚರ್ಚೆಯಲ್ಲಿರುವ ವಿಷಯವೆಂದರೆ 'ಜಾಗತಿಕ ತಾಪಮಾನ ಹೆಚ್ಚಳದ ತಡಗಟ್ಟುವಿಕೆ'.

ತಾಪಮಾನ ಏರಿಕೆಯಿಂದ ಭೂಮಿಯ ಮೇಲೆ ಅನೇಕ ಬದಲಾವಣೆಗಳು ಜರುಗುವುದು ಸಹಜ. ಭೂಮಿಯಿಂದ ಸೌರಮಂಡಲದವರೆಗೆ ಹರಡಿರುವ ಟ್ರೊಪೊಸ್ಫೇರ್, ಸ್ಟ್ರಾಟೋಸ್ಫೇರ್, ಮಿಸೋಸ್ಫೇರ್, ಥರ್ಮೊಸ್ಫೇರ್ ಹಾಗೂ ಎಕ್ಸೋಸ್ಫೇರ್ ವಾತಾವರಣದ ಹಂತಗಳು.

ಕೃತಕ ಮೋಡ ಬಿತ್ತನೆಯಿಂದ ಮಳೆ ಬರಿಸಿರುವುದು ನಮಗೆಲ್ಲ ತಿಳಿದ ಸಂಗತಿ. ಇತ್ತೀಚೆಗೆ ರಾಷ್ಟ್ರದ ರಾಜಧಾನಿಯಲ್ಲಿ ಉಂಟಾಗಿರುವ ಕಲುಷಿತ ವಾಯುತೊಂದರೆಗೆ ಸಿಲ್ವರ್ ಅಯೊಡೈಡ್ ಬಳಸಿಕೊಂಡು ಕ್ಲೌಡ್-ಸೀಡಿಂಗ್ ತಂತ್ರಜ್ಞಾನ ಮಾಡುವ ಮಾತು ಮುನ್ನೆಲೆಗೆ ಬಂದಿದೆ.

ಹಲವು ಚಲನಚಿತ್ರಗಳಲ್ಲಿ ಹಾಸ್ಯಚಟಾಕಿಯಾಗಿ ಬಳಕೆಯಾಗಿರುವ 'ಸೂರ್ಯನಿಗೇ ಟಾರ್ಚ್ ಹಾಕುವಿರಾ!' ಎಂಬ ಮಾತನ್ನು ಇಂದು ನಿಜವಾಗಿಸಲು ಸಂಶೋಧನೆ ನಡೆದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಅರಿತಿರುವ ವಿಜ್ಞಾನಿಗಳು ಇಂದು ಅದರ ಮುಂದುವರಿದ ಭಾಗವಾಗಿ ಸೂರ್ಯನ ಪ್ರಖರ ಕಿರಣಗಳನ್ನು ಮಂದಗೊಳಿಸುವ ಸಂಶೋಧನೆಯನ್ನು ಪ್ರಗತಿಪಡಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿಷ್ಠಿತ 'ನೇಚರ್' ಸಂಶೋಧನಾ ನಿಯತಕಾಲಿಕೆಯ ಅಕ್ಟೋಬರ್ ತಿಂಗಳ 'ಸೈಂಟಿಫಿಕ್ ರಿಪೋರ್ಟ್'ನಲ್ಲಿ ಪ್ರಕಟವಾಗಿರುವ 'ಎಂಜಿನಿಯರಿಂಗ್ ಆ್ಯಂಡ್ ಲಾಜಿಸ್ಟಿಕ್ಸ್ ಕನ್‌ಸರ್ನ್ ಆ್ಯಂಡ್ ಪ್ರಾಕ್ಟಿಕಲ್ ಲಿಮಿಟೇಶನ್ಸ್ ಟು ಸ್ಟ್ರಾಟೋಸ್ಫೆರಿಕ್ ಏರೋಸೋಲ್ ಇಂಜೆಕ್ಷನ್ ಸ್ಟ್ರಾಟೆಜೀಸ್' ಎಂಬ ಸಂಶೋಧನಾ ಲೇಖನದಲ್ಲಿ ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದ ಏರೋಸೋಲ್ ವಿಜ್ಞಾನಿ ಮಿರಾಂಡಾ ಹ್ಯಾಕ್ ಅವರ ನೇತೃತ್ವದ ವಿ ಫಾಯೆ ಮೆಕ್ನಿಲ್, ಡಾನ್ ಸ್ಟಿಂಗಾರ್ಟ್, ಗೆರ್ನೊಟ್ ವಾಗ್ನರ್ ಅವರ ತಂಡವು ಪ್ರತಿಪಾದಿಸಿದ್ದಾರೆ.

ಓಝೋನ್ ಪದರ ನೆಲೆಗೊಂಡಿರುವ ಈ ಹಂತದ ವಾತಾವರಣದಲ್ಲಿ 'ಸ್ಟ್ರಾಟೋಸ್ಫೆರಿಕ್ ಏರೋಸೋಲ್ ಇಂಜೆಕ್ಷನ್'(ಎಸ್‌ಎಐ) ಪ್ರಯೋಗಗಳನ್ನು ಕೈಗೊಳ್ಳುವ ಮೂಲಕ ಸೂರ್ಯನ ಶಾಖವನ್ನು ತಿಳಿಗೊಳಿಸುವುದು ಮತ್ತು ಆ ಮೂಲಕ ಜಾಗತಿಕ ತಾಪಮಾನವನ್ನು ಕಡಿಮೆಗೊಳಿಸಿ ಭೂಮಂಡಲದ ಸ್ಥಿರತೆ ಕಾಪಾಡಿಕೊಳ್ಳುವುದು ಇವರ ಪ್ರಮುಖ ಉದ್ದೇಶ.

'ಎಸ್‌ಎಐ' ಆಧಾರಿತ ಸೌರ ಜಿಯೋ ಎಂಜಿನಿಯರಿಂಗ್ ಎಂದರೆ ವಾತಾವರಣದ ಮಧ್ಯಭಾಗದಲ್ಲಿ ಏರೋಸೋಲ್ ಕಣಗಳನ್ನು ಹರಡುವುದು. ಈ ಕಣಗಳು ಸೂರ್ಯನ ಬೆಳಕಿನ ಒಂದು ಭಾಗವನ್ನು ಭೂಮಿಗೆ ಬೀಳದಂತೆ ತಡೆದು ಬಾಹ್ಯಾಕಾಶಕ್ಕೆ ಪ್ರತಿಫಲಿಸುತ್ತವೆ. ಇದರಿಂದ ಭೂಮಿಯು ಕಡಿಮೆ ಉಷ್ಣವನ್ನು ಪಡೆಯುತ್ತದೆ. ಇದರಿಂದ ಅಸಾಧಾರಣವಾದ ಹಲವಾರು ಫಲಿತಾಂಶಗಳು ಪಡೆಯಬಹುದು ಎಂದು ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

ಇಲ್ಲಿ ಯೋಚಿಸಬೇಕಾದ ಸಂಗತಿ ಎಂದರೆ, ಭೂಮಿಯಲ್ಲಿ ಆಗಾಗ್ಗೆ ಸಂಭವಿಸುವ ಜ್ವಾಲಾಮುಖಿಯ ಸ್ಫೋಟಗಳಿಂದ ಗಾಳಿಯಲ್ಲಿ ಅತಿಯಾದ ಸಾಂದ್ರತೆಯಿಂದ ದೊಡ್ಡ ಪ್ರಮಾಣದ ಬೂದಿಯ ರೂಪದ ಕಣಗಳು ಸ್ಟ್ರಾಟೋಸ್ಫೇರಿಗೆ ತಳ್ಳಲ್ಪಡುತ್ತವೆ. ಇದರಿಂದ ಭೂಮಿಯಲ್ಲಿ ತಾತ್ಕಾಲಿಕ ಶೀತ ವಾತಾವರಣ ಏರ್ಪಡುತ್ತದೆ. ಒಂದು ವೇಳೆ ಎಸ್‌ಐಎ ಕಣಗಳು ಇವುಗಳೊಂದಿಗೆ ಸೇರಿಕೊಂಡು ತಾಪಮಾನ ವ್ಯಾಪಕವಾಗಿ ಕುಸಿತಗೊಂಡರೆ? ಸೂರ್ಯನಿಂದ ದೊರಕುವ ವಿಟಮಿನ್ ಡಿ ದೊರೆಯದೆ ಹೋದರೆ?

ಈ ಮಾದರಿ ಸಂಶೋಧನಾ ಪ್ರಯೋಗಗಳು ಕಂಪ್ಯೂಟರ್ ಮಾದರಿಗಳಲ್ಲಿ ಪ್ರಗತಿ ಹಂತದಲ್ಲಿವೆ. ವಾಸ್ತವಿಕ ದೃಷ್ಟಿಯಿಂದ ನೈಜ ಪರಿಸ್ಥಿತಿ ಅನುಸಾರ ಯಾವೆಲ್ಲ ಪ್ರದೇಶಗಳಲ್ಲಿ ಇವುಗಳ ಉಪಯೋಗ ಮಾಡಬೇಕು, ಮತ್ತದರ ಅನಿಶ್ಚಯತೆಯನ್ನು ಖಚಿತವಾಗಿ ಈಗಲೇ ಹೇಳಲಾಗದು ಎಂದು ಸಂಶೋಧಕರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಮಧ್ಯ ಅಕ್ಷಾಂಶ ಪ್ರದೇಶಗಳಲ್ಲಿ ಇವುಗಳನ್ನು ಬಳಸಿದರೆ ಉಷ್ಣ ಸಂಚಾರದ ಮಾರ್ಗ ಬದಲುಗೊಂಡು ಧ್ರುವ ಪ್ರದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಸಹ ಇಲ್ಲಿ ಗಮನಿಸಬೇಕಾದ ಅಂಶ.

ಇನ್ನೊಂದೆಡೆ, ಹೆಚ್ಚು ಎತ್ತರದಲ್ಲಿ ಎಸ್‌ಐಎ ಬಿಡುಗಡೆ ಮಾಡಿದರೆ ಕಣಗಳು ಹೆಚ್ಚು ಕಾಲ ವಾತಾವರಣದಲ್ಲಿ ಉಳಿಯುತ್ತವೆ. ಆದರೆ ಓಝೋನ್ ಪದರ ದುರ್ಬಲಗೊಳ್ಳುವ ಅಪಾಯವಿದೆ ಎಂದು ಕೆಲವು ವಿಜ್ಞಾನಿಗಳು ಹೇಳಿದ್ದಾರೆ. ಎತ್ತರ, ರೇಖಾಂಶ, ಋತು, ತೀವ್ರತೆ ಹಾಗೂ ತಾಂತ್ರಿಕ ನೈಪುಣ್ಯಗಳಿಂದ ಒಟ್ಟಾರೆ ಪ್ರಯೋಗದಿಂದ ಎದುರಾಗುವ ಅಪಾಯಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದಿದ್ದಾರೆ.

ಸ್ಟ್ರಾಟೋಸ್ಫೆರಿಕ್ ಏರೋಸೋಲ್ ಇಂಜೆಕ್ಷನ್ ತಯಾರಿಸಲು ದುಬಾರಿಯಾದ ವಜ್ರ ಮತ್ತು ಆಭರಣ ತಯಾರಿಕೆ(ಜೆಮ್ ಸ್ಟೋನ್)ಯಲ್ಲಿ ಬಳಸುವ 'ಜಿರ್ಕಾನ್' ದೂಳಿನ ಕಣಗಳು ಬೇಕಾಗಬಹುದು. ಇವುಗಳ ಉತ್ಪಾದನೆ, ವೆಚ್ಚ, ಲಭ್ಯತೆ, ಬಳಕೆಯ ಕುರಿತು ಆಳವಾದ ಅಧ್ಯಯನ ನಡೆಸುವುದು ಸೂಕ್ತ.

ಸಂಶೋಧನೆಗಳು, ಆಲೋಚನೆಗಳು ಸರಬರಾಜು ಸರಪಳಿಗಳ ಮೇಲೆ ನಿರ್ಭರವಾಗಿದ್ದರೆ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ನೆರವಾಗುತ್ತವೆ. ಹಾಗೆಯೇ ಆವಿಷ್ಕಾರಗಳ ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಹಂತಹಂತವಾಗಿ ಕಾರ್ಯರೂಪಕ್ಕೆ ತರುವುದು ಆದ್ಯತೆಯಾಗಬೇಕು.

ಈಗ ನಡೆದಿರುವ 'ಕೊಪ್30' ಶೃಂಗಸಭೆಯಲ್ಲಿ ಈ ವಿಷಯದ ಮೇಲೆ ಇನ್ನಷ್ಟು ಚರ್ಚೆ ನಡೆದರೆ ನಿಖರ ಚಿತ್ರಣವನ್ನು ರೂಪಿಸಲು ಸಹಾಯವಾಗಬಹುದು.

'ಕ್ವಾಂಟಮ್ ಸುಪ್ರಿಮಸಿ'ಯನ್ನು ಮೆರೆಸಿದ ವಿಜ್ಞಾನಿ

• ಸುಧೀರ ಎಚ್. ಎಸ್.

ನೊಬೆಲ್ ವಿಜ್ಞಾನಿಗಳು 6

ಕ್ವಾಂಟಮ್ ಜಗತ್ತಿನ ಮತ್ತೊಬ್ಬ ವಾಸ್ತುಶಿಲ್ಪಿ ನೊಬೆಲ್ ಪ್ರಶಸ್ತಿ ವಿಜೇತ ಪ್ರೊ. ಜಾನ್ ಎಂ. ಮಾರ್ಟಿನಿಸ್;

2025ರ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಈ ಬಾರಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿಯ ಪ್ರೊಫೆಸರ್ ಜಾನ್ ಕ್ಲಾರ್ಕ್, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಸಾಂಟಾ ಬಾರ್ಬರಾ ಮತ್ತು ಯೇಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಮೈಕೆಲ್ ಹೆಚ್. ಡೆವೊರೆಟ್ ಹಾಗೂ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಸಾಂಟಾ ಬಾರ್ಬರಾದ ಪ್ರೊ. ಜಾನ್ ಎಂ. ಮಾರ್ಟಿನಿಸ್ ಅವರು ಹಂಚಿಕೊಂಡಿದ್ದಾರೆ. 'ವಿದ್ಯುತ್ ಸರ್ಕ್ಯೂಟ್‌ನಲ್ಲಿ ಮ್ಯಾಕ್ರೋಸ್ಕೋಪಿಕ್ ಕ್ವಾಂಟಮ್ ಮೆಕ್ಯಾನಿಕಲ್ ಟನೆಲಿಂಗ್ ಮತ್ತು ಶಕ್ತಿಯ ಕ್ವಾಂಟೈಸೇಶನ್ ವಿದ್ಯಮಾನಗಳನ್ನು ಕಂಡುಹಿಡಿದಿದ್ದಕ್ಕಾಗಿ' ಅವರಿಗೆ ಈ ಗೌರವ ಸಂದಿದೆ.

ನಿದ್ರೆಯಲ್ಲಿದ್ದ ವಿಜ್ಞಾನಿಗೆ ನೊಬೆಲ್ ಸಿಹಿ ಸುದ್ದಿ

ನೊಬೆಲ್ ಪ್ರಶಸ್ತಿಯನ್ನು ನಿರೀಕ್ಷಿಸುವ ಕೆಲವು ವಿಜ್ಞಾನಿಗಳು ನೊಬೆಲ್ ಪ್ರಶಸ್ತಿ ಘೋಷಿಸುವ ವಾರವಂತೂ ಅಕ್ಷರಶಃ ರಾತ್ರಿಯೆಲ್ಲ ಎಚ್ಚರವಾಗಿರುತ್ತಾರೆ; ಅಥವಾ ಕನಿಷ್ಠಪಕ್ಷ ನೊಬೆಲ್ ಸಮಿತಿಯಿಂದ ಬರುವ ಕರೆಗಾಗಿ ಕಾತರದಿಂದ ಕಾಯುತ್ತಿರುತ್ತಾರೆ. ಆದರೆ, ಪ್ರೊ. ಜಾನ್ ಎಂ. ಮಾರ್ಟಿನಿಸ್ ಅವರ ವಿಷಯದಲ್ಲಿ ಇದು ಬೇರೆಯೇ ಆಗಿತ್ತು. ಎಂದಿನಂತೆ ಪ್ರೊ. ಮಾರ್ಟಿನಿಸ್ ಮಾತ್ರ ರಾತ್ರಿ ನೆಮ್ಮದಿಯಾಗಿ ನಿದ್ದೆ ಮಾಡುತ್ತಿದ್ದರೆ, ಕಾಕತಾಳೀಯವಾಗಿ ಅವರ ಪತ್ನಿ ಮಾತ್ರ ಬೆಳಗಿನ ಜಾವ ಮೂರು ಗಂಟೆಯವರೆಗೂ ಪಕ್ಕದ ರೂಮಿನಲ್ಲಿ ಪುಸ್ತಕವನ್ನು ಓದುತ್ತಾ ಎಚ್ಚರವಾಗಿದ್ದರು. ಆಗ ಆ ಹೊತ್ತಿನಲ್ಲಿ ಅವರ ಪತಿಯ ಫೋನ್ ರಿಂಗಾಗಲು ಶುರುವಾಯಿತು. 'ಏನೋ ವಿಶೇಷವಿದೆ' ಎಂದು ತಿಳಿದು, ಅವರು ಫೋನನ್ನು ಪರಿಶೀಲಿಸಿದಾಗ, ಅದು ನೊಬೆಲ್ ಪ್ರಶಸ್ತಿ ಸಮಿತಿಯಿಂದ ಬಂದ ಕರೆ ಎಂದು ತಿಳಿದುಬಂದಿತು. ಆದರೆ ಅವರು ತಮ್ಮ ಪತಿಯನ್ನು ನಿದ್ದೆಯಿಂದ ಎಬ್ಬಿಸಲು ಹೋಗಲಿಲ್ಲ. ಪ್ರೊ. ಮಾರ್ಟಿನಿಸ್ ಅವರಿಗೆ ಬೆಳಿಗ್ಗೆ ಐದೂವರೆಗೆ ಎದ್ದ ನಂತರವಷ್ಟೇ ಈ ಸಿಹಿ ಸುದ್ದಿ ತಿಳಿದದ್ದು. ಪ್ರೊ. ಮಾರ್ಟಿನಿಸ್ ಅವರು ಈ ಸಂಗತಿಯನ್ನು ನೊಬೆಲ್ ಪ್ರಶಸ್ತಿಯ ತಂಡದೊಂದಿಗೆ ತಮ್ಮ ಪತ್ನಿಯ ಕೊಡುಗೆಯನ್ನು ನೆನೆಯುತ್ತ ಕೃತಜ್ಞರಾಗಿ ಈ ವಿಷಯವನ್ನು ಹಂಚಿಕೊಂಡಿದ್ದಾರೆ.



ಪ್ರೊ. ಜಾನ್ ಎಂ. ಮಾರ್ಟಿನಿಸ್

ಚಿತ್ರಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

ಪಯಣ

ಪ್ರೊ. ಮಾರ್ಟಿನಿಸ್ ಅವರು 1958ರಲ್ಲಿ ಅಮೆರಿಕದಲ್ಲಿ ಜನಿಸಿದರು. ಅವರ ತಾಯಿ ಅಮೆರಿಕ ಮೂಲದವರು, ತಂದೆ ಕ್ರೊಯೇಷಿಯಾ ಮೂಲದವರು. ಮಾರ್ಟಿನಿಸ್ ಅವರು 1980ರಲ್ಲಿ ಭೌತಶಾಸ್ತ್ರದಲ್ಲಿ ವಿಜ್ಞಾನ ಪದವಿಯನ್ನು ಮತ್ತು 1987ರಲ್ಲಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ.ಯನ್ನು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿಯಿಂದ ಪಡೆದರು. ಪಿಎಚ್.ಡಿ. ನಂತರ, ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಟ್ಯಾಂಡರ್ಡ್ಸ್ ಆ್ಯಂಡ್ ಟೆಕ್ನಾಲಜಿ(NIST) ಯಲ್ಲಿ ಸೇವೆ ಸಲ್ಲಿಸಿದರು. ನಂತರ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಸಾಂಟಾ ಬಾರ್ಬರಾದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಪ್ರಮುಖ ಸಂಶೋಧನೆಯನ್ನು ಮುಂದುವರಿಸಿದರು. ಅವರು ಪ್ರಸ್ತುತ ಗೂಗಲ್ ಕ್ವಾಂಟಮ್ ಎಐನಲ್ಲಿ ಮುಖ್ಯ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಪಿಎಚ್.ಡಿ. ಮಾಡುವಾಗ ಅವರ ಸಹದ್ಯೋಗಿಗಳೊಡನೆ ನಡೆಸಿದ ಸಂಶೋಧನೆಗೆ ಈಗ ನೊಬೆಲ್ ಪ್ರಶಸ್ತಿ ದೊರಕಿದೆ.

ಕ್ವಾಂಟಮ್ ಜಗತ್ತಿಗೆ ಕೊಡುಗೆಗಳು

ಪ್ರೊ. ಮಾರ್ಟಿನಿಸ್ ಅವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿಯಲ್ಲಿ ಪಿಎಚ್.ಡಿ. ವಿದ್ಯಾರ್ಥಿಯಾಗಿದ್ದಾಗ, ಪ್ರೊ. ಜಾನ್ ಕ್ಲಾರ್ಕ್ ಅವರ ಮಾರ್ಗದರ್ಶನದಲ್ಲಿ ಮತ್ತು ಮೈಕೆಲ್ ಡೆವೊರೆಟ್ ಅವರೊಂದಿಗೆ ಮಹತ್ವದ ಸಂಶೋಧನೆಯನ್ನು ಕೈಗೊಂಡರು. ಈ ಮೂವರು ಸೇರಿ 1980ರ ದಶಕದ ಆರಂಭದಲ್ಲಿ ಸೂಪರ್ ಕಂಡಕ್ಟಿಂಗ್ ವಿದ್ಯುತ್ ಸರ್ಕ್ಯೂಟ್‌ಗಳಲ್ಲಿ 'ಮ್ಯಾಕ್ರೋಸ್ಕೋಪಿಕ್ ಕ್ವಾಂಟಮ್ ಮೆಕ್ಯಾನಿಕಲ್ ಟನೆಲಿಂಗ್' ಅನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಎಂದರೆ, ಕ್ವಾಂಟಮ್ ಪರಿಣಾಮಗಳು ಅತಿಸೂಕ್ಷ್ಮ ಕಣಗಳಲ್ಲಿ ಮಾತ್ರವಲ್ಲದೆ, ಕಣ್ಣಿಗೆ ಕಾಣುವಂತಹ ದೊಡ್ಡ ವಿದ್ಯುತ್ ಸರ್ಕ್ಯೂಟ್‌ಗಳಲ್ಲೂ ಅನ್ವಯವಾಗುತ್ತವೆ ಎಂಬುದನ್ನು ಅವರು ಸಾಬೀತುಪಡಿಸಿದರು. ಇದು ಕ್ವಾಂಟಮ್ ಕಂಪ್ಯೂಟರ್‌ಗಳ ಮೂಲಭೂತ ಅಂಶವಾದ 'ಸೂಪರ್‌ಕಂಡಕ್ಟಿಂಗ್ ಕ್ಯೂಬಿಟ್‌ಗಳ' (superconducting qubits) ಅಭಿವೃದ್ಧಿಗೆ ಅಡಿಪಾಯ ಹಾಕಿತು. ಪ್ರೊ. ಮಾರ್ಟಿನಿಸ್ ಅವರು ಸೂಪರ್‌ಕಂಡಕ್ಟಿಂಗ್ ಸಾಧನಗಳು ಮತ್ತು ಜೋಸೆಫ್‌ಸನ್ ಜಂಕ್ಷನ್‌ಗಳನ್ನು ನಿಖರವಾಗಿ ತಯಾರಿಸುವಲ್ಲಿ ಪರಿಣತಿ ಹೊಂದಿದ್ದರು; ಇದು ಅವರ ಪ್ರಯೋಗಗಳ ಯಶಸ್ಸಿಗೆ ಕಾರಣವಾಯಿತು.

'ಕ್ವಾಂಟಮ್ ಸುಪ್ರಿಮಸಿ'

ಪ್ರೊ. ಮಾರ್ಟಿನಿಸ್ ಅವರು ಗೂಗಲ್‌ನ ಕ್ವಾಂಟಮ್ ಎಐ ತಂಡದ ಮುಖ್ಯ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ನಾಯಕತ್ವದಲ್ಲಿ, ಗೂಗಲ್ 2019ರಲ್ಲಿ 'ಸಿಕ್ಮೋರ್' (Sycamore) ಎಂಬ ಕ್ವಾಂಟಮ್ ಪ್ರೊಸೆಸರ್ ಅನ್ನು ಬಳಸಿಕೊಂಡು 'ಕ್ವಾಂಟಮ್ ಸುಪ್ರಿಮಸಿ'(Quantum Supremacy)ಯನ್ನು ಸಾಧಿಸಿ ಇತಿಹಾಸ ನಿರ್ಮಿಸಿದರು. ಅಂದರೆ ಸಾಂಪ್ರದಾಯಿಕ ಕಂಪ್ಯೂಟರ್‌ಗಳಿಗೆ ಸಾವಿರಾರು ವರ್ಷಗಳನ್ನು ತೆಗೆದುಕೊಳ್ಳುವ ಒಂದು ಗಣನೆಯನ್ನು ಕ್ವಾಂಟಮ್ ಕಂಪ್ಯೂಟರ್ ಕೆಲವೇ ನಿಮಿಷಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿತು. ಈ ಮಹತ್ವದ ಮೈಲಿಗಲ್ಲು ಕ್ವಾಂಟಮ್ ಕಂಪ್ಯೂಟಿಂಗ್‌ನ ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿ, ಭವಿಷ್ಯದ ತಂತ್ರಜ್ಞಾನಕ್ಕೆ ದಾರಿ ತೆರೆಯಿತು.

ಪ್ರಶಸ್ತಿ–ಗೌರವಗಳು

ನೊಬೆಲ್ ಪ್ರಶಸ್ತಿಯ ಹೊರತಾಗಿ, ಪ್ರೊಫೆಸರ್ ಮಾರ್ಟಿನಿಸ್ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಮತ್ತು ಗೌರವಗಳನ್ನು ಪಡೆದಿದ್ದಾರೆ. 1997ರಲ್ಲಿ ಫ್ರಿಟ್ಜ್ ಲಂಡನ್ ಮೆಮೋರಿಯಲ್ ಪ್ರಶಸ್ತಿ, 2007ರಲ್ಲಿ ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸಸ್‌ನ ಸದಸ್ಯರಾಗಿ ಆಯ್ಕೆ, 2014ರಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ನ ಸದಸ್ಯರಾಗಿ ಆಯ್ಕೆ, ಹಾಗೂ 2021ರಲ್ಲಿ ಮಿಸಿಯಸ್ ಕ್ವಾಂಟಮ್ ಪ್ರಶಸ್ತಿ (Micius Quantum Prize), ಇವರಿಗೆ ಸಂದಿದೆ.

ಪ್ರೊ. ಜಾನ್ ಎಂ. ಮಾರ್ಟಿನಿಸ್ ಅವರ ದಶಕಗಳ ಶ್ರಮ ಮತ್ತು ದೂರದೃಷ್ಟಿಯ ಸಂಶೋಧನೆಯು ಕ್ವಾಂಟಮ್ ವಿಜ್ಞಾನಕ್ಕೆ ಹೊಸ ಆಯಾಮವನ್ನು ನೀಡಿದೆ. ಅವರ ಈ ನೊಬೆಲ್ ಪ್ರಶಸ್ತಿ ಕ್ವಾಂಟಮ್ ಕಂಪ್ಯೂಟಿಂಗ್‌ನ ಭವಿಷ್ಯವನ್ನು ರೂಪಿಸುವಲ್ಲಿ ಅವರ ನಿರ್ಣಾಯಕ ಪಾತ್ರಕ್ಕೆ ಸಿಕ್ಕಿದ ಅರ್ಹ ಮನ್ನಣೆಯಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ವಿದ್ಯುಚ್ಛಕ್ತಿ

37) ಚಿತ್ರದಲ್ಲಿ ನೀಡಲಾದ ಮಂಡಲ ರೇಖಾಚಿತ್ರದಲ್ಲಿ, ರೋಧಕಗಳಾದ R_1, R_2 ಮತ್ತು R_3 ಗಳ ಬೆಲೆಗಳು ಕ್ರಮವಾಗಿ 5Ω, 10Ω, 30Ω ಗಳಾಗಿದ್ದು ಅವುಗಳನ್ನು 12V ವಿಭವಾಂತರವಿರುವ ಒಂದು ಶುಷ್ಕಕೋಶಕ್ಕೆ ಜೋಡಿಸಿದೆ. ಹಾಗಾದರೆ (a) ಪ್ರತಿಯೊಂದು ರೋಧಕದ ಮೂಲಕ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ (b) ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ ಮತ್ತು (c) ಮಂಡಲದ ಒಟ್ಟು ರೋಧವನ್ನು ಲೆಕ್ಕಮಾಡಿರಿ.



ಉತ್ತರ:–

$R_1 = 5\Omega, R_2 = 10\Omega$ ಮತ್ತು $R_3 = 30\Omega$

ಶುಷ್ಕಕೋಶದ ತುದಿಗಳ ನಡುವಿನ ವಿಭವಾಂತರ : **V = 12V**

ಹಾಗೆಯೇ, ಇದು ಪ್ರತಿಯೊಂದು ರೋಧಕದ ನಡುವಿನ ವಿಭವಾಂತರವಾಗಿದೆ. ಆದ್ದರಿಂದ ನಾವು ರೋಧಕಗಳಲ್ಲಿನ ವಿದ್ಯುತ್ ಪ್ರವಾಹವನ್ನು ಅಳೆಯಲು ಓಮ್‌ನ ನಿಯಮವನ್ನು ಅನ್ವಯಿಸುತ್ತೇವೆ.

R1 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ

$$I_1 = \frac{V}{R_1}$$

$$I_1 = \frac{12V}{5\Omega} = 2.4A$$

R_2 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ $I_2 = \frac{V}{R_2}$

$$I_2 = \frac{12V}{10\Omega} = 1.2A$$

R_3 ಮೂಲಕ ಪ್ರವಹಿಸಿದ ವಿದ್ಯುತ್ ಪ್ರವಾಹ $I_3 = \frac{V}{R_3}$

$$I_3 = \frac{12V}{30\Omega} = 0.4A$$

ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ

$$I = I_1 + I_2 + I_3 = (2.4 + 1.2 + 0.4)A = 4A$$

ಮಂಡಲದ ಒಟ್ಟು ರೋಧ R_p ಸಮೀಕರಣ 12.18 ರಂತೆ

$$\frac{1}{R_p} = \frac{1}{5} + \frac{1}{10} + \frac{1}{30} = \frac{1}{3}$$

ಆದ್ದರಿಂದ $R_p = 3\Omega$

38) ವಿದ್ಯುತ್ ಮಂಡಲಗಳಲ್ಲಿ ಉಪಯೋಗಿಸುವ ಫ್ಯೂಸ್ ಬಗ್ಗೆ ಬರೆಯಿರಿ

ಉತ್ತರ:– ವಿದ್ಯುತ್ ಮಂಡಲಗಳಲ್ಲಿ ಉಪಯೋಗಿಸುವ ಫ್ಯೂಸ್. ಇದು ಹೆಚ್ಚಿನ ವಿದ್ಯುತ್ ಪ್ರವಾಹವು ಮಂಡಲದಲ್ಲಿಯ ಉಪಕರಣಗಳ ಮೂಲಕ ಪ್ರವಹಿಸದ ಹಾಗೆ ಮಾಡಿ ಅವುಗಳನ್ನು ರಕ್ಷಿಸುತ್ತದೆ. ಫ್ಯೂಸ್‌ನ್ನು ವಿದ್ಯುತ್ ಸಾಧನಗಳೊಂದಿಗೆ ಸರಣಿಕ್ರಮದಲ್ಲಿ ಜೋಡಿಸಿರುತ್ತಾರೆ. ಇದು ಸೂಕ್ತ ದ್ರವನ ಬಿಂದು ಹೊಂದಿರುವ ಲೋಹ ಅಥವಾ ಮಿಶ್ರಲೋಹದ ತಂತಿಯನ್ನು ಹೊಂದಿರುತ್ತದೆ ಉದಾಹರಣೆಗೆ ತಾಮ್ರ, ಕಬ್ಬಿಣ, ಸೀಸ ಇತ್ಯಾದಿ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುತ್ ಪ್ರವಾಹವು ಮಂಡಲದ ಮೂಲಕ ಪ್ರವಹಿಸಿದಾಗ ಫ್ಯೂಸ್ ತಂತಿಯ ತಾಪವು ಹೆಚ್ಚಾಗುತ್ತದೆ ಇದರಿಂದಾಗಿ ಫ್ಯೂಸ್‌ನ ತಂತಿಯು ಕರಗಿ ಹೋಗುತ್ತದೆ ಮತ್ತು ಮಂಡಲವನ್ನು ಕಡಿತಗೊಳಿಸುತ್ತದೆ. ಫ್ಯೂಸ್‌ನ ತಂತಿಯು ಲೋಹದ ತುದಿಗಳಿರುವ ಪೋರ್ಸಲಿನ್ ಅಥವಾ ಅದೇ ರೀತಿಯ ವಸ್ತುವಿನಂತಹ ಕಾಟ್ರಿಡ್ಜ್‌ನಿಂದ ಸುತ್ತುವರೆಯಲ್ಪಟ್ಟಿದೆ. ಗೃಹಬಳಕೆಯ ಉದ್ದೇಶಗಳಿಗಾಗಿ ಉಪಯೋಗಿಸುವ ಫ್ಯೂಸ್‌ನಲ್ಲಿ ಪ್ರವಹಿಸುವ ವಿದ್ಯುತ್ ಪ್ರವಾಹದ ದರವು 1A, 2A, 3A, 5A, 10A, ಇತ್ಯಾದಿ ಆಗಿರುತ್ತದೆ ಎಂದು ಅವುಗಳ ಮೇಲೆ ನಮೂದಿಸಲಾಗಿರುತ್ತದೆ. ಒಂದು ಇಸ್ತ್ರಿಪೆಟ್ಟಿಗೆಯು ಮಂಡದಲ್ಲಿ 1 kW ವಿದ್ಯುತ್ ಸಾಮರ್ಥ್ಯವನ್ನು 220V ವಿಭವಾಂತರದಲ್ಲಿ ಬಳಸಿದಾಗ 4.54A [1000/220A] ನಷ್ಟು ವಿದ್ಯುತ್ ಪ್ರವಾಹವು ವಿದ್ಯುತ್ ಮಂಡಲದಲ್ಲಿ ಪ್ರವಹಿಸುತ್ತದೆ. ಈ ಸಂದರ್ಭದಲ್ಲಿ 5A ದರ ಹೊಂದಿರುವ ವಿದ್ಯುತ್ ಫ್ಯೂಸ್‌ನ್ನು ಬಳಸಬೇಕು.

39) ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮದ ಪ್ರಾಯೋಗಿಕ ಅನ್ವಯಗಳು ಯಾವುವು?

ಉತ್ತರ:–. ಯಾವುದೇ ಒಂದು ವಾಹಕದಲ್ಲಿ ಉತ್ಪತ್ತಿಯಾಗುವ ಉಷ್ಣವು ವಿದ್ಯುತ್ಪ್ರವಾಹದ ಅನಿವಾರ್ಯ ಪರಿಣಾಮವಾಗಿದೆ. ಹಲವಾರು ಸಂದರ್ಭಗಳಲ್ಲಿ ಅನಪೇಕ್ಷಿತವಾಗಿ ಇದು ಉಪಯುಕ್ತ ವಿದ್ಯುತ್‌ಶಕ್ತಿಯನ್ನು ಉಷ್ಣವನ್ನಾಗಿ ಪರಿವರ್ತಿಸುತ್ತದೆ. ವಿದ್ಯುನ್ಮಂಡಲದಲ್ಲಿ ನಿಯಂತ್ರಿಸಲಾಗದ ಉಷ್ಣವು ಘಟಕಗಳ ತಾಪವನ್ನು ಹೆಚ್ಚಿಸುತ್ತದೆ ಮತ್ತು ಅವುಗಳ ಗುಣಗಳನ್ನು ಬದಲಾಯಿಸುತ್ತದೆ. ಆದರೂ, ವಿದ್ಯುತ್ತಿನ ಉಷ್ಣೋತ್ಪಾದನ ಪರಿಣಾಮದಿಂದ ಬಹಳ ಉಪಯುಕ್ತವಾದ ಅನ್ವಯಗಳಿವೆ. ವಿದ್ಯುತ್ ಇಸ್ತ್ರಿಪೆಟ್ಟಿಗೆ, ವಿದ್ಯುತ್ ಒಲೆ, ವಿದ್ಯುತ್ ಹೀಟರ್ ಮತ್ತು ವಿದ್ಯುತ್ ಕೆಟಲ್‌ಗಳು ಜೌಲ್‌ನ ಉಷ್ಣೋತ್ಪಾದನಾ ನಿಯಮವನ್ನು ಆಧರಿಸಿದ ಕೆಲವು ಪರಿಚಿತ ಸಾಧನಗಳಾಗಿವೆ

ವಿದ್ಯುತ್‌ನ ಉಷ್ಣೋತ್ಪಾದನ ಪರಿಣಾಮವನ್ನು ವಿದ್ಯುತ್ ಬಲ್ಬ್‌ನಲ್ಲಿ ಬೆಳಕನ್ನು ಉತ್ಪಾದಿಸಲು ಬಳಸಲಾಗುತ್ತದೆ. ಇಲ್ಲಿ ತಂತು (filament)ವು ಸಾಧ್ಯವಾದಷ್ಟೂ ಉಷ್ಣಶಕ್ತಿಯನ್ನು ತನ್ನಲ್ಲಿ ಉಳಿಸಿಕೊಳ್ಳುವುದರ ಮೂಲಕ ಅದು ಹೆಚ್ಚು ಉಷ್ಣತೆಯನ್ನು ಹೊಂದಿ ಬೆಳಕನ್ನು ಉತ್ಸರ್ಜಿಸುವುದು. ಇದು ಅತಿ ಹೆಚ್ಚಿನ ತಾಪಮಾನದಲ್ಲಿ ಕರಗಬಾರದು. ಒಂದು ಪ್ರಬಲವಾದ ಹಾಗೂ ಹೆಚ್ಚಿನ ದ್ರವನ ಬಿಂದು ಹೊಂದಿರುವ ಲೋಹವಾದ ಟಂಗ್‌ಸ್ಟನ್‌ಅನ್ನು [ದ್ರವನ ಬಿಂದು 3380°C] ಬಲ್ಬ್‌ನ ತಂತುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಉಷ್ಣ ನಿರೋಧಕಗಳ ಸಹಾಯದಿಂದ ತಂತಿಯನ್ನು ಸಾಧ್ಯವಾದಷ್ಟೂ ಉಷ್ಣದಿಂದ ದೂರವಿರಿಸಲಾಗುವುದು. ತಂತಿಯು ದೀರ್ಘಕಾಲ ಬಾಳಿಕೆಗಾಗಿ ಬಲ್ಬ್‌ನೊಳಗೆ ನೈಟ್ರೋಜನ್ ಮತ್ತು ಆರ್ಗಾನ್‌ನಂತಹ ಕಡಿಮೆ ಕ್ರಿಯಾಶೀಲ ಅನಿಲಗಳನ್ನು ತುಂಬಿರುತ್ತಾರೆ. ತಂತಿಯು ಬಳಸಿಕೊಂಡ ಗರಿಷ್ಠ ಶಕ್ತಿಯು ಶಾಖದ ರೂಪದಲ್ಲಿ ಕಂಡುಬರುತ್ತದೆ. ಆದರೆ ಅದರ ಸ್ವಲ್ಪ ಭಾಗವು ಬೆಳಕಿನ ರೂಪದಲ್ಲಿ ಹೊರಹೊಮ್ಮುತ್ತದೆ.

40) ವಿದ್ಯುತ್ ಸಾಮರ್ಥ್ಯದ ಬಗ್ಗೆ ಬರೆಯಿರಿ.

ಉತ್ತರ:– ವಿದ್ಯುನ್ಮಂಡಲದಲ್ಲಿ ಶಕ್ತಿ ಬಳಕೆಯಾಗುವ ಅಥವಾ ಕ್ಷೀಣಿಸುವ ದರವು ದೊರೆಯುತ್ತದೆ ಇದನ್ನು ವಿದ್ಯುತ್ ಸಾಮರ್ಥ್ಯ ಎನ್ನುವರು. ವಿದ್ಯುತ್ ಸಾಮರ್ಥ್ಯ P ಯನ್ನು ಈ ಪ್ರಕಾರ ವ್ಯಕ್ತಪಡಿಸುವರು.

(ಮುಂದುವರಿಯುವುದು)

CHEMISTRY

Coordination Compound

32. What will be the correct order for the wavelengths of absorption in the visible region for the following:

$[Ni(NO_2)_6]^{4-}$, $[Ni(NH_3)_6]^{2+}$, $[Ni(H_2O)_6]^{2+}$?

Ans: All of the complexes have the same metal ion, so the energy absorption depends upon the CFSE values of the ligands.

According to the spectro-chemical series, the CFSE values of the ligands are in the order of

$H_2O < NH_3 < NO_2^-$

As

$E = hc / \lambda$

$\Rightarrow E \propto 1/\lambda$

Therefore, the values of the absorbed wavelength in ascending order would be:

$[Ni(H_2O)_6]^{2+} < [Ni(NH_3)_6]^{2+} < [Ni(NO_2)_6]^4$

Alcohols, Phenols and Ethers

1. Write IUPAC names of the following compounds:



Soln :

(i) 2, 2, 4 -Trimethylpentan – 3 – ol
(ii) 5 – Ethylheptane – 2, 4 – diol
(iii) Butane – 2, 3 – diol
(iv) Propane – 1, 2, 3 – triol
(v) 2-Methylphenol
(vi) 4 – Methyl phenol
(vii) 2, 5 – Dimethylphenol
(viii) 2, 6 – Dimethylphenol
(ix) 1 – Methoxy – 2 – methyl propane
(x) Ethoxy benzene
(xi) 1 – Phenoxyheptane
(xii) 2 – Ethoxybutane

2 : Write structures of the compounds whose IUPAC names are as follows:

(i) 2 – Methylbutan – 2 – ol
(ii) 1 – Phenylpropan – 2 – ol
(iii) 3 , 5 – Dimethylhexane – 1 , 3 , 5 – triol
(iv) 2, 3 – Diethylphenol
(v) 1 – Ethoxypropane
(vi) 2 – Ethoxy – 3 – methylpentane
(vii) Cyclohexylmethanol
(viii) 3 – Cyclohexylpentan – 3 – ol
(ix) Cyclopent – 3 – en – 1 – ol
(x) 4-Chloro-3-ethylbutan-1-ol.

Soln :



3(i) Draw the structures of all isomeric alcohols of molecular formula $C_5H_{12}O$ and give their IUPAC names.

(ii) Classify the isomers of alcohols in question.

Soln : (i) The structures & IUPAC names of all isomeric alcohols with a molecular formula of $C_5H_{12}O$ are shown below:

(a) CH_3-CH_2-CH_2-CH_2-CH_2-OH

ಅಕ್ರಮ ದಾಖಲೆ: 6 ಕಡೆ 'ಲೋಕಾ' ದಾಳಿ

1,387 ಬೋನಫೈಡ್ ದಾಖಲೆ ಸೃಷ್ಟಿ • ಸಚಿವ ಕೃಷ್ಣ ಬೈರೇಗೌಡ ಜಮೀನಿನ ಹೆಸರಲ್ಲೂ ಅಕ್ರಮ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಕೋಲಾರ: ಸಂಬಂಧವಿಲ್ಲದ ಮಾಲೀಕರ ಕೃಷಿ ಜಮೀನಿನ ಹೆಸರಲ್ಲಿ ಅಕ್ರಮವಾಗಿ ಬೋನಫೈಡ್ ಪ್ರಮಾಣಪತ್ರ ವಿತರಣೆ ಹಾಗೂ ಟ್ರ್ಯಾಕ್ಟರ್ ನೋಂದಣಿ ಮಾಡಿಸುತ್ತಿದ್ದ ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು ಕೋಲಾರ ಜಿಲ್ಲೆಯ ಐದು ಕಡೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯ ಒಂದು ಕಡೆ ಮಂಗಳವಾರ ಶೋಧ ನಡೆಸಿದ್ದಾರೆ.

ಆರೋಪಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದಾರೆ. ನಗರ ಹಾಗೂ ಸುತ್ತಮುತ್ತ ಇರುವ ಟ್ರ್ಯಾಕ್ಟರ್ ಷೋ ರೂಮ್‌ಗಳ ಮೇಲೂ ದಾಳಿ ನಡೆಸಿದ್ದಾರೆ.

ಅಧಿಕಾರಿಗಳು, ಸಿಬ್ಬಂದಿ, ಆರ್‌ಟಿಒ ಮಧ್ಯವರ್ತಿಗಳು, ಟ್ರ್ಯಾಕ್ಟರ್ ಷೋ ರೂಂ ಮಾಲೀಕರು ಹಾಗೂ ಸಿಬ್ಬಂದಿ ಸೇರಿ ಸುಮಾರು 1,387 ಬೋನಫೈಡ್ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಬೊಕ್ಕಸಕ್ಕೆ ₹2 ಕೋಟಿಗೂ ಅಧಿಕ ನಷ್ಟ ಮಾಡಿದ್ದಾರೆ ಎಂದು ಲೋಕಾಯುಕ್ತ ಪೊಲೀಸರು ಅಂದಾಜಿಸಿದ್ದಾರೆ.

ಟ್ರ್ಯಾಕ್ಟರ್ ಖರೀದಿದಾರರಿಂದ ವಾರ್ಷಿಕ ವಿಮೆ, ರಸ್ತೆ ತೆರಿಗೆ, ವಾಹನ ಅರ್ಹತಾಪತ್ರದ ರೂಪದಲ್ಲಿ ಸರ್ಕಾರಕ್ಕೆ ಸಂದಾಯವಾಗಬೇಕಿದ್ದ ಹಣ ಪಾವತಿ ತಪ್ಪಿಸಲು ಈ ಅಕ್ರಮ ರೂಪಿಸಿದ್ದರು. ಅದಕ್ಕಾಗಿ ಅನರ್ಹ ಅರ್ಜಿದಾರರಿಂದ ಲಂಚ ಪಡೆಯುತ್ತಿದ್ದರು ಎಂದಿದ್ದಾರೆ.

ತಾಲ್ಲೂಕಿನ ನರಸಾಪುರ ನಾಡಕಚೇರಿಯ ಉಪ ತಹಶೀಲ್ದಾರ್ ಆಗಿದ್ದ ಎನ್.ನಾರಾಯಣಸ್ವಾಮಿ, ಹೊರಗುತ್ತಿಗೆ ಆಪರೇಟರ್ ಅಂಬುಜಾ, ಮಧ್ಯವರ್ತಿ ಮಂಜುನಾಥ್, ಚಿಂತಾಮಣಿಯ ಸಾಯಿ ಆದಿತ್ಯ ಟ್ರ್ಯಾಕ್ಟರ್ ಷೋ ರೂಂ ಸೇಲ್ಸ್ ಮ್ಯಾನ್ ಜಿ.ಎಸ್.ಗೋಕುಲ್ ರೆಡ್ಡಿ, ಕೋಲಾರದ ಆದಿತ್ಯ ಟ್ರ್ಯಾಕ್ಟರ್ ಷೋ ರೂಂ ವ್ಯವಸ್ಥಾಪಕ ಬಿ.ಆಂಜನೇಯ ರೆಡ್ಡಿ ಹಾಗೂ ಆರ್‌ಟಿಒ ಮಧ್ಯವರ್ತಿ ಅಶ್ವತ್ಥನಾರಾಯಣ ಅವರ ಮನೆಗಳ ಮೇಲೆ ದಾಳಿ ನಡೆದಿದೆ.

ಕೋಲಾರ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಅಕ್ರಮವಾಗಿ ಬೋನಫೈಡ್ ಪ್ರಮಾಣಪತ್ರ ವಿತರಣೆ ನಡೆಯುತ್ತಿರುವುದು ಗೊತ್ತಾಗಿದೆ.

ಏನಿದು ಬೋನಫೈಡ್ ಅಕ್ರಮ?

ನರಸಾಪುರ ಹೋಬಳಿಯ ನಾಡಕಚೇರಿಯಲ್ಲಿ ಆರೋಪಿಗಳು, ಟ್ರ್ಯಾಕ್ಟರ್ ಖರೀದಿದಾರರಿಗೆ ತೆರಿಗೆ, ಇನ್ನಿತರ ವಿನಾಯಿತಿ ಕೊಡಿಸುವುದಾಗಿ ಹೇಳಿ ಸಂಬಂಧವಿಲ್ಲದ ಮಾಲೀಕರ ಕೃಷಿ ಜಮೀನುಗಳನ್ನು ಬಳಸಿಕೊಂಡು ನಕಲಿ ಬೋನಫೈಡ್ ದೃಢೀಕರಣಪತ್ರ ಮಾಡಿಕೊಡಿಸುತ್ತಿದ್ದ ಪ್ರಕರಣ ಇದಾಗಿದೆ.

ವೈಟ್ ಬೋರ್ಡ್ ಮಾಡಿಕೊಡಿಸುವುದಾಗಿ ಹೇಳಿ ಟ್ರ್ಯಾಕ್ಟರ್ ಖರೀದಿಸಲು ಬರುವ ಗ್ರಾಹಕರಿಂದ ಲಂಚ, ದಾಖಲೆಪತ್ರ ಪಡೆದು ಈ ಕೃತ್ಯ ಎಸಗುತ್ತಿದ್ದರು. ಈ ಪ್ರಮಾಣಪತ್ರ ಸಲ್ಲಿಸಿ ಆರ್‌ಟಿಒನಲ್ಲಿ ಟ್ರ್ಯಾಕ್ಟರ್ ಮತ್ತು ಟ್ರಾಲಿಗಳನ್ನು ಅಕ್ರಮವಾಗಿ ನೋಂದಣಿ ಮಾಡಿ ಕೊಡುತ್ತಿದ್ದ ದೂರು ದಾಖಲಾಗಿತ್ತು.

ಪ್ರಕರಣದ ಆರೋಪಿ ಮನೆಯಲ್ಲಿ ದಾಖಲೆಗಳನ್ನು ಪರಿಶೀಲಿಸಲಾಯಿತು

ಸಚಿವರ ಜಮೀನು ಪಹಣಿ ಹೆಸರಲ್ಲೂ ನಕಲಿ

ಕಂದಾಯ ಅಧಿಕಾರಿಗಳು, ಸಿಬ್ಬಂದಿ, ಮಧ್ಯವರ್ತಿಗಳು ನಕಲಿ ಪ್ರಮಾಣಪತ್ರ ಅಕ್ರಮಗಳಿಗೆ ತಮ್ಮದೇ ಇಲಾಖೆಯ ಸಚಿವರ ಜಮೀನನ್ನೂ ಬಿಟ್ಟಿಲ್ಲ!

ಕೋಲಾರ ತಾಲ್ಲೂಕಿನ ನರಸಾಪುರ ಹೋಬಳಿಯ ಗರುಡನಪಾಳ್ಯದ ಸರ್ವೆ ಸಂಖ್ಯೆ 30 ಮತ್ತು 45ರ ಪಹಣಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರಿಗೆ ಸೇರಿದ ಜಮೀನಿನದು ಎಂದು ಗೊತ್ತಾಗಿದೆ. ಈ ಜಮೀನಿನ ಪಹಣಿ ಹೆಸರಲ್ಲಿ ಮಧ್ಯವರ್ತಿಗಳು ನಕಲಿ ಪ್ರಮಾಣಪತ್ರ ಪಡೆದಿರುವುದು ತಿಳಿದುಬಂದಿದೆ.

ಪ್ರಮಾಣಪತ್ರಕ್ಕೆ ಸಲ್ಲಿಸಿದ್ದ ಜಮೀನಿನ ವಿವರ ಪರಿಶೀಲಿಸಿದಾಗ ಈ ಸಂಗತಿ ತಿಳಿದು ಬಂದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ'

ಪ್ರಜಾವಾಣಿ ವಾರ್ತೆ

ತುಮಕೂರು: 'ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಗೌರವಧನವನ್ನು ಮುಂದಿನ ಬಜೆಟ್‌ನಲ್ಲಿ ಮತ್ತೆ ₹1000 ಹೆಚ್ಚಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮಂಗಳವಾರ ಭರವಸೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪೂರ್ವಭಾವಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗೌರವಧನ ಹೆಚ್ಚಳ ಕುರಿತು ಸಿ.ಎಂ ಅವರೊಂದಿಗೆ ಚರ್ಚಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಲ್ಲಿ ಶೇ 70ರಷ್ಟು ಮಂದಿ 'ಗೃಹಲಕ್ಷ್ಮಿ' ನೆರವು ಪಡೆಯುತ್ತಿದ್ದಾರೆ. ಗೃಹಲಕ್ಷ್ಮಿ ಸಹಕಾರ ಬ್ಯಾಂಕ್‌ನಲ್ಲಿ ₹30 ಸಾವಿರದಿಂದ ₹5 ಲಕ್ಷದ ವರೆಗೆ ಸಾಲ ವಿತರಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಹಿಂಜಾವೇ ಮುಖಂಡನ ಬಂಧನ

ಉಡುಪಿ: ಹಿಂದೂ ಜಾಗರಣ ವೇದಿಕೆ ಉಡುಪಿ ತಾಲ್ಲೂಕು ಘಟಕ ಈಚೆಗೆ ನಡೆಸಿದ ಪ್ರತಿಭಟನೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಲ್ಲಿ ಮುಖಂಡ ಕಾರ್ಕಳದ ಅಜೆಕಾರಿನ ರತ್ನಾಕರ್ ಅಮೀನ್ (49) ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052.
ಸಂಖ್ಯೆ:ಉಪ್ರವ್ಯ-1/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/655/2025-26 ದಿನಾಂಕ: 18-11-2025

ತಿದ್ದುಪಡಿ-1

ವಿಷಯ : ಟೆಂಡರ್ ಅಧಿಸೂಚನೆಯ ವೇಳಾ ಪಟ್ಟಿಯಲ್ಲಿ ಬದಲಾವಣೆ.
ಉಲ್ಲೇಖ : ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ-1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/10/2025-26 ದಿನಾಂಕ: 03-11-2025.
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ. ಬದಲಾದ ವೇಳಾ ಪಟ್ಟಿಯನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

ನಿಗದಿತ ಅವಧಿ / ವೇಳಾ ಪಟ್ಟಿ

ಕ್ರ. ಸಂ.	ಟೆಂಡರ್ ಪ್ರಕಟಣೆ ಪ್ರಕಾರ		ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	20-11-2025 ರಂದು 16.00 ಗಂಟೆಯವರೆಗೆ.	04-12-2025 ರಂದು 16.00 ಗಂಟೆಯವರೆಗೆ.
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	21-11-2025 ರಂದು 16.30 ಗಂಟೆಗೆ.	05-12-2025 ರಂದು 16.30 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಗೆ ಭೇಟಿ ನೀಡಿ.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-1
ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/3882/ಅಡ್ವರ್ಟೋರ್/2025-26

ಶಿವನ ಸಮುದ್ರದ ಬಳಿ 60 ಅಡಿ ಆಳದ ಕಾಲುವೆಗೆ ನೀರು ಅರಸಿ ಹೋಗಿದ್ದ ಆನೆ

ಕಾಲುವೆಯಲ್ಲಿ ಸಿಲುಕಿದ್ದ ಆನೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಶಿವನಸಮುದ್ರ (ಬ್ಲಫ್) ಬಳಿ 'ಪಯನಿಯರ್ ಜೆನ್ಕೋ ಲಿಮಿಟೆಡ್ ವಿದ್ಯುತ್ ಉತ್ಪಾದನಾ ಕೇಂದ್ರ'ದ 60 ಅಡಿ ಆಳದ ಕಾಲುವೆಗೆ ಇಳಿದಿದ್ದ ಕಾಡಾನೆಯನ್ನು ಮಂಗಳವಾರ ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ, ಮೇಲೆ ತರಲಾಯಿತು.

ಶನಿವಾರ ರಾತ್ರಿ ವಿದ್ಯುತ್ ಘಟಕದ ಬಳಿ ಸುತ್ತಾಡುತ್ತಿದ್ದ 12 ವರ್ಷದ ಗಂಡು ಕಾಡಾನೆ ನೀರು ಕುಡಿಯಲು ಗೇಟ್ ಮೂಲಕ ನಾಲೆಗೆ ಇಳಿದಿತ್ತು. ಆದರೆ, ಹರಿವಿನ ರಭಸಕ್ಕೆ ಮೇಲೆ ಬರಲಾಗದೆ ಮೂರು ದಿನಗಳಿಂದ ಅಲ್ಲಿಯೇ ಓಡಾಡಿ ನಿತ್ರಾಣಗೊಂಡಿತ್ತು.

ಸೋಮವಾರ ದಿನವಿಡೀ ನಡೆದ ಕಾರ್ಯಾಚರಣೆ ಯಶಸ್ವಿಯಾಗಿರಲಿಲ್ಲ. ಮಂಗಳವಾರ ಬೆಂಗಳೂರಿನಿಂದ ತರಿಸಿದ್ದ ಬೃಹತ್ ಕ್ರೇನ್, ಸ್ಥಳೀಯವಾಗಿ ಲಭ್ಯವಿದ್ದ 2 ಕ್ರೇನ್‌ಗಳ ಮೂಲಕ ಮೊದಲಿಗೆ ಒಂದು ಕಂಟೇನರ್ ಅನ್ನು ಕಾಲುವೆಗೆ ಇಳಿಸಿ ಆನೆಯನ್ನು ಮೇಲೆತ್ತಲು ಪ್ರಯತ್ನಿಸಲಾಯಿತು.

ಅದು ಫಲ ನೀಡಲಿಲ್ಲ. ಮಧ್ಯಾಹ್ನ ಪಟಾಕಿ ಸಿಡಿಸಿದ್ದರಿಂದ ಕಾಲುವೆ ಮಧ್ಯ ಭಾಗಕ್ಕೆ ಆನೆ ಬಂದ ನಂತರ, ತಜ್ಞರ ತಂಡ ಅದಕ್ಕೆ ಅರಿವಳಿಕೆ ಚುಚ್ಚುಮದ್ದು ನೀಡಿತು. ಆನೆ 30 ನಿಮಿಷ ಅಲ್ಲಿಯೇ ಓಡಾಟ ನಡೆಸಿ ಪ್ರಜ್ಞೆತಪ್ಪಿದ ಬಳಿಕ, ಅಲ್ಲಿಯೇ ವೈದ್ಯರು ಚಿಕಿತ್ಸೆ ನೀಡಿದರು.

ರಕ್ಷಣಾ ಸಿಬ್ಬಂದಿ ಹೈಡ್ರಾಲಿಕ್ ಕ್ರೇನ್ ಮತ್ತು ಹಗ್ಗ ಬಳಸಿ, ಕಂಟೇನರ್ ಹಾಗೂ ಸ್ಟ್ರೆಚರ್ ಮೇಲೆ ಆನೆಯನ್ನು ಮಲಗಿಸಿ, ಅತ್ಯಂತ ಎಚ್ಚರಿಕೆಯಿಂದ 60 ಅಡಿ ಆಳದ ಕಾಲುವೆಯಿಂದ ಮೇಲೆ ತಂದರು. ಪ್ರಥಮ ಚಿಕಿತ್ಸೆ ನಂತರ, ಆರೋಗ್ಯ ಸ್ಥಿತಿಯನ್ನು ಖಾತ್ರಿಪಡಿಸಿಕೊಂಡು ಪಕ್ಕದಲ್ಲೇ ಇದ್ದ ಕಾವೇರಿ ವನ್ಯಜೀವಿ ಅರಣ್ಯಕ್ಕೆ ಸುರಕ್ಷಿತವಾಗಿ ಬಿಡಲಾಯಿತು.

ಮಂಡ್ಯ ಡಿಸಿಎಫ್ ಡಿ.ರಘು ಮತ್ತು ಮೈಸೂರು ವಿಭಾಗದ ವನ್ಯಜೀವಿ ವಲಯದ ಡಿಸಿಎಫ್ ಪ್ರಭುಗೌಡ ಬಿರಾದಾರ್ ಅವರು ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು. ನಾಗರಹೊಳೆ ವನ್ಯಜೀವಿ ವಿಭಾಗದ ಡಾ.ರಮೇಶ್, ಡಾ.ಆದರ್ಶ, ಮೈಸೂರಿನ ಜಯಚಾಮರಾಜೇಂದ್ರ ಮೃಗಾಲಯದ ನಿರ್ದೇಶಕಿ ಅನುಷಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಸ್ವಾಮಿ, ತಹಶೀಲ್ದಾರ್ ಎಸ್.ವಿ.ಲೋಕೇಶ್, ಹಲಗೂರು ಸಿಪಿಐ ಬಿ.ಎಸ್. ಶ್ರೀಧರ್, ವಲಯ ಅರಣ್ಯ ಅಧಿಕಾರಿ ಗವಿಯಪ್ಪ ಹಾಗೂ ಅರಿವಳಿಕೆ ತಜ್ಞರಾದ ರಂಜನ್, ಅಕ್ರಂ, ಚಿರತೆ ಕಾರ್ಯಪಡೆ ಸೇರಿದಂತೆ 100ಕ್ಕೂ ಅಧಿಕ ಮಂದಿ ಕಾರ್ಯಾಚರಣೆ ನಡೆಸಿದರು.

ಉಪ ಸಂರಕ್ಷಣಾಧಿಕಾರಿ ಡಿ.ರಘು ಮಾತನಾಡಿ, 'ಹಿರಿಯ ಅಧಿಕಾರಿಗಳ ಸಲಹೆ ಹಾಗೂ ತಜ್ಞ ವೈದ್ಯರ ನೆರವಿನಿಂದ ಸವಾಲಿನ ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಿತು. ಆನೆ ಆಹಾರ ಅರಸಿ ಮರಳಿ ಬರುವ ಸಾಧ್ಯತೆ ಇದೆ. ಸುತ್ತಮುತ್ತಲಿನ ಜನ ಜಾಗೃತಿ ವಹಿಸಬೇಕು' ಎಂದರು.

ಶಿವನಸಮುದ್ರದ ಬಳಿಯ ಕಾಲುವೆಯಿಂದ ಕಾಡಾನೆಯನ್ನು ಮೇಲೆ ತರಲು ಅರಣ್ಯ ಇಲಾಖೆ ಅಧಿಕಾರಿಗಳು ಮಂಗಳವಾರ ಕಾರ್ಯಾಚರಣೆ ನಡೆಸಿದರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಮಲ್ಲೇಶ್ವರಂ ವಲಯ, ಕಾರ್ಯಪಾಲಕ ಅಭಿಯಂತರರ ಕಛೇರಿ,
ಮಲ್ಲೇಶ್ವರಂ ವಿಭಾಗ, 2ನೇ ಅಡ್ಡರಸ್ತೆ, ಜಲದರ್ಶಿನಿ ಲೇಔಟ್, ಎಂಎಸ್‌ಆರ್ ನಗರ,
ಮತ್ತಿಕೆರೆ, ಬೆಂಗಳೂರು-560054.
ಸಂಖ್ಯೆ: ಕಾಅ/ಎಂಎಲ್‌ಎಂ/ಕೆಪಿಪಿಪಿ/07/2025-26 ದಿನಾಂಕ: 17-11-2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ - (ಐಎಫ್‌ಟಿ)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ - ಕೆಡಬ್ಲ್ಯೂ-4)

ಕ್ರ. ಸಂ.	ಕಾಮಗಾರಿಯ ಹೆಸರು
1	ಕಾಡು ಮಲ್ಲೇಶ್ವರಂ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಉದ್ಯಾನವನಗಳ ಮೈದಾನದಂತಹ ಸಾರ್ವಜನಿಕ ಸ್ಥಳಗಳು ಮತ್ತು ಇತರೆ ಸಿವಿಲ್ ಕೆಲಸಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಪಿ3075 ಬೆಂಗಳೂರು ನಗರದ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಅನುದಾನ) **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 416.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 6,25,000/-**
2	ಮತ್ತಿಕೆರೆ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಉದ್ಯಾನವನಗಳ ಮೈದಾನದಂತಹ ಸಾರ್ವಜನಿಕ ಸ್ಥಳಗಳು ಮತ್ತು ಇತರೆ ಸಿವಿಲ್ ಕೆಲಸಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. (ಪಿ3075 ಬೆಂಗಳೂರು ನಗರದ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಅನುದಾನ) **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 416.39, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 6,25,000/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 21-11-2025 ರ 16.30 ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 24-11-2025 ರಂದು 16.00 ಗಂಟೆಗೆ. 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 28-11-2025 ರಂದು 16.00 ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-12-2025 ರಂದು 12.30 ಗಂಟೆಗೆ. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಮಲ್ಲೇಶ್ವರಂ ವಿಭಾಗ, ಬೆಂಪನಪಾ.

ಕರ್ನಾಟಕ ಸರಕಾರ
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ
ಸಂಖ್ಯೆ: ಮನಪ್ರಾ: ತಾಂತ್ರಿಕ :ಜೆಇ(245) : 2025-26 ದಿನಾಂಕ: 18-11-2025

ಟೆಂಡರು ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-3 & 4 ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಂಟ್ ಸಂಖ್ಯೆ 84, 85, 86 ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03-12-2025 ಅಪರಾಹ್ನ 5.00 ಗಂಟೆ (17-00 ಗಂಟೆ) ಒಳಗೆ ಸಲ್ಲಿಸತಕ್ಕದ್ದು ಹಾಗೂ ಇಂಡೆಂಟ್ ಸಂಖ್ಯೆ 82 ಮತ್ತು 83 ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19-12-2025 ಅಪರಾಹ್ನ 5.00 ಗಂಟೆ (17-00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
DIPR/DK/KSMCA/1105/25-26 dt.18.11.2025

ನಗರಸಭಾ ಕಾರ್ಯಾಲಯ, ಉಡುಪಿ.
ಸಂಖ್ಯೆ:ಉನಸ:ಬಿ4:ಸಿಆರ್:2025-26 ದಿನಾಂಕ: 17.11.2025

ಟೆಂಡರು ಪ್ರಕಟಣೆ

2025-26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W -1 & K.W -2 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 01.12.2025 ಸಂಜೆ 5.00 ಗಂಟೆಗೆ (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 02.12.2025 ಸಂಜೆ 5.01 ಗಂಟೆಗೆ

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1	DMA/2025-26/OW/WORK_INDENT51783	3400000.00	68000.00	3 ತಿಂಗಳು
2	DMA/2025-26/OW/WORK_INDENT51784	2330000.00	46600.00	3 ತಿಂಗಳು
3	DMA/2025-26/OW/WORK_INDENT51785	2885000.00	57700.00	3 ತಿಂಗಳು
4	DMA/2025-26/OW/WORK_INDENT51786	1090000.00	27250.00	2 ತಿಂಗಳು

ಸಹಿ/- ಪೌರಾಯುಕ್ತರು,
ನಗರಸಭೆ ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/539/25-26 ದಿ: 18.11.2025

ನೆಲಕ್ಕೆ ಬಿದ್ದು ಹಸುಗೂಸು ಸಾವು

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿನ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಶೌಚಾಲಯ ಬಳಿ ಮಂಗಳವಾರ ಗರ್ಭಿಣಿಗೆ ಹೆರಿಗೆ ಆಗಿದ್ದು, ನೆಲದ ಮೇಲೆ ಬಿದ್ದು ತಲೆಗೆ ತೀವ್ರ ಪೆಟ್ಟಾದ ಕಾರಣ ಶಿಶು ಸ್ಥಳದಲ್ಲೇ ಮೃತಪಟ್ಟಿದೆ.

'ಆಸ್ಪತ್ರೆಯ ವೈದ್ಯರು ಮತ್ತು ಶುಶ್ರೂಷಕಿಯರ ನಿರ್ಲಕ್ಷ್ಯವೇ ಘಟನೆಗೆ ಕಾರಣ' ಎಂದು ಮಹಿಳೆಯ ಸಂಬಂಧಿಕರು ಆರೋಪಿಸಿದ್ದಾರೆ.

'ರಾಣೆಬೆನ್ನೂರು ತಾಲ್ಲೂಕಿನ ಕಾಕೋಳ ಗ್ರಾಮದ ರೂಪಾ (30) ಅವರನ್ನು ಹೆರಿಗೆಗೆ ಆಸ್ಪತ್ರೆಗೆ ಕರೆತರಲಾಗಿತ್ತು. ಆದರೆ, ವೈದ್ಯರು ಇರಲಿಲ್ಲ. ಹಾಸಿಗೆಯೂ ಸಿಗಲಿಲ್ಲ ಗರ್ಭಿಣಿಗೆ ವಾಂತಿ ಆಗಿದ್ದು, ಶೌಚಾಲಯಕ್ಕೆ ಹೋಗುವಾಗ, ಹೆರಿಗೆಯಾಯಿತು. ಶಿಶು ನೆಲಕ್ಕೆ ಬಿದ್ದು, ತಲೆಗೆ ಪೆಟ್ಟು ಬಿದ್ದು ಮೃತಪಟ್ಟಿತು' ಎಂದು ರೂಪಾ ಸಂಬಂಧಿಕರೊಬ್ಬರು ತಿಳಿಸಿದರು.

'ಹೆರಿಗೆ ನೋವಿದ್ದರೂ ವೈದ್ಯರು, ಶುಶ್ರೂಷಕಿಯರು ಸ್ಪಂದಿಸಲಿಲ್ಲ. ಉಪಾಹಾರಕ್ಕೆಂದು ಹೋಗಿದ್ದ ವೈದ್ಯರು, ಗಂಟೆ ಕಾದರೂ ವಾಪಸು ಬರಲಿಲ್ಲ' ಎಂದು ಆರೋಪಿಸಿದರು.

ಜಿಲ್ಲಾಸ್ಪತ್ರೆ ಶಸ್ತ್ರ ಚಿಕಿತ್ಸಕ ಡಾ. ಪಿ.ಆರ್. ಹಾವನೂರು, 'ಯಾರದ್ದು ತಪ್ಪು ಎಂಬುದರ ಬಗ್ಗೆ ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಮುರುಘಾ ಶರಣರ ಪ್ರಕರಣ: 26ಕ್ಕೆ ಆದೇಶ

ಚಿತ್ರದುರ್ಗ: ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಮೊದಲ ಪೋಕ್ಸೊ ಪ್ರಕರಣದ ವಿಚಾರಣೆ ಮಂಗಳವಾರ ಪೂರ್ಣಗೊಂಡಿದ್ದು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ಕೋರ್ಟ್‌ನ ನ್ಯಾಯಾಧೀಶರಾದ ಗಂಗಾಧರಪ್ಪ ಹಡಪದ ನ.26ಕ್ಕೆ ಆದೇಶ ಕಾಯ್ದಿರಿಸಿದ್ದಾರೆ.

ಶರಣರ ವಿರುದ್ಧದ 2 ಪೋಕ್ಸೊ ಪ್ರಕರಣಗಳ ಪೈಕಿ ಮೊದಲ ಪ್ರಕರಣದ ಸಂಬಂಧ ಸುದೀರ್ಘ ವಿಚಾರಣೆ ನಡೆದಿದೆ. ಮಂಗಳವಾರ ನಡೆದ ವಿಚಾರಣೆ ವೇಳೆ ಸರ್ಕಾರಿ ವಕೀಲ ಜಗದೀಶ್ ಸಂತ್ರಸ್ತೆಯ ಪರ ಅಂತಿಮ ವಾದ ಮಂಡಿಸಿದರು. ಈ ಪ್ರಕರಣಗಳಲ್ಲಿ ಶರಣರು ಪ್ರಸ್ತುತ ಷರತ್ತುಬದ್ಧ ಜಾಮೀನು ಪಡೆದಿದ್ದಾರೆ.

ಸೌದಿಯಲ್ಲಿ ಬಸ್ ಅಪಘಾತ: ಬೀದರ್ ಮಹಿಳೆ ಸಾವು

ಬೀದರ್: ಸೌದಿ ಅರೇಬಿಯಾದಲ್ಲಿ ಸೋಮವಾರ ಸಂಭವಿಸಿದ ಬಸ್ ಅಪಘಾತದಲ್ಲಿ ನಗರದ ಮಹಿಳೆ, ಮೈಲೂರಿನ ಸಿಎಂಸಿ ಕಾಲೊನಿಯ ನಿವಾಸಿ ರಹಮತ್ ಬೀ (80) ಮೃತಪಟ್ಟಿದ್ದಾರೆ. ಇವರು ಹೈದರಾಬಾದ್ ಮೂಲಕ ಸೌದಿಗೆ ಪ್ರಯಾಣ ಬೆಳೆಸಿದ್ದರು.

ಟ್ಯಾಂಕರ್‌ಗೆ ಡಿಕ್ಕಿಯಾಗಿ ಹೊತ್ತಿ ಉರಿದ ಉಮ್ರಾ ಯಾತ್ರಿಕರಿದ್ದ ಬಸ್‌ನಲ್ಲಿ ಇವರು ಪ್ರಯಾಣಿಸುತ್ತಿದ್ದರು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. 'ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಚರ್ಚಿಸಿದ್ದೇನೆ. ಅವರು ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ' ಎಂದು ಸಚಿವ ಖಂಡ್ರೆ ತಿಳಿಸಿದ್ದಾರೆ.

ಮುಳ್ಳಯ್ಯನಗಿರಿ ಪ್ರವಾಸಕ್ಕೆ ನಿರ್ಬಂಧ

ಚಿಕ್ಕಮಗಳೂರು: ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಡಿ.2ರಿಂದ ದತ್ತ ಜಯಂತಿ ನಡೆಯಲಿದೆ. ಡಿ.1ರಿಂದ ನಾಲ್ಕು ದಿನ ಮುಳ್ಳಯ್ಯನಗಿರಿ ಸುತ್ತಮುತ್ತಲ ಪ್ರದೇಶಗಳಿಗೆ ಬೇರೆ ಪ್ರವಾಸಿಗರ ಭೇಟಿಯನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ.

ಡಿ.2ರಿಂದ 4ರವರೆಗೆ ಮೂರು ದಿನ ದತ್ತ ಜಯಂತಿ ಕಾರ್ಯಕ್ರಮಗಳು ನಡೆಯಲಿವೆ. ವಿವಿಧೆಡೆಯಿಂದ ಸಾವಿರಾರು ಮಾಲಾಧಾರಿ ಭಕ್ತರು ಭೇಟಿ ನೀಡುವರು. ಹೀಗಾಗಿ, ಬಾಬಾಬುಡನ್ ಗಿರಿಸ್ವಾಮಿ ದರ್ಗಾ, ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ, ಹೊನ್ನಮ್ಮನಹಳ್ಳ, ಝರಿ ಜಲಪಾತ, ಮಾಣಿಕ್ಯಧಾರಾ ಜಲಪಾತ ಹಾಗೂ ಗಾಳಿಕೆರೆಗೆ ಬೇರೆ ಪ್ರವಾಸಿಗರು ಬರುವುದನ್ನು ಡಿ.1ರ ಬೆಳಿಗ್ಗೆ 6ರಿಂದ ಡಿ.5ರ ಬೆಳಿಗ್ಗೆ 10 ಗಂಟೆ ತನಕ ನಿರ್ಬಂಧಿಸಲಾಗಿದೆ.

ಸಾರಿಗೆ ಸಿಬ್ಬಂದಿ ವೇತನ ಪರಿಷ್ಕರಣೆ: ಶೀಘ್ರ ಸಭೆ

ಚಿಕ್ಕಮಗಳೂರು: 'ಸಾರಿಗೆ ನೌಕರರ ವೇತನ ಪರಿಷ್ಕರಣೆ ಸಂಬಂಧ ವಿಧಾನಸಭೆ ಚಳಿಗಾಲದ ಅಧಿವೇಶನಕ್ಕೂ ಮೊದಲೇ ಮುಖ್ಯಮಂತ್ರಿ ನೇತೃತ್ವದಲ್ಲಿ ಕಾರ್ಮಿಕ ಮುಖಂಡರ ಸಭೆ ನಡೆಸಲು ಉದ್ದೇಶಿಸಲಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. 'ಈ ಕುರಿತು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ. ಶೀಘ್ರವೇ ಸಭೆ ನಡೆಸೋಣ ಎಂದಿದ್ದಾರೆ' ಎಂದೂ ಅವರು ಪ್ರತಿಕ್ರಿಯಿಸಿದರು.

ಸತ್ಯಮೇವ ಜಯತೆ
ಭಾರತ ಸರ್ಕಾರ
क.रा.बी.नि.
E.S.I.C.

'ಎಲ್ಲಾ ಕಾರ್ಮಿಕರಿಗಾಗಿ ಸಾಮಾಜಿಕ ಸುರಕ್ಷತಾ ಜಾಲದ ಉದಾರ ಮತ್ತು ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ.'
ಪ್ರಧಾನಮಂತ್ರಿ ನರೇಂದ್ರ ಮೋದಿ

ಉದ್ಯೋಗದಾತರ ಸಬಲೀಕರಣ
ಕಾರ್ಯಪಡೆಯ ಸಂರಕ್ಷಣೆ
ವಿಕಸಿತ ಭಾರತದ ಸಶಕ್ತೀಕರಣ

ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯ ಉತ್ತೇಜನ ಯೋಜನೆ (ಸ್ಪ್ರೀ 2025)

ಈಗಲೇ ಇಎಸ್‌ಐ ಯೋಜನೆಯಡಿ ನೋಂದಾಯಿಸಿ ಮತ್ತು ಸಾಮಾಜಿಕ ಸುರಕ್ಷತೆಯ ಪ್ರಯೋಜನಗಳನ್ನು ನಿಮ್ಮದಾಗಿಸಿಕೊಳ್ಳಿ.

ವಿಶೇಷ ನೋಂದಣಿ ಅಭಿಯಾನ
1ನೇ ಜುಲೈ ರಿಂದ 31ನೇ ಡಿಸೆಂಬರ್ 2025

ಏಕೆ ನೋಂದಾಯಿಸಬೇಕು?
- ಹಿಂದಿನ ವಂತಿಕೆಗೆ ಯಾವುದೇ ದಂಡವಿಲ್ಲ ಅಥವಾ ಬಾಕಿ ಪಾವತಿ ಬೇಡಿಕೆಯಿಲ್ಲ
- ಉದ್ಯೋಗದಾತರು ಘೋಷಿಸಿದ ದಿನಾಂಕದಿಂದ ನೋಂದಣಿ ಮಾನ್ಯವಾಗಿರುತ್ತದೆ
- ಹಿಂದಿನ ಅವಧಿಗಳಿಗೆ ಯಾವುದೇ ತಪಾಸಣೆಯಿಲ್ಲ
- ತೊಂದರೆ ಮುಕ್ತ ಸ್ವಯಂ ನೋಂದಣಿ
- ಉದ್ಯೋಗಿಗಳಿಗೆ ಸಮಗ್ರ ಸಾಮಾಜಿಕ ಸುರಕ್ಷತಾ ಪ್ರಯೋಜನಗಳ ಲಭ್ಯತೆ

ಯಾರು ನೋಂದಾಯಿಸಬಹುದು?
- ಇಎಸ್‌ಐ ಕಾಯ್ದೆಯಡಿ ನೋಂದಾಯಿಸದ 10 ಅಥವಾ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ಉದ್ಯೋಗದಾತರು
- ಇಎಸ್‌ಐ ಕಾಯ್ದೆಯಡಿ ಎಲ್ಲಾ ಅರ್ಹ ಉದ್ಯೋಗಿಗಳನ್ನು ದಾಖಲಿಸದ ಉದ್ಯೋಗದಾತರು

ಕೆಳಕಂಡವುಗಳ ಮೂಲಕ ಡಿಜಿಟಲ್ ಆಗಿ ನೋಂದಾಯಿಸಿ
• ಇಎಸ್‌ಐಸಿ ಪೋರ್ಟಲ್ • ಶ್ರಮ್ ಸುವಿಧಾ ಪೋರ್ಟಲ್ • ಎಂಸಿಎ ಪೋರ್ಟಲ್
ಹೆಚ್ಚಿನ ವಿವರಗಳಗೆ ಭೇಟಿ ನೀಡಿ: https://www.esic.gov.in/
ಅಥವಾ ಶುಲ್ಕ ರಹಿತ ಸಂಖ್ಯೆ 1800-11-2526ಗೆ ಕರೆ ಮಾಡಿ
ಹೆಚ್ಚಿನ ವಿವರಗಳಿಗೆ
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಇ.ಎಸ.ಐ ಕಚೆರಿಗೆ ಭೇಟಿ ನೀಡಿರಿ.

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ,
ರಾಬರ್ಟ್‌ಸನ್ ರಸ್ತೆ, ಬೆಂಗಳೂರು
ಸಂಖ್ಯೆ:ಕಾಪಾಅ/(ಪುನ)/ಟೆಂಡರ್/ಪಿಆರ್/02/2025-26 ದಿನಾಂಕ: 18.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಆಯುಕ್ತರು, ಬೆಂಗಳೂರು ಉತ್ತರ ನಗರ ಪಾಲಿಕೆ ಇವರ ಪರವಾಗಿ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ವಾರ್ಡ್ ಸಂಖ್ಯೆ-69, ಕಾವಲ್ ಬೈರಸಂದ್ರ, 70 ಕುಶಾಲನಗರ, 75 ಪುಲಿಕೇಶಿನಗರದ ಶಾಂಪುರ ಗ್ರಾಮದಿಂದ ಎಲ್ ಆರ್ ಬಂಡೆ ಕಚೇರಿ ಮಾರ್ಗವಾಗಿ ಗೋವಿಂದಪುರ ರೈಲ್ವೆ ಗೇಟ್, ದಿಣ್ಣೂರ್ ಮುಖ್ಯರಸ್ತೆ, ಬೃಹತ್ ನೀರು ಕಾಲುವೆಯಿಂದ ಕಾವಲ್ ಬೈರಸಂದ್ರ ಸರ್ಕಾರಿ ಶಾಲೆ ಮಾರ್ಗವಾಗಿ ಶಾಂಪುರ ಗ್ರಾಮದವರೆಗೆ, ಎ ಎಂ ಸಿ ರಸ್ತೆ ವೆಂಕಟೇಶ್ವರಸ್ವಾಮಿ ದೇವಸ್ಥಾನದಿಂದ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನವರೆಗೆ ಕೆ ಎಚ್ ಬಿ ಮುಖ್ಯರಸ್ತೆ ದಿಣ್ಣೂರ್ ಮುಖ್ಯರಸ್ತೆ ಪುಷ್ಪಾಂಜಲಿ ಚಿತ್ರಮಂದಿರದಿಂದ ವೀರಣ್ಣ ಪಾಳ್ಯ ರೈಲ್ವೆ ಗೇಟ್‌ವರೆಗೆ, ಸುಲ್ತಾನ್‌ಪಾಳ್ಯ ಮುಖ್ಯರಸ್ತೆ, ದಿಣ್ಣೂರ್ ಮುಖ್ಯರಸ್ತೆಯಿಂದ ಮನೋರಾಯನಪಾಳ್ಯ ಕಮಾನಿನವರೆಗೆ ಆಸ್ಸಯೆ ರಸ್ತೆ ಅಡ್ಡರಸ್ತೆ ಮತ್ತು 2ನೇ ಅಡ್ಡರಸ್ತೆ ಪ್ರೊಮೆನೇಡ್ ರಸ್ತೆ ಮತ್ತು ಅಡ್ಡರಸ್ತೆ, ವೀಲರ್ಸ್ ರಸ್ತೆ ಅಡ್ಡರಸ್ತೆಗಳು, ಕ್ಲೀವ್‌ಲ್ಯಾಂಡ್ ಟೌನ್ ರಸ್ತೆ, ಪ್ರೊಮೆನೇಡ್ ರಸ್ತೆ ನೇತಾಜಿಯಿಂದ ಸಂತ ಜಾನರ ಚರ್ಚ್ ರಸ್ತೆಯವರೆಗೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳನ್ನು ಅಭಿವೃದ್ಧಿ ಮಾಡುವುದು ಮತ್ತು ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. (ಸರ್ಕಾರದ ಕ್ರಮ ಸಂಖ್ಯೆ-58, 59, 60, 61, 62, 63, 64, 65, 66) ಪ್ಯಾಕೇಜ್ ಸಂಖ್ಯೆ-01 **ಟೆಂಡರ್‌ಗಿಟ್ಟ ಮೊತ್ತ ₹.1880.00 ಲಕ್ಷಗಳು, ಇಎಂಡಿ ಮೊತ್ತ: ₹.18,80,000/- (₹.1.00 ಲಕ್ಷ ಇ-ಪಾವತಿ (ಎನ್‌ಇಎಫ್‌ಟಿ) ಮೂಲಕ ಬಾಕಿ ಮೊತ್ತ ₹.17,80,000/- ಗಳನ್ನು ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸುವುದು.**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ: 25.11.2025ರಿಂದ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ, ರಾಬರ್ಟ್‌ಸನ್ ರಸ್ತೆ, ಫ್ರೇಜರ್‌ಟೌನ್, ಬೆಂಗಳೂರು-560 005 ಇಲ್ಲಿ ದಿನಾಂಕ: 29.11.2025ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 12.12.2025ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ದಿನಾಂಕ: 15.12.2025ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಪುಲಿಕೇಶಿನಗರ ವಿಭಾಗ, ವಲಯ-1

‘ಹೂಡಿಕೆಗೆ ಕರ್ನಾಟಕವೇ ವಿಶ್ವಾಸಾರ್ಹ’

ಉದ್ಯಮಿಗಳ ಆಹ್ವಾನಿಸಲು ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮಾಡುವುದಿದ್ದರೆ ಭಾರತದಲ್ಲಿ ಕರ್ನಾಟಕಕ್ಕಿಂತ ವಿಶ್ವಾಸಾರ್ಹ ತಾಣ ಮತ್ತೊಂದಿಲ್ಲ. ಇಲ್ಲಿ ಹೂಡಿಕೆ ಸ್ನೇಹಿ ವಾತಾವರಣವಿದ್ದು, ಎಲ್ಲ ಸ್ವರೂಪದ ಪ್ರತಿಭೆಯ ಲಭ್ಯತೆಯೂ ಇದೆ. ಈ ಎಲ್ಲ ಅನುಕೂಲಗಳನ್ನು ಹೂಡಿಕೆದಾರರು ಬಳಸಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.

ಮಾಹಿತಿ ತಂತ್ರಜ್ಞಾನ ಇಲಾಖೆಯು ನಗರದ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ದೇಶದ ಒಟ್ಟು ಮಾಹಿತಿ ತಂತ್ರಜ್ಞಾನ (ಐಟಿ) ರಫ್ತಿನಲ್ಲಿ ಕರ್ನಾಟಕದ ಪಾಲು ಶೇಕಡ 42ರಷ್ಟು ಇದೆ. ಮಾಹಿತಿ ತಂತ್ರಜ್ಞಾನ, ಡೀಪ್‌ಟೆಕ್ ಮತ್ತು ಬಾಹ್ಯಾಕಾಶ ಸಂಶೋಧನೆಯ ನಡುವಣ ಗೆರೆಗಳು ಈಗ ಮಸುಕಾಗುತ್ತಿವೆ. ಇದಕ್ಕೆ ಪೂರಕವಾಗಿ ಮಾಹಿತಿ ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ತಂತ್ರಜ್ಞಾನ ನೀತಿಗಳನ್ನು ರೂಪಿಸಿದ್ದೇವೆ’ ಎಂದರು.

‘2030ರ ವೇಳೆಗೆ ಭಾರತದ ಐಟಿ ರಫ್ತು ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ರಾಜ್ಯದ ಪಾಲನ್ನು ಶೇ 50ರಷ್ಟಕ್ಕೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಕರ್ನಾಟಕದ ಈ ಪ್ರಗತಿ ಆಕಸ್ಮಿಕವೂ ಅಲ್ಲ, ಕಾಕತಾಳೀಯವೂ ಅಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉತ್ತೇಜನಕ್ಕಾಗಿ ರಾಜ್ಯವು 1998ರಲ್ಲೇ ನೀತಿ ರೂಪಿಸಿತ್ತು. ಆದ್ದರಿಂದಲೇ ಇಂದು ದೇಶದಲ್ಲಿ ಐಟಿ ದಿಗ್ಗಜನಾಗಿ ಬೆಂಗಳೂರು ಮತ್ತು ಕರ್ನಾಟಕವು ನಿಂತಿದೆ’ ಎಂದರು.

‘ರಾಜ್ಯದಲ್ಲಿ 16,000ಕ್ಕೂ ಹೆಚ್ಚು ನವೋದ್ಯಮಗಳು ಇವೆ. ಫಾರ್ಚೂನ್ 500 ಕಂಪನಿಗಳ ಪೈಕಿ 400, ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಕರ್ನಾಟಕದಲ್ಲಿ 85 ವಿಶ್ವವಿದ್ಯಾಲಯಗಳು, 243 ಎಂಜಿನಿಯರಿಂಗ್ ಕಾಲೇಜುಗಳು, 1,800 ಐಟಿಐಗಳು ಇವೆ. ಅಪಾರ ಪ್ರಮಾಣದ ಮತ್ತು ಕೌಶಲಯುಕ್ತ ಮಾನವ ಸಂಪನ್ಮೂಲ ಇಲ್ಲಿನ ಹೆಗ್ಗಳಿಕೆ. ಇದರೊಂದಿಗೆ ಸರ್ಕಾರದ ಸಹಕಾರವೂ ಇದೆ. ಈ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಿ’ ಎಂದು ಕರೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಬೆಂಗಳೂರಿನಲ್ಲಿ ಕೌಶಲಯುಕ್ತ ಪರಿಣಿತರು ಇದ್ದು, ಹೂಡಿಕೆಗೆ ಪೂರಕ ವಾತಾವರಣ ಇದೆ. ನಿಮ್ಮೆಲ್ಲರ ಸಹಕಾರವನ್ನು ಎದುರು ನೋಡುತ್ತಿದ್ದೇವೆ’ ಎಂದು ಹೂಡಿಕೆದಾರರಿಗೆ ಆಹ್ವಾನ ನೀಡಿದರು.

‘ಬೆಂಗಳೂರು ತಂತ್ರಜ್ಞಾನ ಶೃಂಗಸಭೆ’ಯಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದ್ದ ಡ್ರೋನ್ ಕುರಿತು ಪ್ರಿಯಾಂಕ್ ಖರ್ಗೆ, ಡಿ.ಕೆ.ಶಿವಕುಮಾರ್, ಶರತ್ ಬಚ್ಚೇಗೌಡ, ಸಿದ್ದರಾಮಯ್ಯ, ಎಂ.ಬಿ.ಪಾಟೀಲ ಮಾಹಿತಿ ಪಡೆದುಕೊಂಡರು. ಕ್ರಿಸ್ ಗೋಪಾಲಕೃಷ್ಣನ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಐಟಿ, ಬಾಹ್ಯಾಕಾಶ ನೀತಿ ಬಿಡುಗಡೆ

ಕರ್ನಾಟಕದಿಂದ ಸಾಫ್ಟ್‌ವೇರ್ ರಫ್ತನ್ನು 2030ರ ವೇಳೆಗೆ ₹4.09 ಲಕ್ಷ ಕೋಟಿಯಿಂದ ₹11.5 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿರುವ ‘ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025–2030’ಯನ್ನು ಶೃಂಗಸಭೆಯಲ್ಲಿ ಬಿಡುಗಡೆ ಮಾಡಲಾಯಿತು.

ಬೆಂಗಳೂರಿನಾಚೆಗೆ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ತುಮಕೂರು, ಕಲಬುರಗಿ ಮತ್ತು ಶಿವಮೊಗ್ಗದಂತಹ ನಗರಗಳಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಇತರ ನೂತನ ತಂತ್ರಜ್ಞಾನಗಳ ಹೂಡಿಕೆಗೆ ಈ ನೀತಿಯು ಆದ್ಯತೆ ನೀಡುತ್ತದೆ. ರಾಜ್ಯದಲ್ಲಿರುವ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಬಳಸಿಕೊಂಡು ಕರ್ನಾಟಕವನ್ನು ಬಾಹ್ಯಾಕಾಶ ತಂತ್ರಜ್ಞಾನದ ಜಾಗತಿಕ ತಾಣವಾಗಿ ಪರಿವರ್ತಿಸುವ ಉದ್ದೇಶದ ‘ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025–2030’ಯನ್ನು ಬಿಡುಗಡೆ ಮಾಡಲಾಯಿತು.

ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಷ್ಟ್ರೀಯ ಮಾರುಕಟ್ಟೆ ಪಾಲಿನ ಶೇ 50ರಷ್ಟನ್ನು ಹೊಂದುವ ಮೂಲಕ ಕರ್ನಾಟಕವನ್ನು ಭಾರತದಲ್ಲಿ ನಂಬರ್ 1 ತಾಣವಾಗಿ ಉಳಿಸಿಕೊಳ್ಳುವುದು ಮತ್ತು ಜಾಗತಿಕ ಮಾರುಕಟ್ಟೆ ಪಾಲಿನ ಶೇ 5ರಷ್ಟನ್ನು ಹೊಂದುವ ಮೂಲಕ ಕರ್ನಾಟಕವನ್ನು ಬಾಹ್ಯಾಕಾಶ ತಂತ್ರಜ್ಞಾನದ ಜಾಗತಿಕ ತಾಣವಾಗಿಸುವುದು ಈ ನೀತಿಯ ಗುರಿ.

‘ಎನ್‌ಆರ್‌ಐ ಹೂಡಿಕೆಗೆ ಪ್ರತ್ಯೇಕ ಇಲಾಖೆ’

‘ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅನಿವಾಸಿ ಭಾರತೀಯರು ಹೂಡಿಕೆಗೆ ಆಸಕ್ತಿ ತೋರಿಸುತ್ತಿದ್ದಾರೆ. ಅವರ ಹೂಡಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವ ಉದ್ದೇಶದಿಂದ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸುವ ಕೆಲಸ ನಡೆಯುತ್ತಿದೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ‘ಅನಿವಾಸಿ ಭಾರತೀಯರು ಆಸಕ್ತಿ ಹೊಂದಿದ್ದರೂ, ಹೇಗೆ ಹೂಡಿಕೆ ಮಾಡಬೇಕು ಎಂಬುದರ ಬಗ್ಗೆ ಮಾಹಿತಿ ಹೊಂದಿರುವುದಿಲ್ಲ. ಅಲ್ಲದೆ ಯಾವ ಕ್ಷೇತ್ರದಲ್ಲಿ ಹೂಡಿಕೆ ಮಾಡಬೇಕು ಎಂಬುದೂ ಸ್ಪಷ್ಟವಾಗಿರುವುದಿಲ್ಲ. ಈ ಬಗ್ಗೆ ಹಲವು ಮಂದಿ ನನ್ನ ಗಮನ ಸೆಳೆದಿದ್ದಾರೆ. ಇದನ್ನು ಸರ್ಕಾರದ ಮಟ್ಟದಲ್ಲಿ ಚರ್ಚಿಸಿದ್ದು, ಪ್ರತ್ಯೇಕ ಇಲಾಖೆ ಸ್ಥಾಪಿಸಲಾಗುತ್ತದೆ’ ಎಂದು ವಿವರಿಸಿದ್ದರು.

28ನೇ ಶೃಂಗಸಭೆಯ ಒಳಹೊರಗು

- ಕೃತಕ ಬುದ್ಧಿಮತ್ತೆ, ಡೀಪ್‌ಟೆಕ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಸಮ್ಮಿಳನದ ‘ಫ್ಯೂಚರೈಸ್’ ಪರಿಕಲ್ಪನೆಯ ತಂತ್ರಜ್ಞಾನ ಶೃಂಗ
- 60ಕ್ಕೂ ಹೆಚ್ಚು ದೇಶಗಳ 15,000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗಿ
- ಕಿಯೋನಿಕ್ಸ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ಕಿರು ಕಂಪ್ಯೂಟರ್ ‘ಕಿಯೋ’ ಬಿಡುಗಡೆ
- ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಉತ್ತಮ ಕಾರ್ಯನಿರ್ವಹಿಸುತ್ತಿರುವ ‘ಯೂನಿಕಾರ್ನ್’ಗಳಾದ ಗ್ರೋ, ಏಥರ್ ಎನರ್ಜಿ ಮತ್ತು ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರತಿನಿಧಿಗಳಿಗೆ ಸನ್ಮಾನ

‘ನವೋದ್ಯಮಕ್ಕೆ ₹1,100 ಕೋಟಿ ನಿಧಿ’

‘ನವೋದ್ಯಮಗಳ ಉತ್ತೇಜನಕ್ಕೆ ₹1,100 ಕೋಟಿ ಮೊತ್ತದ ನಿಧಿ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ನವೋದ್ಯಮಗಳ ಕುರಿತಾದ ಗೋಷ್ಠಿಯಲ್ಲಿ, ಉದ್ಯಮಿಗಳಾದ ಕಿರಣ್ ಮಜುಂದಾರ್ ಷಾ, ಕ್ರಿಸ್ ಗೋಪಾಲಕೃಷ್ಣನ್ ಅವರ ಜತೆಗೆ ವೇದಿಕೆ ಹಂಚಿಕೊಂಡಿದ್ದ ಅವರು, ‘ಈ ನಿಧಿ ಸ್ಥಾಪನೆಗೆ ಹೂಡಿಕೆದಾರರ ಜತೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಕರ್ನಾಟಕ ಸರ್ಕಾರವು ₹670 ಕೋಟಿ ಮಾಡಲಿದೆ. ಹೂಡಿಕೆದಾರರು ₹430 ಕೋಟಿ ಒದಗಿಸಲಿದ್ದಾರೆ’ ಎಂದರು. ‘ನವೋದ್ಯಮ ಉತ್ತೇಜನದ ಭಾಗವಾಗಿ ನಡೆಯಲಿರುವ ಸಮ್ಮೇಳನದಲ್ಲಿ, 143 ನವೋದ್ಯಮಗಳಿಗ ಈ ನಿಧಿಯನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿ ನವೋದ್ಯಮಕ್ಕೆ ಕನಿಷ್ಠ ₹2 ಕೋಟಿಯಿಂದ ಗರಿಷ್ಠ ₹45 ಕೋಟಿಯವರೆಗೆ ಸಹಾಯಾನುದಾನ ಒದಗಿಸಲಾಗುತ್ತದೆ’ ಎಂದರು.

‘200 ಎಕರೆಯಲ್ಲಿ ಸೆಮಿಕಂಡಕ್ಟರ್ ಪಾರ್ಕ್’

‘ದಾಬಸ್‌ಪೇಟೆ ಸಮೀಪ ರೂಪಿಸಲಾಗುತ್ತಿರುವ ಕ್ವಿನ್ ಸಿಟಿಯ ವ್ಯಾಪ್ತಿಯಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪಿಸಲಾಗುತ್ತದೆ. 200 ಎಕರೆ ಪ್ರದೇಶದಲ್ಲಿ ಈ ಪಾರ್ಕ್ ಸ್ಥಾಪನೆಗೆ ರೂಪುರೇಷೆ ಸಿದ್ಧವಾಗಿದೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

‘ರಾಜ್ಯದ ಇತರೆಡೆ ಸೆಮಿಕಂಡಕ್ಟರ್ ತಯಾರಿಕಾ ಘಟಕಗಳು ಸಿದ್ಧವಾಗುತ್ತಿವೆ. ಕ್ವಿನ್ ಸಿಟಿಯಲ್ಲಿ ಸ್ಥಾಪಿಸಲಾಗುವ ಪಾರ್ಕ್, ಸೆಮಿಕಂಡಕ್ಟರ್ ತಯಾರಿಕೆಗೆ ಬೇಕಾಗುವ ಎಲ್ಲ ಸವಲತ್ತುಗಳನ್ನೂ ಹೊಂದಿರಲಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ, ಸೆಮಿಕಂಡಕ್ಟರ್ ಜೋಡಣೆ ಮತ್ತು ತಯಾರಿಕೆಗೆ ಅಗತ್ಯವಾದ ಎಲ್ಲ ಸವಲತ್ತುಗಳನ್ನು ಒದಗಿಸಲಾಗುತ್ತದೆ. ರಾಜ್ಯದಲ್ಲಿ ತಂತ್ರಜ್ಞಾನ ಕ್ಷೇತ್ರದ ಬಂಡವಾಳ ಆಕರ್ಷಣೆಗೆ ‘ಇಂಡಸ್ಟ್ರಿ 5.0’ ಕಾರ್ಯನೀತಿಯನ್ನು ರೂಪಿಸಲಾಗಿದೆ. ಸಂಬಂಧಿತ ಎಲ್ಲ ಇಲಾಖೆಗಳೂ ಇದಕ್ಕೆ ಪೂರಕವಾಗಿ ಕೆಲಸ ಮಾಡಲಿವೆ’ ಎಂದರು.

ಸುದ್ದಿ 2 ನಿಮಿಷ

ಮೇಕೆದಾಟು ರಾಜಕೀಯ ಪ್ರತಿಷ್ಠೆ ಬೇಡ: ಬೊಮ್ಮಾಯಿ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನ ಕುರಿತು ಕೇಂದ್ರದೊಂದಿಗೆ ರಾಜಕೀಯ ಪ್ರತಿಷ್ಠೆ ಮಾಡಿದರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರದ ಜತೆ ವಿಶ್ವಾಸ ಇಟ್ಟುಕೊಂಡು ಅನುಮತಿ ಪಡೆದರೆ ಮುಂದಿನ ಕಾನೂನು ಹೋರಾಟದಲ್ಲಿ ಅನುಕೂಲವಾಗುತ್ತದೆ. ಸೌಹಾರ್ದವಾಗಿ ಯೋಜನೆ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

‘ಮೇಕೆದಾಟು ಯೋಜನೆ ರಾಜ್ಯದ ಜನರ ಬಹು ವರ್ಷಗಳ ಕನಸು. 1996ರಲ್ಲಿ ವಿದ್ಯುತ್ ಯೋಜನೆಯಿಂದ ಆರಂಭವಾಗಿತ್ತು. ನಾನು ನೀರಾವರಿ ಸಚಿವನಾಗಿದ್ದಾಗ, ಮುಳುಗಡೆ ಪ್ರದೇಶ ಕಡಿಮೆ ಮಾಡಲು ವಿಸ್ತೃತ ಯೋಜನಾ ವರದಿಯಲ್ಲಿ ಬದಲಾವಣೆ ಮಾಡಿದ್ದೆ. ಕಾಂಗ್ರೆಸ್ ಪಾದಯಾತ್ರೆ ಮಾಡದಿದ್ದರೆ ಯೋಜನೆ ಅಂದೇ ಒಂದು ಹಂತಕ್ಕೆ ಬರುತ್ತಿತ್ತು. ಪಾದಯಾತ್ರೆ ಫಲವಾಗಿ ತಮಿಳುನಾಡಿನವರು ನ್ಯಾಯಾಲದ ಮೊರೆ ಹೋದರು. ಈಗ ಬುದ್ಧಿವಂತಿಕೆಯಿಂದ ಎಲ್ಲ ಹಂತಗಳನ್ನು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ತಮಿಳುನಾಡು ಮತ್ತೆ ಕೋರ್ಟ್‌ಗೆ ಹೋಗುತ್ತದೆ. ಮಂಜೂರಾತಿ ನೀಡುವಾಗ ಯಾವ ಹಂತದಲ್ಲಿ ಇತ್ತೋ, ಅದೇ ಹಂತದಿಂದ ಆರಂಭ ಮಾಡುವಂತೆ ಕೇಂದ್ರಕ್ಕೆ ನಾನೂ ಮನವಿ ಮಾಡುತ್ತೇನೆ’ ಎಂದು ಹೇಳಿದರು.

ಮೆಕ್ಕೆಜೋಳ ಖರೀದಿ ಆರಂಭಿಸಬೇಕು: ರೈತರು 17 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 54 ಲಕ್ಷ ಟನ್ ಮೆಕ್ಕೆಜೋಳ ಬೆಳೆದಿದ್ದಾರೆ. ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿದೆ. ಬೆಲೆ ಕುಸಿದಿದ್ದು, ಪ್ರತಿ ಕ್ವಿಂಟಲ್‌ಗೆ ₹1,400ಕ್ಕೆ ಇಳಿದಿದೆ. ಹಾಗಾಗಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್‌ಗೆ ₹2,400 ಕನಿಷ್ಠ ಬೆಂಬಲ ಬೆಲೆ ನೀಡಿದೆ. ರಾಜ್ಯ ಸರ್ಕಾರ ಅದಕ್ಕಿಂತ ಹೆಚ್ಚಿಗೆ ಬೆಲೆಗೆ ಖರೀದಿ ಮಾಡಬೇಕು. ತಕ್ಷಣ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದರು.



ಸಿಐಟಿಯು ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ರಾಜ್ಯ ಸಮಿತಿ ಅಧ್ಯಕ್ಷರಾಗಿ ಮೀನಾಕ್ಷಿ ಸುಂದರಂ, ಪ್ರಧಾನ ಕಾರ್ಯದರ್ಶಿಯಾಗಿ ಎಸ್.ವರಲಕ್ಷ್ಮಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಾಸನದಲ್ಲಿ ನಡೆದ ಸಿಐಟಿಯು ರಾಜ್ಯ ಸಮ್ಮೇಳನದಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದು, ಪಿ.ಕೆ.ಪರಮೇಶ್ವರ್ ಅವರು ಸಮಿತಿಯ ಖಜಾಂಚಿಯಾಗಿದ್ದಾರೆ.

ಸಮಿತಿಯಲ್ಲಿ 14 ಉಪಾಧ್ಯಕ್ಷರು, 20 ಕಾರ್ಯದರ್ಶಿಗಳಿದ್ದು, ಏಳು ಮಂದಿ ಮಹಿಳೆಯರಿಗೂ ಅವಕಾಶ ನೀಡಲಾಗಿದೆ.

ಚಿಟಿಕೆ ಸುದ್ದಿ

ಮಾನವ ಸಂಪನ್ಮೂಲ ವೃತ್ತಿನಿರತರ ಸಮ್ಮೇಳನ 22ಕ್ಕೆ

ಬೆಂಗಳೂರು: ನಿರಾತಂಕ ಸ್ವಯಂ ಸೇವಾ ಸಂಸ್ಥೆಯು ನವೆಂಬರ್ 22ರಂದು ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ಹೋಟೆಲ್ ‘ದಿ ಚಾನ್ಸರಿ ಪೆವಿಲಿಯನ್’ ನಲ್ಲಿ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಒಂಬತ್ತನೇ ಕನ್ನಡ ಸಮ್ಮೇಳನವನ್ನು ಆಯೋಜಿಸಿದೆ.

ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 400ಕ್ಕೂ ಹೆಚ್ಚು ಮಾನವ ಸಂಪನ್ಮೂಲ ವೃತ್ತಿನಿರತರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಅರ್ಹ ಸಂಸ್ಥೆಗಳಿಗೆ ‘ಮಹಿಳಾ ಸಬಲೀಕರಣ ಪ್ರಶಸ್ತಿ’ ಮತ್ತು ‘ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಪ್ರಶಸ್ತಿ’ ಅರ್ಹ ವ್ಯಕ್ತಿಗಳಿಗೆ ‘ಮಾನವ ಸಂಪನ್ಮೂಲ ಪ್ರತಿಭಾ ಪುರಸ್ಕಾರ’ ನೀಡಿ ಗೌರವಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಸಮ್ಮೇಳನದಲ್ಲಿ ಭಾಗವಹಿಸಲು ಬಯಸುವ ಆಸಕ್ತರು ಮೊಬೈಲ್ ಸಂಖ್ಯೆ 80884 33026 ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು.

ಮಾಹಿತಿಗೆ: www.niratanka.org, www.hrkancon.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸುಶೀಲಾ, ನೀಲಾಗೆ ‘ಸಿದ್ದರಾಮಯ್ಯ’ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಪತ್ರಕರ್ತೆಯರ ಸಂಘ ನೀಡುವ 2024–2025ನೇ ಸಾಲಿನ ‘ಸಿದ್ದರಾಮಯ್ಯ’ ದತ್ತಿ ಪ್ರಶಸ್ತಿಗೆ ‘ಪ್ರಜಾವಾಣಿ’ಯ ಮುಖ್ಯ ಉಪ ಸಂಪಾದಕಿ ನೀಲಾ ಎಂ.ಎಚ್, ‘ಸದರ್ನ್ ಎಕನಾಮಿಸ್ಟ್’ ಪತ್ರಿಕೆಯ ಪತ್ರಕರ್ತೆ ಸುಶೀಲಾ ಸುಬ್ರಹ್ಮಣ್ಯ ಭಾಜನರಾಗಿದ್ದಾರೆ.



ಸುಶೀಲಾ ಸುಬ್ರಹ್ಮಣ್ಯ

ನೀಲಾ ಎಂ.ಎಚ್

ಪ್ರಶಸ್ತಿಯು ತಲಾ ₹25 ಸಾವಿರ ನಗದು, ಫಲಕ ಒಳಗೊಂಡಿದೆ. ಅರಮನೆ ರಸ್ತೆಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನ.28ರಂದು ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರು ಉಪಸ್ಥಿತರಿರುವರು ಎಂದು ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ತಿಳಿಸಿದ್ದಾರೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೇಂದ್ರಕ್ಕೆ ವಿಸ್ತೃತ ಯೋಜನಾ ವರದಿ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

‘ಮೇಕೆದಾಟು’ಗೆ ಹೊಸ ಡಿಪಿಆರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಯೋಜನೆಗೆ ಹೊಸದಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಯೋಜನೆ ಅನುಷ್ಠಾನ ಕುರಿತು ಅಧಿಕಾರಿಗಳ ಸಭೆ ಹಾಗೂ ಕಾವೇರಿ ನೀರಾವರಿ ನಿಗಮದ ನಿರ್ದೇಶಕರ ಮಂಡಳಿ ಸಭೆ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

‘ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಯೋಜನೆಯನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎಂಬ ಚರ್ಚೆ ನಡೆಸಿದ್ದೇವೆ. ಯೋಜನೆಯ ಸಂಪೂರ್ಣ ವಿವರ, ಮುಳುಗಡೆಯಾಗುವ ಅರಣ್ಯ ಪ್ರದೇಶವನ್ನು ಡಿಪಿಆರ್ ಒಳಗೊಳ್ಳಲಿದೆ. ಹಿಂದೆ ಸಲ್ಲಿಸಿದ್ದ ಡಿಪಿಆರ್ ಅನ್ನು ಕೇಂದ್ರ ಸರ್ಕಾರ ತಿರಸ್ಕರಿಸಿತ್ತು. ಹಾಗಾಗಿ, ಲೋಪದೋಷಗಳನ್ನು ಸರಿಪಡಿಸಿ ಹೊಸದಾಗಿ ಸಿದ್ಧಪಡಿಸಲಾಗುವುದು. ಕಾನೂನು ಪ್ರಕಾರ ಕೇಂದ್ರ ಜಲ ಆಯೋಗ ಅಥವಾ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮಂಡಿಸಲಾಗುವುದು’ ಎಂದು ಮಾಹಿತಿ ನೀಡಿದರು.

ಮೇಕೆದಾಟು ಪ್ರದೇಶದಲ್ಲಿ ಭೋರ್ಗರೆಯುತ್ತಾ ಹರಿದಿರುವ ಕಾವೇರಿ – ಸಂಗ್ರಹ ಚಿತ್ರ

‘ಯೋಜನಾ ಕಚೇರಿಯನ್ನು ಹಾರೋಬೆಲೆಯಲ್ಲಿ ಆರಂಭಿಸಿದ್ದೇವೆ. ಮುಖ್ಯ ಎಂಜಿನಿಯರ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರತ್ಯೇಕ ಕಚೇರಿಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದಲ್ಲಿ ಆರಂಭಿಸಲು ತೀರ್ಮಾನಿಸಿದ್ದೇವೆ. ಮಂಡ್ಯ ಜಿಲ್ಲೆಗೆ ಹತ್ತಿರದಲ್ಲಿ ಇರಲಿ ಎಂಬ ಉದ್ದೇಶಕ್ಕೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಚೇರಿಗಳಿಗೆ ಅಗತ್ಯ ಸಿಬ್ಬಂದಿ ಒದಗಿಸಲಾಗುವುದು’ ಎಂದು ಹೇಳಿದರು.

ಮೇಕೆದಾಟು ಯೋಜನೆ ಕುರಿತ ಸಭೆಯಲ್ಲಿ ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಬೆಂಗಳೂರು ದಕ್ಷಿಣ, ಗ್ರಾಮಾಂತರ, ಮಂಡ್ಯ, ಚಾಮರಾಜನಗರ ಜಿಲ್ಲಾಧಿಕಾರಿಗಳು ಭಾಗವಹಿಸಿದ್ದರು.

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ಕರ್ನಾಟಕದ ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿತ್ತು. ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಹಾಗೂ ಎನ್.ವಿ. ಅಂಜಾರಿಯಾ ಪೀಠವು, ‘ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿಪೂರ್ವ (ಪ್ರಿಮೆಚೂರ್)’ ಎಂದು ಅಭಿಪ್ರಾಯಪಟ್ಟಿತ್ತು.

ಇಬ್ಬಣ ಅಧಿಕಾರದ ಪಣ

ಅಧಿಕಾರ ಹಸ್ತಾಂತರದ ಪಟ್ಟು

ಒಂದನೇ ಪುಟದಿಂದ...

ರಾಹುಲ್ ಅವರನ್ನು ಶನಿವಾರ ಭೇಟಿ ಮಾಡಿದ್ದ ಸಿದ್ದರಾಮಯ್ಯ ಅವರು ಸಂಪುಟ ಪುನರ್ ರಚನೆ ಬಗ್ಗೆ ಪ್ರಸ್ತಾಪಿಸಿದ್ದರು. ರಾಹುಲ್ ಸೂಚನೆಯಂತೆ ಮಲ್ಲಿಕಾರ್ಜುನ ಖರ್ಗೆಯವರನ್ನೂ ಭೇಟಿ ಮಾಡಿದ್ದರು. ಸಂಪುಟ ಪುನರ್ ರಚನೆಗೆ ವರಿಷ್ಠರು ತಾತ್ವಿಕ ಒಪ್ಪಿಗೆ ನೀಡಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದಂತೆ ಡಿ.ಕೆ. ಸುರೇಶ್ ಭಾನುವಾರ ದೆಹಲಿಗೆ ಧಾವಿಸಿದ್ದರು. ಸಹೋದರರಿಬ್ಬರು ಅಂದು ಸಂಜೆಯೇ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಸುದೀರ್ಘವಾಗಿ ಸಮಾಲೋಚಿಸಿದ್ದರು.

ಕರ್ನಾಟಕ ಭವನದಲ್ಲಿ ಸೋಮವಾರ ಉಳಿದಿದ್ದ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದ ಸುರೇಶ್ ಕೆಲ ಹೊತ್ತು ಚರ್ಚಿಸಿದ್ದರು. ಖರ್ಗೆ ಅವರನ್ನು ಸಿದ್ದರಾಮಯ್ಯ ಸಂಜೆ ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಒಪ್ಪಿಗೆಯನ್ನು ಕೋರಿದ್ದರು. ಸಿದ್ದರಾಮಯ್ಯ ಬೆಂಗಳೂರಿಗೆ ತೆರಳಿದ ಬೆನ್ನಲ್ಲೇ ಸುರೇಶ್ ಅವರೂ ಎಐಸಿಸಿ ಅಧ್ಯಕ್ಷರನ್ನು ಕಂಡು ಅರ್ಧ ಗಂಟೆ ಮಾತುಕತೆ ನಡೆಸಿದ್ದರು.

‘ಐದು ವರ್ಷಗಳ ಪೈಕಿ ಮೊದಲ ಎರಡೂವರೆ ವರ್ಷಗಳಿಗೆ ಸಿದ್ದರಾಮಯ್ಯ ಹಾಗೂ ಎರಡನೇ ಅವಧಿಗೆ ಶಿವಕುಮಾರ್ ಮುಖ್ಯಮಂತ್ರಿ ಎಂದು ಸರ್ಕಾರ ರಚನೆಗೆ ಮುನ್ನವೇ ಒಪ್ಪಂದವಾಗಿತ್ತು. ನಿಮ್ಮ ಸಮ್ಮುಖದಲ್ಲೇ ಈ ಮಾತುಕತೆ ನಡೆದಿತ್ತು. ನಮ್ಮ ಬೇಡಿಕೆಗೆ ಒಪ್ಪಿದ ಬಳಿಕವೇ ನಮ್ಮ ಪಟ್ಟು ಸಡಿಲಿಸಿದ್ದೆವು. ಎರಡೂವರೆ ವರ್ಷಗಳಲ್ಲಿ ಯಾವುದೇ ತಕರಾರು ಮಾಡದೆ ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ಸಹಕಾರ ನೀಡಿದ್ದೇವೆ. ಈಗ ಸಿದ್ದರಾಮಯ್ಯ ಅವರ ಸರದಿ. ಯಾವುದೇ ನೆಪ ಹೇಳದೆ ಅಧಿಕಾರ ಹಸ್ತಾಂತರ ಮಾಡಬೇಕು. ಈ ಬಗ್ಗೆ ಹೈಕಮಾಂಡ್ ಸೂಚನೆ ನೀಡಬೇಕು’ ಎಂದು ಸಹೋದರರು ಖರ್ಗೆ ಅವರಲ್ಲಿ ಒತ್ತಾಯಿಸಿದ್ದರು. ಸಂಪುಟ ಪುನರ್ ರಚನೆಗೆ ಸುತಾರಾಂ ಅವಕಾಶ ನೀಡಬಾರದು ಎಂದು ಆಗ್ರಹಿಸಿದ್ದರು. ‘ಈ ವಿಷಯದ ಬಗ್ಗೆ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ’ ಎಂದು ಖರ್ಗೆ ಅವರು ಡಿ.ಕೆ. ಸಹೋದರರಿಗೆ ತಿಳಿಸಿದ್ದರು ಎಂದು ಮೂಲಗಳು ತಿಳಿಸಿವೆ.

‘ರಾಜ್ಯದಲ್ಲಿ ಮೈತ್ರಿ ಸರ್ಕಾರ ಪತನದ ಬಳಿಕ ಕಾಂಗ್ರೆಸ್ ಪಕ್ಷ ಸಂಪೂರ್ಣ ದುರ್ಬಲಗೊಂಡಿತ್ತು. ಕೋವಿಡ್ ಸಂದರ್ಭದಲ್ಲಿ ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಶಿವಕುಮಾರ್ ಅವರು ಪಕ್ಷಕ್ಕೆ ನವ ಚೈತನ್ಯ ನೀಡಿದ್ದರು. ಸಂಘಟನೆಗೆ ಹೊಸ ರೂಪ ನೀಡಿದ್ದರು. ಅವರ ಹೋರಾಟದಿಂದ ಪಕ್ಷ ಮೇಲೆದ್ದು ನಿಂತಿತ್ತು. ಅಧಿಕಾರ ಹಸ್ತಾಂತರದ ಸೂತ್ರವನ್ನು ಈಗಲಾದರೂ ಪಾಲಿಸಬೇಕು. ರಾಹುಲ್ ಗಾಂಧಿ ಅವರೊಂದಿಗೆ ಸಮಾಲೋಚಿಸಿ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುರೇಶ್ ಒತ್ತಾಯಿಸಿದ್ದರು’ ಎಂದು ಮೂಲಗಳು ಹೇಳಿವೆ. ಸೋಮವಾರ ಸಂಜೆ ರಾಷ್ಟ್ರ ರಾಜಧಾನಿಯಿಂದ ವಾಪಸ್ ಆಗಿದ್ದ ಶಿವಕುಮಾರ್ ಅವರು ರಾಹುಲ್ ಗಾಂಧಿ ಭೇಟಿಗಾಗಿ ಬುಧವಾರ ಮತ್ತೆ ದೆಹಲಿಗೆ ಬರಲಿದ್ದಾರೆ.

ಪುನರ್‌ರಚನೆಯ ಪ್ರತಿಪಟ್ಟು

ಒಂದನೇ ಪುಟದಿಂದ...

ತಮ್ಮ ಇಂಗಿತವನ್ನು ರಾಹುಲ್ ಗಾಂಧಿ ಜೊತೆ ಹಂಚಿಕೊಂಡಾಗ, ಈ ವಿಚಾರವಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಚರ್ಚಿಸುವಂತೆ ಸೂಚಿಸಿದ್ದರು.

ಮುಖ್ಯಮಂತ್ರಿಯ ವಾದವನ್ನು ಆಲಿಸಿದ ಖರ್ಗೆ, ಸಂಪುಟ ಪುನರ್‌ರಚನೆಗೆ ವಿರೋಧವಿಲ್ಲ. ಈ ಕುರಿತು ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುವುದು ಸೂಕ್ತ ಎಂದು ಸಲಹೆ ನೀಡಿದ್ದಾರೆಂದು ಗೊತ್ತಾಗಿದೆ.

ಡಿಸೆಂಬರ್ 8ರಿಂದ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ಆರಂಭವಾಗಲಿದೆ. ಅಧಿವೇಶನ ಮುಗಿದ ನಂತರ ಅಥವಾ ಅದಕ್ಕೂ ಮೊದಲೇ ಸೂಕ್ತ ಸಮಯ ನೋಡಿಕೊಂಡು ಈ ಕುರಿತು ಮತ್ತೊಮ್ಮೆ ಹೈಕಮಾಂಡ್ ಜತೆ ಸಮಾಲೋಚನಾ ಸಭೆ ನಡೆಸಲು ಮತ್ತು ಅನಗತ್ಯ ಗೊಂದಲಗಳಿಗೆ ಅವಕಾಶ ಕೊಡದೆ, ಸಂಪುಟ ಪುನರ್‌ರಚನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕಾಂಗ್ರೆಸ್ ವರಿಷ್ಠರು ಚಿಂತನೆ ನಡೆಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ವಿಜಯಪುರ ವಿಮಾನನಿಲ್ದಾಣ ಯುಗಾದಿಗೆ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜಯಪುರ ವಿಮಾನ ನಿಲ್ದಾಣ ಉದ್ಘಾಟನೆಗೆ ಇದ್ದ ಅಡೆತಡೆ ನಿವಾರಣೆಯಾಗಿದ್ದು, ಯುಗಾದಿ ವೇಳೆಗೆ ಕಾರ್ಯಾರಂಭ ಮಾಡುವ ವಿಶ್ವಾಸವಿದೆ’ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

‘ವಿಜಯಪುರ ವಿಮಾನನಿಲ್ದಾಣ ಉದ್ಘಾಟನೆಗೆ ಸಿದ್ಧವಾಗಿತ್ತು. ಪರಿಸರ ಸಂಬಂಧಿತ ಪ್ರಕರಣಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಕಾರಣ ಪ್ರಕ್ರಿಯೆಗಳು ಸ್ಥಗಿತವಾಗಿದ್ದವು. ಸುಪ್ರೀಂಕೋರ್ಟ್ ನಿರ್ಧಾರದಿಂದ ಒಂದು ಹೆಜ್ಜೆ ಮುಂದಕ್ಕೆ ಬಂದಿದ್ದೇವೆ. ಕಿತ್ತೂರು ಕರ್ನಾಟಕ ಭಾಗಕ್ಕೆ ನಿರಾಳತೆ ತಂದಿದೆ’ ಎಂದಿದ್ದಾರೆ.

‘ಸುಪ್ರೀಂ ಕೋರ್ಟ್ ಹಿಂದೆ ನೀಡಿದ್ದ ತೀರ್ಪಿನಿಂದ ವಿಮಾನನಿಲ್ದಾಣದ ಅಸ್ತಿತ್ವಕ್ಕೆ ಅಪಾಯ ಎದುರಾಗಿತ್ತು. ಆದರೆ, ಸಚಿವ ಎಂ.ಬಿ. ಪಾಟೀಲರು ಕಪಿಲ್ ಸಿಬಲ್ ಅವರಂಥ ಹಿರಿಯ ವಕೀಲರನ್ನು ನೇಮಿಸಿಕೊಳ್ಳುವ ಮೂಲಕ ನೆರವಾದರು’ ಎಂದು ವಿಜಯಪುರ ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ರವೀಂದ್ರ ಬಿಜ್ಜರಗಿ ಹೇಳಿದ್ದಾರೆ.

ಮಂಜುನಾಥ್ ಸೇರಿ ಐವರಿಗೆ ಪ್ರಶಸ್ತಿ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಅಂಗವಾಗಿ ಇದೇ ಮೊದಲ ಬಾರಿಗೆ ನೀಡುತ್ತಿರುವ ರಾಜ್ಯಮಟ್ಟದ ‘ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ’ಗೆ ‘ಪ್ರಜಾವಾಣಿ’ಯ ಹಿರಿಯ ವರದಿಗಾರ ಆರ್. ಮಂಜುನಾಥ್ ಸೇರಿದಂತೆ ಐವರು ಭಾಜನರಾಗಿದ್ದಾರೆ.

ಮಂಜುನಾಥ್

ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನಾ ಕ್ಷೇತ್ರದಲ್ಲಿ ವ್ಯಕ್ತಿ–ಸಂಸ್ಥೆಗಳು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ‘ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ’ ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ನವೆಂಬರ್ 19ರಂದು ಅರಮನೆ ಮೈದಾನದಲ್ಲಿ ನಡೆಯುವ ‘ಸುವರ್ಣ ಮಹೋತ್ಸವ ಸಮಾರಂಭ’ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ತಿಳಿಸಿದರು.

ದಾವಣಗೆರೆ ಜಿಲ್ಲಾಧಿಕಾರಿ, ಬೆಳಗಾವಿಯ ಉಕ್ಕಡದ ಮಜದೂರು ನವ ನಿರ್ಮಾಣ ಸಂಘಟನೆಯ ಶಿವಾಜಿ ಕಾಗಣೀಕರ, ಮಂಗಳೂರಿನ ಪ್ರೊ. ಜಿ. ಶ್ರೀನಿಕೇತನ್, ಬೆಂಗಳೂರಿನ ಗಣೇಶ್ ಶಂಕರ್, ಆರ್. ಮಂಜುನಾಥ್ ಅವರಿಗೆ ‘ಇಂದಿರಾ ಪ್ರಿಯದರ್ಶಿನಿ ಪರಿಸರ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

28ಕ್ಕೆ ಸಾರಿಗೆ ನೌಕರರ ಪ್ರತಿಭಟನಾ ಸಮಾವೇಶ

ಬೆಂಗಳೂರು: ವೇತನ ಬಾಕಿ ಪಾವತಿ ಸೇರಿದಂತೆ ಸಾರಿಗೆ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ನ.28ರಂದು ಪ್ರತಿಭಟನಾ ಸಮಾವೇಶ ಹಮ್ಮಿಕೊಂಡಿದೆ.

ಶೇಷಾದ್ರಿಪುರದ ಶಿರೂರು ಪಾರ್ಕ್ ರಸ್ತೆಯಲ್ಲಿರುವ ಆರ್.ಗುಂಡೂರಾವ್ ಸಭಾಂಗಣದಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಯಲಿದೆ. ನಾಲ್ಕೂ ನಿಗಮಗಳ ಸಾರಿಗೆ ನೌಕರರು ಭಾಗವಹಿಸುವರು. 38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ.ಅನಂತಸುಬ್ಬರಾವ್ ತಿಳಿಸಿದ್ದಾರೆ.

ಹೊಸ ವರ್ಷಕ್ಕೆ ‘ಇಂದಿರಾ’ ಕಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ನೀಡುತ್ತಿರುವ ಐದು ಕಿಲೋ ಅಕ್ಕಿಯ ಬದಲು ಪ್ರತಿ ಪಡಿತರ ಚೀಟಿಗೆ ‘ಇಂದಿರಾ’ ಆಹಾರ ಕಿಟ್ ವಿತರಣೆ ಯೋಜನೆಯನ್ನು ಜಾರಿಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ಜನವರಿ ತಿಂಗಳಿನಿಂದ ಈ ಕಿಟ್ ಫಲಾನುಭವಿಗಳ ಕೈ ಸೇರುವ ಸಾಧ್ಯತೆಯಿದೆ.

ಈ ಆಹಾರ ಕಿಟ್‌ಗೆ ‘ಇಂದಿರಾ’ (ಐಎನ್‌ಡಿಐಆರ್‌ಎ – ಇಂಟೆಗ್ರೇಟೆಡ್ ನ್ಯೂಟ್ರಿಷಿಯನ್ ಆ್ಯಂಡ್ ಡಯೆಟರಿ ಇನಿಷಿಯೇಟಿವ್ ಫಾರ್ ರಿವೈಟಲೈಷಿಂಗ್ ಅನ್ನಭಾಗ್ಯ ಬೆನಿಫಿಷರೀಸ್– ಅನ್ನಭಾಗ್ಯ ಫಲಾನುಭವಿಗಳನ್ನು ಪುನರುಜ್ಜೀವನಗೊಳಿಸುವ ಸಮಗ್ರ ಪೋಷಣೆ ಮತ್ತು ಆಹಾರ ಉಪಕ್ರಮ) ಎಂದು ಹೆಸರಿಡಲಾಗಿದೆ.

ಪಡಿತರ ಚೀಟಿದಾರರ ಸಂಖ್ಯೆಗೆ ಅನುಗುಣವಾಗಿ ಮೂರು ವಿಭಾಗಗಳಾಗಿ ವಿಂಗಡಿಸಿ ಈ ಕಿಟ್‌ನಲ್ಲಿ ಆಹಾರ ಪದಾರ್ಥಗಳನ್ನು ವಿತರಿಸಲಾಗುವುದು. ಒಬ್ಬರು ಅಥವಾ ಇಬ್ಬರು ಸದಸ್ಯರಿದ್ದರೆ ಕಿಟ್‌ನಲ್ಲಿ 750 ಗ್ರಾಂ ತೊಗರಿ ಬೇಳೆ, ಅರ್ಧ ಲೀಟರ್ ಅಡುಗೆ ಎಣ್ಣೆ, ತಲಾ ಅರ್ಧ ಕಿಲೋ ಸಕ್ಕರೆ ಮತ್ತು ಉಪ್ಪು, ಮೂವರು ಅಥವಾ ನಾಲ್ವರು ಸದಸ್ಯರಿದ್ದರೆ ಒಂದೂವರೆ ಕಿಲೋ ಗ್ರಾಂ ತೊಗರಿ ಬೇಳೆ, ಒಂದು ಲೀಟರ್ ಅಡುಗೆ ಎಣ್ಣೆ, ತಲಾ ಒಂದು ಕಿಲೋ ಸಕ್ಕರೆ ಮತ್ತು ಉಪ್ಪು, ಐವರು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರಿದ್ದರೆ 2,250 ಗ್ರಾಂ ತೊಗರಿ ಬೇಳೆ, ಒಂದೂವರೆ ಲೀಟರ್ ಅಡುಗೆ ಎಣ್ಣೆ, ತಲಾ ಒಂದೂವರೆ ಕಿಲೋ ಸಕ್ಕರೆ ಮತ್ತು ಉಪ್ಪು ನೀಡಲಾಗುವುದು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಕಿಟ್‌ಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಆಹಾರ ಇಲಾಖೆಯ ಆಯುಕ್ತರು ಟೆಂಡರ್ ಆಹ್ವಾನಿಸಿ ಖರೀದಿಸಬೇಕು. ಈ ಪದಾರ್ಥಗಳ ಪ್ರಮಾಣ ಮತ್ತು ಗುಣಮಟ್ಟವನ್ನೂ ಆಯುಕ್ತರು ಖಚಿತಪಡಿಸಿಕೊಳ್ಳಬೇಕು. ಪ್ರತಿ ಕಿಟ್‌ಗೆ ಜಿಎಸ್‌ಟಿ, ಪ್ಯಾಕೇಜಿಂಗ್, ಸಗಟು ಸಾಗಣೆ ವೆಚ್ಚ, ಸಹಾಯಧನ, ಚಿಲ್ಲರೆ ಲಾಭಾಂಶ, ಲೋಡಿಂಗ್, ಅನ್‌ಲೋಡಿಂಗ್, ಮೂರನೇ ವ್ಯಕ್ತಿಯಿಂದ ಗುಣಮಟ್ಟ ತಪಾಸಣೆ ವೆಚ್ಚ ಸೇರಿ ಗರಿಷ್ಠ ಒಟ್ಟು ಮಿತಿ ₹ 422.88 ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ

‘ಪರಿಸರ ನಾಶ ಮಾಡುವ ಪ್ರಗತಿ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಸರ ಸಂಪತ್ತು ನಾಶ ಮಾಡುವ ಪ್ರಗತಿ ಬೇಡ. ಈ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕಿದೆ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಈ ಸುವರ್ಣ ಗುರಿಯನ್ನು ಮರು ನಿಗದಿಪಡಿಸೋಣ’ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ‘ಸಂಪನ್ಮೂಲ ಮರುಬಳಕೆ ಆರ್ಥಿಕತೆ ಮತ್ತು ಸುಸ್ಥಿರತೆ’ ಕುರಿತ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹವಾಮಾನ ಬದಲಾವಣೆ ಸಮಸ್ಯೆ, ಜೀವವೈವಿಧ್ಯ ರಕ್ಷಣೆ ಮತ್ತು ತ್ಯಾಜ್ಯ ನಿರ್ವಹಣೆಗೆ ಸಮರ್ಪಕ, ಕ್ರಾಂತಿಕಾರಿ ಪರಿಹಾರ ಮಾರ್ಗ ಕಂಡುಕೊಳ್ಳ ಬೇಕಿದೆ. ತ್ಯಾಜ್ಯವನ್ನು ಕಡಿಮೆ ಮಾಡಿ, ವಸ್ತುಗಳ ಮರುಬಳಕೆಯನ್ನು ಗರಿಷ್ಠಗೊಳಿಸಿ, ಸಂಪನ್ಮೂಲಗಳನ್ನು ದೀರ್ಘಾವಧಿ ಸಕ್ರಿಯವಾಗಿರಿಸಿಕೊಂಡರೆ ಸಂಪನ್ಮೂಲ ಸಂರಕ್ಷಣೆ ಮತ್ತು ಪರಿಸರ ಸುಧಾರಣೆ ಸಾಧ್ಯವಾಗುತ್ತದೆ ಎಂದರು.

‘ಸಂಪನ್ಮೂಲ ಮರುಬಳಕೆ ಆರ್ಥಿಕತೆ ಮತ್ತು ಸುಸ್ಥಿರತೆ’ ಕುರಿತ ವಿಚಾರ ಸಂಕಿರಣವನ್ನು ಈಶ್ವರ ಬಿ. ಖಂಡ್ರೆ, ಶಾಲಿನಿ ರಜನೀಶ್, ಪಿ.ಎಂ. ನರೇಂದ್ರ ಸ್ವಾಮಿ ಅವರು ಮಂಗಳವಾರ ಉದ್ಘಾಟಿಸಿದರು. ಶ್ರೀನಿವಾಸುಲು, ಸೆಲ್ವಕುಮಾರ್, ನ್ಯಾ. ಸುಭಾಷ್ ಅಡಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವದ ಅಂಗವಾಗಿ, ಪರಿಸರದ ಬಗ್ಗೆ ಅರಿವು ಮೂಡಿಸಲು 25 ಜಿಲ್ಲೆಗಳನ್ನು ಒಳಗೊಂಡಂತೆ 14 ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರ ಸಮಾರೋಪ ಕಾರ್ಯಕ್ರಮ ಬೆಂಗಳೂರಿನ ಅರಮನೆ ಮೈದಾನದಲ್ಲಿ ನ.19ರಂದು ನಡೆಯಲಿದೆ’ ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, ‘ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಪರಿಸರ ಸ್ನೇಹಿ ಗಣೇಶ ಮೂರ್ತಿಗಳು, ಹಸಿರು ಪಟಾಕಿ ಬಳಕೆ ಇದಕ್ಕೆ ಉತ್ತಮ ನಿದರ್ಶನ’ ಎಂದರು.

ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು, ವಾಣಿಜ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ನಿವೃತ್ತ ನ್ಯಾಯಮೂರ್ತಿ ಸುಭಾಷ್ ಅಡಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಉಪಸ್ಥಿತರಿದ್ದರು.

ಮರು ಬಳಕೆಗೆ ಒತ್ತು ಅಗತ್ಯ: ಖಂಡ್ರೆ

‘ನೈಸರ್ಗಿಕ ಸಂಪನ್ಮೂಲಗಳ ಸುದೀರ್ಘ ಬಳಕೆ ಮತ್ತು ಸಂರಕ್ಷಣೆಗಾಗಿ ಮರು ಬಳಕೆಗೆ ಒತ್ತು ನೀಡಬೇಕಿದೆ’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

‘ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು, ಪ್ರಕೃತಿಯೂ ಉಳಿಯಬೇಕು, ಪ್ರಗತಿಯೂ ಆಗಬೇಕು ಎಂಬುದು ನಮ್ಮ ಸರ್ಕಾರದ ನಿಲುವು. ಅದಕ್ಕಾಗಿ, ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ’ ಎಂದರು.

ಒಳಗೆ ವಿಚಾರ ಸಂಕಿರಣ; ಹೊರಗೆ ಚಳವಳಿ

ಕುವೆಂಪು ವಿಶ್ವವಿದ್ಯಾಲಯ: ಕುಲಪತಿ ವಿರುದ್ಧ ದಲಿತ ಸಂಘರ್ಷ ಸಮಿತಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಶಂಕರಘಟ್ಟ: 'ವಿಶ್ವಮಾನವತ್ವದ ಸಂದೇಶ ಸಾರಿದ ಕುವೆಂಪು ಅವರ ಹೆಸರಿನ ವಿಶ್ವವಿದ್ಯಾಲಯದಲ್ಲಿ ಚಾತುರ್ವರ್ಣ ವ್ಯವಸ್ಥೆಯನ್ನು ಪೋಷಿಸುವ ಭಗವದ್ಗೀತೆ ವಿಷಯ ಕುರಿತ ವಿಚಾರ ಸಂಕಿರಣದ ಔಚಿತ್ಯವೇನು?' ಎಂದು ಪ್ರಶ್ನಿಸಿ ದಲಿತ ಸಂಘರ್ಷ ಸಮಿತಿಯಿಂದ ಮಂಗಳವಾರ ಶಂಕರಘಟ್ಟದಲ್ಲಿರುವ ವಿಶ್ವವಿದ್ಯಾಲಯದ ದ್ವಾರಬಾಗಿಲಿನ ಎದುರು ಪ್ರತಿಭಟನೆ ನಡೆಸಲಾಯಿತು.

ಶಿವಮೊಗ್ಗದ ಸ್ವರ್ಣರಶ್ಮಿ ಟ್ರಸ್ಟ್ ಹಾಗೂ ಭಗವದ್ಗೀತಾ ಅಭಿಯಾನ ಸಮಿತಿ ಆಶ್ರಯದಲ್ಲಿ ಆಯೋಜಿಸಿದ್ದ 'ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ' ಕುರಿತ ವಿಚಾರ ಸಂಕಿರಣವನ್ನು ವಿರೋಧಿಸಿ ಪ್ರತಿಭಟನಾಕಾರರು ಕಪ್ಪು ಪಟ್ಟಿ ಪ್ರದರ್ಶಿಸಿ ವಿಶ್ವವಿದ್ಯಾಲಯದೊಳಗೆ ಪ್ರವೇಶಿಸಲು ಮುಂದಾದಾಗ ಪೊಲೀಸರು ಅವರನ್ನು ತಡೆದರು.

> **ವಿಚಾರ ಸಂಕಿರಣ ವಿರೋಧಿಸಿ ನಡೆದ ಹೋರಾಟವನ್ನು ಸ್ವಾಗತಿಸುತ್ತೇನೆ. ಟೀಕೆ, ಭಿನ್ನಾಭಿಪ್ರಾಯಗಳಿಗೆ ತೆರೆದುಕೊಳ್ಳೋಣ. ಯಾವುದೋ ಲೇಬಲ್ ಕಟ್ಟಿ ಹಾಳು ಮಾಡುವುದು ಬೇಡ**
> **ಪ್ರೊ.ಶರತ್ ಅನಂತಮೂರ್ತಿ**
> ಕುವೆಂಪು ವಿಶ್ವವಿದ್ಯಾಲಯದ ಕುಲಪತಿ

ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಎದುರು ಮಂಗಳವಾರ ದಲಿತ ಸಂಘರ್ಷ ಸಮಿತಿಯವರು ಪ್ರತಿಭಟಿಸಿದರು

'ವಿಶ್ವಮಾನವ ಸಂದೇಶವನ್ನು ಬೋಧಿಸಿದ ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪನೆಯಾಗಿರುವ ವಿಶ್ವವಿದ್ಯಾಲಯದಲ್ಲಿ ಇಂತಹ ವಿಚಾರ ಸಂಕಿರಣ ಆಯೋಜಿಸಿರುವುದು ಅತ್ಯಂತ ನಾಚಿಕೇಗೇಡಿನ ಸಂಗತಿ' ಎಂದು ಡಿಎಸ್ಎಸ್ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

'ಯುವಪೀಳಿಗೆ ವರ್ಣಾಶ್ರಮ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ದೂರಿದ ಅವರು, 'ಸ್ಕ್ರೀನಿಂಗ್ ಸಮಿತಿ ಮುಂದೆ ಬಾರದೇ ಈ ಕಾರ್ಯಕ್ರಮ ಹೇಗೆ ನಿಗದಿಯಾಗಿದೆ?, ಯಾವ ವಿಭಾಗದಿಂದ ಈ ಕಾರ್ಯಕ್ರಮ ನಡೆಯುತ್ತಿದೆ?' ಎಂದು ಪ್ರಶ್ನಿಸಿದರು.

'ಕಾರ್ಯಕ್ರಮದ ಅಧ್ಯಕ್ಷತೆ ವಿಶ್ವವಿದ್ಯಾಲಯದ ಕುಲಪತಿ ಶರತ್ ಅನಂತಮೂರ್ತಿ ಅವರೇ ವಹಿಸಿಕೊಂಡದ್ದನ್ನು ಗಮನಿಸಿದರೆ ಇದು ಕುವೆಂಪು ಅವರ ಆದರ್ಶಗಳಿಗೆ ಮತ್ತು ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಮಾಡುತ್ತಿರುವ ಅಪಚಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅನಂತಮೂರ್ತಿ ಅವರ ಹೆಸರನ್ನು ತೆಗೆದುಹಾಕಿ. ಅವರ ವ್ಯಕ್ತಿತ್ವಕ್ಕೂ ನಿಮಗೂ ಹೊಂದುವುದಿಲ್ಲ. ನೀವು ಶರತ್ ಎಂಬ ಹೆಸರನ್ನು ಮಾತ್ರ ಇಟ್ಟುಕೊಳ್ಳಿ. ಭಗವದ್ಗೀತೆಯ ಬಗ್ಗೆ ಒಳ್ಳೆಯ ಅಂಶಗಳು ಇದ್ದರೆ ಕುಲಪತಿಯವರೇ ಈ ಕುರಿತು ಇಲ್ಲಿಗೆ ಬಂದು ಸ್ಪಷ್ಟಪಡಿಸಲಿ' ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕುಲಪತಿ ಪ್ರೊ.ಶರತ್ ಅನಂತಮೂರ್ತಿ ಅವರು ಪೊಲೀಸರ ಭದ್ರತೆಯೊಂದಿಗೆ ಪ್ರತಿಭಟನಕಾರರನ್ನು ಭೇಟಿ ಮಾಡಿ ಚರ್ಚಿಸಿದರು. ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಶಿವಬಸಪ್ಪ, ಚಿಕ್ಕಮರಡಿ ರಮೇಶ್, ಹರಿಗೆ ರವಿ, ಜಗದೀಶ ಚಕ್ರಿ, ನಾಗರಾಜ ಸಾಗರ, ನಾಗರಾಜ ಕಾಚಗೊಂಡನಹಳ್ಳಿ, ರಾಜಶೇಖರ್, ಶಿವಣ್ಣ, ಚೇತನ್‌ಕುಮಾರ್, ಅಖಿಲಾ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮಲಗಿದಲ್ಲೇ ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಅಮನ್ ನಗರದಲ್ಲಿ ಸೋಮವಾರ ರಾತ್ರಿ ಮನೆಯೊಂದರ ಕೊಠಡಿಯಲ್ಲಿ ಮಲಗಿದ್ದ ಮೂವರು ಯುವಕರು ಹೊಗೆಯಿಂದ ಉಸಿರುಗಟ್ಟಿ ಮೃತಪಟ್ಟಿದ್ದು, ಇನ್ನೊಬ್ಬನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ಸಂಜೆ ಯುವಕರನ್ನು ಹುಡುಕುತ್ತ ಪೋಷಕರು ಬಂದಾಗ, ಘಟನೆ ನಡೆದಿರುವುದು ಗೊತ್ತಾಗಿದೆ.

'ಅಮನ್ ನಗರದ ನಿವಾಸಿಗಳಾದ ರಿಹಾನ್ ಮತ್ತೆ (22), ಮೋಹಿನ್ ನಾಲಬಂದ (23) ಮತ್ತು ಸರ್ಫರಾಜ್ ಹರಪನಹಳ್ಳಿ (22) ಮೃತರು. ಅವರೊಂದಿಗೆ ಮಲಗಿದ್ದ ಶಾಹನವಾಜ್ ಹರಪನಹಳ್ಳಿ (19) ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ತಾವು ವಾಸವಿದ್ದ ಬಡಾವಣೆಯಲ್ಲೇ ಇದ್ದ ಖಾಲಿ ಮನೆಯಲ್ಲಿ ಈ ನಾಲ್ವರು ಗೆಳೆಯರು ಭೇಟಿಯಾಗುತ್ತಿದ್ದರು. ಸೋಮವಾರವೂ ಡ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮನೆಗೆ ಮರಳಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ರಾತ್ರಿ ಚಳಿ ಹೆಚ್ಚಾಗಿದ್ದರಿಂದ ನಾಲ್ವರು ಇದ್ದಿಲಿನ ಒಲೆಯಲ್ಲಿ (ಶೀಗಡಿ) ಬೆಂಕಿ ಹಾಕಿ ಕೊಠಡಿಯಲ್ಲಿ ಇಟ್ಟುಕೊಂಡಿದ್ದರು. ಅದೇ ಒಲೆಯಲ್ಲಿ ನಾಲ್ಕು ಸೊಳ್ಳೆ ನಿರೋಧಕ ಕಾಯಿಲ್‌ಗಳನ್ನು ಹಾಕಿದ್ದು ಗೊತ್ತಾಗಿದೆ. ಅವರು ಮಲಗಿದ್ದ ಕೊಠಡಿಯಲ್ಲಿ ಕಿಟಕಿಗಳಿಲ್ಲ. ಬಾಗಿಲನ್ನು ಹಾಕಿದ್ದರು. ನಿದ್ರೆಗೆ ಜಾರಿದ ಬಳಿಕ ಕೋಣೆಯ ಒಳಗೆ ಇದ್ದಿಲಿನ ಹೊಗೆ ದಟ್ಟವಾಗಿ ಆವರಿಸಿ, ಉಸಿರಾಟಕ್ಕೆ ಸಮಸ್ಯೆ ಆಗಿದೆ. ಆಮ್ಲಜನಕದ ಕೊರತೆಯಿಂದ ಸಾವು ಸಂಭವಿಸಿರಬಹುದು' ಎಂದು ಪೊಲೀಸರು ತಿಳಿಸಿದ್ದಾರೆ. ಶಾಸಕ ಆಸಿಫ್ ಸೇಠ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಮಾಳಮಾರುತಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ನ್ಯಾಡ್ರೆಸ್' ಮುನ್ನೆಚ್ಚರಿಕೆ ನೀಡಿತ್ತೇ?

ಬೆಳಗಾವಿ ಪ್ರದೇಶದಲ್ಲಿ 'ಹೆಮರೈಜಿಕ್ ಸೆಪ್ಟೀಸಿಮಿಯಾ' ಎಂಬ ಅಪಾಯಕಾರಿ ಬ್ಯಾಕ್ಟೀರಿಯಾ ಉತ್ಪತ್ತಿ ಆಗುವ ಸಾಧ್ಯತೆ ಇದೆ ಎಂಬ ಮುನ್ನೆಚ್ಚರಿಕೆಯನ್ನು ರಾಷ್ಟ್ರೀಯ ಪ್ರಾಣಿ ರೋಗ ತಜ್ಞರ ಘಟಕ (ನ್ಯಾಡ್ರೆಸ್) ಸೆಪ್ಟೆಂಬರ್‌ನಲ್ಲಿಯೇ ನೀಡಿತ್ತು ಎಂಬ ಸಂಗತಿ ಇದೀಗ ಬಯಲಾಗಿದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್)– ರಾಷ್ಟ್ರೀಯ ಪಶು ವೈದ್ಯಕೀಯ ಸಾಂಕ್ರಾಮಿಕ ರೋಗಶಾಸ್ತ್ರ ಮತ್ತು ರೋಗ ಮಾಹಿತಿ ಸಂಸ್ಥೆ (ಎನ್‌ಐವಿಇಡಿ) ಘಟಕ ಹಾಗೂ ನ್ಯಾಡ್ರೆಸ್ ಈ ವಿಚಾರ ಬಹಿರಂಗ ಮಾಡಿದೆ.

ಹಠಾತ್ ಹವಾಮಾನ ಬದಲಾವಣೆ ಕಾರಣ ಬ್ಯಾಕ್ಟೀರಿಯಾ ಹುಟ್ಟುವ ಸಂಭವವಿದೆ ಎಂಬ 'ವೈಟ್ ಅಲರ್ಟ್' ಸಂದೇಶ ನೀಡಿತ್ತು ಎಂದು ಮೂಲಗಳು ತಿಳಿಸಿವೆ.

'ಅರಣ್ಯ ಇಲಾಖೆಗೆ ಇಂಥ ಯಾವುದೇ ಮುನ್ನೆಚ್ಚರಿಕೆ ಅಥವಾ ಮುನ್ಸೂಚನೆ ಬಂದಿಲ್ಲ' ಎಂದು ಬೆಳಗಾವಿ ಎಸಿಎಫ್ ನಾಗರಾಜ ಬಾಳೇಹೊಸೂರ ತಿಳಿಸಿದ್ದಾರೆ.

> **ಮೃಗಾಲಯ ಹಾಗೂ ಆನೆ ಶಿಬಿರಗಳಲ್ಲಿ ವನ್ಯಜೀವಿ ವೈದ್ಯರ ಕೊರತೆ ನೀಗಿಸಲು ಪ್ರತ್ಯೇಕ ವೃಂದ ಸೃಷ್ಟಿಸಿ 15 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಮೃಗಾಲಯಗಳು, ವನ್ಯಜೀವಿಧಾಮಗಳಲ್ಲಿ ಪ್ರಾಣಿಗಳು ಮೃತಪಟ್ಟರೆ ತಕ್ಷಣ 'ಆಡಿಟ್' ಮಾಡಿಸಬೇಕು**
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

ಕೃಷ್ಣಮೃಗಗಳ ಸಾವು: ಗಳಲೆ ರೋಗ ಕಾರಣ

ಬೆಳಗಾವಿ: 'ಭೂತರಾಮನಹಟ್ಟಿಯ ಕಿರು ಮೃಗಾಲಯದಲ್ಲಿ 31 ಕೃಷ್ಣಮೃಗಗಳ ಸಾವಿಗೆ ಗಳಲೆ ರೋಗ (ಇಂಡೀಡ್ ಹೆಮರೈಸಿಕ್ ಸೆಪ್ಟೀಸಿಮಿಯಾ– ಎಚ್.ಎಸ್) ಕಾರಣ ಎಂದು ಪ್ರಯೋಗಾಲಯದ ವರದಿ ಖಚಿತಪಡಿಸಿದೆ' ಎಂದು ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ ಪನ್ವಾರ್ ತಿಳಿಸಿದ್ದಾರೆ.

'ಎಚ್‌ಎಸ್ ಬ್ಯಾಕ್ಟೀರಿಯಾ ಸೋಂಕು ನಿವಾರಣೆಗೆ ಚಿಕಿತ್ಸೆ ಮುಂದುವರಿಸಲಾಗಿದೆ. ಇದು ಅತ್ಯಂತ ಅಪಾಯಕಾರಿ ಸೋಂಕು' ಎಂದು ತಿಳಿಸಿದರು.

'ಬದುಕುಳಿದಿರುವ ಏಳು ಕೃಷ್ಣಮೃಗಗಳಿಗೂ ಸೋಂಕು ತಗುಲಿರುವುದು ದೃಢಪಟ್ಟಿದೆ. ಅವು ಚಿಕಿತ್ಸೆಗೆ ಸ್ಪಂದಿಸುತ್ತಿವೆ. ಸೋಂಕು ಬೇರೆ ಪ್ರಾಣಿಗಳಿಗೆ ಹರಡದಂತೆ ಎಚ್ಚರಿಕೆ ವಹಿಸಲಾಗಿದೆ. ಮೃಗಾಲಯದ ತುಂಬ ಸ್ಯಾನಿಟೈಸೇಷನ್ ಮಾಡಿಸಲಾಗಿದೆ' ಎಂದು ವೈದ್ಯರು ತಿಳಿಸಿದರು.

'ಕಿರು ಮೃಗಾಲಯದಲ್ಲಿ 195 ದೊಡ್ಡ ಪ್ರಾಣಿಗಳು, ವಿವಿಧ ಪಕ್ಷಿಗಳಿವೆ. ಈ ಸೋಂಕು ಸಸ್ಯಾಹಾರಿ ಪ್ರಾಣಿಗಳಿಗೆ ಮಾತ್ರ ಹರಡುತ್ತದೆ' ಎಂದು ಬೆಳಗಾವಿ ಡಿಸಿಎಫ್ ಎನ್.ಇ.ಕ್ರಾಂತಿ ತಿಳಿಸಿದರು.

ದಾಬಸ್ ಪೇಟೆ ಪಟ್ಟಣದಿಂದ ಬೆಂಗಳೂರು ಮಾರ್ಗದ ಸರ್ವಿಸ್ ರಸ್ತೆಯಲ್ಲಿ ಸಂಗ್ರಹವಾಗಿರುವ ಕಸ

ದಾಬಸ್ ಪೇಟೆ ಸುತ್ತಮುತ್ತ ಕಸದ ರಾಶಿ

• ಸಿ.ಜಿ. ಮೋಹನ್ ಕುಮಾರ್

ದಾಬಸ್ ಪೇಟೆ: ಇಲ್ಲಿನ ಪ್ರಮುಖ ರಸ್ತೆಗಳ ಬೀದಿಗಳಲ್ಲಿ ಕಸದ ರಾಶಿ ಬಿದ್ದಿದ್ದು, ಪಟ್ಟಣದ ಅಂದಗೆಡಿಸಿದೆ. ಇದಕ್ಕೆ ನಾಗರಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ರಾಷ್ಟ್ರೀಯ ಹೆದ್ದಾರಿ ಪುಣೆ-ಬೆಂಗಳೂರು ಮತ್ತು ದಾಬಸ್ ಪೇಟೆ-ಹೊಸಕೋಟೆ ಹಾಗೂ ರಾಜ್ಯ ಹೆದ್ದಾರಿ ಮಧುಗಿರಿ- ರಾಮನಗರ ರಸ್ತೆಯ ಇಕ್ಕೆಲಗಳಲ್ಲಿ ಕಸ ಸಂಗ್ರಹಗೊಂಡಿದ್ದು, ವಿಲೇವಾರಿಯಾಗದೆ ಕೊಳೆತು ನಾರುತ್ತಿದೆ.

ದಾಬಸ್ ಪೇಟೆ ಪಟ್ಟಣ ಏಳು ಹಂತದ ಕೈಗಾರಿಕೆಗಳಿಂದಾಗಿ ಜನಸಂಖ್ಯೆಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಇದರ ಜೊತೆಗೆ ತ್ಯಾಜ್ಯವೂ ಹೆಚ್ಚು ಸಂಗ್ರಹವಾಗುತ್ತಿದೆ. ವಾಸದ ಮನೆಗಳು, ಅಂಗಡಿಗಳು, ಸಂತೆ ವ್ಯಾಪಾರದಿಂದ ಪ್ಲಾಸ್ಟಿಕ್ ಹಾಗೂ ಇತರೆ ಕಸ ಅಧಿಕವಾಗುತ್ತಿದ್ದು ಬೀದಿಗಳಿಗೆ ಬಂದು ಬೀಳುತ್ತಿದೆ.

ದಾಬಸ್ ಪೇಟೆ ಪಟ್ಟಣಕ್ಕೆ ಹೊಂದಿಕೊಂಡಂತೆ ಸೋಂಪುರ, ಆಗಲಕುಪ್ಪೆ ಮತ್ತು ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿಗಳು ಇವೆ. ಕೆಲವು ಕಡೆಯ ರಸ್ತೆ ಬದಿಯ ಕಸ ನಿರ್ವಹಣೆ ಬೇರೆ ಬೇರೆ ಪಂಚಾಯಿತಿಗಳ ವ್ಯಾಪ್ತಿಗೆ ಬರುತ್ತದೆ. ವಾರಗಟ್ಟಲೆ ಕಸ ತೆಗೆಯದೆ ಬಿಟ್ಟಿರುತ್ತಾರೆ ಎಂಬುದು ನಾಗರಿಕರ ದೂರು.

ಕಸ ವಿಲೇವಾರಿಗೆ ವಾಹನಗಳು, ತ್ಯಾಜ್ಯ ಸಂಸ್ಕರಣ ಘಟಕಗಳು ಇದ್ದರೂ, ಕಸವನ್ನು ರಸ್ತೆ ಬದಿಯಲ್ಲಿ ಸುರಿಯಲಾಗುತ್ತಿದೆ. ಈ ಬಗ್ಗೆ ಸ್ಥಳೀಯ ಪಂಚಾಯಿತಿ ಆಡಳಿತ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಜನರ ಆರೋಪ.

ಈಗಾಗಲೇ ಬೆಂಗಳೂರಿನಲ್ಲಿ ಕಸ ತಂದು ರಸ್ತೆಗೆ ಸುರಿಯುವವರ ಮನೆ ಮುಂದೆ, ಕಸ ಹಾಕುವಂತಹ ಯೋಜನೆ ರೂಪಿಸಲಾಗಿದೆ. ದಾಬಸ್ ಪೇಟೆ ಭಾಗದಲ್ಲೂ ಅಂತಹ ಕಾರ್ಯಾಚರಣೆ ಆಗಬೇಕು ಎನ್ನುತ್ತಾರೆ ಜನಸಾಮಾನ್ಯರು.

ಮನೆಗಳಲ್ಲಿ, ಅಂಗಡಿಗಳಲ್ಲಿ ಸಂಗ್ರಹವಾಗುವ ಕಸವನ್ನು ರಾತ್ರಿ ವೇಳೆ ವಾಹನಗಳಲ್ಲಿ ಬಂದು ಎಸೆದು ಹೋಗುತ್ತಿದ್ದಾರೆ. ಇದು ಶೇಖರಣೆಗೊಂಡು ವಾಸನೆ ಬೀರುತ್ತಾ ರೋಗಗಳಿಗೆ ಕಾರಣವಾಗಿದೆ. ಇದಕ್ಕೆಲ್ಲ ಕಡಿವಾಣ ಹಾಕಬೇಕು ಎಂಬುದು ದಾಬಸ್ ಪೇಟೆ ನಿವಾಸಿಗಳ ಆಗ್ರಹ.

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–0816–2272200, ಸಹಾಯವಾಣಿ–9449872599,
ಇ–ಮೇಲ್: ka.tumakuru.cc.@gmail.com
ವೆಬ್‌ಸೈಟ್:www.tumakurucity. mrc.gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/17/2025–26
ದಿನಾಂಕ: 13.11.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾನಗರಪಾಲಿಕೆ ನಿಧಿ ಹಾಗೂ ಅಮೃತ್–2.0 ಅನುದಾನದಲ್ಲಿ ಕ್ರಮ ಸಂಖ್ಯೆ 1 ರಿಂದ 5ರ ಕಾಮಗಾರಿಗಳಿಗೆ 15 ದಿನಗಳು ಕ್ರಮ ಸಂಖ್ಯೆ 6ರ ಕಾಮಗಾರಿಗಳಿಗೆ 7 ದಿನಗಳು ಕಾಮಗಾರಿಗಳನ್ನು ಕೈಗೊಳ್ಳಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಹೊಸದಾಗಿ ಮತ್ತು ಮರು ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಲು ಹೊಸದಾಗಿ ಮತ್ತು ಮರು ಟೆಂಡರ್ ಆಹ್ವಾನಿಸಲಾಗಿದ್ದು,

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 14–11–2025 ರಿಂದ ದಿನಾಂಕ: 28–11–2025 ರವರೆಗೆ. 2. ಪ್ರಿ–ಬಿಡ್ ಮಿಟಿಂಗ್ ದಿನಾಂಕ: 18–11–2025 ಬೆಳಗ್ಗೆ 11.30 ಗಂಟೆಗೆ. 3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:28–11–2025 ರಂದು ಸಾಯಂಕಾಲ 4.30 ಗಂಟೆವರೆಗೆ. 4. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 29–11–2025 ಸಾಯಂಕಾಲ 4.35 ಗಂಟೆಗೆ. 5. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01–12–2025ರ ಬೆಳಗ್ಗೆ 10.30 ಗಂಟೆಗೆ. ದಿನಾಂಕಗಳು ಮುಂದೂಡಿಕೆ / ಯಾವುದೇ ತಿದ್ದುಪಡಿಗಳು ಇದ್ದಲ್ಲಿ ಕೇವಲ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/337/KSMCA/2025-26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ ಬೆಳಗಾವಿ ವಿಭಾಗ, ಬೆಳಗಾವಿ. ಪ್ಲಾಟ ನಂ. ಸಿ–1, ಹೌಸಿಂಗ್ ಬೋರ್ಡ ಕಾಲನಿ, ಟೀಚರ್ ಕಾಲನಿ ಎದುರಿಗೆ, (ಓಂಕಾರ ನಗರ) ಹಿಂಡಲಗಾ, ಬೆಳಗಾವಿ. ದೂರವಾಣಿ ನಂ: (0831)2442294 ಇ–ಮೇಲ್: ksdb.bgmdiv@gmail.com
ಸಂ.ಕಕೊಅಮ/ಕಾಪಾಅ/ಬೆವಿ/ತಾಂ.ಶಾ/ಕ್ರಿ.ಯೋ/ಟೆಂ.ಪ್ರ/2025–26/708 ದಿನಾಂಕ:18–11–2025

ಕೆ.ಪಿ.ಪಿ ಪೋರ್ಟಲ್ – ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) KW – 3

ಮಾನ್ಯ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ ಇವರು ಬೆಳಗಾವಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ 2025–26ನೇ ಸಾಲಿನ ಕೊಳಚೆ ಸುಧಾರಣೆ ಕ್ರಿಯಾ ಯೋಜನೆಯಡಿ ಸವದತ್ತಿ ಪಟ್ಟಣದ ಸರ್ವೆ ನಂ. 9/ಎ/1ಎ/1/1/ಎ (ಶಾಂತೀನಗರ) & ರಾಮಪುರ ಸೈಟ್ ಹರಿಜನಕೇರಿ ಕೊಳಗೇರಿ ಪ್ರದೇಶಗಳಲ್ಲಿ ಸಿ.ಸಿ. ರಸ್ತೆ ಮತ್ತು ಆರ್.ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ ಸಲುವಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಐಟಂವಾರು ಟೆಂಡರ್‌ಗೆ ಕರೆಯಲಾಗಿತ್ತು. ಆದರೆ ತಾಂತ್ರಿಕ ಕಾರಣದಿಂದ ಸದರಿ ಟೆಂಡರನ್ನು ರದ್ದುಪಡಿಸಿ, ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಾಗಿ 2ನೇ ಕರೆ ಕರೆಯಲಾಗಿದೆ. ಟೆಂಡರನ್ನು ದಿನಾಂಕ: 18.11.2025 ರಿಂದ ಡೌನಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ: 25.11.2025 ಸಾಯಂಕಾಲ 4.00 ಗಂಟೆಯವರೆಗೆ, ಸ್ವೀಕೃತ ಟೆಂಡರ್/ತಾಂತ್ರಿಕ ಲಕೋಟೆಗಳನ್ನು ದಿನಾಂಕ: 26.11.2025 ರಂದು ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು. ಹಾಗೂ ಆರ್ಥಿಕ ಲಕೋಟೆ ತೆರೆಯುವ ದಿನಾಂಕವನ್ನು ಅರ್ಹ ಬಿಡ್‌ದಾರರಿಗೆ ನಂತರ ತಿಳಿಸಲಾಗುವುದು.

ಕಾಮಗಾರಿ ಟೆಂಡರ ಮೊತ್ತ ರೂ. 74.29 ಲಕ್ಷಗಳು ಹಾಗೂ ಇ.ಎಮ್.ಡಿ ರೂ. 74,300 ಗುತ್ತಿಗೆದಾರರ ಅರ್ಹತೆ/ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದಿನದಂದು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1344/KSMCA/2025-26

ಕರ್ನಾಟಕ ಸರ್ಕಾರ
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ)
ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052
ಸಂಖ್ಯೆ: ಜೆ ಪಿ/ಎನ್‌ಸಿಇ/ಇ–ಟೆಂಡರ್/ಎಎಮ್‌ಐ, ಎಸ್‌ಎಮ್‌ಐ & ಬೋಟ್ ಕೀಪರ್/2025–26 ದಿನಾಂಕ: 18.11.2025

ಟೆಂಡರ್ ಪ್ರಕಟಣೆ

ಎನ್ ಸಿ ಸಿ ಇಲಾಖೆಯಲ್ಲಿ ಖಾಲಿಯಿರುವ 06 X ಎ ಎಮ್ ಐ, 02 x ಎಸ್‌ಎಮ್‌ಐ, 03 x ಬೋಟ್ ಕೀಪರ್ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಕರ್ನಾಟಕ ಸರ್ಕಾರದ ಕೆಪಿಪಿಪಿ–ಪೋರ್ಟಲ್‌ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಟೆಂಡರ್ ವಿವರಗಳು **https://kppp.karnataka.gov.in** ಎಂಬ ವೆಬ್‌ಸೈಟ್‌ನಲ್ಲಿ ದಿನಾಂಕ 18/11/2025 ರಿಂದ ಲಭ್ಯವಿದ್ದು, 26/11/2025 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. **ಟೆಂಡರ್ ಸಂಖ್ಯೆ : NCC/2025-26/SE0008**

ಸಹಿ/– (ಮಲ್ಲಿನಾಥ), ಆಡಳಿತಾಧಿಕಾರಿಗಳು
ಎನ್.ಸಿ.ಸಿ ಉಪಮಹಾನಿರ್ದೇಶಕರ ಪರವಾಗಿ
ವಾ.ಸಾ.ಸಂ.ಇ/ವಾಪ್ರ/3876/ಆಕಾರ್/2025–26

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ–583105.
ಸಂಖ್ಯೆ:ವಿಶ್ರೀಕೃವಿಬ/ಕ.ವಿ/ಟೆಂಡರ್–64/ಡೆ.ಸಿ/2025–26/680 ದಿನಾಂಕ:14–11–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ತಿದ್ದುಪಡಿ–1)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣಕ್ಕೆ ಡೆಸ್ಕ್ ಟಾಪ್ ಕಂಪ್ಯೂಟರ್ ಗಳನ್ನು ಪೂರೈಸುವ ಕೆಲಸಕ್ಕೆ ಟೆಂಡರ್ ಅಧಿಸೂಚನೆಯ ಸಂಖ್ಯೆ: **VSKUB/ENGG/TENDER-64/ESKTOP/2025-26/669, DATED:30.10.2025.** ರನ್ವಯ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣದಿಂದ ಸದರಿ ಟೆಂಡರ್ ದಿನಾಂಕಗಳನ್ನು ಮುಂದೂಡಲಾಗಿರುತ್ತದೆ. ಸದರಿ ಟೆಂಡರ್‌ನ ಮುಂದೂಡಲಾದ ದಿನಾಂಕಗಳು ಈ ಕೆಳಗಿನಂತಿವೆ. 1) ಟೆಂಡರ್ ಫಾರ್ಮ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ **ದಿನಾಂಕ:24.11.2025 ರಂದು ಸಂಜೆ 5:30** ಗಂಟೆಯೊಳಗೆ ಸಲ್ಲಿಸಬೇಕು. 2) ಡೆಸ್ಕ್‌ಟಾಪ್ ಕಂಪ್ಯೂಟರ್ ಸ್ಯಾಂಪಲ್‌ಗಳನ್ನು **ದಿನಾಂಕ:26.11.2025 ರಂದು ಸಂಜೆ 5:30** ಗಂಟೆಯೊಳಗೆ ಸಲ್ಲಿಸಬೇಕು. 3) ಟೆಂಡರ್ ತೆರೆಯುವ **ದಿನಾಂಕ: 27.11.2025 ರಂದು ಸಂಜೆ 5:30** ಗಂಟೆಯೊಳಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ:29.11.2025 ಮಧ್ಯಾಹ್ನ 3:30** ಗಂಟೆಗೆ ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದು ಮತ್ತು **kppp.karnataka.gov.in.** ವೆಬ್‌ಸೈಟ್ ಮೂಲಕ ಸಹ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/664/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಪೊಲೀಸ್ ಅಧೀಕ್ಷಕರವರ ಕಾರ್ಯಾಲಯ, ವಿಜಯಪುರ
ಸಂಖ್ಯೆ:ಸಂಗ್ರಹ–2/ಇ–ಟೆಂಡರ್–1/2025–26 ದಿನಾಂಕ:12.11.2025

ಟೆಂಡರ್ ಪ್ರಕಟಣೆ

ವಿಜಯಪುರ ಜಿಲ್ಲಾ ಪೋಲಿಸ್ ಘಟಕ ವತಿಯಿಂದ ಡಿಜಿಟಲ್ ಪ್ರಿಂಟೆಡ್ ಸೈನ್ ಬೋರ್ಡ್ಸ್ ಅಳವಡಿಸುವ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ತಮ್ಮ ದರವಾರುಗಳನ್ನು ಕೆ.ಪಿ.ಪಿ.ಪಿ ವೆಬ್‌ಸೈಟ್ https://kppp.karnataka.gov.in ಮುಖಾಂತರ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಹಿತಿಗಾಗಿ ಕಚೇರಿಯ ಅವಧಿಯಲ್ಲಿ ವಿಚಾರಿಸಬಹುದು.

ಕಾಮಗಾರಿಗಳ ವಿವರ: SUPPLY AND INSTALLATION OF DIGITALLY PRINTED SIGN BOARDS TO VIJAYAPUR ಅಂದಾಜು ಮೊತ್ತ ರೂ. 26.15 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ. 1,30,770/–. ದರ್ಜೆ: ಅರ್ಹ ಬಿಡ್‌ದಾರರಿಂದ

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28.11.2025 ರಂದು ಸಾಯಂಕಾಲ 5.00 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.12.2025 ರಂದು ಸಾಯಂಕಾಲ 5.00 ಗಂಟೆಗೆ.
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.12.2025 ರಂದು ಮುಂಜಾನೆ 11.30 ಗಂಟೆಗೆ.

ಸಹಿ/– ಪೊಲೀಸ್ ಅಧೀಕ್ಷಕರು, ವಿಜಯಪುರ
ವಾಸಾಸಂಇ/ವಿಜಯಪುರ/469/ಕೆಎಸ್‌ಎಂಸಿಎ/2025–26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಅಧೀಕ್ಷಕ ಅಭಿಯಂತರರ ಕಚೇರಿ, ವಲಯ–1, ಬೆಂ.ಕೇ.ನ.ಪಾ.
18ನೇ ಮಹಡಿ, ಪಿಯು ಕಟ್ಟಡ, ಬೆಂಗಳೂರು – 560 001.
ಸಂ. ಸೂ.ಇ/ಬೆಂ.ಕೇ.ನ.ಪಾ/ಟೆಂಡರ್/01/2025–26 ದಿನಾಂಕ : 18.11.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಎರಡು ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಅಧೀಕ್ಷಕ ಅಭಿಯಂತರರು, ವಲಯ–1, ಬೆಂಗಳೂರು ಕೇಂದ್ರ ನಗರ ಪಾಲಿಕೆ ಇವರು ವಿವಿಧ ರಸ್ತೆಗಳಿಗೆ ಪಾರ್ಕಿಂಗ್ ಶುಲ್ಕವನ್ನು ಸಂಗ್ರಹಿಸಲು ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರ ಸಂಸ್ಥೆಯಿಂದ ಅಥವಾ ಕಾರ್ಮಿಕ ಇಲಾಖೆ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿಯಿಂದ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ.

ಕಾಮಗಾರಿಯ ವಿವರ : (1) ಶಾಂತಿನಗರ ವಿಭಾಗದ ಬ್ರಿಗೇಡ್ ರಸ್ತೆ (ಎಂಜಿ ರಸ್ತೆ) ಯಿಂದ ರೆಕ್ಸ್ ಥಿಯೇಟರ್‌ವರೆಗಿನ ರಸ್ತೆ, ವುಡ್ ಸ್ಟ್ರೀಟ್ ಮತ್ತು ಕ್ಯಾಸ್ಟಲ್ ಸ್ಟ್ರೀಟ್, ಮಗ್ರತ್ ರಸ್ತೆ (ಶಾಪರ್ಸ್ ಸ್ಟಾಪ್) ದಿಂದ ಹೊಸ್ಮತ್ ಆಸ್ಪತ್ರೆವರೆಗಿನ ರಸ್ತೆಗಳಿಗೆ ಪಾರ್ಕಿಂಗ್ ಶುಲ್ಕ ಸಂಗ್ರಹ,
ಅಂದಾಜು ಮೊತ್ತ : ರೂ. 1,90,53,000/–, ಇಎಂಡಿ : ರೂ. 2,85,795/–
(2) ಲ್ಯಾಂಗ್‌ಫೋರ್ಡ್ ರಸ್ತೆ (SAI) ಯಿಂದ ನಂಜಪ್ಪ ವೃತ್ತದವರೆಗಿನ ರಸ್ತೆ, ಚರ್ಚ್ ಸ್ಟ್ರೀಟ್ (ಎಂ.ಜಿ. ರಸ್ತೆ) ದಿಂದ ಸೇಂಟ್ ಮಾರ್ಕ್ಸ್ ರಸ್ತೆವರೆಗಿನ ರಸ್ತೆ, ಮ್ಯೂಸಿಯಂ ರಸ್ತೆ (ಪೋಸ್ಟ್ ಆಫೀಸ್) ದಿಂದ ಎಂ.ಜಿ ರಸ್ತೆ ಶಾಂತಿನಗರ ವಿಭಾಗದವರೆಗಿನ ರಸ್ತೆಗಳಿಗೆ ಪಾರ್ಕಿಂಗ್ ಶುಲ್ಕ ಸಂಗ್ರಹ,
ಅಂದಾಜು ಮೊತ್ತ : ರೂ. 1,80,67,500/–, ಇಎಂಡಿ : ರೂ. 2,71,012/–
(3) ಲ್ಯಾವೆಲ್ಲೆ ರಸ್ತೆ ಮತ್ತು ಕಸ್ತೂರ್ಬಾ ರಸ್ತೆ, ಕೇಂಬ್ರಿಡ್ಜ್ ರಸ್ತೆ, ಈಜಿಪುರ ಮುಖ್ಯ ರಸ್ತೆ ಶಾಂತಿನಗರ ವಿಭಾಗದ ಪಾರ್ಕಿಂಗ್ ಶುಲ್ಕ ಸಂಗ್ರಹ,
ಅಂದಾಜು ಮೊತ್ತ : ರೂ. 1,59,65,100/–, ಇಎಂಡಿ : ರೂ. 2,39,476/–
(4) ಸಿ.ವಿ. ರಾಮನ್ ನಗರ ವಿಭಾಗದ 80 ಅಡಿ ಇಂದಿರಾನಗರಕ್ಕೆ ಪಾರ್ಕಿಂಗ್ ಶುಲ್ಕ ಸಂಗ್ರಹ, **ಅಂದಾಜು ಮೊತ್ತ : ರೂ. 1,09,71,900/–, ಇಎಂಡಿ : ರೂ. 1,64,578/–**
(5) ಸಿ.ವಿ. ರಾಮನ್ ನಗರ ವಿಭಾಗದ 100 ಅಡಿ ಇಂದಿರಾನಗರಕ್ಕೆ ಪಾರ್ಕಿಂಗ್ ಶುಲ್ಕ ಸಂಗ್ರಹ, **ಅಂದಾಜು ಮೊತ್ತ : ರೂ. 1,90,53,000/–, ಇಎಂಡಿ : ರೂ. 2,85,795/–**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ **20.11.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (2) ಟೆಂಡರ್‌ಗಳನ್ನು **05.12.2025 ರಂದು 4.00 ಗಂಟೆ** ಅಥವಾ ಅದಕ್ಕಿಂತ ಮೊದಲು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು (3) ಪೂರ್ವ ಬಿಡ್ ಸಭೆಯು **26.11.2025 ರಂದು ಮಧ್ಯಾಹ್ನ 15.00 ಗಂಟೆಗೆ** ಮುಖ್ಯ ಅಭಿಯಂತರರು, ವಲಯ–1, ಬೆಂಗಳೂರು ಕೇಂದ್ರ ನಗರ ಪಾಲಿಕೆ, 18 ನೇ ಮಹಡಿ, ಪಿ.ಯು.ಕಟ್ಟಡ, ಬೆಂಗಳೂರು ಅವರ ಕಚೇರಿಯಲ್ಲಿ ನಡೆಯಲಿದೆ (4) ತಾಂತ್ರಿಕ ಬಿಡ್‌ಗಳನ್ನು **08.12.2025 ರಂದು 4.30 ಗಂಟೆಗೆ** ಬೆಂಗಳೂರಿನ ಬೆಂ.ಕೇಂ.ನ.ಪಾ. ವಲಯ–1 ರ ಅಧೀಕ್ಷಕ ಅಭಿಯಂತರರ ಕಚೇರಿಯಲ್ಲಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ತೆರೆಯಲಾಗುತ್ತದೆ.

ಸಹಿ/– ಅಧೀಕ್ಷಕ ಅಭಿಯಂತರರು, ವಲಯ–1, ಬೆಂ.ಕೇ.ನ.ಪಾ

ಪೊಲೀಸ್ ಅಧೀಕ್ಷಕರು,
ಜಿಲ್ಲಾ ಪೊಲೀಸ್ ಕಛೇರಿ, ಚಿತ್ತಾಪೂರ ರೋಡ್, ಯಾದಗಿರಿ – 585202.
ದೂರವಾಣಿ ಸಂ: 08473–253736 ಇ–ಮೇಲ್ ವಿಳಾಸ: dcydr@ksp.gov.in
ಸಂ. ಸಂಗ್ರಹ/22/ಸಿಟಿಆರ್‌ಎಸ್/2025–26 ದಿನಾಂಕ:18.11.2025.

:: ಟೆಂಡರ ಪ್ರಕಟಣೆ :

ಪೊಲೀಸ್ ಇಲಾಖೆಗೆ ಅವಶ್ಯಕತೆವಿರುವ VARIABLE MESSAGING SIGNAGE BOARDಗಳನ್ನು ಆಳವಡಿಸಲು ಅಧಿಕೃತ ಏಜೆನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ ಪ್ರಕಟಣೆ ಸಂಖ್ಯೆ: Tender No. KSP/2025-26/IND0407 2) ಟೆಂಡರ ಪ್ರಕಟಣೆ ದಿನಾಂಕ: 13.11.2025. 3) ಟೆಂಡರಗೆ ಸಂಬಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ: 21.11.2025 ಸಾಯಂಕಾಲ 5:30pm ಗಂಟೆಗೆ 4) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರಅನ್ನು E-Procurment portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 27.11.2025 ಸಾಯಂಕಾಲ 5:30pm ಗಂಟೆಗೆ 5) ತಾಂತ್ರಿಕ ಲಕೋಟೆ ತೆರೆಯುನ ದಿನಾಂಕ: 29.11.2025 TIME:11:00 AM 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: 02.12.2025 TIME:11:00 AM 7) ಟೆಂಡರನ ಅಂದಾಜು ಮೊತ್ತ ರೂ.: 62,25,000/– 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ: ರೂ.1,24,000/– 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತು ಪಡಿಸಿ: Superintendent of Police, Yadgir. Ph: 08473-253736

ವಾ.ಸಾ.ಸಂ.ಇ/ಯಾದಗಿರಿ/396/ಕೆ.ಎಸ್.ಎಂ.ಸಿ.ಎ/2025–26 **ಸಹಿ/– ಪೊಲೀಸ್ ಅಧೀಕ್ಷಕರು, ಯಾದಗಿರಿ.**

Infosys
Navigate your next
Infosys Limited
Corporate Identification Number (CIN): L85110KA1981PLC013115
Regd. Office: No. 44, Electronics City, Hosur Road, Bengaluru - 560 100. Karnataka India
Phone: +91 80 2852 0261, Fax: +91 80 2852 0362
E-mail: sharebuyback@infosys.com Website: www.infosys.com
Contact Person: A.G.S. Manikantha, Company Secretary

NOTICE TO ELIGIBLE SHAREHOLDERS - BUYBACK OF EQUITY SHARES

Infosys Limited ("**Company**") has dispatched the Letter of Offer and Tender Form dated November 18, 2025 for Buyback of up to 10,00,00,000 (Ten crore only) Equity Shares of the Company at a price of ₹ 1,800/- (Rupees One Thousand Eight Hundred only) per Equity Share for an aggregate consideration of up to ₹ 18,000 crore (Rupees Eighteen Thousand Crore only) to all the Eligible Shareholder(s) holding Equity Shares of the Company as on the Record Date i.e., Friday, November 14, 2025, through electronic means to those Eligible Shareholder(s) who have their e-mail ids registered with the Depositories/Registrar and Transfer Agent. Further, in case the Company receives a request from any Eligible Shareholder(s) for a physical copy of the Letter of Offer/Tender Form, the Company shall dispatch the same by registered post / speed post/ courier.

The schedule of Buyback activities is as follows:

Activity	Day and Date
Buyback Opening Date	Thursday, November 20, 2025
Buyback Closing Date	Wednesday, November 26, 2025
Last date and time for receipt of required documents by the Registrar to the Buyback	Wednesday, November 26, 2025 by 5:00 p.m. (IST)

For detailed activity schedule, terms and conditions for the Buyback, please refer to the Letter of Offer.

The details of Buyback Entitlement is as follows:

Category of Eligible Shareholders	Ratio of Buyback (i.e. Buyback Entitlement)*
Reserved category for Small Shareholders	2 Equity Shares for every 11 Equity Shares held on the Record Date
General category for all other Eligible Shareholders	17 Equity Shares for every 706 Equity Shares held on the Record Date

*** The above ratio of Buyback is approximate and provides indicative Buyback Entitlement. Any computation of the Buyback Entitlement using the above Buyback ratio may provide a slightly different number than the actual entitlement due to rounding-off. The actual Buyback Entitlement factor for Small Shareholders under the Reserved Category is 18.17213782892960% and for other shareholders under the General Category is 2.40804924035293%. Also, the numbers arrived at using the actual Buyback Entitlement may not conform exactly to the Buyback Entitlement printed in the Tender Form due to rounding-off of the factor.** For further information on Ratio of Buyback as per the Buyback Entitlement in each Category, please refer para 22 on page 48 of the Letter of Offer. Eligible Shareholders can also check their entitlement on the website of the Registrar to the Buyback by following the steps given below:

1) Click on https://kosmic.kfintech.com/karisma/buybackofferv2.aspx
2) Select the name of the Company – 'Infosys Limited – Buyback 2025'
3) Select holding type - "Physical" or "NSDL" or "CDSL"
4) Based on the option selected above, enter your "Folio Number" or "NSDL DPID/Client ID" or "CDSL Client ID"
5) Enter the Security code and click on Submit
6) The entitlement will be provided in the pre-filled 'FORM OF ACCEPTANCE-CUM ACKNOWLEDGEMENT'

In case you have not received the Letter of Offer and Tender Form, the same is also available on the website of the Company at https://www.infosys.com/investors/shareholder-services/buyback-2025.html, the Registrar to the Buyback at www.kfintech.com, BSE Limited at www.bseindia.com, National Stock Exchange of India Limited at www.nseindia.com, the Manager to the Buyback at www.investmentbank.kotak.com and is also expected to be available on the website of SEBI at www.sebi.gov.in.

Capitalised terms used in this advertisement and not defined herein shall have the same meaning as ascribed in the Letter of Offer.

For **Infosys Limited**
Sd/-
A.G.S. Manikantha
Company Secretary
Membership No. A21918

Bengaluru, India
November 18, 2025

Additional information pursuant to U.S. Law
The communication is provided for informational purposes only and is neither an offer to purchase nor a solicitation of an offer to sell any securities of the Company pursuant to Company's Buyback or otherwise. Any offers to purchase or solicitations of offers to sell are being made pursuant to a Tender Offer Statement on Schedule TO (including the letter of offer and other documents relating to the tender offer) filed with the U.S. Securities and Exchange Commission ("SEC") by the Company. **The Company's security holders are advised to carefully read these documents, any amendments to these documents and any other documents relating to the Buyback that are filed with the SEC in their entirety prior to making any decision with respect to the Company's Buyback because these documents contain important information, including the terms and conditions of the offer.** The Company's security holders may obtain copies of these documents and other documents filed with the SEC for free at the SEC's website at www.sec.gov or from the Company's Investor Relations department at sharebuyback@infosys.com.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಸುಭಾಷಿತ

ದಿಟವಾಗಿ ಮಾನವನಾಗುವುದು, ದಿಟವಾಗಿ ರಾಜನಾಗುವಷ್ಟೇ ಕಷ್ಟ. ಎರಡಕ್ಕೂ ಧೈರ್ಯ, ಸ್ಥೈರ್ಯ, ಶುದ್ಧ ಮನೋಧರ್ಮ, ಸಾಧನ ಬೇಕು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಡಿಪಿಡಿಪಿ: ಸರ್ಕಾರಕ್ಕೆ ಆನೆಬಲ ಸಾಂವಿಧಾನಿಕ ಹಕ್ಕುಗಳಿಗೆ ಧಕ್ಕೆ

‘ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ- 2025’ (ಡಿಪಿಡಿಪಿ) ಕುರಿತ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸುವುದರೊಂದಿಗೆ, ಆ ಕಾಯ್ದೆ ಜಾರಿಗೊಳ್ಳಲು ವೇದಿಕೆ ಸಿದ್ಧವಾಗಿದೆ. ಆದರೆ, ಕಾಯ್ದೆಗೆ ಸಂಬಂಧಿಸಿದಂತೆ ಎತ್ತಿದ್ದ ಪ್ರಶ್ನೆಗಳಿಗೆ ಈಗಲೂ ಉತ್ತರಗಳು ದೊರೆತಿಲ್ಲ. ವರ್ತಮಾನದ ಜಗತ್ತಿನಲ್ಲಿ ಖಾಸಗೀತನವು ಅತ್ಯಂತ ಮುಖ್ಯವಾಗಿದ್ದು, ಅದರ ಉಲ್ಲಂಘನೆಯು ಜೀವನದ ಎಲ್ಲ ಕ್ಷೇತ್ರಗಳ ಮೇಲೆ ಪರಿಣಾಮ ಬೀರಲಿದೆ. 2023ರಲ್ಲಿ ಸಂಸತ್ತಿನ ಅನುಮೋದನೆ ಪಡೆಯುವ ಮೊದಲಿನ ‘ಡಿಪಿಡಿಪಿ’ ಕರಡು ಮತ್ತು ನಂತರದ ಕಾಯ್ದೆಯ ಹಲವು ಆಯಾಮಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆದಿವೆ. ಖಾಸಗೀತನ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾತನಾಡುವ ಹಕ್ಕಿನ ಮೇಲೆ ಕಾಯ್ದೆ ಬೀರಬಹುದಾದ ಪರಿಣಾಮಗಳ ಬಗ್ಗೆ ಸಾಕಷ್ಟು ಪ್ರಶ್ನೆಗಳು ಹಾಗೂ ಟೀಕೆಗಳು ಎದುರಾಗಿವೆ. ಮೂಲಭೂತ ಹಕ್ಕುಗಳ ಮೇಲೆ ಕಾಯ್ದೆ ಬೀರಬಹುದಾದ ಪರಿಣಾಮದ ಬಗ್ಗೆಯೂ ಚರ್ಚೆಗಳು ನಡೆದಿವೆ.

‘ಡಿಪಿಡಿಪಿ’ ಕಾಯ್ದೆಯ ಘೋಷಿತ ಉದ್ದೇಶವು ವ್ಯಕ್ತಿಯ ಖಾಸಗಿ ದತ್ತಾಂಶವನ್ನು ರಕ್ಷಿಸುವುದಾಗಿದೆ. ಆದರೆ, ಹಿಂಪಡೆಯಲಾಗದ ಒಪ್ಪಿಗೆ, ಉಲ್ಲಂಘನೆಯ ಮಾಹಿತಿ ಮತ್ತು ದತ್ತಾಂಶ ಅಳಿಸಿಹಾಕುವ ಹಕ್ಕುಗಳು ಇತ್ಯಾದಿ ಪ್ರಮುಖ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ನಿಯಮಗಳು ತಕ್ಷಣದಿಂದೇನೂ ಜಾರಿಗೆ ಬರುವುದಿಲ್ಲ. 18 ತಿಂಗಳ ಬಳಿಕ ಜಾರಿಗೆ ಬರಲಿವೆ. ಕಾಯ್ದೆಯ ಕೆಲವು ಪ್ರಮುಖ ನಿಬಂಧನೆಗಳ ಜಾರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾಲಾವಧಿಯನ್ನೂ ಗೊತ್ತುಪಡಿಸಲಾಗಿಲ್ಲ. ಮಾಹಿತಿ ಹಕ್ಕಿನ (ಆರ್‌ಟಿಐ) ಮೇಲೆ ಈ ಕಾಯ್ದೆ ಬೀರಬಹುದಾದ ನಕಾರಾತ್ಮಕ ಪರಿಣಾಮಗಳ ಬಗ್ಗೆಯೂ ಆತಂಕ ವ್ಯಕ್ತವಾಗಿದೆ. ಈ ಕಾನೂನಿನಡಿ ವೈಯಕ್ತಿಕ ಎಂದು ಪರಿಗಣಿಸಲಾದ ಮಾಹಿತಿಯನ್ನು, ಅದು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಾದರೂ, ಬಹಿರಂಗಪಡಿಸುವ ಅಗತ್ಯವಿಲ್ಲ. ‘ಆರ್‌ಟಿಐ’ ಅನ್ವಯ ಪಡೆಯಬಹುದಾದ ಮಾಹಿತಿಯನ್ನು ನಿರಾಕರಿಸಲು ನೀಡಿರುವ ಈ ಸವಲತ್ತು, ಈಗಾಗಲೇ ದುರ್ಬಲಗೊಂಡಿರುವ ಮಾಹಿತಿ ಹಕ್ಕು ಕಾಯ್ದೆಯನ್ನು ಮತ್ತಷ್ಟು ಬಲಹೀನಗೊಳಿಸುತ್ತದೆ. ರಾಷ್ಟ್ರೀಯ ಭದ್ರತೆಯಂತಹ ವಿಷಯಗಳನ್ನು ಬಳಸಿಕೊಂಡು ವೈಯಕ್ತಿಕ ದತ್ತಾಂಶಗಳನ್ನು ನೀಡುವಂತೆ ಒತ್ತಾಯಿಸಲು ಸರ್ಕಾರಕ್ಕೆ ಅಪರಿಮಿತ ಅಧಿಕಾರವೂ ಕಾಯ್ದೆಯಿಂದ ದೊರೆಯಲಿದೆ. ಇದರಿಂದಾಗಿ, ಮಾಹಿತಿಯ ಮೇಲೆ ಹಾಗೂ ಮಾಹಿತಿಗೆ ಸಂಬಂಧಿಸಿದ ಜನರ ಮೇಲೆ ನಿಯಂತ್ರಣ ಸಾಧಿಸಲು ಸರ್ಕಾರಕ್ಕೆ ಅನುಕೂಲವಾಗಲಿದೆ ಹಾಗೂ ಸಾರ್ವಜನಿಕರನ್ನು ಕಣ್ಗಾವಲಿಗೆ ಒಳಪಡಿಸಲು ಅವಕಾಶ ಆಗಲಿದೆ.

‘ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ’ಯು ‘ಆರ್‌ಟಿಐ’ ದುರ್ಬಲಗೊಳ್ಳಲು ಹಾಗೂ ನಾಗರಿಕರ ಮೇಲೆ ಸರ್ಕಾರ ನಿಯಂತ್ರಣ ಸಾಧಿಸಲು ಅವಕಾಶ ಮಾಡಿಕೊಡಲಿದೆ.

ಪ್ರಜಾಪ್ರಭುತ್ವ ಹೊಂದಿರುವ ದೇಶಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಪತ್ರಕರ್ತರು ದತ್ತಾಂಶಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ನಿಯಮಗಳಲ್ಲಿ ಸಡಿಲಿಕೆ ಇರುತ್ತದೆ. ಈ ವಿನಾಯಿತಿ ‘ಡಿಪಿಡಿಪಿ’ ಕರಡಿನ ಮೊದಲ ಆವೃತ್ತಿಯಲ್ಲಿ ಇತ್ತು ಹಾಗೂ ನಂತರದಲ್ಲಿ ಅದನ್ನು ತೆಗೆದುಹಾಕಲಾಯಿತು. ಇದರಿಂದಾಗಿ, ಅಕ್ರಮ ಎಸಗಿದ ವ್ಯಕ್ತಿಗಳನ್ನು ಗುರ್ತಿಸುವುದು ಹಾಗೂ ಅವರ ಹೆಸರುಗಳನ್ನು ಬಹಿರಂಗಪಡಿಸುವುದು ಗೋಪ್ಯತೆಯ ಉಲ್ಲಂಘನೆ ಆಗುವುದರಿಂದ ಪತ್ರಕರ್ತರು ವಸ್ತುನಿಷ್ಠವಾಗಿ ಕಾರ್ಯನಿರ್ವಹಿಸುವುದು ಕಾನೂನುಬಾಹಿರ ಎನ್ನುವಂತಾಗುತ್ತದೆ; ಪ್ರಕರಣಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಬಗ್ಗೆ ವರದಿ ಮಾಡಲು ಅನುಮತಿ ಪಡೆಯಬೇಕಾಗುತ್ತದೆ. ಕಾನೂನನ್ನು ಉಲ್ಲಂಘಿಸುವವರಿಗೆ ₹ 250 ಕೋಟಿಯವರೆಗೆ ದಂಡ ವಿಧಿಸಬಹುದಾಗಿದೆ. ಕಾನೂನಿನ ಪ್ರಸ್ತುತ ಸ್ವರೂಪ ನಾಗರಿಕರ ಮೇಲೆ ನಿಯಂತ್ರಣ ಸಾಧಿಸಲು ಸರ್ಕಾರಕ್ಕೆ ಅಪರಿಮಿತ ಅಧಿಕಾರ ದೊರಕಿಸಿಕೊಡುವಂತಿದೆ. ಸರ್ಕಾರದ ಪ್ರಾಧಿಕಾರವೊಂದು, ಸಾರ್ವಜನಿಕರ ದತ್ತಾಂಶವನ್ನು ಬಳಸಿಕೊಂಡ ನಂತರ ಅದನ್ನು ಅಳಿಸಿಹಾಕುವ ಹೊಣೆಗಾರಿಕೆಯನ್ನು ಕಾಯ್ದೆ ಕಡ್ಡಾಯಗೊಳಿಸಿಲ್ಲ. ಇದರಿಂದ ವೈಯಕ್ತಿಕ ದತ್ತಾಂಶಗಳನ್ನು ಅನಿರ್ದಿಷ್ಟ ಅವಧಿಯವರೆಗೆ ಸರ್ಕಾರದ ಏಜೆನ್ಸಿಗಳು ಇರಿಸಿಕೊಳ್ಳಬಹುದಾಗಿದೆ; ಮಾಹಿತಿ ದುರುಪಯೋಗದ ಸಾಧ್ಯತೆಯನ್ನು ಮುಕ್ತಗೊಳಿಸಿದಂತಾಗಿದೆ. ನಾಗರಿಕರ ವೈಯಕ್ತಿಕ ದತ್ತಾಂಶದ ರಕ್ಷಣೆಯ ಹೊಣೆಯಿಂದ ತಪ್ಪಿಸಿಕೊಳ್ಳಲು ಸರ್ಕಾರಕ್ಕೆ ಅವಕಾಶ ಕಲ್ಪಿಸುವುದು, ಬೇಲಿಯೇ ಹೊಲ ಮೇಯುವ ಮಾತಿಗೆ ಅನುಗುಣವಾಗಿದೆ ಹಾಗೂ ಮಾಹಿತಿ ರಕ್ಷಣೆಯ ಮೂಲಕ ನಾಗರಿಕರನ್ನು ಸಬಲರನ್ನಾಗಿಸುವ ತತ್ತ್ವಕ್ಕೆ ವಿರುದ್ಧವಾಗಿದೆ.

ಚಾಟಿ

ಗಡೀಪಾರಿನ ಮರುಕಳಿಕೆ

ಬುದ್ಧ ಎಂದೋ ಗಡೀಪಾರಾದ. ಇದೀಗ ಗಾಂಧಿಯ ಸರದಿ. ಅಂದು ಬುದ್ಧನನ್ನು ಯಾರು ವಿರೂಪಗೊಳಿಸಿದರೋ ಇಂದು ಅವರೇ ಗಾಂಧಿಯನ್ನು ಕೆಡವುತ್ತಿರುವರು.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಕೇಂದ್ರ ಸರ್ಕಾರ ತನ್ನ ಬಜೆಟ್ ಭಾಷಣದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಸಹಾಯಧನ ನೀಡುವುದಾಗಿ ಘೋಷಿಸಿತ್ತು. ಇದುವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರ, ಅನುದಾನ ಬಿಡುಗಡೆ ಮಾಡುವಂತೆ ರಾಜ್ಯದ ಹಿತಕ್ಕಾಗಿ ಬಿಜೆಪಿ ಸಂಸದರು ಧ್ವನಿ ಎತ್ತಿ ಬದ್ಧತೆ ಪ್ರದರ್ಶಿಸಲಿ.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 19-11-2000

● **ಜನತಾದಳ ಬಣಗಳ ವಿಲೀನಕ್ಕೆ ಮತ್ತೆ ಚಾಲನೆ**

ಬೆಂಗಳೂರು, ನ. 18- ಕೃಷಿ ಉತ್ಪನ್ನಗಳ ಬೆಲೆ ಕುಸಿತದಂಥ ವಿಷಯಗಳಲ್ಲಿ ರಾಜಕೀಯ ಕಾರಣದಿಂದ ದೂರ ಉಳಿಯುವುದು ರೈತರು, ಸಾಮಾನ್ಯ ಜನರ ಹಿತದೃಷ್ಟಿಯಿಂದ ಸರಿಯಲ್ಲ ಎಂದು ಜನತಾದಳ ಉಭಯ ಬಣಗಳು ಮತ್ತು ಈಗ ಪಕ್ಷೇತರರಾಗಿ ಕುಳಿತಿರುವ ಜನತಾದಳದ ಮಾಜಿ ಸದಸ್ಯರು, ಅಭಿಪ್ರಾಯಪಡುವ ಮೂಲಕ ಈ ಬಣಗಳ ವಿಲೀನಕ್ಕೆ ಮತ್ತಷ್ಟು ಚಾಲನೆ ಸಿಕ್ಕಂತಾಗಿದೆ.

ಕೇಂದ್ರದ ಮಾಜಿ ಸಚಿವ ಮತ್ತು ಜನತಾದಳ (ಎಸ್) ಧುರೀಣ ಎಸ್.ಆರ್. ಬೊಮ್ಮಾಯಿ ಅವರ ಮನೆಯಲ್ಲಿ ಶುಕ್ರವಾರ ರಾತ್ರಿ ಸುಮಾರು ಮೂರು ಗಂಟೆಗೂ ಹೆಚ್ಚುಕಾಲ ಈ ಎಲ್ಲ ಧುರೀಣರು ಒಂದೇ ಕಡೆ ಸೇರಿ ಚರ್ಚೆ ಮಾಡಿರುವುದರಿಂದ ಈ ಇಂಗಿತ ವ್ಯಕ್ತವಾಗಿದೆ.

● **ಮರಕ್ಕೆ ಬಸ್ ಡಿಕ್ಕಿ: 8 ಸಾವು**

ಶಿವಮೊಗ್ಗ, ನ. 18- ಖಾಸಗಿ ಬಸ್ಸೊಂದು ರಸ್ತೆಬದಿಯ ಮರಕ್ಕೆ ಡಿಕ್ಕಿ ಹೊಡೆದಿದ್ದರಿಂದ ಓರ್ವ ಮಹಿಳೆ ಸೇರಿದಂತೆ 8 ಜನರು ಸ್ಥಳದಲ್ಲೇ ಸತ್ತು, 30 ಜನರು ಗಾಯಗೊಂಡ ಘಟನೆ ಶಿವಮೊಗ್ಗ-ಸಾಗರ ರಸ್ತೆಯ ಆನಂದಪುರ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಶಿವಮೊಗ್ಗದಿಂದ ಆನಂದಪುರಂ ಮಾರ್ಗವಾಗಿ ಸವಳಂಗಕ್ಕೆ ಹೋಗುತ್ತಿದ್ದ ‘ಆಂಜನೇಯ’ ಬಸ್ಸು, ಇನ್ನೊಂದು ಬಸ್ಸನ್ನು ಹಿಂದಕ್ಕೆ ಹಾಕುವ ಪ್ರಯತ್ನದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಅಪ್ಪಳಿಸಿತು.

75 ವರ್ಷಗಳ ಹಿಂದೆ

ಭಾನುವಾರ, 19-11-1950

● **ಪ್ರಸಕ್ತ ವರ್ಷ 30 ಲಕ್ಷ ಟನ್ ವಿದೇಶಿ ಆಹಾರ ಆಮದಾಗಬಹುದು**

ನವದೆಹಲಿ, ನ. 18- ಭಾರತ ಸುಮಾರು 30 ಲಕ್ಷ ಟನ್ ಆಹಾರ ಧಾನ್ಯಗಳನ್ನು ಈ ವರ್ಷ ಆಮದು ಮಾಡಿಕೊಳ್ಳಬಹುದು ಎಂಬುದಾಗಿ ಆಹಾರ ಸಚಿವ ಕೆ.ಎಂ. ಮುನ್ಷಿಯವರು, ಇಂದು ಪಾರ್ಲಿಮೆಂಟಿನಲ್ಲಿ ಪ್ರಕಟಿಸಿದರು.

ಇಂದಿನಂತಹ ಸ್ಥಿತಿ ಇರುವವರೆಗೂ ತನ್ನ ಹಣಕಾಸಿನ ಸ್ಥಿತಿ ಅವಕಾಶ ನೀಡುವಷ್ಟು ವಿದೇಶಿ ಧಾನ್ಯವನ್ನು ಆಮದು ಮಾಡಿಕೊಳ್ಳಲು ಭಾರತ ಸರ್ಕಾರ ಹಿಂದೆಮುಂದೆ ನೋಡದೆಂದರು.

ನರಿ-ತೋಳಗಳ ಹಾವಳಿ: ಉತ್ತರ ಪ್ರದೇಶದಲ್ಲಿ ನರಿ ಮತ್ತು ತೋಳಗಳು ಹಾವಳಿ ಮಾಡುತ್ತಿರುವ ವಿಷಯ ಕುರಿತು ಪ್ರಶ್ನೋತ್ತರಗಳು ನಡೆದಾಗ ಪಾರ್ಲಿಮೆಂಟಿನಲ್ಲಿ ನಗೆಯ ಕೋಲಾಹಲವೆದ್ದಿತು.

ಎಐ ಆರ್ಥಿಕತೆ ಎತ್ತ ಸಾಗಿದೆ?

ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಕೃತಕ ಬುದ್ಧಿಮತ್ತೆ ಇಡೀ ಜಗತ್ತಿನ ಆರ್ಥಿಕತೆಯನ್ನು ನಿರ್ದೇಶಿಸುವಂತೆ ಬೆಳೆಯುತ್ತಿದೆ. ಅಮೆರಿಕದ ಆರ್ಥಿಕತೆ ‘ಎಐ’ ಕೇಂದ್ರಿತವಾಗಿದೆ. ದೊಡ್ಡ ಪ್ರಮಾಣದ ಬಂಡವಾಳ ಎಐ ಕ್ಷೇತ್ರದಲ್ಲಿ ಹೂಡಿಕೆಯಾಗುತ್ತಿದೆ. ಆದರೆ, ಹೂಡಿಕೆಗೆ ತಕ್ಕ ಪ್ರತಿಫಲ ಸದ್ಯಕ್ಕಂತೂ ದೊರೆಯುತ್ತಿಲ್ಲ. ಒಂದುವೇಳೆ, ಎಐ ಕ್ಷೇತ್ರವೇನಾದರೂ ಕುಸಿದರೆ?

ಕೃತಕ ಬುದ್ಧಿಮತ್ತೆ (ಎಐ) ದೊಡ್ಡ ಬಿಕ್ಕಟ್ಟಿನಲ್ಲಿದೆ ಅನ್ನುವುದು ಈಗ ದೊಡ್ಡ ಸುದ್ದಿ. ಇಂದು ಜಾಗತಿಕ ಆರ್ಥಿಕತೆ ಕೃತಕ ಬುದ್ಧಿಮತ್ತೆಯ ಸುತ್ತ ಬೆಳೆಯುತ್ತಿದೆ. ಅಮೆರಿಕದ ಆರ್ಥಿಕತೆ ಸಂಪೂರ್ಣವಾಗಿ ‘ಎಐ’ಯನ್ನೇ ನೆಚ್ಚಿಕೊಂಡಿದೆ. ಅದರ ಜಿಡಿಪಿಯ ಶೇ 40ರಷ್ಟನ್ನು ಎಐ ತುಂಬಿಕೊಟ್ಟಿದೆ. ಅಮೆರಿಕದ ಸ್ಟಾಕುಗಳಿಗೆ, ಅದರಲ್ಲೂ ಟೆಕ್ ದೈತ್ಯ ಕಂಪನಿಗಳ ಸ್ಟಾಕುಗಳಿಗೆ ವಿಪರೀತ ಬೇಡಿಕೆಯಿದೆ. ಆದರೆ, ಕೈಗಾರಿಕೆ, ಆರೋಗ್ಯ, ಬ್ಯಾಂಕ್ ಇತ್ಯಾದಿ ಕ್ಷೇತ್ರಗಳಲ್ಲಿ ಅಮೆರಿಕ ಬೇರೆ ದೇಶಗಳಿಗಿಂತ ಹಿಂದಿದೆ. ತಾನು ಎದುರಿಸುತ್ತಿರುವ ನಿರುದ್ಯೋಗ, ಹಣದುಬ್ಬರ, ಸಾಲ, ಆರ್ಥಿಕ ಹಿಂಜರಿತ ಎಲ್ಲಾ ಸಮಸ್ಯೆಗಳಿಗೂ ಎಐಯನ್ನೇ ಪರಿಹಾರವಾಗಿ ನೋಡುತ್ತಿದೆ. ವಲಸೆಗೆ ಕಡಿವಾಣ ಹಾಕಿದ್ದರಿಂದ ಕಾರ್ಮಿಕರ ಕೊರತೆ ಇದೆ. ಎಐ ಬಳಕೆಯಿಂದ ಕಾರ್ಮಿಕರ ಉತ್ಪಾದಕತೆ ಹೆಚ್ಚುತ್ತದೆ. ಅದರಿಂದ ಕಾರ್ಮಿಕರ ಕೊರತೆಯ ಸಮಸ್ಯೆ ನೀಗುತ್ತದೆ ಎಂದು ಅದು ಭಾವಿಸಿದೆ

ಅಮೆರಿಕದ ಸಾಲ 38 ಲಕ್ಷ ಕೋಟಿ ಡಾಲರ್ ದಾಟಿದೆ. ವಿತ್ತೀಯ ಕೊರತೆಯೂ ಹೆಚ್ಚುತ್ತಿದೆ. ಎಐ ತರಲಿರುವ ಆರ್ಥಿಕ ಪ್ರಗತಿ ಇದಕ್ಕೆ ಪರಿಹಾರವಾಗಬಹುದು ಎನ್ನುವ ನಿರೀಕ್ಷೆಯಲ್ಲಿದೆ ಅಮೆರಿಕ. ಸರ್ಕಾರ ಸಹಜವಾಗಿಯೇ ಎಐ ಕ್ಷೇತ್ರವನ್ನು ಬೆಂಬಲಿಸುತ್ತಿದೆ. ಹೂಡಿಕೆ ಈ ಕ್ಷೇತ್ರಕ್ಕೆ ವಿಶೇಷವಾಗಿ ಹರಿದುಬರುತ್ತಿದೆ. 2016ಕ್ಕೆ ಹೋಲಿಸಿದರೆ ಎಐ ಮೇಲಿನ ಹೂಡಿಕೆ ಈಗ ಅಮೆರಿಕದಲ್ಲಿ ಸುಮಾರು ಹತ್ತು ಪಟ್ಟು ಹೆಚ್ಚಿದೆ. ಕಂಪನಿಗಳಿಗೆ ಎಐಯನ್ನು ತಮ್ಮ ಉತ್ಪಾದನಾ ಪ್ರಕ್ರಿಯೆಯ ಭಾಗವನ್ನಾಗಿ ಮಾಡಿಕೊಳ್ಳಬೇಕಾದ ಒತ್ತಡ ಹೆಚ್ಚುತ್ತಿದೆ. ‘ಎಲ್ಲರೂ ಎಐನಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ನೀವು ಮಾಡದೆ ಹೋದರೆ ಹಿಂದೆ ಬೀಳುತ್ತೀರಿ’ ಎಂಬ ಒತ್ತಡ ಕಂಪನಿಗಳ ಮೇಲಿದೆ. ಕಂಪನಿಗಳು ಬಿಲಿಯನ್‌ಗಟ್ಟಲೆ ಬಂಡವಾಳ ತೊಡಗಿಸುತ್ತಿವೆ. ಸಮಸ್ಯೆಯೆಂದರೆ ಲಾಭ ಬರುತ್ತಿಲ್ಲ. ಲಾಭ ಹೇಗೆ ಮಾಡಿಕೊಳ್ಳುವುದು ಅನ್ನುವುದೂ ಸ್ಪಷ್ಟವಿಲ್ಲ. ಇಡೀ ವ್ಯವಹಾರದಲ್ಲಿ ಒಂದು ಅನಿಶ್ಚಿತ ಪರಿಸ್ಥಿತಿ ಇದೆ. ‘ಓಪನ್‌ಎಐ’ ಕಂಪನಿ 2025ರ ಪ್ರಾರಂಭದಲ್ಲಿ 3.7 ಶತಕೋಟಿ ಡಾಲರ್ ಗಳಿಸಿತ್ತು. ಆದರೆ, ಖರ್ಚು 7ರಿಂದ 9 ಶತಕೋಟಿಯಷ್ಟಿತ್ತು. 2029ರವರೆಗೆ ಇದೇ ಪರಿಸ್ಥಿತಿ ಮುಂದುವರಿಯುತ್ತದೆ ಎಂದು ಓಪನ್‌ಎಐನ ಸಿಇಒ ಸ್ಯಾಮ್ ಆಲ್ಟ್‌ಮನ್ ಒಪ್ಪಿಕೊಂಡಿದ್ದಾರೆ. ಬಹುತೇಕ ಎಐ ಕಂಪನಿಗಳ ಖರ್ಚು ಆದಾಯಕ್ಕಿಂತ ಹೆಚ್ಚಿದೆ. ಅವುಗಳಿಗೆ ನಿಜವಾಗಿ ಲಾಭ ಬರುವುದಕ್ಕೆ ಇನ್ನು ಹತ್ತು ವರ್ಷಗಳಾದರೂ ಬೇಕಾಗಬಹುದಂತೆ.

ಇಂದು ಕೃತಕ ಬುದ್ಧಿಮತ್ತೆಯ ಉದ್ಯಮ ಹೆಚ್ಚು ಹೆಚ್ಚು ಕೇಂದ್ರೀಕೃತವಾಗುತ್ತಿದೆ. ಇಡೀ ಎಐ ಕ್ಷೇತ್ರವನ್ನು ಏಳು ಬೃಹತ್ ಕಂಪನಿಗಳಾದ ಅಲ್ಫಬೆಟ್, ಅಮೆಜಾನ್, ಆಪಲ್, ಮೆಟಾ, ಮೈಕ್ರೊಸಾಫ್ಟ್, ಎನ್‌ವಿಡಿಯಾ ಮತ್ತು ಟೆಸ್ಲಾ ನಿಯಂತ್ರಿಸುತ್ತಿವೆ. ಎಐ ಕಂಪನಿಗಳ ಸ್ಟಾಕುಗಳ ಬೆಲೆ ವಿಪರೀತ ಏರುತ್ತಿರುವುದರಿಂದ, ಅವುಗಳ ಮೌಲ್ಯವೂ ಹೆಚ್ಚುತ್ತಿದೆ. ಪ್ರತಿಯೊಂದು ಕಂಪನಿಯ ಮೌಲ್ಯ ಒಂದು ಲಕ್ಷ ಕೋಟಿ ದಾಟಿದೆ. ಚಿಪ್ ಉತ್ಪಾದಿಸುವ ಎನ್‌ವಿಡಿಯಾ 5 ಲಕ್ಷ ಕೋಟಿ ಡಾಲರ್ ಮೌಲ್ಯದ ಕಂಪನಿಯಾಗಿದೆ. ಭಾರತ, ಕೆನಡಾ ಹಾಗೂ ಜಪಾನ್ ದೇಶಗಳ ಜಿಡಿಪಿಗಿಂತ ಅದರ ಸಂಪತ್ತು ಹೆಚ್ಚಿದೆ. ಕೃತಕ ಬುದ್ಧಿಮತ್ತೆ ಇಂದು ಆಕರ್ಷಕ ತಂತ್ರಜ್ಞಾನವಾಗಿದೆ. ಎಐ ಬಳಸುವ ಕಂಪನಿಗಳಿಗೆ ಹೂಡಿಕೆಯ ಕೊರತೆಯಿಲ್ಲ. 2025ರಲ್ಲಿ ಜಾಗತಿಕ ವೆಂಚರ್ ಕ್ಯಾಪಿಟಲ್‌ನ ಶೇ 50ರಷ್ಟು ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಉತ್ಪನ್ನ, ಸೇವೆ, ಅಥವಾ ತಂತ್ರಜ್ಞಾನವನ್ನು ನಿರ್ಮಿಸಲಿರುವ ಹೊಸ ಕಂಪನಿಗಳಿಗೆ ಹೋಗಿದೆ. ಅದೇ ಕಾರಣಕ್ಕೆ ಬಹುತೇಕ ಕಂಪನಿಗಳು ಎಐ ಬಳಸುತ್ತಿವೆ. ಆದರೆ, ಎಂಐಟಿಯ ಅಧ್ಯಯನದ ಪ್ರಕಾರ, ಎಐ ಬಳಸಿಕೊಂಡ ಯೋಜನೆಗಳಲ್ಲಿ ಬರೀ ಶೇ 5ರಷ್ಟು ಯೋಜನೆಗಳು ಮಾತ್ರ ಲಾಭದಲ್ಲಿವೆ.

ಟೆಕ್ ಕಂಪನಿಗಳ ಹೂಡಿಕೆಯ ಕ್ರಮವೇ ಅನುಮಾನವನ್ನು ಮೂಡಿಸಿದೆ. ಅವು ತಮ್ಮ ತಮ್ಮಲ್ಲೇ ಹೂಡಿಕೆ ಮಾಡಿಕೊಳ್ಳುತ್ತಿವೆ. ಎನ್‌ವಿಡಿಯಾ ಕಂಪನಿಯು, ಓಪನ್‌ಎಐ ಕಂಪನಿಯಲ್ಲಿ 100 ಶತಕೋಟಿ ಡಾಲರ್ ಹೂಡಿಕೆ ಮಾಡುತ್ತಿದೆ. ಓಪನ್‌ಎಐ ಎನ್‌ವಿಡಿಯಾದಿಂದ ಚಿಪ್ ಖರೀದಿಸುತ್ತದೆ. ಸ್ವತಃ ನಷ್ಟದಲ್ಲಿರುವ ಓಪನ್‌ಎಐ 300 ಶತಕೋಟಿ ಡಾಲರ್‌ಗಳನ್ನು ಒರಾಕಲ್ ಕಂಪನಿಯಲ್ಲಿ ಹೂಡಿದೆ. ಓಪನ್‌ಎಐ ಕಂಪನಿಗೆ ತನ್ನ ಮಾಡೆಲ್‌ಗಳಿಗೆ ತರಬೇತಿ ನೀಡಲು, ಮಾಹಿತಿಗಳನ್ನು ಸಂಗ್ರಹಿಸಿಡಲು ಒರಾಕಲ್ ಕಂಪನಿಯ ಡೇಟಾ ಸೆಂಟರ್ ನೆರವು ಬೇಕು. ಒರಾಕಲ್ ಚಿಪ್‌ಗಳನ್ನು ಎನ್‌ವಿಡಿಯಾದಿಂದ ಕೊಳ್ಳುತ್ತದೆ. ಹೀಗೆ ಈ ಕಂಪನಿಗಳು ಒಂದು ಇನ್ನೊಂದರ ಗ್ರಾಹಕರಾಗುತ್ತಾ, ಹೂಡಿಕೆದಾರರಾಗುತ್ತಾ ಮ್ಯೂಸಿಕಲ್ ಚೇರ್ ಆಡುತ್ತಿವೆ. ಈ ಪ್ರಕ್ರಿಯೆಯಲ್ಲಿ ಸ್ಟಾಕ್ ಬೆಲೆ ಏರುತ್ತಾ ಹೋಗುತ್ತದೆ. ಜನ ಲಾಭದ ಆಸೆಯಿಂದ ಸ್ಟಾಕುಗಳನ್ನು ಮುಗಿಬಿದ್ದು ಕೊಳ್ಳುತ್ತಿದ್ದಾರೆ. ಈಗ ಪಿಂಚಣಿ ನಿಧಿಯೂ ಎಐನಲ್ಲಿ ಹೂಡಿಕೆಯಾಗುತ್ತಿದೆ.

ಫೇಸ್‌ಬುಕ್ ಇತ್ಯಾದಿಗಳಲ್ಲಿ ನಾವು ತುಂಬುವ ಫೋಟೊಗಳು, ಮಾಹಿತಿಗಳು, ಸರ್ಕಾರದ ಮಾಹಿತಿಗಳು, ಇವೆಲ್ಲಾ ಡೇಟಾ ಸೆಂಟರ್‌ಗಳಲ್ಲಿ ಶೇಖರವಾಗಿರುತ್ತವೆ. ಕೃತಕ ಬುದ್ಧಿಮತ್ತೆಯ ಮಾಡೆಲ್‌ಗಳನ್ನು ಸಿದ್ಧಪಡಿಸುವುದಕ್ಕೂ ಡೇಟಾ ಸೆಂಟರ್ ಅವಶ್ಯಕ. ಇವೆಲ್ಲಾ ಅಪಾರ ಗಣಕಶಕ್ತಿಯನ್ನು ಬೇಡುತ್ತವೆ. ಸ್ಪರ್ಧೆಯಲ್ಲಿ ಮುಂದಿರಬೇಕಾದರೆ ನಿರಂತರವಾಗಿ ಬೆಳೆಯುತ್ತಾ, ಉತ್ತಮಗೊಳ್ಳುತ್ತಾ ಹೋಗಬೇಕು. ಹೆಚ್ಚೆಚ್ಚು ಪ್ರಬಲವಾದ ಡೇಟಾ ಸೆಂಟರ್‌ಗಳು ಬೇಕಾಗುತ್ತವೆ. ಹಾಗಾಗಿ ಇಂದು ಅವುಗಳ ಮೇಲೆ ಅಪಾರ ಹೂಡಿಕೆಯಾಗುತ್ತಿದೆ. ಕಳೆದ ವರ್ಷ ಅಮೆರಿಕದ ಜಿಡಿಪಿಯ ಸುಮಾರು ಶೇ 1.2ರಷ್ಟು ಇದಕ್ಕೆ ಖರ್ಚಾಗಿದೆಯಂತೆ. ಅವಕ್ಕೆ ವಿಪರೀತ ವಿದ್ಯುತ್ ಬೇಕು. ಅಮೆರಿಕ ಉತ್ಪಾದಿಸುವ ವಿದ್ಯುತ್ತಿನ ಶೇ 12ರಷ್ಟನ್ನು ಈ ಡೇಟಾ ಸೆಂಟರ್‌ಗಳು ಬಳಸುತ್ತವಂತೆ. ಈ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಶಾಖವನ್ನು ತಂಪು ಮಾಡುವುದಕ್ಕೆ ವಿಪರೀತ ನೀರು ಬೇಕಾಗುತ್ತದೆ. ಇವರಿಗೆ ವಿದ್ಯುತ್ ಹಾಗೂ ನೀರು ರಿಯಾಯಿತಿ ದರದಲ್ಲಿ ಪೂರೈಕೆಯಾಗುತ್ತದೆ. ಕೆಲವು ಕಡೆ ತೆರಿಗೆ ರಿಯಾಯಿತಿಯನ್ನೂ ಗಿಟ್ಟಿಸಿಕೊಳ್ಳುತ್ತಾರೆ.

ಬ್ಯಾಂಕೇತರ ಖಾಸಗಿ ಸಂಸ್ಥೆಗಳು ಡೇಟಾ ಸೆಂಟರ್ ಇತ್ಯಾದಿ ಮೂಲಸೌಕರ್ಯದ ನಿರ್ಮಾಣಕ್ಕೆ ಸಾಲವನ್ನು ಹೆಚ್ಚಾಗಿ ನೀಡುತ್ತಿರುವುದು ಆತಂಕವನ್ನು ಹೆಚ್ಚಿಸಿದೆ. ಅವು ಬ್ಯಾಂಕ್‌ಗಳು ಸೇರಿದಂತೆ ಹಲವು ಕಡೆಗಳಿಂದ ಹಣವನ್ನು ಕ್ರೋಡೀಕರಿಸಿ, ಖಾಸಗಿ ಮಾರುಕಟ್ಟೆಯಲ್ಲಿ ಸಾಲ ಕೊಡುತ್ತಿವೆ. ಅವು ಬ್ಯಾಂಕಿನಿಂದ ಪಡೆದುಕೊಳ್ಳುತ್ತಿರುವ ಸಾಲದ ಪ್ರಮಾಣ ಕ್ರಮೇಣ ಹೆಚ್ಚುತ್ತಿದೆ. ಅಕಸ್ಮಾತ್ ಕೃತಕ ಬುದ್ಧಿಮತ್ತೆಯ ಆರ್ಥಿಕತೆ ಕುಸಿದರೆ, ಬ್ಯಾಂಕ್‌ಗಳಿಗೂ ಹೊಡೆತ ಬೀಳುತ್ತದೆ.

ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಗಿಂದಾಗ್ಗೆ ಇಂತಹ ಗುಳ್ಳೆಗಳು ಕಾಣಿಸಿಕೊಳ್ಳುತ್ತಿರುತ್ತವೆ. ಜಗತ್ತನ್ನೇ ಬದಲಿಸಿಬಿಡುತ್ತದೆ ಅನ್ನುವ ತಂತ್ರಜ್ಞಾನ ಸೃಷ್ಟಿಯಾದಾಗ ಅಪಾರವಾದ ಬಂಡವಾಳ ಹೂಡಿಕೆಯಾಗುತ್ತದೆ. ರೈಲ್ವೆ, ಇಂಟರ್‌ನೆಟ್ ಇತ್ಯಾದಿಗಳು ಬಂದಾಗ ಹೀಗೆ ಆಗಿತ್ತು. ಸ್ಟಾಕ್ ಬೆಲೆಗಳು ಏರಿದವು. ಆದರೆ, ಆಗಲೂ ಆದಾಯ ಇರಲಿಲ್ಲ. ಡಾಟ್‌ಕಾಂ ಗುಳ್ಳೆ ಒಡೆಯಿತು. ಸ್ಟಾಕ್ ಬೆಲೆ ಶೇ 50ರಿಂದ 90ರವರೆಗೆ ಕುಸಿದಿತ್ತು. ಈ ಎಲ್ಲಾ ಪ್ರಕರಣಗಳಲ್ಲಿ ಮೂಲಸೌಕರ್ಯ ನಿರ್ಮಿಸಿದ ಕಂಪನಿಗಳು ಅಪಾರ ನಷ್ಟ ಅನುಭವಿಸಿದವು. ಆದರೆ, ಬಿಕ್ಕಟ್ಟು ಮರೆಯಾದ ಮೇಲೆ ರೈಲ್ವೆ ಹಳಿಗಳು, ಫೈಬರ್ ಆಪ್ಟಿಕ್ ಕೇಬಲ್ಸ್ ಇವೆಲ್ಲಾ ನಂತರದ ದಿನಗಳಲ್ಲಿ ಬಳಕೆಗೆ ಬಂದವು. ಕೃತಕ ಬುದ್ಧಿಮತ್ತೆಯ ವಿಷಯದಲ್ಲಿ ಇದು ಸಾಧ್ಯವಾಗದೆ ಇರಬಹುದು. ಈಗ ಬಳಸುತ್ತಿರುವ ಚಿಪ್‌ಗಳು ಕೆಲವೇ ತಿಂಗಳಿನಲ್ಲಿ ಹಳತಾಗಿಬಿಡುತ್ತವೆ. ಉಪಯೋಗಕ್ಕೆ ಬಾರದೆ ಹೋಗಬಹುದು.

ಕೃತಕ ಬುದ್ಧಿಮತ್ತೆಯಿಂದ ಉದ್ಯೋಗದ ಮೇಲೆ ಪರಿಣಾಮವಾಗುತ್ತದೆ ಅನ್ನುವ ಆತಂಕವಿದೆ. ಅಮೆರಿಕದಲ್ಲಿ ಈ ವರ್ಷ ಸುಮಾರು 10 ಲಕ್ಷ ಜನ ಕೆಲಸ ಕಳೆದುಕೊಂಡಿದ್ದಾರೆ. ಹೊಸ ನೇಮಕಾತಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆರ್ಥಿಕತೆಯ ಬೆಳವಣಿಗೆ ನಿಧಾನವಾಗಿರುವುದರಿಂದ ಒಟ್ಟಾರೆ ಬೇಡಿಕೆ ಕಡಿಮೆಯಾಗಿದೆ. ಉತ್ಪಾದನೆಯ ಖರ್ಚನ್ನು ಇಳಿಸುವುದಕ್ಕಾಗಿ ಕಾರ್ಮಿಕರನ್ನು ನೌಕರಿಯಿಂದ ತೆಗೆಯಲಾಗುತ್ತಿದೆ. ಎಐ ಬಳಕೆಯಿಂದಲೂ ಉದ್ಯೋಗ ಕಡಿಮೆಯಾಗುತ್ತಿದೆ. ಎಐ ಕುಸಿದರೆ ಹಲವರು ಕೆಲಸ ಕಳೆದುಕೊಳ್ಳುತ್ತಾರೆ. ಎಐ ಉದ್ಯಮ ಕುಸಿದರೂ ತಂತ್ರಜ್ಞಾನ ಹಾಗೂ ಯಾಂತ್ರೀಕರಣ ಪ್ರಕ್ರಿಯೆ ಮುಂದುವರಿಯುತ್ತದೆ. ಡೇಟಾ ಎಂಟ್ರಿ, ಕಸ್ಟಮರ್ ಸಪೋರ್ಟ್ ಇತ್ಯಾದಿ ಕೆಲಸಗಳಿಗೆ ಯಂತ್ರಗಳ ನೆರವನ್ನು ಪಡೆಯಲಾಗುತ್ತದೆ. ಜನ ಕೆಲಸ ಕಳೆದುಕೊಳ್ಳುತ್ತಾರೆ. ವಿದೇಶಿ ಬಳಕೆದಾರರಿಗೆ ಎಐ ಸೇವೆಯನ್ನು ಒದಗಿಸುತ್ತಿರುವ ಇನ್ಫೊಸಿಸ್, ಟಿಸಿಎಸ್‌ನಂತಹ ಸಂಸ್ಥೆಗಳಿಗೆ ಹೊಡೆತ ಬೀಳುತ್ತದೆ. ಆ ಸಂಸ್ಥೆಗಳನ್ನು ನೆಚ್ಚಿಕೊಂಡು ಸುಮಾರು 50 ಲಕ್ಷ ಜನ ಜೀವನ ನಡೆಸುತ್ತಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತ ಡೆರಾನ್ ಅಸಿಮೊಗ್ಲು, ಕೃತಕ ಬುದ್ಧಿಮತ್ತೆಯನ್ನು ಕುರಿತಂತೆ ನಮ್ಮ ನೋಟಕ್ರಮ ಬದಲಾಗಬೇಕು ಎನ್ನುತ್ತಾರೆ. ಯಂತ್ರಗಳು ಮನುಷ್ಯರ ಜಾಗವನ್ನು ಆಕ್ರಮಿಸುವಂತಾಗಬಾರದು. ಮನುಷ್ಯರಿಗೆ ನೆರವಾಗಬೇಕು. ಅವರಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಬೇಕು. ಮಾನವ ಸಂಪನ್ಮೂಲವನ್ನು ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸುವುದಕ್ಕೆ ಸಾಧ್ಯವಾಗಬೇಕು. ಅದರ ಪರಿಣಾಮಕಾರಿತ್ವವನ್ನು ಹೆಚ್ಚಿಸುವುದಕ್ಕೆ ತಂತ್ರಜ್ಞಾನ ಹಾಗೂ ಮಾಹಿತಿಗಳ ಬಳಕೆಯಾಗಬೇಕು. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು ನಮ್ಮ ಆದ್ಯತೆಯಾಗಬಾರದು. ಹೆಚ್ಚು ಉಪಯುಕ್ತವಾದ ಉತ್ಪನ್ನಗಳನ್ನು ತಯಾರಿಸುವುದು ನಮ್ಮ ಆದ್ಯತೆಯಾಗಬೇಕು.

ವಾಚಕರ ವಾಣಿ

ಶರಾವತಿ ಯೋಜನೆ ಜಾರಿ: ಹಪಹಪಿ ಏಕೆ?

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯು ಪಶ್ಚಿಮಘಟ್ಟದ ಸೂಕ್ಷ್ಮ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕೇಂದ್ರದ ಅರಣ್ಯ ಸಲಹಾ ಸಮಿತಿ ಕೂಡ ಈ ಕುರಿತು ಕಳವಳ ವ್ಯಕ್ತಪಡಿಸಿದೆ. ವಿದ್ಯುತ್ ಘಟಕ, ಸುರಂಗ ಹಾಗೂ ರಸ್ತೆ ನಿರ್ಮಾಣಕ್ಕೆ ಸುಮಾರು 54 ಹೆಕ್ಟೇರ್‌ನಷ್ಟು ಅರಣ್ಯ ನಾಶವಾಗಲಿದೆ. ಸಿಂಹಬಾಲದ ಸಿಂಗಳೀಕ ಸೇರಿದಂತೆ ಹಲವು ವನ್ಯಜೀವಿಗಳ ಆವಾಸಕ್ಕೆ ಧಕ್ಕೆಯಾಗಲಿದೆ. ಪ್ರಸ್ತುತ, ಇಂಧನ ಉತ್ಪಾದನೆಗೆ ಪರ್ಯಾಯ ಮಾರ್ಗಗಳಿವೆ. ಹಾಗಿದ್ದರೂ, ಪರಿಸರಕ್ಕೆ ಮಾರಕವಾದ ಈ ಯೋಜನೆ ಜಾರಿಯ ಔಚಿತ್ಯವಾದರೂ ಏನಿದೆ? ರಾಜ್ಯ ಸರ್ಕಾರ ಈ ಯೋಜನೆಯನ್ನು ಕೈಬಿಡುವುದೇ ಒಳಿತು.

ನಿರಂಜನ್ ಎಚ್.ಬಿ., ಸಾಗರ

ಮಹಿಳೆಯರಿಗೆ ಶ್ರೀರಕ್ಷೆ ಆದೀತೆ ‘ಅಕ್ಕ ಪಡೆ’

ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ‘ಅಕ್ಕ ಪಡೆ’ಯು ರಾಜ್ಯದಾದ್ಯಂತ ಕಾರ್ಯಾರಂಭ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ. ಪ್ರಸ್ತುತ ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಏಳೂವರೆ ದಶಕ ಉರುಳಿದರೂ ಹೆಣ್ಣುಮಕ್ಕಳು, ಮಹಿಳೆಯರು ಒಂಟಿಯಾಗಿ ನಿರ್ಭಯವಾಗಿ ಸಂಚರಿಸಲು ಸಾಧ್ಯವಾಗದಿರುವುದು ದುರದೃಷ್ಟಕರ. ‘ಅಕ್ಕ ಪಡೆ’ಯು ಮಹಿಳೆಯರ ಮಾನಸಿಕ ಸ್ಥೈರ್ಯಕ್ಕೆ ಮತ್ತಷ್ಟು ಬಲ ತುಂಬುವಂತೆ ಕಾರ್ಯನಿರ್ವಹಿಸಲಿ.

ಎನ್. ಮಹಾರಾಜ, ಹೊಸಪೇಟೆ

ರಂಗಾಯಣ: ಲಾಬಿಕೋರರ ದೂರವಿಡಿ

ರಾಜ್ಯ ಸರ್ಕಾರವು ಧಾರವಾಡದ ರಂಗಾಯಣಕ್ಕೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವೃತ್ತಿರಂಗಭೂಮಿ ಕಲಾವಿದ ರಾಜು ತಾಳಿಕೋಟೆ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿ ಸಾಮಾಜಿಕ ನ್ಯಾಯ ಕಾಪಾಡಿತ್ತು. ಅವರ ಅಕಾಲಿಕ ನಿಧನದಿಂದ ನಿರ್ದೇಶಕರ ಸ್ಥಾನ ಖಾಲಿಯಾಗಿದೆ. ಬೆಂಗಳೂರಿನ ಕಲಾಕ್ಷೇತ್ರದ ಸುತ್ತ ಓಡಾಡಿಕೊಂಡು ರಾಜಕಾರಣ ಮಾಡುವ ಕೆಲವರು ಈ ನಿರ್ದೇಶಕರ ಹುದ್ದೆಗೆ ಲಾಬಿ ಮಾಡುತ್ತಿದ್ದಾರೆ. ಅಂಥವರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಿ ಬೆಂಗಳೂರಿನ ಸಾಂಸ್ಕೃತಿಕ ರಾಜಕಾರಣವನ್ನು ಧಾರವಾಡ ರಂಗಾಯಣದಲ್ಲಿ ತಂದು ತುರುಕುವ ಪ್ರಯತ್ನ ಬೇಡ.

ಖಾಲಿಯಾಗಿರುವ ನಿರ್ದೇಶಕ ಸ್ಥಾನಕ್ಕೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಪ್ರತಿಭಾವಂತರನ್ನೇ ನೇಮಿಸಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವುದು ಸರ್ಕಾರದ ಜವಾಬ್ದಾರಿ. ರಂಗಸಮಾಜದ ಸದಸ್ಯರು, ಈ ದಿಸೆಯಲ್ಲಿ ಆಲೋಚಿಸಿದರೆ ಉಪಕಾರವಾದೀತು.

ಮಹಾದೇವ ಹಡಪದ, ಧಾರವಾಡ

ಡೇಟಿಂಗ್ ಆ್ಯಪ್ ಹಾವಳಿ ತಡೆಗಟ್ಟಿ

ಇತ್ತೀಚೆಗೆ ಡೇಟಿಂಗ್ ಆ್ಯಪ್‌ಗಳ ಹಾವಳಿ ಉಲ್ಬಣಿಸಿದೆ. ಆ್ಯಪ್ ಬಳಸಿ ವಂಚಿಸುವ ಪ್ರಕರಣಗಳೂ ಹೆಚ್ಚುತ್ತಿವೆ. ಆ್ಯಪ್‌ನಲ್ಲಿ ವಿವರ ದಾಖಲಿಸಿದ ತಕ್ಷಣವೇ ಸ್ನೇಹ ಬೆಳೆಸುವ ಖದೀಮರು, ಸುಲಭವಾಗಿ ವಂಚನೆಯ ಬಲೆಯೊಳಗೆ ಕೆಡವುತ್ತಾರೆ. ಒಮ್ಮೆ ಈ ಜಾಲದೊಳಗೆ ಸಿಲುಕಿದರೆ ಹೊರಬರುವುದು ಕಷ್ಟ. ಆ್ಯಪ್‌ನಲ್ಲಿರುವ ಮಹಿಳೆಯರ ಮಾಯಾಜಾಲಕ್ಕೆ ಸಿಲುಕಿ ಜೀವ ಕಳೆದುಕೊಂಡವರೂ ಇದ್ದಾರೆ. ನಾಯಿಕೊಡೆಗಳಂತೆ ಹಬ್ಬುತ್ತಿರುವ ಇಂತಹ ಆ್ಯಪ್‌ಗಳಿಗೆ ಲಗಾಮು ಹಾಕಲು ಕೇಂದ್ರ ಮತ್ತು ರಾಜ್ಯ ಸರ್ಕಾರ ಮುಂದಾಗಬೇಕಿದೆ. ಜೊತೆಗೆ, ಯುವಜನರಿಗೂ ಜಾಗೃತಿ ಮೂಡಿಸುವ ತುರ್ತಿದೆ.

ಮಮತ ಟಿ.ಪಿ., ತುಮಕೂರು

ಕಲಬೆರಕೆ ತುಪ್ಪ ಜಾಲಕ್ಕೆ ಕಡಿವಾಣ ಹಾಕಿ

‘ನಂದಿನಿ’ ಬ್ರ್ಯಾಂಡ್ ಹೆಸರಿನಡಿ ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿದ್ದ ಬೃಹತ್ ಜಾಲ ಪತ್ತೆಯಾಗಿರುವುದು ಆತಂಕಕಾರಿ. ಬಂಧಿತರಲ್ಲಿ ಒಬ್ಬ ಕೆಎಂಎಫ್ ಉತ್ಪನ್ನಗಳ ವಿತರಕ ಆಗಿರುವುದು ದುರಂತ. ನಂದಿನಿ ತುಪ್ಪಕ್ಕೆ ದೇಶದಾದ್ಯಂತ ಭಾರೀ ಬೇಡಿಕೆ ಇದೆ. ಇದರ ಲಾಭ ಪಡೆಯುವುದು ದುಷ್ಕರ್ಮಿಗಳ ಉದ್ದೇಶವಾಗಿರುವುದು ಸ್ಪಷ್ಟ. ಕಲಬೆರಕೆ ತುಪ್ಪದ ಸೇವನೆಯು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಲಿದೆ. ಹಾಗಾಗಿ, ತುಪ್ಪದ ಪ್ಯಾಕಿಂಗ್ ಕುರಿತಂತೆ ಕೆಎಂಎಫ್ ಎಚ್ಚರ ವಹಿಸಬೇಕು. ನಿಯಮಿತವಾಗಿ ಖಾಸಗಿ ಗೋದಾಮುಗಳು ಮತ್ತು ಅಂಗಡಿಗಳ ತಪಾಸಣೆ ನಡೆಸುತ್ತಿದ್ದರೆ ಇಂತಹ ಕೃತ್ಯಗಳಿಗೆ ಕಡಿವಾಣ ಬೀಳಲಿದೆ. ಕಲಬೆರಕೆ ತಡೆಗೆ ಸುರಕ್ಷತಾ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕಿದೆ. ತಪ್ಪಿತಸ್ಥರಿಗೆ ಸರ್ಕಾರವು ಕಠಿಣ ಶಿಕ್ಷೆಯನ್ನೂ ವಿಧಿಸಬೇಕಿದೆ.

ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ಉಡುಗೊರೆ ಪರಂಪರೆ, ಅಭಿವೃದ್ಧಿಗೆ ಬರೆ

ಬಿಹಾರದಲ್ಲಿ ಮಹಿಳೆಯರ ಬ್ಯಾಂಕ್ ಖಾತೆಗೆ ₹10 ಸಾವಿರ ಜಮೆ ಮಾಡಿದ್ದರಿಂದ ಎನ್‌ಡಿಎ ಗೆಲುವು ಸುಲಭವಾಯಿತೆಂದು ಹೇಳಲಾಗುತ್ತದೆ. ಈ ಹಿಂದೆ ಕರ್ನಾಟಕ, ತೆಲಂಗಾಣದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಇಂತಹದ್ದೇ ಉಚಿತ ಕೊಡುಗೆಗಳ ಭರವಸೆ ನೀಡಿ ಅಧಿಕಾರದ ಗದ್ದುಗೆ ಏರಿದ್ದು ಸುಳ್ಳೇನಲ್ಲ. ಅರವಿಂದ ಕೇಜ್ರಿವಾಲ್ ಉಚಿತ ಕೊಡುಗೆ ಘೋಷಿಸಿಯೇ ಅಧಿಕಾರ ಹಿಡಿದಿದ್ದು, ಇವರೆಲ್ಲರಿಗೂ ಮಾದರಿ ಆಗಿರುವಂತಿದೆ. ಇತ್ತೀಚಿನ ಎಲ್ಲಾ ಚುನಾವಣೆಗಳಲ್ಲೂ ಉಚಿತ ಕೊಡುಗೆಗಳ ಮಹಾಪೂರವೇ ಹರಿದುಬರುತ್ತಿದೆ. ಬಡವರಿಗೆ ಸಹಾಯ ಮಾಡುತ್ತೇವೆ ಎಂಬ ನೆಪದಲ್ಲಿ ಚುನಾವಣೆ ಗೆಲ್ಲಲು ರಾಜಕೀಯ ಪಕ್ಷಗಳಿಂದ ಹೊಸ ಅವತಾರ ಸೃಷ್ಟಿಯಾಗಿದೆ. ಜನಸಾಮಾನ್ಯರ ತೆರಿಗೆ ಹಣವನ್ನು ಹೀಗೆ ಹಂಚುತ್ತಾ ಹೋದರೆ ಅಭಿವೃದ್ಧಿ ಮರೀಚಿಕೆ ಆಗುವುದರಲ್ಲಿ ಅನುಮಾನವೇ ಇಲ್ಲ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಚುರುಮುರಿ

ನಾರಿ ನಿರ್ಣಯ

● ಮಣ್ಣೆ ರಾಜು

‘ಬಿಹಾರ ಚುನಾವಣೆಯಲ್ಲಿ ‘ನಾರಿ ನಿರ್ಣಯ’ ಮೇಲುಗೈ ಸಾಧಿಸಿದೆಯಂತೆ, ಗೆದ್ದ ಪಕ್ಷಗಳು ಮಹಿಳೆಯರನ್ನು ಹಾಡಿ ಹೊಗಳುತ್ತಿವೆ...’ ಎನ್ನುತ್ತಾ ವೈಶಾಲಿ ಬಂದಳು.

‘ನಾನೂ ಪೇಪರ್‌ನಲ್ಲಿ ಓದಿದೆ’ ಎಂದು ಸುಮಿ ಕಾಫಿ ತಂದುಕೊಟ್ಟಳು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ಚುನಾವಣಾ ಫಲಿತಾಂಶದವರೆಗೂ ಹೆಣ್ಣುಮಕ್ಕಳು ಮೇಲುಗೈ ಸಾಧಿಸೋದು ಒಳ್ಳೆಯ ಬೆಳವಣಿಗೆ ಅಲ್ವಾ?’

‘ಏನು ಬೆಳವಣಿಗೆಯೋ, ಭಾಗ್ಯಗಳಿಗೆ ಮರುಳಾಗಿ ಮಹಿಳೆಯರು ರಾಜಕೀಯ ಪಕ್ಷಗಳ ಮತ ಬ್ಯಾಂಕ್ ಆಗಿದ್ದಾರೆ ಅನ್ನುವ ಆಪಾದನೆಯೂ ನಮ್ಮ ಮೇಲಿದೆ’ ಎಂದು ಸುಮಿ ಹೇಳಿದಳು.

‘ರಾಜಕೀಯ ಪಕ್ಷಗಳಿಗೆ ಮಹಿಳೆಯರ ಬಗ್ಗೆ ಇರುವಷ್ಟು ನಂಬಿಕೆ ಪುರುಷರ ಬಗ್ಗೆ ಇಲ್ಲ’.

‘ನಾವೂ ನಂಬಿಕೊಂಡಿಲ್ಲ. ಮಹಿಳೆಯರಿಗೆ ಗೃಹಲಕ್ಷ್ಮಿ, ಪ್ರಯಾಣ ಲಕ್ಷ್ಮಿ ಭಾಗ್ಯಗಳನ್ನು ಕೊಡುವ ರಾಜಕೀಯ ಪಕ್ಷಗಳು ಗಂಡಸರಿಗೆ ಕನಿಷ್ಠ ಶೇವಿಂಗ್ ಬ್ಲೇಡ್ ಭಾಗ್ಯವನ್ನೂ ಕೊಡುತ್ತಿಲ್ಲವಲ್ಲ’ ಶಂಕ್ರಿ ಬೇಸರಗೊಂಡ.

‘ಇನ್ಮೇಲೆ ಮಹಿಳೆಯರು ಯಾವ ಭಾಗ್ಯ, ಬಾಗಿನವನ್ನೂ ಬಯಸದೆ ವಿಧಾನಸೌಧದಲ್ಲಿ ಅಧಿಕಾರದ ಭಾಗ್ಯ ಪಡೆಯಬೇಕು’ ಸುಮಿ ನಿರ್ಣಯ ಹೇಳಿದಳು.

‘ಮೇಲ್ಮನೆ, ಕೆಳಮನೆಯಲ್ಲಿ ಮಹಿಳಾ ಪ್ರತಿನಿಧಿಗಳು ಬೆರಳೆಣಿಕೆಯಷ್ಟಿದ್ದಾರೆ. ಇನ್ನೆಲ್ಲಿ ಅಧಿಕಾರ ಚಲಾಯಿಸ್ತೀರಿ?’ ಶಂಕ್ರಿ ಹೇಳಿದ.

‘ಮೇಲ್‌ಮನೆ ಜೊತೆಗೆ ‘ಫೀ-ಮೇಲ್‌ಮನೆ’ ಸ್ಥಾಪಿಸಿ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಒತ್ತಾಯ ಮಾಡಬೇಕು’ ಎಂದಳು ವೈಶಾಲಿ.

‘ಶಾಸನಸಭೆಗಳಲ್ಲಿ 33 ಪರ್ಸೆಂಟ್ ಮಹಿಳಾ ಪ್ರಾತಿನಿಧ್ಯ ಖಾತರಿಗೊಳಿಸುವ ಕಾಯ್ದೆ ಅನುಷ್ಠಾನಗೊಳಿಸಲು ರಾಜಕೀಯ ಪಕ್ಷಗಳಿಗೆ, ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. ಅದರ ವಿರುದ್ಧ ಮೊದಲು ಹೋರಾಟ ಮಾಡಬೇಕು’ ಎಂದಳು ಸುಮಿ.

‘67 ಪರ್ಸೆಂಟ್ ಪುರುಷ ಪ್ರತಿನಿಧಿಗಳ ನಡುವೆ ಮಹಿಳಾ ಧ್ವನಿ ಕ್ಷೀಣಿಸೊಲ್ಲವೆ?’ ಅಂದ ಶಂಕ್ರಿ.

‘ನಮ್ಮ ಧ್ವನಿ ಬಗ್ಗೆ ಡೌಟ್ ಬೇಡ, 33 ಪರ್ಸೆಂಟ್ ಜಾರಿಯಾಗಲಿ, ಆ 67 ಪರ್ಸೆಂಟನ್ನು ದಾರಿಗೆ ತರುವುದು ನಮಗೆ ಗೊತ್ತು...’ ಎಂದು ನಗುತ್ತಾ ವೈಶಾಲಿ ಮನೆಯತ್ತ ಹೊರಟಳು.

ಸಂಗತ

ಸ್ಪಿನ್ ಸುಳಿಯಲ್ಲಿ ಉಸಿರುಗಟ್ಟುತ್ತಿರುವ ಭಾರತ

ಭಾರತದ ಟೆಸ್ಟ್ ಕ್ರಿಕೆಟಿಗರಿಗೀಗ ಅಗ್ನಿಪರೀಕ್ಷೆಯ ಸಮಯ. ಸ್ಪಿನ್ನರ್‌ಗಳ ಎದುರು ಪರದಾಡುತ್ತಿರುವ ಬ್ಯಾಟರ್‌ಗಳು, ನಿಂತು ಆಡುವ ಸಂಯಮ ಮರೆತಿರುವಂತಿದೆ.

● ವಿಶಾಖ ಎನ್.

ಭಾರತ ಕ್ರಿಕೆಟ್ ತಂಡದ ಪಳಗಿದ ಆಟಗಾರರೂ ಈಗ ತಲೆಮೇಲೆ ಕೈಹೊತ್ತು ಕೂರಬೇಕಾದ ಪರಿಸ್ಥಿತಿ. ಕೆಂಪು ಚೆಂಡಿನ ಆಟವೀಗ ಭಾರತದ ಪಾಲಿಗೆ ಅಗ್ನಿಪರೀಕ್ಷೆ. ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಮ್ಮ ದೇಶದ ತಂಡ ಟೆಸ್ಟ್ ಕ್ರಿಕೆಟ್ ಸೋಲುತ್ತದೆ ಎನ್ನುವುದೇ ದೊಡ್ಡ ಪ್ರಶ್ನೆಯನ್ನು ಎದುರಲ್ಲಿ ಇಡುವಂಥ ವಿದ್ಯಮಾನ. ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬ ಬವುಮಾ ಅವುಡುಗಚ್ಚಿ ಎರಡನೇ ಪಾಳಿಯಲ್ಲಿ ಕಟ್ಟಿಕೊಟ್ಟ ಇನಿಂಗ್ಸ್ ಭಾರತದ ಸಂಯಮಹೀನ ಆಟಗಾರರಿಗೆ ಪ್ರಾತ್ಯಕ್ಷಿಕೆಯಂತೆ ಇತ್ತು.

ಸೋಲು, ಗೆಲುವು ಕ್ರಿಕೆಟ್‌ನಲ್ಲಿ ಸಹಜ. ಆದರೆ, ತವರಿನ ಈಡನ್ ಗಾರ್ಡನ್ಸ್‌ನಲ್ಲಿ ಪಿಚ್ ಕ್ಯುರೇಟರ್ ಸುಜನ್ ಮುಖರ್ಜಿ ತಾವು ಕೇಳಿದಂತಹುದೇ ಟ್ರ್ಯಾಕ್ ಮಾಡಿಕೊಟ್ಟಿದ್ದರು ಎಂದು ತರಬೇತುದಾರ ಗೌತಮ್ ಗಂಭೀರ್ ಹೇಳಿದ್ದಾರೆ. ಆ ಪಿಚ್ ಬ್ಯಾಟಿಂಗ್ ಮಾಡಲಿಕ್ಕೆ ಅಸಾಧ್ಯ ಎನ್ನುವಂತೇನೂ ಇರಲಿಲ್ಲವೆಂದೂ ಮಾತು ಸೇರಿಸಿದ್ದಾರೆ. ಆ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ನೋಡಿದರೆ, ಭಾರತ ಟೆಸ್ಟ್ ಕ್ರಿಕೆಟ್ ತಂಡದ ಎದುರಲ್ಲಿ ಹಲವು ಪ್ರಶ್ನೆಗಳು ಇರುವುದು ಸ್ಪಷ್ಟ.

ಯಶಸ್ವಿ ಜೈಸ್ವಾಲ್‌ಗೆ ದಾಳಿಕೋರ ಆಟ ಎಲ್ಲ ಸಂದರ್ಭದಲ್ಲೂ ಕೈಹಿಡಿಯುವುದಿಲ್ಲ. ಕೆ.ಎಲ್. ರಾಹುಲ್ ಆಡದೇಹೋದರೆ ಭಾರತಕ್ಕೆ ಉಳಿಗಾಲವಿಲ್ಲ. ರಿಷಭ್ ಪಂತ್ ಕೆಲವು ವರ್ಷಗಳ ಹಿಂದೆ ಆಸ್ಟ್ರೇಲಿಯಾ ನೆಲದಲ್ಲಿ ತೋರಿದ್ದ ಆಕ್ರಮಣಶೀಲ ಮನೋಭಾವ ಸ್ಪಿನ್ನರ್‌ಗಳ ಎದುರು ಇಲ್ಲಿ ನಡೆಯುವುದಿಲ್ಲ. ವಾಷಿಂಗ್ಟನ್ ಸುಂದರ್ ಹಾಗೂ ಅಕ್ಷರ್ ಪಟೇಲ್ ಇಬ್ಬರನ್ನೂ ತಂಡ ಹೆಚ್ಚು ನೆಚ್ಚಿಕೊಳ್ಳುತ್ತಿರುವುದು ಬ್ಯಾಟರ್‌ಗಳ ರೂಪದಲ್ಲೋ? ಬೌಲರ್‌ಗಳ ರೂಪದಲ್ಲೋ? ಮೊಹಮ್ಮದ್ ಸಿರಾಜ್ ಆತ್ಮವಿಶ್ವಾಸಕ್ಕೆ ಪದೇ ಪದೇ ಪೆಟ್ಟು ಬೀಳುತ್ತಿರುವುದು ಯಾಕೆ? ಹೀಗೆ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಮೊದಲ ಟೆಸ್ಟ್‌ನಲ್ಲಿ ಸೋತಿರುವುದು ಹಲವು ಸಮಸ್ಯೆಗಳಿಗೆ ಕನ್ನಡಿ ಹಿಡಿದಿದೆ; ಕೆಲವು ಪ್ರಶ್ನೆಗಳನ್ನೂ ಮುಂದಿಟ್ಟಿದೆ.

ಭಾರತವು ಕಳೆದ ವರ್ಷ ನ್ಯೂಜಿಲೆಂಡ್ ಎದುರು ತವರು ನೆಲದಲ್ಲಿ ಟೆಸ್ಟ್ ಸರಣಿಯಲ್ಲಿ ವೈಟ್ ವಾಷ್ ಆದಾಗಲೇ ಇಂತಹ ಪ್ರಶ್ನೆಗಳು ಮೂಡಿದ್ದವು. ಆ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ ಎನ್ನುವುದು ಈಗ ಸ್ಪಷ್ಟವಾಗಿದೆ.

ಕಳೆದ ವರ್ಷ ಪುಣೆಯಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಸುಂದರ್ ಎರಡೂ ಇನಿಂಗ್ಸ್‌ಗಳಿಂದ ಒಟ್ಟು 11 ವಿಕೆಟ್ ಪಡೆದಿದ್ದರು. ಆದರೆ, ನ್ಯೂಜಿಲೆಂಡ್ ಕೊನೆಯ ಕ್ಷಣದಲ್ಲಿ ಆರಿಸಿಕೊಂಡಿದ್ದ ಎಡಗೈ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಅದೇ ಪಂದ್ಯದಲ್ಲಿ ಒಟ್ಟು 13 ವಿಕೆಟ್ ಕಿತ್ತರು. ರವಿಚಂದ್ರನ್ ಅಶ್ವಿನ್ ಹಾಗೂ ರವೀಂದ್ರ ಜಡೇಜಾ ಕೂಡ ಸ್ಪಿನ್ ದಾಳಿಯಲ್ಲಿ ಸೇರಿದ್ದ ಸಂದರ್ಭ ಅದು. ಆ ಪಂದ್ಯದಲ್ಲಿ ಭಾರತ 113 ರನ್‌ಗಳ ಸೋಲುಂಡಿತ್ತು.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ ಅಜಾಜ್ ಪಟೇಲ್ ಅವರು ನ್ಯೂಜಿಲೆಂಡ್‌ಗೆ ಒಂದು ಇನಿಂಗ್ಸ್‌ನಲ್ಲಿ 6 ವಿಕೆಟ್ ಗೊಂಚಲು ಕಿತ್ತುಕೊಟ್ಟಿದ್ದರು. ಗ್ಲೆನ್ ಫಿಲಿಪ್ಸ್ ಕೂಡ ತಮ್ಮ ಆಫ್ ಬ್ರೇಕ್‌ಗಳಿಂದ ಕಾಡಿದ್ದರು. ಈಡನ್ ಗಾರ್ಡನ್ಸ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಆಫ್ ಸ್ಪಿನ್ನರ್ ಸಿಮೋನ್ ಹಾರ್ಮರ್ ತಮ್ಮ 36ನೇ ವಯಸ್ಸಿನಲ್ಲಿ ಆತಿಥೇಯರ ಬುಡ ಅಲ್ಲಾಡಿಸಿದ್ದಾರೆ.

ಇತಿಹಾಸ ಗಮನಿಸಿದರೆ- ಭಾರತ ವಿಶ್ವದರ್ಜೆಯ ಲೆಗ್ ಸ್ಪಿನ್ನರ್, ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರಿಗೆ ತಲೆಬಾಗಿದೆ. ಶ್ರೀಲಂಕಾದ ಆಫ್ ಸ್ಪಿನ್ ಸರದಾರ ಮುತ್ತಯ್ಯ ಮುರಳೀಧರನ್ ಅವರಿಗೆ ಅಂಜಿರುವ ಉದಾಹರಣೆಗಳಿವೆ. ಪಾಕಿಸ್ತಾನದ ಸಕ್ಲೇನ್ ಮುಷ್ತಾಕ್ ಆಫ್ ಸ್ಪಿನ್ ಮೋಡಿಗೆ ಮರ್ಯಾದೆ ನೀಡಿರುವ ಪಂದ್ಯಗಳೂ ಸಿಗುತ್ತವೆ. ಆದರೆ, ನ್ಯೂಜಿಲೆಂಡ್ ಹಾಗೂ ದಕ್ಷಿಣ ಆಫ್ರಿಕಾದ ಸ್ಪಿನ್ನರ್‌ಗಳು ಮೇಲೆ ಉಲ್ಲೇಖಿಸಿದ ದಿಗ್ಗಜರಷ್ಟು ಪರಿಣತರೇನೂ ಅಲ್ಲ. ಅಂಥವರ ಎದುರು ಭಾರತ ತನ್ನ ನೆಲದಲ್ಲೇ ತಡಬಡಾಯಿಸುತ್ತಿರುವುದು ಗಂಭೀರ ಸಮಸ್ಯೆ.

ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್‌ನಲ್ಲಿ ಬ್ಯಾಟಿಂಗ್ ಕ್ರಮಾಂಕದಲ್ಲಿ ಮೂರನೇ ಆಟಗಾರನಾಗಿ ವಾಷಿಂಗ್ಟನ್ ಸುಂದರ್ ಅವರಿಗೆ ಬಡ್ತಿ ಕೊಟ್ಟಿದ್ದು, 8 ವಿಕೆಟ್ ಬೀಳುವವರೆಗೆ ಮೊಹಮ್ಮದ್ ಸಿರಾಜ್ ಕೈಗೆ ಎರಡನೇ ಇನಿಂಗ್ಸ್‌ನಲ್ಲಿ ಬೌಲ್ ಮಾಡಲು ಚೆಂಡನ್ನೇ ಕೊಡದೇ ಇದ್ದುದು ಯಾವ ರೀತಿಯ ನಾಯಕತ್ವ ಎಂಬ ಪ್ರಶ್ನೆಯನ್ನೂ ದೊಡ್ಡದಾಗಿಸಿದೆ.

ವಹಿವಾಟಿನ ಸ್ಪರ್ಶದಲ್ಲಿ ಶಕ್ತಿ ಪ್ರದರ್ಶನದ ಆಟವಾಗಿ, ಜನರಂಜನೆಯ ಸರಕಾಗಿ ಕ್ರಿಕೆಟ್ ಬಳಕೆಯಾಗುತ್ತಿದೆ. ಈ ಭರಾಟೆಯಲ್ಲಿ ಆಟದ ಕಲಾತ್ಮಕ ಆಯಾಮ ಹಿನ್ನೆಲೆಗೆ ಸರಿದಿರುವುದರ ಪರಿಣಾಮವನ್ನು ಈಗ ಕಾಣುತ್ತಿದ್ದೇವೆ. ಈ ಬದಲಾವಣೆ ಕ್ರಿಕೆಟ್‌ನ ಸೌಂದರ್ಯಕ್ಕೆ ಮಾರಕವಾದುದು.

ಚುಟುಕು ಕ್ರಿಕೆಟ್ ಹಚ್ಚಿರುವ ಅರ್ಭಟದಾಟದ ಕಿಚ್ಚು ಪರಮ ಸಂಯಮ ಬೇಡುವ ಟೆಸ್ಟ್ ಕ್ರಿಕೆಟ್ ಮನಃಸ್ಥಿತಿಯನ್ನು ಕೊಂದುಹಾಕಿದೆಯೇ ಎನ್ನುವ ತಾತ್ತ್ವಿಕ ಜಿಜ್ಞಾಸೆಯೂ ಇದೆ. ದೇಸಿ ಕ್ರಿಕೆಟ್‌ನಲ್ಲೂ ಎಷ್ಟು ಹೊತ್ತು ಲಂಗರು ಹಾಕಿ ಆಡುತ್ತಾರೆ ಎನ್ನುವುದಕ್ಕಿಂತ ಎಷ್ಟು ಬೇಗ ರನ್ ಕದಿಯುತ್ತಾರೆ ಎನ್ನುವುದೇ ಮುಖ್ಯವಾಗಿ ಪರಿಗಣಿತವಾಗುತ್ತಿದೆ. ಇವೆಲ್ಲ ಈಗ ಮುನ್ನೆಲೆಗೆ ಬಂದಿದ್ದು, ಭಾರತ ಕ್ರಿಕೆಟ್ ತಂಡದ ಚಿಂತಕರ ಚಾವಡಿ ಪರಿಹಾರ ಕಂಡುಕೊಳ್ಳಲೇಬೇಕಿದೆ. ರಾಹುಲ್ ದ್ರಾವಿಡ್, ವಿ.ವಿ.ಎಸ್. ಲಕ್ಷ್ಮಣ್, ಚೇತೇಶ್ವರ ಪೂಜಾರ, ಆಟದ ಧಾಟಿಯ ಪಾಠ ಇವರಿಗೆಲ್ಲ ನಾಟಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶೇಖ್ ಹಸೀನಾ ಹಸ್ತಾಂತರ ಸಾಧ್ಯವೇ?

ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು (ಐಸಿಟಿ) ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ 'ಸಾಮೂಹಿಕ ಮಾರಣಹೋಮದ ಅಪರಾಧ'ಕ್ಕಾಗಿ ಮರಣದಂಡನೆ ವಿಧಿಸಿದೆ. ಭಾರತ–ಬಾಂಗ್ಲಾದೇಶ ಹಸ್ತಾಂತರ ಒಪ್ಪಂದ–2013ರ ಅನ್ವಯ ಹಸೀನಾ ಅವರನ್ನು ತನಗೆ ಒಪ್ಪಿಸಬೇಕು ಎಂದು ಅಲ್ಲಿನ ಮಧ್ಯಂತರ ಸರ್ಕಾರ ಬೇಡಿಕೆ ಇಟ್ಟಿದೆ. ಆದರೆ, ಹಸೀನಾ ಅವರನ್ನು ಹಸ್ತಾಂತರ ಮಾಡಬೇಕೇ ಬೇಡವೇ ಎನ್ನುವುದು ಒಪ್ಪಂದದಲ್ಲಿರುವ ಜಟಿಲವಾದ ನಿಯಮಗಳು, ಅಪವಾದಗಳು ಮತ್ತು ಭಾರತದ ದೇಶೀಯ ಕಾನೂನನ್ನು ಅವಲಂಬಿಸಿದೆ. ಇದರ ನಡುವೆ, ಅಂತರರಾಷ್ಟ್ರೀಯ ವಲಯದಲ್ಲಿ ಐಸಿಟಿ ತೀರ್ಪಿಗೆ ವಿರೋಧ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಸರ್ಕಾರದಲ್ಲಿ ಗೃಹಸಚಿವರಾಗಿದ್ದ ಅಸಾದುಝ್ಝುಮಾನ್ ಖಾನ್ ಕಮಾಲ್ ಬಾಂಗ್ಲಾದೇಶದಲ್ಲಿ ಕಳೆದ ವರ್ಷದ ಆಗಸ್ಟ್ 5ರಂದು ಸರ್ಕಾರ ಪತನವಾದ ನಂತರ ದೇಶ ತೊರೆದಿದ್ದರು. ಹಸೀನಾ ಅವರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಕಮಾಲ್ ಅವರೂ ಭಾರತದಲ್ಲಿಯೇ ಇದ್ದಾರೆ ಎನ್ನಲಾಗುತ್ತಿದೆ. ಇವರಿಬ್ಬರನ್ನೂ ದೇಶಭ್ರಷ್ಟರು ಎಂದು ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು (ಐಸಿಟಿ) ಘೋಷಿಸಿತ್ತು. ಇದೀಗ, 'ಸಾಮೂಹಿಕ ಮಾರಣಹೋಮದ ಅಪರಾಧ'ಕ್ಕಾಗಿ ಹಸೀನಾ ಮತ್ತು ಖಾನ್ ಕಮಾಲ್ ಅವರಿಗೆ ಐಸಿಟಿ ಮರಣದಂಡನೆ ವಿಧಿಸಿದೆ. ಇಬ್ಬರನ್ನೂ ತನಗೆ ಹಸ್ತಾಂತರಿಸಬೇಕು ಎಂದು ಬಾಂಗ್ಲಾ ಆಡಳಿತ ಭಾರತದ ಮೇಲೆ ಒತ್ತಡ ಹಾಕಲು ಆರಂಭಿಸಿದೆ.

'ದ್ವಿಪಕ್ಷೀಯ ಹಸ್ತಾಂತರ ಒಪ್ಪಂದದ ಅನ್ವಯ, ಭಾರತವು ಹಸೀನಾ ಮತ್ತು ಕಮಾಲ್ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸಬೇಕು. ಸಾಮೂಹಿಕ ಮಾರಣಹೋಮದ ಅಪರಾಧ ಎಸಗಿದವರಿಗೆ ಆಶ್ರಯ ಕಲ್ಪಿಸುವುದನ್ನು ಸ್ನೇಹಪರವಲ್ಲದ ಮತ್ತು ನ್ಯಾಯಕ್ಕೆ ವಿರುದ್ಧವಾದ ಕ್ರಿಯೆ ಎಂದು ಪರಿಗಣಿಸಲಾಗುವುದು' ಎಂದು ಅಲ್ಲಿನ ವಿದೇಶಾಂಗ ಇಲಾಖೆ ತಿಳಿಸಿದೆ.

ಹಸೀನಾ ಅವರಿಗೆ ಮರಣದಂಡನೆ ವಿಧಿಸಿರುವುದಕ್ಕೆ ಅಂತರರಾಷ್ಟ್ರೀಯ ಮಟ್ಟದ ಮಾನವ ಹಕ್ಕು ಸಂಘಟನೆಗಳು ಮತ್ತು ಚಿಂತಕರ ಚಾವಡಿಗಳಿಂದ ವಿರೋಧ ವ್ಯಕ್ತವಾಗಿದೆ. 'ತೀರ್ಪು ನ್ಯಾಯಯುತವಾಗಿ ಇಲ್ಲ, ನಿಷ್ಪಕ್ಷಪಾತವಾಗಿಯೂ ಇಲ್ಲ' ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದೆ. ನ್ಯೂಯಾರ್ಕ್‌ನ ಹ್ಯೂಮನ್ ರೈಟ್ಸ್ ವಾಚ್ (ಎಚ್‌ಆರ್‌ಡಬ್ಲ್ಯು), ಶಿಕ್ಷೆಯು ಅಂತರರಾಷ್ಟ್ರೀಯ ನ್ಯಾಯ ವಿಚಾರಣಾ ಮಾನದಂಡಗಳಿಗೆ ತಕ್ಕಂತೆ ಇಲ್ಲ ಎಂದಿದೆ. ಅತ್ಯಂತ ಸಂಕೀರ್ಣವಾಗಿದ್ದ ಪ್ರಕರಣಗಳಲ್ಲಿ ಹಸೀನಾ ಅವರಿಗೆ ತಮ್ಮ ಪರ ವಾದ ಮಂಡಿಸಲು ಸಾಕಷ್ಟು ಅವಕಾಶ ನೀಡದೇ, ಅತ್ಯಂತ ವೇಗವಾಗಿ ವಿಚಾರಣೆ ಪೂರೈಸಿ ತೀರ್ಪು ಪ್ರಕಟಿಸಲಾಗಿದೆ ಎನ್ನುವುದು ಎಚ್‌ಆರ್‌ಡಬ್ಲ್ಯು ಅಭಿಪ್ರಾಯ.

ಐಸಿಟಿ ಮೂಲಕ ರಾಜಕೀಯ ವಿರೋಧಿಗಳನ್ನು ಗುರಿ ಮಾಡಿಕೊಂಡು ಪ್ರಕರಣಗಳನ್ನು ವಿಚಾರಣೆ ನಡೆಸುವುದು, ಮನಸೋಇಚ್ಛೆ ಬಂಧಿಸುವುದು, ಶಿಕ್ಷಿಸುವುದು, ಮರಣದಂಡನೆ ಜಾರಿ ಮಾಡುವುದಕ್ಕೆ ಬಾಂಗ್ಲಾದೇಶದಲ್ಲಿ ದೀರ್ಘ ಇತಿಹಾಸವೇ ಇದೆ. ಹಸೀನಾ ಅವಧಿಯಲ್ಲೂ ಅದು ನಡೆದಿತ್ತು. ಈಗ ಮೊಹಮದ್ ಯೂನುಸ್ ಅವರ ಮಧ್ಯಂತರ ಸರ್ಕಾರದಲ್ಲೂ ಅದೇ ಮುಂದುವರಿಯುತ್ತಿದೆ ಎಂದು ಅದು ವಿಶ್ಲೇಷಿಸಿದೆ.

ಆರೋಪಿಯ ಅನುಪಸ್ಥಿತಿಯಲ್ಲಿ ನಡೆಯುವ ವಿಚಾರಣೆಗಳು ವಿವಾದಾಸ್ಪದವಾಗಿರುತ್ತವೆ ಎನ್ನುವುದು ಇಂಟರ್‌ನ್ಯಾಷನಲ್ ಕ್ರೈಸಿಸ್ ಗ್ರೂಪ್ (ಐಸಿಜಿ) ಅಭಿಪ್ರಾಯ. ಹಸೀನಾ ಅವರ ಪ್ರಕರಣದಲ್ಲಿ ಅತ್ಯಂತ ವೇಗವಾಗಿ ವಿಚಾರಣೆ ಪೂರೈಸಿರುವುದು ಮತ್ತು ವಾದ ಮಂಡನೆ ಮಾಡಲು ಪ್ರತಿವಾದಿಗೆ ಸೂಕ್ತ ಅವಕಾಶ ಮತ್ತು ಸೌಲಭ್ಯಗಳನ್ನು ಕಲ್ಪಿಸದೇ ಇರುವುದು ನ್ಯಾಯಸಮ್ಮತತೆಯ ಪ್ರಶ್ನೆ ಹುಟ್ಟುಹಾಕಿದೆ ಎಂದು ಐಸಿಜಿ ಹೇಳಿದೆ.

> **ಹಸ್ತಾಂತರ ಒಪ್ಪಂದವು ಎರಡು ರಾಷ್ಟ್ರಗಳಿಗೆ ಸಂಬಂಧಿಸಿದ್ದಾಗಿರುವುದರಿಂದ ಈ ಪ್ರಕರಣದಲ್ಲಿ ವಿಶ್ವಸಂಸ್ಥೆಗೆ ಮಧ್ಯಪ್ರವೇಶಿಸಲು ಅವಕಾಶ ಇಲ್ಲ. ಆದರೆ, ಎರಡೂ ರಾಷ್ಟ್ರಗಳು ಒಪ್ಪಿದರೆ ಅಂತರರಾಷ್ಟ್ರೀಯ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ನಡೆಸಬಹುದು.**

ಭಾರತದ ರಾಜತಾಂತ್ರಿಕ ತಜ್ಞರೂ ಹಸೀನಾ ಅವರಿಗೆ ಶಿಕ್ಷೆ ವಿಧಿಸಿರುವುದನ್ನು ವಿರೋಧಿಸಿದ್ದಾರೆ. 'ಇದು ಕಾಂಗರೂ ಕೋರ್ಟ್ ಅಲ್ಲದೇ ಬೇರೇನಲ್ಲ' ಎಂದು ಬಾಂಗ್ಲಾದೇಶದಲ್ಲಿ ಭಾರತದ ರಾಜತಾಂತ್ರಿಕ ಅಧಿಕಾರಿಯಾಗಿದ್ದ ವೀಣಾ ಸಿಕ್ರಿ ಅಭಿಪ್ರಾಯಪಟ್ಟಿದ್ದಾರೆ. ಯುದ್ಧ ಅಪರಾಧಿಗಳ ವಿಚಾರಣೆಗಾಗಿ ಸ್ಥಾಪಿಸಿರುವ ಐಸಿಟಿಯು ಹಸೀನಾ ಅವರ ಪ್ರಕರಣಗಳನ್ನು ವಿಚಾರಣೆ ನಡೆಸಿದ್ದೇ ಅಕ್ರಮವಾಗಿದೆ. ಮತ್ತೊಬ್ಬ ರಾಜತಾಂತ್ರಿಕ ಅಧಿಕಾರಿ ರಾಜೀವ್ ಡೊಗ್ರಾ, 'ಹಸೀನಾ ಉತ್ತಮ ನಾಯಕಿಯಾಗಿದ್ದು, ಅವರಿಗೆ ಭಾರತವು ಆಶ್ರಯ ನೀಡಿ ಉತ್ತಮ ಕೆಲಸ ಮಾಡಿದೆ' ಎಂದಿದ್ದಾರೆ.

'ಶೇಖ್ ಹಸೀನಾ ಅವರಿಗೆ ಐಸಿಟಿಯು ಶಿಕ್ಷೆ ವಿಧಿಸಿರುವುದು ಸಂತ್ರಸ್ತರ ದೃಷ್ಟಿಯಿಂದ ಮಹತ್ವದ ಗಳಿಗೆಯಾಗಿದೆ. ಆದರೆ, ಅವರಿಗೆ ಮರಣದಂಡನೆ ವಿಧಿಸಿರುವುದರ ಬಗ್ಗೆ ಪಶ್ಚಾತ್ತಾಪವಿದೆ' ಎಂದು ವಿಶ್ವಸಂಸ್ಥೆ ಪ್ರತಿಕ್ರಿಯಿಸಿದೆ.

ಇಬ್ಬರನ್ನೂ ಹಸ್ತಾಂತರಿಸಬೇಕು ಎಂಬ ಬಾಂಗ್ಲಾದೇಶದ ಮನವಿಗೆ ಭಾರತವು ಎಚ್ಚರಿಕೆಯಿಂದ ಪ್ರತಿಕ್ರಿಯಿಸಿದೆ. 'ಬಾಂಗ್ಲಾದೇಶದ ಶಾಂತಿ, ಪ್ರಜಾಪ್ರಭುತ್ವ, ಸ್ಥಿರತೆಗೆ ಭಾರತ ಬದ್ಧವಾಗಿದ್ದು, ಜನರ ಹಿತದೃಷ್ಟಿಯಿಂದ ರಚನಾತ್ಮಕ ಪಾತ್ರ ನಿರ್ವಹಿಸುತ್ತದೆ' ಎಂದಿದೆ.

ಭಾರತವು ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವುದು ಬಹುತೇಕ ಅಸಂಭವ ಎನ್ನಲಾಗುತ್ತಿದೆ. ಹಸೀನಾ ಅವರನ್ನು ಹಸ್ತಾಂತರಿಸದಿರಲು ದೇಶೀಯ ಕಾನೂನು ಮತ್ತು ದ್ವಿಪಕ್ಷೀಯ ಒಪ್ಪಂದ ಎರಡರ ಪ್ರಕಾರವೂ ಭಾರತಕ್ಕೆ ಸಾಕಷ್ಟು ಕಾರಣಗಳಿವೆ.

ಆಧಾರ: ಭಾರತ –ಬಾಂಗ್ಲಾದೇಶ ಹಸ್ತಾಂತರ ಒಪ್ಪಂದ, ಹಸ್ತಾಂತರ ಕಾಯ್ದೆ–1962, ಪಿಟಿಐ, ಮಾಧ್ಯಮ ವರದಿಗಳು

ಹಸ್ತಾಂತರ ಒಪ್ಪಂದ ಏನು ಹೇಳುತ್ತದೆ?

ಅಪರಾಧ ಕೃತ್ಯಗಳಲ್ಲಿ ತೊಡಗಿರುವವರನ್ನು ಪರಸ್ಪರ ಹಸ್ತಾಂತರ ಮಾಡಿಕೊಳ್ಳುವ ಕುರಿತಾಗಿ ಭಾರತ ಮತ್ತು ಬಾಂಗ್ಲಾದೇಶವು 2013ರಲ್ಲಿ ಒಪ್ಪಂದ ಮಾಡಿಕೊಂಡಿವೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಬಾಂಗ್ಲಾದ ಗೃಹ ಸಚಿವಾಲಯದ ನಡುವೆ ಈ ಕರಾರು ನಡೆದಿದೆ.

ಒಪ್ಪಂದಕ್ಕೆ ಬದ್ಧವಾಗಿ ಭಾರತವು ಹಸೀನಾ ಅವರನ್ನು ಬಾಂಗ್ಲಾದ ಮಧ್ಯಂತರ ಸರ್ಕಾರಕ್ಕೆ ಹಸ್ತಾಂತರ ಮಾಡಬೇಕಾಗುತ್ತದೆಯೇ ಎಂಬ ಪ್ರಶ್ನೆ ಈಗ ಉದ್ಭವವಾಗಿದೆ. ಆದರೆ, ಭಾರತವು ಹಸ್ತಾಂತರ ಮಾಡಲೇಬೇಕು ಎಂದೇನಿಲ್ಲ. ಅದನ್ನು ನಿರಾಕರಿಸಲು ಭಾರತಕ್ಕೆ ಹಲವು ಕಾರಣಗಳಿವೆ. ಕಾನೂನಿನ ಅಡಿಯಲ್ಲೇ ಹಸ್ತಾಂತರದ ಪ್ರಕ್ರಿಯೆಯು ನಡೆಯಬೇಕಾಗುತ್ತದೆ. ಹಾಗಾಗಿ, ತ್ವರಿತವಾಗಿ ಈ ಪ್ರಕ್ರಿಯೆ ನಡೆಯದು ಎಂದು ಮಾಜಿ ರಾಜತಾಂತ್ರಿಕ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

- ದ್ವಿಪಕ್ಷೀಯ ಹಸ್ತಾಂತರ ಒಪ್ಪಂದದ 1 ಮತ್ತು 2ನೇ ಕಲಂಗಳು ಯಾರನ್ನು ಹಸ್ತಾಂತರ ಮಾಡಬಹುದು, ಯಾವ ಸಂದರ್ಭದಲ್ಲಿ ಮಾಡಬಹುದು ಎಂದು ವಿವರಿಸುತ್ತವೆ. ಅಪರಾಧ ಕೃತ್ಯ ಎಸಗಿದವರನ್ನು ಹಸ್ತಾಂತರಿಸಬೇಕಾದರೆ, ಅವರು ಮಾಡಿರುವ ಅಪರಾಧಗಳು ಎರಡೂ ದೇಶಗಳ ಕಾನೂನಿನ ಅಡಿಯಲ್ಲಿ ಶಿಕ್ಷಾರ್ಹವಾಗಿರಬೇಕು
- ಬಾಂಗ್ಲಾದೇಶವು ಶೇಖ್ ಹಸೀನಾ ಅವರು 'ಸಾಮೂಹಿಕ ಮಾರಣಹೋಮದ ಅಪರಾಧ' ಎಸಗಿದ್ದಾರೆ ಎಂದು ಆರೋಪಿಸಿದೆ. ಅಲ್ಲಿನ ಯುದ್ಧ ಅಪರಾಧಗಳ ಚೌಕಟ್ಟಿನ ಅಡಿಯಲ್ಲಿ ಈ ಆರೋಪ ಮಾಡಲಾಗಿದೆ. ಆದರೆ, ಭಾರತದಲ್ಲಿ ಈ ಆರೋಪಗಳನ್ನು ಭಿನ್ನವಾಗಿ ವ್ಯಾಖ್ಯಾನಿಸಲಾಗುತ್ತದೆ. ಅಂತರರಾಷ್ಟ್ರೀಯ ನ್ಯಾಯಮಂಡಳಿಗಳ ವಿಚಾರದಲ್ಲಿ ಇದನ್ನು ಪರಿಗಣಿಸಲಾಗುತ್ತಿದೆಯೇ ವಿನಾ, ದೇಶೀಯ ರಾಜಕಾರಣದ ಘಟನೆಗಳಿಗೆ ಸಂಬಂಧಿಸಿದಂತೆ ಈ ಆರೋಪಕ್ಕೆ ಪ್ರಾಮುಖ್ಯ ನೀಡುವುದಿಲ್ಲ ಎಂಬುದು ಕಾನೂನು ತಜ್ಞರ ಅಭಿಪ್ರಾಯ. ಹಾಗಾಗಿ, ಹಸೀನಾ ವಿರುದ್ಧ ಹೊರಿಸಿರುವ ದೋಷಾರೋಪವು ಭಾರತದ ಕಾನೂನು ವ್ಯವಸ್ಥೆಗೆ ಹೊಂದುವಂತಿಲ್ಲ ಎಂಬುದು ಅವರ ವಾದ
- ಒಪ್ಪಂದದ ಆರನೇ ಕಲಂ, ರಾಜಕೀಯ ಅಪರಾಧಗಳ ವಿನಾಯಿತಿ ಕುರಿತಂತೆ ಇದೆ. ಅದರ 1ನೇ ಸೆಕ್ಷನ್ ಪ್ರಕಾರ, ಅಪರಾಧವು ರಾಜಕೀಯ ಸ್ವರೂಪದ್ದಾಗಿದ್ದರೆ, ಅಪರಾಧ ನಡೆಸಿದ ವ್ಯಕ್ತಿಯ ಹಸ್ತಾಂತರವನ್ನು ನಿರಾಕರಿಸಬಹುದು
- ಒಪ್ಪಂದದ 8ನೇ ಕಲಂ ಯಾವ ಆಧಾರದಲ್ಲಿ ಹಸ್ತಾಂತರವನ್ನು ನಿರಾಕರಿಸಬಹುದು ಎಂಬುದನ್ನು ವಿವರಿಸುತ್ತದೆ. ಅದರ 3ನೇ ಉಪನಿಯಮದ ಪ್ರಕಾರ, ಒಂದು ವೇಳೆ, ನಿರ್ದಿಷ್ಟ ವ್ಯಕ್ತಿಯ ವಿರುದ್ಧ ಮಾಡಲಾದ ಆರೋಪದ ಹಿಂದೆ ಪ್ರಾಮಾಣಿಕ ಮತ್ತು ನ್ಯಾಯಸಮ್ಮತ ಉದ್ದೇಶ ಇಲ್ಲದಿದ್ದರೆ ಅಂತಹ ಸಂದರ್ಭದಲ್ಲಿ ವ್ಯಕ್ತಿಯನ್ನು ಹಸ್ತಾಂತರಿಸದೇ ಇರಬಹುದು
- ಬಾಂಗ್ಲಾದೇಶದಲ್ಲಿ ಹಸೀನಾ ಅವರ ವಿರುದ್ಧ ನಡೆದ ದಂಗೆ, ಅವರ ಪದಚ್ಯುತಿ ನಂತರ ಅವರ ಮೇಲೆ ಹೊರಿಸಲಾಗಿರುವ ಆರೋಪಗಳೆಲ್ಲ ರಾಜಕೀಯ ದ್ವೇಷದಿಂದ ಮಾಡಿರುವಂತಹದ್ದು ಎಂಬ ಮಾತು ಕೇಳಿಬರುತ್ತಲೇ ಇವೆ. ಈಗ ನಡೆದಿರುವ ವಿಚಾರಣೆಯೂ ನ್ಯಾಯಸಮ್ಮತವಾಗಿ ನಡೆದಿಲ್ಲ ಎನ್ನಲಾಗುತ್ತಿದೆ. ಹಾಗಾಗಿ, ಇದರ ಆಧಾರದಲ್ಲೂ ಹಸ್ತಾಂತರ ಮಾಡುವುದಿಲ್ಲ ಎಂದು ಭಾರತ ವಾದಿಸಬಹುದು ಎಂಬುದು ಮಾಜಿ ರಾಜತಾಂತ್ರಿಕರ ಅಭಿಪ್ರಾಯ

ಹಸ್ತಾಂತರ ಕಾಯ್ದೆ ಹೇಳುವುದೇನು?

ಹೊರದೇಶಗಳಲ್ಲಿ ಅಪರಾಧ ಎಸಗಿ ಅಲ್ಲಿಂದ ಪರಾರಿಯಾಗಿ ಭಾರತದಲ್ಲಿ ಆಶ್ರಯ ಪಡೆದಿರುವ ವ್ಯಕ್ತಿಗಳನ್ನು ಅವರ ದೇಶಕ್ಕೆ ಹಸ್ತಾಂತರ ಮಾಡುವ ಸಂಬಂಧ ಭಾರತವು 1962ರಲ್ಲಿ ಹಸ್ತಾಂತರ ಕಾಯ್ದೆಯನ್ನು ಜಾರಿಗೆ ತಂದಿದೆ.

- ಕಾಯ್ದೆಯ 31(1) ಸೆಕ್ಷನ್ ಪ್ರಕಾರ, ಒಂದು ವೇಳೆ ಅಪರಾಧವು ರಾಜಕೀಯ ಸ್ವರೂಪದ್ದಾಗಿದ್ದರೆ ವಿದೇಶದಿಂದ ಪರಾರಿಯಾಗಿ ಬಂದಿರುವ ಅಪರಾಧಿಯನ್ನು ಹಸ್ತಾಂತರಿಸಬೇಕಿಲ್ಲ ಅಥವಾ ಆತ ಶರಣಾಗುವಂತೆ ಮಾಡಬೇಕಾಗಿಲ್ಲ
- ಕಾಯ್ದೆಯ 29ನೇ ಸೆಕ್ಷನ್ ಪ್ರಕಾರ, ಅಪರಾಧಿಯನ್ನು ಹಸ್ತಾಂತರಿಸುವಂತೆ ಅಥವಾ ಮರಳಿಸುವಂತೆ ಹೊರದೇಶವು ಮಾಡಿರುವ ಮನವಿಯು ಪ್ರಾಮಾಣಿಕವಾಗಿ ಇಲ್ಲದಿದ್ದರೆ ಅಥವಾ ನ್ಯಾಯದ ಹಿತಾಸಕ್ತಿಯಿಂದ ಕೂಡಿರದಿದ್ದರೆ ಅಥವಾ ರಾಜಕೀಯ ಕಾರಣಗಳಿಗೆ ಆಗಿದ್ದರೆ ಕೇಂದ್ರ ಸರ್ಕಾರವು ಆ ಮನವಿಯನ್ನು ತಿರಸ್ಕರಿಸಬಹುದು

ಐಸಿಟಿ ಸ್ಥಾಪಿಸಿದ್ದೇ ಹಸೀನಾ

ಹಸೀನಾ ಅವರಿಗೆ ಮರಣದಂಡನೆ ವಿಧಿಸಿರುವ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯನ್ನು (ಐಸಿಟಿ) ಸ್ಥಾಪಿಸಿದ್ದೂ ಅವರೇ. 1971ರ ಬಾಂಗ್ಲಾ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಸುಮಾರು 30 ಲಕ್ಷ ಮಂದಿ ಸಾವಿಗೀಡಾಗಿದ್ದರು. ಆ ಸಂದರ್ಭದಲ್ಲಿ ನಡೆದ ಜನಾಂಗೀಯ ಹತ್ಯೆ, ಕೊಲೆ, ಅತ್ಯಾಚಾರ ಇತ್ಯಾದಿಗಳನ್ನು ವಿಚಾರಣೆ ಮಾಡಲು ಹಸೀನಾ ಅವರು 2010ರಲ್ಲಿ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯನ್ನು ಸ್ಥಾಪಿಸಿದ್ದರು. ಅದು ದೇಶೀಯ ನ್ಯಾಯಾಲಯವಾಗಿದೆ. ಹಸೀನಾ ಅವರ ಅವಧಿಯಲ್ಲಿ ಐಸಿಟಿಯು ಜಮಾತ್–ಎ–ಇಸ್ಲಾಮಿ, ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ಮತ್ತು ಪಾಕಿಸ್ತಾನದ ಸೇನೆಯ ಜತೆಗೆ ಒಡನಾಟ ಹೊಂದಿದ್ದವರನ್ನು ಶಿಕ್ಷೆಗೆ ಗುರಿ ಮಾಡಿತ್ತು.

2024ರಲ್ಲಿ ಹಸೀನಾ ಪದಚ್ಯುತಿಯ ನಂತರ ನವೆಂಬರ್‌ನಲ್ಲಿ ಐಸಿಟಿ ಕಾಯ್ದೆಗೆ ತಿದ್ದುಪಡಿ ತಂದು, ಅದರ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. 2025ರಲ್ಲಿ ಮತ್ತಷ್ಟು ತಿದ್ದುಪಡಿಗಳನ್ನು ತಂದು, ರಾಜಕೀಯ ಸಂಘಟನೆಗಳನ್ನೂ ಅದರ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಅವುಗಳನ್ನು ರದ್ದುಪಡಿಸುವ ಅಧಿಕಾರವನ್ನೂ ಐಸಿಟಿಗೆ ನೀಡಲಾಯಿತು. ಹಸೀನಾ ಅವರ ವಿರುದ್ಧದ ಐದು ಪ್ರಕರಣಗಳಲ್ಲಿ ತೀರ್ಪು ಹೊರಬಿದ್ದಿದ್ದು, ಇನ್ನೂ ಮೂರು ಪ್ರಕರಣಗಳು ವಿಚಾರಣಾ ಹಂತದಲ್ಲಿವೆ. ತೀರ್ಪು ಪ್ರಕಟವಾದ 30 ದಿನಗಳ ಒಳಗೆ ಹಸೀನಾ ನ್ಯಾಯಮಂಡಳಿಗೆ ಶರಣಾಗಬೇಕು ಇಲ್ಲವೇ ಅವರ ಬಂಧನವಾಗಬೇಕು. ಇಲ್ಲದಿದ್ದರೆ, ಅವರಿಗೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕು ಇರುವುದಿಲ್ಲ.

ರಾಷ್ಟ್ರೀಯ

ಎನ್‌ಕೌಂಟರ್: ಮುಖಂಡ ಹಿಡ್ಮಾ ಸೇರಿ 6 ನಕ್ಸಲರ ಹತ್ಯೆ

ಮಾಡವಿ ಹಿಡ್ಮಾ – ಪಿಟಿಐ ಚಿತ್ರ

ಮಾರೇಡುಮಿಲ್ಲಿ/ರಾಯಪುರ (ಪಿಟಿಐ): ಮಾವೊವಾದಿ ಸಂಘಟನೆಯ ಕೇಂದ್ರ ಸಮಿತಿ ಸದಸ್ಯ, ನಕ್ಸಲ್ ಮಿಲಿಟರಿ ಕಾರ್ಯಾಚರಣೆಗಳ 'ಮಾಸ್ಟರ್ ಮೈಂಡ್' ಎಂದೇ ಹೆಸರಾಗಿದ್ದ ಛತ್ತೀಸಗಢದ ಮಾಡವಿ ಹಿಡ್ಮಾ (51) ಮತ್ತು ಆತನ ಪತ್ನಿ ಮದಕಂ ರಾಜೆ ಸೇರಿದಂತೆ ಆರು ನಕ್ಸಲರನ್ನು ಆಂಧ್ರಪ್ರದೇಶ ಪೊಲೀಸರು ಮಂಗಳವಾರ ಇಲ್ಲಿನ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯಲ್ಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ.

ಛತ್ತೀಸಗಢದಲ್ಲಿ ನಕ್ಸಲರ ವಿರುದ್ಧ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (ಆಪರೇಷನ್ ಕಗಾರ್) ಕಾರ್ಯಾಚರಣೆ ತೀವ್ರಗೊಂಡ ಬೆನ್ನಲ್ಲೇ, ಹಿಡ್ಮಾ, ಪತ್ನಿ ಮತ್ತು ತನ್ನ ನಾಲ್ವರು ಭದ್ರತಾ ಸಿಬ್ಬಂದಿ ಜತೆಗೆ ಆಂಧ್ರಪ್ರದೇಶಕ್ಕೆ ಸ್ಥಳಾಂತರಗೊಳ್ಳಲು ಯೋಜನೆ ರೂಪಿಸಿದ್ದ.

'ಆಂಧ್ರಪ್ರದೇಶ–ಛತ್ತೀಸಗಢ–ಒಡಿಶಾ ಗಡಿಯಲ್ಲಿ ಇತ್ತೀಚೆಗೆ ನಕ್ಸಲರ ಓಡಾಟ ಹೆಚ್ಚಿದೆ ಎಂದು ಗುಪ್ತಚರ ಮಾಹಿತಿ ಲಭಿಸಿತ್ತು. ಮಂಗಳವಾರ ಮಾರೇಡುಮಿಲ್ಲಿ ಅರಣ್ಯ ಪ್ರದೇಶದ ಮೂಲಕ ನಕ್ಸಲರ ತಂಡ ಆಂಧ್ರ ಪ್ರವೇಶಿಸುವ ಪ್ರಯತ್ನದಲ್ಲಿದ್ದಾಗ, ಎನ್‌ಕೌಂಟರ್‌ನಲ್ಲಿ ಅವರನ್ನು ಹತ್ಯೆ ಮಾಡಲಾಯಿತು' ಎಂದು ಆಂಧ್ರ ಪ್ರದೇಶದ ಗುಪ್ತಚರ ವಿಭಾಗದ ಎಡಿಜಿಪಿ ಮಹೇಶ್ ಚಂದ್ರ ಲಡ್ಡಾ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಛತ್ತೀಸಗಢದ ಸುಕ್ಮಾ ಜಿಲ್ಲೆಯ ಪೂವರ್ತಿ ಗ್ರಾಮದ ಹಿಡ್ಮಾ, ಎರಡು ದಶಕಗಳಿಂದೀಚೆಗೆ ದೇಶದಲ್ಲಿ ನಡೆದಿರುವ ಎಲ್ಲ ಪ್ರಮುಖ ನಕ್ಸಲ್ ದಾಳಿಗಳ ಹಿಂದಿನ ಸೂತ್ರಧಾರನಾಗಿದ್ದ. ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿಯ (ಪಿಎಲ್‌ಜಿಎ) ಬೆಟಾಲಿಯನ್-1ರ ಕಮಾಂಡರ್ ಆಗಿದ್ದ ಈತನ ಭಾವಚಿತ್ರವನ್ನು ಇತ್ತೀಚೆಗೆ ಪೊಲೀಸರು ಬಿಡುಗಡೆ ಮಾಡುವವರೆಗೂ ಈತನ ರೂಪ ಮತ್ತು ವಯಸ್ಸು ನಿಗೂಢವಾಗಿಯೇ ಉಳಿದಿತ್ತು.

'ಮಾರೇಡುಮಿಲ್ಲಿ ಮಂಡಲದ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಬೆಳಗಿನ ಜಾವ 6.30ರಿಂದ 7ರ ನಡುವೆ ಎನ್‌ಕೌಂಟರ್ ನಡೆದಿದೆ. ಹತ್ಯೆಯಾದವರಲ್ಲಿ ಇಬ್ಬರು ಮಹಿಳೆಯರು, ನಾಲ್ವರು ಪುರುಷರು ಸೇರಿದ್ದಾರೆ. ಕೆಲವರು ತಪ್ಪಿಸಿಕೊಂಡಿದ್ದಾರೆ' ಎಂದು ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಬಾರ್ದರ್ ಹೇಳಿದ್ದಾರೆ.

ಹಿಡ್ಮಾ, ಪತ್ನಿ ಮದಕಂ ರಾಜೆ ಜತೆಗೆ ಅವರ ಭದ್ರತಾ ಸಿಬ್ಬಂದಿ ದೇವಿ, ಲಕ್ಮಲ್ (ಚೈತು), ಮಲ್ಲ (ಮಲ್ಲಲು) ಮತ್ತು ಕಮಲು (ಕಮಲೇಶ್) ಎನ್‌ಕೌಂಟರ್ ನಲ್ಲಿ ಹತ್ಯೆಯಾಗಿದ್ದಾರೆ. 'ಈ ಎನ್‌ಕೌಂಟರ್‌ನಿಂದ ಬಸ್ತಾರ್ ವಲಯದ ನಕ್ಸಲ್ ಚಳವಳಿಯ ಶವಪೆಟ್ಟಿಗೆ ಮೇಲೆ ಕೊನೆಯ ಮೊಳೆ ಹೊಡೆದಂತಾಗಿದೆ' ಎಂದು ಛತ್ತೀಸಗಢ ಪೊಲೀಸರು ಹೇಳಿದ್ದಾರೆ.

ಎನ್‌ಕೌಂಟರ್ ನಡೆದ ಸ್ಥಳದಿಂದ ಎರಡು ಎಕೆ–47 ರೈಫಲ್, ಒಂದು ಪಿಸ್ತೂಲ್, ಸ್ಫೋಟಕಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಶಕ್ತಿಶಾಲಿ ಬೆಟಾಲಿಯನ್

ಮಾವೊವಾದಿ ಸಂಘಟನೆಯ ಶ್ರೇಣಿ ವ್ಯವಸ್ಥೆಯಲ್ಲಿ ಎಲ್ಲ ಪ್ರಮುಖ ಹುದ್ದೆಗಳನ್ನು ಹಿಡ್ಮಾ ನಿಭಾಯಿಸಿದ್ದ. ಸಂಘಟನೆಯ ಮಿಲಿಟರಿ ಕಾರ್ಯಾಚರಣೆಯ ಮುಖ್ಯಸ್ಥನಾಗಿದ್ದ ಆತ ಇತ್ತೀಗೆಷ್ಟೇ ದಂಡಕಾರಣ್ಯ ವಿಶೇಷ ವಲಯ ಸಮಿತಿಯ (ಡಿಎಸ್‌ಜೆಡ್‌ಸಿ) ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದ. ಸಂತೋಷ್ ಸೇರಿ ಹಲವು ಹೆಸರುಗಳಿಂದಲೂ ಗುರುತಿಸಿಕೊಂಡಿದ್ದ.

ಹಿಡ್ಮಾ ಮುನ್ನಡೆಸುತ್ತಿದ್ದ 'ಪಿಎಲ್‌ಜಿಎ' ಬೆಟಾಲಿಯನ್–1, ದಂಡಕಾರಣ್ಯ ವಿಶೇಷ ವಲಯ ಸಮಿತಿಯ ಅತ್ಯಂತ ಶಕ್ತಿಶಾಲಿ ಘಟಕವಾಗಿದೆ. ಛತ್ತೀಸಗಢದ ಬಸ್ತಾರ್ ಮಾತ್ರವಲ್ಲ ಆಂಧ್ರ ಪ್ರದೇಶ, ಒಡಿಶಾ, ತೆಲಂಗಾಣ, ಮಹಾರಾಷ್ಟ್ರದಲ್ಲೂ ಈ ಘಟಕ ಸಕ್ರಿಯವಾಗಿದೆ.

31 ಮಂದಿ ಬಂಧನ

ವಿಜಯವಾಡದಲ್ಲಿ ಆಶ್ರಯ ಪಡೆದಿದ್ದ, ನಕ್ಸಲರ ಜತೆಗೆ ಸಂಪರ್ಕ ಹೊಂದಿರುವ 31 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ಎನ್‌ಟಿಆರ್, ಕೃಷ್ಣಾ, ಕಾಕಿನಾಡ ಮತ್ತು ಏಲೂರು ಜಿಲ್ಲೆಗಳಲ್ಲೂ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಬಂಧಿತರಲ್ಲಿ 9 ಮಂದಿ ಸಿಪಿಐ ಮಾವೊವಾದಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ತಿಪ್ಪಿರಿ ತಿರುಪತಿ ಅಲಿಯಾಸ್ ದೇವ್‌ಜಿ ಅವರ ಭದ್ರತಾ ಸಿಬ್ಬಂದಿ ಎಂದು ಪೊಲೀಸರು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಹಾರದ ಚುನಾವಣೆಯಲ್ಲಿ ಸೋತಿರುವ ರಾಷ್ಟ್ರೀಯ ಜನತಾ ದಳದ (ಆರ್‌ಜೆಡಿ) ಬೆಂಬಲಿಗರು ಮಂಗಳವಾರ (ನ.18) ಪಟ್ನಾದಲ್ಲಿ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸಿದ್ದು, ಇದರಲ್ಲಿ 2 ಕೋಟಿಗೂ ಹೆಚ್ಚು ಜನರು ಭಾಗವಹಿಸಿದ್ದಾರೆ ಎಂದು ಪ್ರತಿಪಾದಿಸುತ್ತಾ ನಗರವೊಂದರ ರಸ್ತೆಗಳಲ್ಲಿ ಭಾರಿ ಜನಸ್ತೋಮ ಇರುವ ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಹುಡುಕಾಟ ನಡೆಸಿದಾಗ ಇದೇ ವಿಡಿಯೊ ತುಣುಕು 2022ರ ಡಿಸೆಂಬರ್ 21ರಂದು ಸಿಬಿಎಸ್ ನ್ಯೂಸ್ ವರದಿಯಲ್ಲಿ ಪ್ರಸಾರವಾಗಿದ್ದು ಕಂಡು ಬಂತು. ಆ ವರ್ಷ ಅರ್ಜೆಂಟೀನಾವು ಫುಟ್‌ಬಾಲ್ ವಿಶ್ವಕಪ್ ಅನ್ನು ಗೆದ್ದ ಸಂಭ್ರಮ ಆಚರಿಸಲು ಭಾರಿ ಸಂಖ್ಯೆಯಲ್ಲಿ ಬ್ಯೂನಸ್ ಐರಿಸ್ ನಗರದಲ್ಲಿ ಸೇರಿದ್ದ ಜನಸ್ತೋಮದ ವಿಡಿಯೊ ಅದಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಹಾಕಿ ಗೂಗಲ್‌ನಲ್ಲಿ ಹುಡುಕಿದಾಗ ಬೇರೆ ಮಾಧ್ಯಮಗಳಲ್ಲೂ 2022ರ ಡಿ.21ರಂದು ಸುದ್ದಿಗಳು ಪ್ರಕಟಗೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಾಡಿದಾಗ ಬಿಹಾರದ ಪಟ್ನಾದಲ್ಲಿ ಆರ್‌ಜೆಡಿ ಬೆಂಬಲಿಗರು ಬೃಹತ್ ಪ್ರತಿಭಟನೆ ನಡೆಸಿರುವ ಬಗ್ಗೆ ಯಾವುದೇ ವಿಶ್ವಾಸಾರ್ಹ ವರದಿಗಳು ಸಿಗಲಿಲ್ಲ. ಹಾಗಾಗಿ, ಅರ್ಜೆಂಟೀನಾದ ಮೂರು ವರ್ಷ ಹಳೆಯ ವಿಡಿಯೊವನ್ನು ಪಟ್ನಾದಲ್ಲಿ ನಡೆದ ಪ್ರತಿಭಟನೆಯ ವಿಡಿಯೊ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸಾಯಿಸುವ ಗತವ ಮೆಟ್ಟಿ

ನುಡಿ ಬೆಳಗು

ವಾಸುದೇವ ನಾಡಿಗ್

ಊರಿನ ಜನರೆಲ್ಲರೂ ಮಾತಾಡಿಕೊಳ್ಳುತ್ತಿದ್ದರು, ಬರುವ ಪ್ರವಾಸಿಗರೆಲ್ಲರೂ ಆ ಯುವತಿಯ ಕಲಾ ಕುಸರಿಯ ಗಾಜಿನ ವಸ್ತುಗಳ ಅಂಗಡಿಗೆ ಭೇಟಿ ಕೊಟ್ಟೇ ಹೋಗುತ್ತಿದ್ದರು; ಏನಿರಬಹುದು ಅಂತಹದ್ದು ಅಂತ. ನಸುಕಿನಲ್ಲೇ ಎದ್ದು ಏಕಾಗ್ರತೆ ನಯ ನಾಜೂಕಿನಿಂದ ಆ ಸೂಕ್ಷ್ಮ ಗಾಜಿನ ಮಡಕೆ ಭರಣಿ ಕನ್ನಡಿ ಲೋಟ ಇತ್ಯಾದಿ ವಸ್ತುಗಳನ್ನು ಹೊರತೆಗೆದು ಸಂಯಮದಿಂದ ಒರೆಸಿ ಸಾಲಾಗಿ ಜೋಡಿಸಿಡುತ್ತಿದ್ದ ಬಗೆಯೇ ಆಶ್ಚರ್ಯಕರ.

ತಾನೆ ಸ್ವತಃ ತನ್ನ ಅಪ್ಪ ಅಮ್ಮ ಅಜ್ಜ ಅಜ್ಜಿಯ ಮೂಲಕ ಕಲಿತೇ ತಯಾರಿಸುತ್ತಿದ್ದ ಮತ್ತು ಹೊರದೇಶಗಳಿಂದಲೂ ತಂದು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಆ ಯುವತಿ ಇಡೀ ಊರಿನ ಅಚ್ಚರಿ. ಕಾಲ ಕಳೆದಂತೆ ವ್ಯಾಪಾರವೂ ಮತ್ತು ವಸ್ತುಗಳ ಸಂಗ್ರಹವೂ ಹೆಚ್ಚಾದ್ದರಿಂದ ಒಬ್ಬ ಸಹಾಯಕರ ಅಗತ್ಯವೂ ಇತ್ತು. ಹೇಗೋ ಒಬ್ಬ ವೃದ್ಧನ ಪರಿಚಯವಾಗಿ ಅವನನ್ನೇ ಸಹಾಯಕನನ್ನಾಗಿ ಇಟ್ಟುಕೊಂಡಳು. ತುಸು ನಡುಗುವ ದೇಹದ ಆ ವೃದ್ಧನಿಗೆ ಭಯ. ಈ ಎಲ್ಲ ವಸ್ತುಗಳನ್ನು ಎತ್ತಿಡುವಾಗ ಎಲ್ಲಿ ಕೈಜಾರಿ ಬಿದ್ದು ಒಡೆದು ಹೋಗುತ್ತದೆಯೋ ಅಂತ. ಮನಸ್ಸು ಕೂಡಾ ಸದಾ ವಿಚಲಿತ. ನಿಧನ ಹೊಂದಿದ ಪತ್ನಿ, ಮನೆ ಬಿಟ್ಟು ಓಡಿಹೋದ ಮಗ ಹೀಗೆ ನೆನಪು ನೋವು. ಒಮ್ಮೆ ಹೀಗೇ ಆಯಿತು. ನಸುಕಿನಲ್ಲಿ ಎಲ್ಲ ವಸ್ತುಗಳನ್ನು ಜೋಡಿಸಿಡುವಾಗ ಸುಂದರವಾದ ಗಾಜಿನ ಹೂ ಕುಂಡವೊಂದು ಬಿದ್ದೇ ಹೋಯಿತು.

ವೃದ್ಧ ಹೋ ಅಂತ ಅಳುತ್ತ ಕೂತ. ಅವನನ್ನು ಸಮಾಧಾನ ಮಾಡಿದ ಯುವತಿ ನೆಲದಲ್ಲಿ ಬಿದ್ದಿದ್ದ ಚೂರುಗಳನ್ನು ಆಯ್ದುಕೊಂಡಳು. ಮರುದಿನ ಅಂಗಡಿಯ ಕಟ್ಟೆಯ ಮುಂದಿನ ಸಾಲಿನಲ್ಲಿಯೇ ಆ ಒಡೆದ ಚೂರುಗಳ ಅಂಟಿಸಿ ಮತ್ತೆ ಅಣಿಗೊಳಿಸಿದ್ದಳು. ಚೂರುಗಳನ್ನು ಅಂಟಿಸುವಾಗ ಬಂಗಾರದ ಬಣ್ಣದ ಗೋಂದನ್ನು ಬಳಸಿ ಇನ್ನಷ್ಟು ಅಂದ ಗೊಳಿಸಿದ್ದಳು. ಬಿರುಕುಗಳನ್ನೂ ಚಂದಗೊಳಿಸುವ ಮಾರ್ಗವಿದು.

ಸದಾ ನಮ್ಮನ್ನು ಕದಡುವ ಮತ್ತು ಗಾಯಗೊಳಿಸುವ ನೆನಪು ಸಂವೇದನೆಗಳಿಂದ ದೂರವಿರಲು ಮತ್ತೊಂದು ಕೆಲಸದ ಮೇಲೆ ಧ್ಯಾನ ಇಡುವುದು ಅಗತ್ಯ ಎನಿಸುತ್ತದೆ. ಆ ಯುವತಿ ಅಪಘಾತದ ಸರಣಿಯಲ್ಲಿ ತನ್ನ ಅಜ್ಜ ಅಜ್ಜಿ ಅಪ್ಪ ಅಮ್ಮನನ್ನು ಕಳೆದುಕೊಂಡು ಖಿನ್ನತೆಗೆ ಜಾರಿದಾಗ ಅವಳಿಗೆ ಹೊಸ ಬಾಳಿನತ್ತ ಸಾಗಬೇಕಿತ್ತು. ಖಿನ್ನತೆಯಿಂದ ಬಿಡುಗಡೆ ಬೇಕಿತ್ತು. ಅಪಾರವಾದ ಸಂಯಮವನ್ನು ಬಯಸುವ ಈ ಕುಸುರಿ ಕಲೆಗಳನ್ನು ಹೊತ್ತ ಕಲಾತ್ಮಕ ವಸ್ತುಗಳ ನಿರ್ವಹಣೆಯನ್ನು ಆಯ್ದುಕೊಂಡಿದ್ದಳು. ಹಳೆ ಕೊರಗುಗಳನ್ನು, ಹಳೆ ಗಾಯಗಳನ್ನು, ಹಳೆಯ ಸೋಲುಗಳನ್ನು ಮರೆಯಲು ಈ ತರಹದ ಹೊಸ ಧ್ಯಾನಸ್ಥ ಕೆಲಸದಲ್ಲಿ ಮುಳುಗುವ ಬಗೆಯನ್ನು ವೃದ್ಧನಿಗೂ ಕಲಿಸಿಕೊಟ್ಟಿದ್ದಳು

ಸದಾ ಒಂದಿಲ್ಲೊಂದು ಕ್ರಿಯಾತ್ಮಕ ಮತ್ತು ಸೃಜನಶೀಲ ಕೆಲಸಗಳಲ್ಲಿ ಮುಳುಗುವ ಮನುಷ್ಯರ ಆರೋಗ್ಯದ ಗುಟ್ಟು ಇದೇ. ಪರಿಸ್ಥಿತಿಗಳನ್ನು ನಿರ್ವಹಿಸುವ ಬಾಳಿನ ಕಲೆ ಇದು ಅನಿಸುತ್ತದೆ. ಎಷ್ಟೋ ಸಲ ನಮ್ಮ ದೈಹಿಕವಾದ ವ್ಯಸ್ತತೆ (ಬ್ಯುಸಿ) ನಮ್ಮ ಮಾನಸಿಕ ಸಂತುಲತೆಯನ್ನೂ ಚೊಕ್ಕವಾಗಿ ಇಡಬಲ್ಲದು. ಇಡೀ ಊರಿನ ಜನರು ಹುಬ್ಬೇರಿಸುವ ಹಾಗೆ ಮಾಡಿದ್ದ ಆ ಯುವತಿಯ ವರ್ತಮಾನದ ಇರುವಿಕೆಯ ಹಿಂದೆ ಎಂತಹ ನೋವಿನ ಇತಿಹಾಸ ಇದೆ, ನೆನಪು ಇದೆ ನೋಡಿ. ಹಿಂದಣ ಹೆಜ್ಜೆಗಳನ್ನು ಅನೇಕ ಸಲ ಮರೆಯುವುದು ಕೂಡಾ ದಿವ್ಯ ಔಷಧಿಯೇ ಹೌದು.

ಗುಂಡಣ್ಣ

ಪದಬಂಧ 6228

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತಿಶಯವಾದ ಮಾತಿದು (3)
2.ಬದ್ಧ ದ್ವೇಷವಿದು (4)
4.ನಡುವೆ ತಿರುಗಿ ಹಾರಿ ಆಕ್ರೋಶದಿಂದ ಹೀಗೆ ರೇಗು! (4)
6.ಮೂಗಿನಿಂದ ಸುರಿವ ಶ್ಲೇಷ್ಮ (3)
7.ಹರಸುವಾಗ ತಿರುಗಿರುವ ಆಕಳು (2)
9.ಪಾರಿವಾಳ ಇಲ್ಲಿ ಕಾಣುತ್ತಿದೆ (3)
11.ಹಮ್ಮೀರನಿಗೆ ಶಿವ ಪ್ರತ್ಯಕ್ಷನಾಗಿರುವನಲ್ಲಾ! (2)
13.ಅರ್ಧ ತಿಂದುದನ್ನು ಪುನಃ ನುರಿಸಿ ತಿನ್ನುವಿಕೆ (3)
14.ಈತ ಪರೀಕ್ಷೆ ಮಾಡುವವನು (4)
16.ನಯವಿಲ್ಲದೆ ಒರಟಾದುದು (4)
17.ತರಳೆ ಹಿಡಿದಿರುವ ಹತ್ತಿ! (3)

ಮೇಲಿಂದ ಕೆಳಕ್ಕೆ

1.ಈ ರೀತಿ ದೃಷ್ಟಾಂತವನ್ನು ಕೊಡು (5)
2.ಸುಖ ದುಃಖಕ್ಕೆ ಕಾರಣವಾದ ಪೂರ್ವ ಜನ್ಮದ ಕೃತ್ಯ (2)
3.ಇದು ಲಲಾಟಲಿಖಿತ (5)
5.ಯೌವ್ವನವನ್ನು ಹೊಂದಿದವನು (3)
8.ಗುಲಾಲು ಹಿಡಿದಿರುವ ಈತ ಬಲು ಠಕ್ಕ! (5)
10.ಯಥಾವತ್ತಾದ ರೂಪವಿದು (3)
12.ಯುದ್ಧವನ್ನು ಸಾರುವ ಕಹಳೆ (5)
15.ಉದ್ದವಾದ ಕೂದಲು (2)



6227ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರುಜಹಮ 4.ಕಡ
5.ಸುಡುಗಾಡು 6.ದಾಸಿ
7.ಉಪವಾಸಸತ್ಯಾಗ್ರಹ
9.ವಿದ್ಯುನ್ಮಾನಮತಯಂತ್ರ
12.ತದೂ 13.ಷರಬತ್ತು
15.ಶುಕ 16.ಪರದೇಶಿ

ಮೇಲಿಂದ ಕೆಳಕ್ಕೆ:
1.ರುಸಪ್ಪೆಲು 2.ಹಲಕ್ಕವಾ
3.ಜಾಡು 4.ಕಡುದಾಹ
8.ಸದನ 9.ವಿದೂಷಕ
10.ತಳವಾರ 11.ತ್ರಯೋದಶಿ
14.ಬಡ್ಡಿ

ಸುಡೊಕು 6612

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		1		3	5		7
7		6	4				3	1
	3				7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

6611 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ನವೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ದಶಿ ಗಂ 9-44 **ನಕ್ಷತ್ರ:** ಸ್ವಾತಿ ಗಂ 7-59 **ಯೋಗ:** ಸೌಭಾಗ್ಯ ಗಂ. 9-00 **ಕರಣ:** ಶಕುನಿ ಗಂ. 9-44 ವೃಶ್ಚಿಕ ಮಾಸದ 04 ನೇ ದಿನ. **ಮಳೆ ನಕ್ಷತ್ರ :** ವಿಶಾಖ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 - 01-30 , **ಸೂರ್ಯೋದಯ :** 06-35 **ಸೂರ್ಯಾಸ್ತ :** 05-57, ಮುಸ್ಲಿಂ ದಿನಾಂಕ : 27 ಜುಮಾದುಲ್ಲಾವಲ್ , **ಅದೃಷ್ಟ ಸಂಖ್ಯೆ :** 7, 3

ಮೇಷ: ಸರ್ಕಾರಿ ಲೋಕೋಪಯೋಗಿ ಕೆಲಸದ ಗುತ್ತಿಗೆದಾರರು ಕಾಮಗಾರಿಗಳನ್ನು ನಿಮ್ಮೆಡೆಗೆ ಮಾಡಿಕೊಳ್ಳುವ ವಿಚಾರದಲ್ಲಿ ಎಡವಿ ಬೀಳುವ ಸಾಧ್ಯತೆ ಇದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಬೇಕಾಗುವುದು.

ವೃಷಭ: ಮನೆಯ ಹತ್ತಿರದಲ್ಲಿನ ಅತಿ ಜನಸಂಖ್ಯೆ ಸೇರುವ ಕಾರ್ಯಕ್ರಮವು ಶಾಂತಚಿತ್ತಕ್ಕೆ ಭಂಗ ತರುವುದು. ಮದುವೆಯ ಪ್ರಯುಕ್ತ ವಿಲಾಸೀ ಸಾಮಗ್ರಿಗಳನ್ನು ಖರೀದಿಸುವಿರಿ. ವಿವಾಹ ಅಪೇಕ್ಷಿಗಳಿಗೆ ಶುಭವಿದೆ.

ಮಿಥುನ: ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿರ್ಧಾರವು ಬಹಳ ಅನುಕೂಲಕರವಾಗುವುದು. ಮನಸ್ಸಿನಲ್ಲಿ ನೋವಿದ್ದರೂ ಇತರರ ಎದುರು ನಗುಮೊಗದ ಮುಖವಾಡವನ್ನು ಧರಿಸಬೇಕಾದ ಪರಿಸ್ಥಿತಿ ಇರುತ್ತದೆ.

ಕರ್ಕಾಟಕ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಸಂಗೀತಗಾರ ಕಂಠಸಿರಿಗೆ ಉತ್ತಮ ಪ್ರಶಂಸೆಗಳು ಕೇಳಿಬರುತ್ತವೆ.

ಸಿಂಹ: ಬಹುವಾಗಿ ಬೇಕಾದ ವ್ಯಕ್ತಿಗಳ ಅನುಪಸ್ಥಿತಿಯಿಂದ ಮಾಡುವ ಎಲ್ಲಾ ಕೆಲಸಗಳಲ್ಲೂ ಸಣ್ಣಪುಟ್ಟ ಗಡಿಬಿಡಿಗಳುಂಟಾಗಲಿವೆ. ಹತ್ತಿ ಬಟ್ಟೆಯ ತಯಾರಕರಿಗೆ ಹಾಗೂ ವ್ಯಾಪಾರಸ್ಥರಿಗೆ ಗ್ರಾಹಕರು ದೊರಕಲಿದ್ದಾರೆ.

ಕನ್ಯಾ: ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಪರಿಶ್ರಮ ಮತ್ತು ದೇವರ ಕೃಪಾಕಟಾಕ್ಷ ಪಡಬೇಕಾಗುವುದು. ಸಂತುಷ್ಟವಾಗಿ ಜೀವಿಸುತ್ತಿರುವ ನೀವು ಇತರರ ಬೇಡದ ಮಾತುಗಳಿಗೆ ಬೆಲೆ ಕೊಡದಿರಿ.

ತುಲಾ: ನಿರುದ್ಯೋಗಿಗಳಿಗೆ ತಾತ್ಕಾಲಿಕ ಉದ್ಯೋಗ ದೊರಕುವ ಸುದ್ದಿಯಿಂದ ತುಸು ಸಮಾಧಾನ ಸಿಗುವುದು. ಬಹಳ ದಿನಗಳಿಂದ ಅಪೇಕ್ಷಿಸಿದ ಯಾತ್ರೆಗೆ ಶುಭ ಮುಹೂರ್ತ ಸಿಗುವುದು. ನರಸಿಂಹ ದೇವರ ಸೇವೆಯಿಂದ ಉತ್ತಮ ಫಲ.

ವೃಶ್ಚಿಕ: ಗಣಪತಿಗೆ ಸಂಬಂಧಿಸಿದಂತೆ ಹರಕೆಯ ರೂಪದಲ್ಲಿರುವ ಅಥವಾ ಬಹಳ ದಿನಗಳಿಂದ ಅಂದುಕೊಂಡಿದ್ದ ದೇವರ ಕೆಲಸಗಳನ್ನು ಮುಗಿಸುವ ಪ್ರಯತ್ನಮಾಡಿ. ದಾಯಾದಿಗಳು ಅಭಿವೃದ್ಧಿಗೆ ಅಡ್ಡಗಾಲು ಹಾಕಬಹುದು.

ಧನು: ಭಾವನೆಯ ಕಲ್ಪನಾ ಲೋಕದ ಬದಲು ವಾಸ್ತವದತ್ತ ಗಮನ ಹರಿಸಲು ಸೂಕ್ತ ಸಮಯ . ಕೆಲವು ದಿನಗಳ ಬಿಡುವಿಲ್ಲದ ದಿನಚರಿಯ ನಂತರ ಸ್ವಲ್ಪ ಬಿಡುವಿನ ದಿನ ಇಂದಾಗುವುದು.

ಮಕರ: ಕೈಯಲ್ಲಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡಿಕೊಳ್ಳುವುದು ಸರಿಯಲ್ಲ. ಮನೆಯ ಖರ್ಚಿನ ಮೇಲೆಯೂ ಹಿಡಿತವಿರಲಿ. ಸಮಸ್ಯೆಗಳು ಸರಾಗವಾಗಿ ಪರಿಹಾರವಾಗುವುದು.

ಕುಂಭ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ನಡೆಯಲಿದೆ ಬಹುದಿನದ ನಿವೇಶನ ಕೊಳ್ಳುವ ಕನಸು ನನಸಾಗಲಿದೆ. ಹಣದ ವಿಷಯದಲ್ಲಿ ದಾಕ್ಷಿಣ್ಯದ ಮಾತುಗಳಿಗೆ ಮರುಳಾಗಬೇಡಿ.

ಮೀನ: ಮುಜುಗರ ಮೀರಿ ನಿಮ್ಮ ಭಾವಿ ಜೀವನ ಸಂಗಾತಿಯಲ್ಲಿ ಮನಸ್ಸಿನ ಮಾತನ್ನು ಆಡುವುದರಿಂದ ಜೀವನದ ಅಡಿಪಾಯ ನಿಮ್ಮದಾಗುವುದು. ಧಾರ್ಮಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ದೇವರ ರಕ್ಷಣೆ ಸಿಗುವುದು.

ಷೇರುಪೇಟೆ ವಹಿವಾಟು — ಹಿಂದಿನ ಅಂತ್ಯ 84,950 · ಇಂದಿನ ಅಂತ್ಯ 84,673 · 277

ಎನ್‌ಎಸ್‌ಇ ನಿಫ್ಟಿ — ಹಿಂದಿನ ಅಂತ್ಯ: 26,013 · ಇಂದಿನ ಅಂತ್ಯ: 25,910 · ದಿನದ ಕನಿಷ್ಠ: 25,876 · 103

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು — 100 ಕ್ಕೆ ₹665 · 12 ಕ್ಕೆ ₹91 · ಮೈಸೂರು: 100 ಕ್ಕೆ ₹667

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿ) — ಆರ್‌ಎಸ್‌ಎಸ್-4 ₹182 · ಆರ್‌ಎಸ್‌ಎಸ್-5 ₹177 · ಗುಡ್ ಲಾಟ್ ₹164

ರಾಮನಗರ ರೇಷ್ಮೆಗೂಡು — ಮಿಶ್ರತಳಿ(ಸಿ.ಬಿ) ₹578-747 · ದ್ವಿತಳಿ (ಬಿ.ವಿ) ₹565-873

ಮುದ್ರೆಮನೆ ಕಾಫಿ (50 ಕೆಜಿಗೆ) — ಎಪಿ ₹29000 · ಎಸಿ ₹15540 · ಆರ್‌ಪಿ ₹19200 · ಆರ್‌ಸಿ ₹10800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ) — ಅರಸೀಕೆರೆ ₹26800-26800 · ಬೆಂಗಳೂರು ₹28000-32000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ) — ಶೇಂಗಾ (ರಿಫೈನ್ಡ್) ₹1515 (1515) · ಸೋಯಾ (ರಿಫೈನ್ಡ್) ₹1260 (1260) · ಸೂರ್ಯಕಾಂತಿ (ರಿಫೈನ್ಡ್) ₹1470 (1470) · ಪಾಮೋಲಿನ್ ₹1250 (1250)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ) — ದೊಡ್ಡ ₹1200-2400 · ಮಧ್ಯಮ ₹600-1200 · ಸಣ್ಣ ₹200-600

ಚಿಟಿಕೆ ಸುದ್ದಿ

20ರಿಂದ ಷೇರು ಮರು ಖರೀದಿ: ಇನ್ಫೊಸಿಸ್

ನವದೆಹಲಿ (ಪಿಟಿಐ): ₹18 ಸಾವಿರ ಕೋಟಿ ಮೌಲ್ಯದ ಷೇರು ಮರು ಖರೀದಿ ಪ್ರಕ್ರಿಯೆ ನವೆಂಬರ್ 20ರಿಂದ ಆರಂಭವಾಗಲಿದೆ ಎಂದು ಐ.ಟಿ ಸೇವಾ ಕಂಪನಿ ಇನ್ಫೊಸಿಸ್ ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

10 ಕೋಟಿ (ಶೇ 2.41ರಷ್ಟು) ಈಕ್ವಿಟಿ ಷೇರುಗಳನ್ನು ಮರು ಖರೀದಿ ಮಾಡಲಾಗುತ್ತಿದೆ. ಪ್ರತಿ ಷೇರಿನ ಮುಖ ಬೆಲೆ ₹5 ಆಗಿರಲಿದೆ. ಪ್ರತಿ ಷೇರಿನ ಬೆಲೆ ₹1,800 ಇರಲಿದೆ. ನವೆಂಬರ್ 26ರಂದು ಷೇರುಗಳ ಮರು ಖರೀದಿ ಪ್ರಕ್ರಿಯೆಯು ಕೊನೆಗೊಳ್ಳಲಿದೆ ಎಂದು ತಿಳಿಸಿದೆ.

‘ಜಿಡಿಪಿ ಪ್ರಗತಿ ಶೇ 7.5ರಷ್ಟು ನಿರೀಕ್ಷೆ’

ನವದೆಹಲಿ (ಪಿಟಿಐ): ಜಿಎಸ್‌ಟಿ ಇಳಿಕೆಯಿಂದ ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.5 ಅಥವಾ ಅದಕ್ಕಿಂತ ಹೆಚ್ಚು ದಾಖಲಾಗುವ ನಿರೀಕ್ಷೆ ಇದೆ ಎಂದು ಎಸ್‌ಬಿಐ ರಿಸರ್ಚ್ ವರದಿ ಮಂಗಳವಾರ ತಿಳಿಸಿದೆ.

ಜಿಎಸ್‌ಟಿ ದರ ಕಡಿತದಿಂದ ಹಬ್ಬದ ಮಾರಾಟದಲ್ಲಿ ಏರಿಕೆಯಾಗಿದೆ. ದೇಶದಲ್ಲಿ ಹೂಡಿಕೆ ಚಟುವಟಿಕೆ ಹೆಚ್ಚಳವಾಗಿದೆ. ಸೇವೆಗಳು ಮತ್ತು ತಯಾರಿಕಾ ವಲಯದಲ್ಲಿ ಖರೀದಿ ಹೆಚ್ಚಳವಾಗಿದೆ. ಇದು ಜಿಡಿಪಿ ಹೆಚ್ಚಳಕ್ಕೆ ನೆರವಾಗಲಿದೆ ಎಂದು ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ
"ಗತಿಸಿದರೂ ವರ್ಷಗಳು ನಿಮ್ಮ ನೆನಪು ಅಮರ"
ಕೋರುವೆವು ಸದಾ ನಿಮ್ಮ ನಿರಂತರ ಆಶೀರ್ವಾದ
ಕೆ.ಎಂ.ಚಿಕ್ಕಪ್ಪಯ್ಯ (ನಿವೃತ್ತ ತಹಸೀಲ್ದಾರ್)
ದುಃಖತಪ್ತರು: ನಾರಾಯಣಮ್ಮ ಕುಟುಂಬದವರು
ಕೆ.ಎಂ.ಸಿ ಶಾಲಾ ಆಡಳಿತ ಮಂಡಳಿ

ಕಾಫಿ ಉತ್ಪಾದನೆ ದುಪ್ಪಟ್ಟು ಗುರಿ

ಪ್ರಸ್ತುತ ವಾರ್ಷಿಕ 3.5 ಲಕ್ಷ ಟನ್ ಕಾಫಿ ಉತ್ಪಾದನೆ: ಕಾಫಿ ಮಂಡಳಿ ಅಧ್ಯಕ್ಷ

• ವಿಜಯ್ ಜೋಶಿ

ಹೆಚ್ಚಿನ ಇಳುವರಿ ನೀಡುವ ಹಾಗೂ ಕೀಟಗಳಿಗೆ ಪ್ರತಿರೋಧಕ ಶಕ್ತಿಯನ್ನು ಹೊಂದಿರುವ ಮೂರು ಬಗೆಯ ಕಾಫಿ ತಳಿಗಳನ್ನು ಮಂಡಳಿಯು ಬಿಡುಗಡೆ ಮಾಡಲಿದೆ
ಎಂ.ಜೆ. ದಿನೇಶ್, ಕಾಫಿ ಮಂಡಳಿ ಅಧ್ಯಕ್ಷ

ಚಿಕ್ಕಮಗಳೂರು: ‘ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ 100ನೇ ವರ್ಷವನ್ನು ಆಚರಿಸುವ ಸಂದರ್ಭದಲ್ಲಿ ದೇಶದ ಕಾಫಿ ಉತ್ಪಾದನೆಯನ್ನು ವಾರ್ಷಿಕ 7 ಲಕ್ಷ ಟನ್‌ಗೆ ಹೆಚ್ಚಿಸಬೇಕು ಎಂಬ ಗುರಿಯನ್ನು ಕೇಂದ್ರ ಕಾಫಿ ಮಂಡಳಿ ಹೊಂದಿದೆ’ ಎಂದು ಮಂಡಳಿಯ ಅಧ್ಯಕ್ಷ ಎಂ.ಜೆ. ದಿನೇಶ್ ಹೇಳಿದರು.

ಕರ್ನಾಟಕ ಬೆಳೆಗಾರರ ಸಂಘದ ವಾರ್ಷಿಕ ಸಮಾವೇಶದಲ್ಲಿ ಮಾತನಾಡಿದ ಅವರು, ‘ಇಷ್ಟು ಪ್ರಮಾಣದಲ್ಲಿ ಉತ್ಪಾದನೆ ಸಾಧ್ಯವಾದಲ್ಲಿ, ಅದರಲ್ಲಿ ವಿಶೇಷ ಬಗೆಯ ಕಾಫಿ ಪ್ರಮಾಣವು ಶೇಕಡ 15ರಷ್ಟು ಇರಬೇಕು ಎಂಬ ಗುರಿಯನ್ನೂ ಹೊಂದಲಾಗಿದೆ’ ಎಂದು ಹೇಳಿದರು. ಈಗ ದೇಶದ ವಾರ್ಷಿಕ ಕಾಫಿ ಉತ್ಪಾದನೆ ಪ್ರಮಾಣವು 3.5 ಲಕ್ಷ ಟನ್ ಆಗಿದೆ.

ಕಾಫಿ ತೋಟಗಳಲ್ಲಿ ಬಳಕೆ ಮಾಡುವ ಕಳೆ ಕೀಳುವ ಯಂತ್ರಗಳಿಗೆ ಸಬ್ಸಿಡಿ ನೀಡಲು ಕಾಫಿ ಮಂಡಳಿಯು ಸಿದ್ಧವಿದೆ. ಕಾರ್ಮಿಕರ ಅಗತ್ಯವನ್ನು ಕಡಿಮೆ ಮಾಡುವುದು ಮಂಡಳಿಯ ಕಾರ್ಯಸೂಚಿಗಳಲ್ಲಿ ಸೇರಿದೆ ಎಂದು ತಿಳಿಸಿದರು.

ಕಾಫಿ ಬೆಳೆಗಾರರು ತಮ್ಮ ಬೆಳೆಗೆ ವಿದೇಶಗಳ ಮಾರುಕಟ್ಟೆಯನ್ನು ಮಾತ್ರವೇ ನೆಚ್ಚಿಕೊಂಡು ಇರಲು ಸಾಧ್ಯವಿಲ್ಲ. ದೇಶದಲ್ಲಿನ ಬಳಕೆಯನ್ನೂ ಹೆಚ್ಚು ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಮಹಿಳಾ ಉದ್ಯಮಿಗಳನ್ನು ಗುರುತಿಸಿಕೊಂಡು, ಕಾಫಿ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಕಾಫಿ ಮಂಡಳಿಯ ಆವರಣದಲ್ಲಿ ಒಂದು ಕಿಯೋಸ್ಕ್ ಆರಂಭಿಸಲಾಗಿದೆ. ಇಂತಹ 10 ಸಾವಿರ ಕಿಯೋಸ್ಕ್‌ಗಳನ್ನು ದೇಶದಾದ್ಯಂತ ಆರಂಭಿಸುವ ಗುರಿ ಇದೆ. ಪ್ರತಿ ಕಿಯೋಸ್ಕ್ ಒಂದು ದಿನದಲ್ಲಿ 2 ಕೆ.ಜಿ. ಕಾಫಿ ಪುಡಿ ಬಳಸಿದರೆ ದೇಶದಲ್ಲಿ ಕಾಫಿ ಬಳಕೆಯು ಹೆಚ್ಚುತ್ತದೆ ಎಂದು ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೆಪಿಎ ಅಧ್ಯಕ್ಷ ಅರವಿಂದ ರಾವ್, ‘ಹವಾಮಾನ ಆಧಾರಿತ ವಿಮಾ ಯೋಜನೆಯ ನೆರವು ಕಾಫಿ ಬೆಳೆಗಾರರಿಗೆ ಅಗತ್ಯವಾಗಿದೆ ಎಂದರು. ಪ್ರತಿಕೂಲ ಹವಾಮಾನವು ಕಾಫಿ ಬೆಳೆಯ ಮೇಲೆ ಪರಿಣಾಮ ಬೀರಿದೆ’ ಎಂದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಇಂಧನ ಸಚಿವ ಕೆ.ಜೆ. ಜಾರ್ಜ್, ಆಂಧ್ರಪ್ರದೇಶದ ಅರಕು ಕಣಿವೆಯ ಕಾಫಿ ಬೆಳೆಗಾರರ ಮಾದರಿಯಲ್ಲೇ ರಾಜ್ಯದ ಕಾಫಿ ಬೆಳೆಗಾರರು ಕೂಡ ತಮ್ಮ ಕಾಫಿಗೆ ಬ್ರ್ಯಾಂಡ್ ಮೌಲ್ಯ ಬರುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಟಾಟಾ ಸನ್ಸ್‌ನ ನಿರ್ದೇಶಕ ಭಾಸ್ಕರ ಭಟ್ ಅವರು, ‘ದೇಶದ ಕಾಫಿ ಬೆಳೆಗಾರರು ವಿಶೇಷ ಬಗೆಯ ಕಾಫಿ ಹಾಗೂ ಪ್ರೀಮಿಯಂ ವರ್ಗದ ಕಾಫಿಯ ಮೇಲೆ ಗಮನ ನೀಡಬೇಕು. ಗ್ರಾಹಕರು ಹೆಚ್ಚಿನ ಗುಣಮಟ್ಟದ ಕಾಫಿಯನ್ನು ಬಳಸಲು ಬಯಸುತ್ತಿದ್ದಾರೆ’ ಎಂದು ಹೇಳಿದರು.

ಯುರೋಪ್ ಅಥವಾ ಅಮೆರಿಕಕ್ಕೆ ಕಾಫಿ ರಫ್ತಿನ ಬಗ್ಗೆ ಹೆಚ್ಚು ಚಿಂತೆ ಮಾಡುವುದಕ್ಕಿಂತ ದೇಶಿ ಮಾರುಕಟ್ಟೆಯ ಮೇಲೆ ಗಮನಹರಿಸಬೇಕು. ಇಲ್ಲಿನ ಯುವ ಗ್ರಾಹಕರ ವರಮಾನ ಹೆಚ್ಚಾಗುತ್ತಿದೆ, ಯುವ ಗ್ರಾಹಕರು ಪ್ರೀಮಿಯಂ ಗುಣಮಟ್ಟದ ಕಾಫಿಯ ಬಳಕೆಗೆ ಸಿದ್ಧರಿದ್ದಾರೆ ಎಂದು ಹೇಳಿದರು.

4–5 ತಿಂಗಳಲ್ಲಿ 2.25 ಕೋಟಿ ಅನರ್ಹ ಫಲಾನುಭವಿಗಳ ಕಡಿತ

ನವದೆಹಲಿ (ಪಿಟಿಐ): ‘ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಅನ್ವಯ (ಎನ್‌ಎಫ್‌ಎಸ್‌ಎ) ಕಳೆದ 4ರಿಂದ 5 ತಿಂಗಳಲ್ಲಿ ದೇಶದಾದ್ಯಂತ 2.25 ಕೋಟಿ ಅನರ್ಹ ಫಲಾನುಭವಿಗಳನ್ನು ತೆಗೆದು ಹಾಕಲಾಗಿದೆ’ ಎಂದು ಆಹಾರ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಡವರಿಗೆ ನೆರವಾಗುವ ದೃಷ್ಟಿಯಿಂದ ದೇಶದಾದ್ಯಂತ ಪ್ರತಿ ತಿಂಗಳು ಒಬ್ಬ ವ್ಯಕ್ತಿಗೆ 5 ಕೆ.ಜಿ ಆಹಾರ ಧಾನ್ಯ (ಗೋಧಿ, ಅಕ್ಕಿ) ಉಚಿತವಾಗಿ ವಿತರಿಸಲಾಗುತ್ತಿದೆ. ನಾಲ್ಕು ಚಕ್ರಗಳ ಸ್ವಂತ ವಾಹನ ಹೊಂದಿರುವವರು, ಮಾಸಿಕ ಆದಾಯವು ಮಿತಿಗಿಂತ ಹೆಚ್ಚಿರುವುದು, ಕಂಪನಿಗಳ ನಿರ್ದೇಶಕರನ್ನು ಎನ್‌ಎಫ್‌ಎಸ್‌ಎ ಫಲಾನುಭವಿ ಪಟ್ಟಿಯಿಂದ ಹೊರಗಿಟ್ಟು, ನೈಜ ಫಲಾನುಭವಿಗಳಿಗಷ್ಟೇ ಲಾಭ ತಲುಪಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

‘ಕಳೆದ ನಾಲ್ಕೈದು ತಿಂಗಳಲ್ಲಿ 2.5 ಕೋಟಿ ಅನರ್ಹ ಫಲಾನುಭವಿಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಅದೇ ರೀತಿ, ಅರ್ಹ ಫಲಾನುಭವಿ ಗಳನ್ನು ಹೊಸತಾಗಿ ಸೇರ್ಪಡೆ ಮಾಡಲು ರಾಜ್ಯ ಸರ್ಕಾರಗಳಿಗೆ ಅವಕಾಶ ಮಾಡಿಕೊಡಲಾಗಿದೆ’ ಎಂದು ಆಹಾರ ಇಲಾಖೆ ಕಾರ್ಯದರ್ಶಿ ಸಂಜೀವ್ ಛೋಪ್ರಾ ತಿಳಿಸಿದ್ದಾರೆ.

ಸಕ್ಕರೆ ಕನಿಷ್ಠ ಬೆಲೆ ಹೆಚ್ಚಳಕ್ಕೆ ಚಿಂತನೆ

‘ಕೈಗಾರಿಕೆಗಳು ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸುವಂತೆ ಬೇಡಿಕೆ ಸಲ್ಲಿಸಿವೆ. ಈ ಕುರಿತು ಪರಿಶೀಲನೆ ನಡೆಸಲಾಗುವುದು’ ಎಂದು ಕೇಂದ್ರ ಆಹಾರ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

2019ರ ಫೆಬ್ರುವರಿಯಿಂದ ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ₹31 ಇದೆ. ಉತ್ಪಾದನಾ ವೆಚ್ಚ ಹೆಚ್ಚಳವಾಗಿದೆ. ಹೀಗಾಗಿ ಬೆಲೆಯನ್ನು ₹40ಕ್ಕೆ ಹೆಚ್ಚಿಸುವಂತೆ ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ (ಐಎಸ್‌ಎಂಎ) ಸರ್ಕಾರಕ್ಕೆ ಮನವಿ ಮಾಡಿದೆ.

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-31500	ಹೊಸತು	54399-60709	ಬಿಳಿಗೋಟು	20199-39100
ಹೊಸತು	26000-40000	ರಾಶಿ	42166-60089	ಚಾಲಿ	42899-39100
ಹಳತು	45000-54000	ಸರಕು	50100-92410	ಕೆಂಪುಗೋಟು	22169-36550
ಸಾಗರ		**ಸಿದ್ದಾಪುರ**		ರಾಶಿ	57099-59919
ಬಿಳಿಗೋಟು	13299-33611	ಬಿಳಿಗೋಟು	25899-36699	**ಯಲ್ಲಾಪುರ**	
ಚಾಲಿ	31999-41599	ಚಾಲಿ	41609-48199	ಆಪಿ	68975-68975
ಸಿಪ್ಪೆಗೋಟು	22569-22569	ಕೋಕ	20059-33299	ಬಿಳಿಗೋಟು	18099-37201
ಕೆಂಪುಗೋಟು	32989-32989	ಕೆಂಪುಗೋಟು	33099-34000	ಚಾಲಿ	37709-49599
ಶಿವಮೊಗ್ಗ		ರಾಶಿ	49899-58499	ಕೋಕ	12610-28999
ಬೆಟ್ಟೆ	54210-74099	ತಟ್ಟಿಬೆಟ್ಟೆ	41000-48899	ಕೆಂಪುಗೋಟು	18900-33901
ಗೊರಬಲು	19029-42430	**ಶಿರಸಿ**		ರಾಶಿ	50169-65199
		ಬೆಟ್ಟೆ	43299-57499	ತಟ್ಟಿಬೆಟ್ಟೆ	35519-48909

ಚಿನ್ನದ ದರ ₹3,900, ಬೆಳ್ಳಿ ₹7,800 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಚಿನ್ನ, ಬೆಳ್ಳಿ ಧಾರಣೆ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3,900 ಇಳಿಕೆಯಾಗಿ, ₹1,25,800ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಕಡಿಮೆಯಾಗಿ, ₹1,25,200 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹7,800 ಇಳಿಕೆಯಾಗಿ, ₹1.56 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ) 18-11-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,22,400 (1,22,600)
ಬೆಳ್ಳಿ ಕೆ.ಜಿಗೆ	1,53,700 (1,54,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪೊಲೀಸ್ ಕಾರ್ಯ ವೈಖರಿಗೆ ಅತೃಪ್ತಿ

ಇನ್‌ಸ್ಪೆಕ್ಟರ್ ವಿರುದ್ಧ ಎಫ್‌ಐಆರ್ ದಾಖಲಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವಕನೊಬ್ಬನ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಡೂರು ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮಹೇಶ್ ಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು’ ಎಂದು ಹೈಕೋರ್ಟ್, ಬಳ್ಳಾರಿ ಜಿಲ್ಲಾ ಎಸ್‌ಪಿಗೆ ಆದೇಶಿಸಿದೆ.

‘ನನ್ನ ಮೇಲೆ ತೀವ್ರವಾಗಿ ಹಲ್ಲೆ ನಡೆಸಿರುವ ಸಂಡೂರು ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಮಹೇಶ್ ಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ರಾಜ್ಯ ಸರ್ಕಾರ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಬಳ್ಳಾರಿಯ ಕೋಳೂರು ಗ್ರಾಮದ ವಿ.ವಿವೇಕಾನಂದ (25) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರ ಮೇಲೆ ಇನ್‌ಸ್ಪೆಕ್ಟರ್ ಬರ್ಬರ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಇದಕ್ಕೆ ಸಾಕ್ಷ್ಯವಾಗಿ ಅರ್ಜಿಯೊಂದಿಗೆ ಕೆಲ ಪೋಟೋಗಳನ್ನೂ ಲಗತ್ತಿಸಲಾಗಿದೆ. ಆದರೂ ದೂರು ದಾಖಲಿಸದೆ ಅರ್ಜಿದಾರರಿಗೆ ತಬರನ ಸ್ಥಿತಿ ತಂದಿಡಲಾಗಿದೆ. ಆರೋಪಿ ಯಾರೇ ಆಗಿದ್ದರೂ ಆತ ಅಪರಾಧ ಎಸಗಿದ್ದರೆ ತನಿಖೆ ನಡೆಸಲೇಬೇಕು. ಪ್ರಕರಣದಲ್ಲಿ ದೂರು ದಾಖಲಿಸದೆ ಇರುವುದು ಸಂಪೂರ್ಣ ಕಾನೂನು ಬಾಹಿರ’ ಎಂದು ನ್ಯಾಯಪೀಠವು ಪೊಲೀಸರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ಪೊಲೀಸರ ಈ ನಡೆ, ಲಲಿತಾ ಕುಮಾರಿ v/s ಉತ್ತರ ಪ್ರದೇಶ ಸರ್ಕಾರದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಆರೋಪಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವುದರಿಂದ ದೂರು ಪರಿಶೀಲಿಸಿ ಎಫ್‌ಐಆರ್ ದಾಖಲಿಸಬೇಕು. ಬಳ್ಳಾರಿ ಜಿಲ್ಲಾ ಎಸ್‌ಪಿ ನ್ಯಾಯಸಮ್ಮತ ತನಿಖೆಯನ್ನು ಖಾತರಿಪಡಿಸಬೇಕು’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

‘ಈ ಪ್ರಕರಣ ಅತ್ಯಂತ ವಿಶೇಷವಾಗಿದೆ. ಅಗತ್ಯ ಎನಿಸಿದರೆ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲು ಬೇರೆ ಪೊಲೀಸ್ ಠಾಣೆಗೆ ಆದೇಶಿಸಬಹುದು. ಆ ತನಿಖೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೇಲ್ವಿಚಾರಣೆಯಲ್ಲೇ ನಡೆಸಬೇಕು’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಕಾರ್ಯಕ್ರಮಕ್ಕೆ ನಿರ್ಬಂಧ ಆದೇಶ ಸೀಮಿತಕ್ಕೆ ನಕಾರ

ನ್ಯಾ.ಎಂ.ನಾಗಪ್ರಸನ್ನ

‘ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂಬ ಆದೇಶದ ಅನುಷ್ಠಾನಕ್ಕೆ ನೀಡಲಾಗಿರುವ ಮಧ್ಯಂತರ ತಡೆ ಆದೇಶವನ್ನು ಪ್ರಕರಣದ ಅರ್ಜಿದಾರರಿಗೆ ಮಾತ್ರವೇ ಸೀಮಿತಗೊಳಿಸಬೇಕು’ ಎಂಬ ರಾಜ್ಯ ಸರ್ಕಾರದ ಮನವಿಯನ್ನು ಹೈಕೋರ್ಟ್ ಸಾರಾಸಗಟಾಗಿ ತಳ್ಳಿ ಹಾಕಿದೆ.

ರಾಜ್ಯ ಸಚಿವ ಸಂಪುಟದ ನಿರ್ಣಯವನ್ನು ಪ್ರಶ್ನಿಸಿ ಹುಬ್ಬಳ್ಳಿಯ, ‘ಪುನಃಶ್ಚೇತನ ಸೇವಾ ಸಂಸ್ಥೆ’ ಅಧ್ಯಕ್ಷ ವಿನಾಯಕ ಮತ್ತು ‘ವಿ ಕೇರ್ ಫೌಂಡೇಶನ್’ ಅಧ್ಯಕ್ಷ ಗಂಗಾಧರಯ್ಯ, ಧಾರವಾಡದ ರಾಜೀವ ಮಲ್ದಾರ ಕುಲಕರ್ಣಿ ಹಾಗೂ ಬೆಳಗಾವಿಯ ಉಮಾ ಸತ್ಯಜಿತ್ ಚವಾಣ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ತನ್ನ ನಿಲುವನ್ನು ಸರ್ಕಾರಕ್ಕೆ ಸ್ಪಷ್ಟಪಡಿಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರನ್ನು ನ್ಯಾಯಪೀಠ, ‘ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಹೋಗಿಲ್ಲವೇ’ ಎಂದು ಪ್ರಶ್ನಿಸಿತು.

ಇದಕ್ಕೆ ಶಶಿಕಿರಣ ಶೆಟ್ಟಿ, ‘ಈ ವಿಚಾರ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಮತ್ತು ಪ್ರಕರಣದಲ್ಲಿನ ಮಧ್ಯಂತರ ತಡೆ ಆದೇಶವನ್ನು ಅರ್ಜಿದಾರರಿಗೆ ಮಾತ್ರವೇ ಸೀಮಿತಗೊಳಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ನ್ಯಾಯಪೀಠ, ‘ಇದು ಸರ್ಕಾರದ ಆದೇಶವಾಗಿರುವ ಕಾರಣ ಹಾಗೆ ಮಾಡಲಾಗದು. ಆದಾಗ್ಯೂ, ನಿಮ್ಮ ವಾದವನ್ನು ಪರಿಗಣಿಸಲಾಗುವುದು’ ಎಂದು ಅಡ್ವೊಕೇಟ್ ಜನರಲ್ ಮನವಿ ಅನುಸಾರ ಆಕ್ಷೇಪಣೆ ಸಲ್ಲಿಸಲು ಒಂದು ತಿಂಗಳು ಕಾಲಾವಕಾಶ ನೀಡಿ ವಿಚಾರಣೆಯನ್ನು ಡಿಸೆಂಬರ್ 15ಕ್ಕೆ ಮುಂದೂಡಿತು.

ಜಪಾನ್ ವಿರುದ್ಧ ಆಕ್ಷೇಪ ದಾಖಲಿಸಿದ ಚೀನಾ

ಸನೇ ತಕೈಚಿ

ಬೀಜಿಂಗ್ (ಎಎಫ್‌ಪಿ): ‘ತೈವಾನ್ ತನ್ನ ಭೂಪ್ರದೇಶ ಎಂದು ಹೇಳಿಕೊಂಡು ಚೀನಾವು ಅದರ ಮೇಲೆ ದಾಳಿ ನಡೆಸಿದರೆ, ಆಗ ತನ್ನ ದೇಶವು ಮಿಲಿಟರಿ ಹಸ್ತಕ್ಷೇಪಕ್ಕೆ ಮುಂದಾಗಬಹುದು’ ಎಂಬ ಜಪಾನ್ ಪ್ರಧಾನಿ ಸನೇ ತಕೈಚಿ ಅವರ ಹೇಳಿಕೆಯು ಚೀನಾವನ್ನು ಕೆರಳಿಸಿದೆ.

ಬೀಜಿಂಗ್‌ನಲ್ಲಿರುವ ಜಪಾನ್‌ನ ರಾಯಭಾರಿ ಎದುರು ಮಂಗಳವಾರ ಆಕ್ಷೇಪ ದಾಖಲಿಸಿರುವ ಚೀನಾ, ‘ಜಪಾನ್ ತಕ್ಷಣವೇ ಈ ಹೇಳಿಕೆಯನ್ನು ವಾಪಸ್ ಪಡೆಯಬೇಕು’ ಎಂದು ಒತ್ತಾಯಿಸಿದೆ.

ತೈವಾನ್ ವಿಚಾರದಲ್ಲಿ, ಜಪಾನ್ –ಚೀನಾ ಮಧ್ಯೆ ತಲೆದೋರಿರುವ ರಾಜತಾಂತ್ರಿಕ ಬಿಕ್ಕಟ್ಟು ಶಮನಕ್ಕೆ ಜಪಾನ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿ ಮಸಾಕಿ ಕನಾಯಿ ಅವರು ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿ ಲಿಯು ಜಿನ್‌ಸಂಗ್ ಜತೆಗೆ ಮಾತುಕತೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಚೀನಾದ ವಿದೇಶಾಂಗ ವ್ಯವಹಾರಗಳ ವಕ್ತಾರ ಮವೊ ನಿಂಗ್, ‘ಚೀನಾದ ಕುರಿತ ಜಪಾನ್‌ನ ತಪ್ಪಾದ ಹೇಳಿಕೆಯನ್ನು ತಕ್ಷಣವೇ ವಾಪಸ್ ಪಡೆಯುವಂತೆ ಚೀನಾ ಮತ್ತೊಮ್ಮೆ ಒತ್ತಾಯಿಸಿದೆ’ ಎಂದು ತಿಳಿಸಿದರು.

5 ಲಕ್ಷ ವಿಮಾನ ಟಿಕೆಟ್‌ಗಳು ರದ್ದು: ರಾಜತಾಂತ್ರಿಕ ಬಿಕ್ಕಟ್ಟು ಮುಂದುವರಿದಿರುವುದರಿಂದ ಸದ್ಯಕ್ಕೆ ಜಪಾನ್ ಪ್ರವಾಸ ಕೈಗೊಳ್ಳದಂತೆ ಚೀನಾವು ತನ್ನ ನಾಗರಿಕರಿಗೆ ಸೂಚಿಸಿದೆ. ಇದರ ಬೆನ್ನಲ್ಲೇ, ಚೀನಿಯರು ಜಪಾನ್ ಪ್ರವಾಸಕ್ಕಾಗಿ ಕಾಯ್ದಿರಿಸಿದ್ದ ಸುಮಾರು 5 ಲಕ್ಷದಷ್ಟು ವಿಮಾನ ಟಿಕೆಟ್‌ಗಳು ರದ್ದುಗೊಂಡಿವೆ ಎಂದು ವಿಮಾನಯಾನ ವಿಶ್ಲೇಷಕ ಲಿ ಹನ್‌ಮಿಂಗ್ ತಿಳಿಸಿರುವುದಾಗಿ ಎಎಫ್‌ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ಲೈನ್ ಸೇಲ್ಸ್ ಮ್ಯಾನ್ ಆಟೋ ಡ್ರೈವರ್ ಬೇಕಾಗಿದ್ದಾರೆ.ಸಂಪರ್ಕಿಸಿ: ಮಾಡ್ರನ್ ಕಾಫಿ ಕೋ, #117,ಲಾಲ್‌ಬಾಗ್ ಫೋರ್ಟ್ ರೋಡ,ವಿ.ವಿ.ಪುರಂ ಬೆಂಗಳೂರು 560004. 080-22429126.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, ಫೆಡರಲ್ ಬ್ಯಾಂಕ್ ನಿಂದ 10ಲಕ್ಷ ಇನ್ಸೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಬೆಂಗಳೂರಿನಲ್ಲಿರುವ ಟೆಕ್ಸ್‌ಟೈಲ್ ಎಕ್ಸ್‌ಪೋರ್ಟ್ ಕಂಪನಿಗೆ ಆಫೀಸ್ ಸಹಾಯಕರು ಬೇಕಾಗಿದ್ದಾರೆ, (ವಸತಿ ಸೌಲಭ್ಯ ಇರುವುದಿಲ್ಲ) ಸಂಪರ್ಕಿಸಿ:9980140661 ಮೇಲ್: starsilks@gmail.com

Marketing & Sales

Real Estate Developer
WANTED
Sr GENERAL MANAGER
Sr SALES MANAGER
Sr Telecaller FEMALE
Experience in Real Estate Field
Languages known Kannada, English, Hindi
Salary + Incentives : Earn upto ₹1.5+ Lakh per Month
Office : Jigani Bannerghatta Road
Cab facility for pick-up & drop (nearest metro station)
Call for More details: 6366941643

Multiple Vacancy

ಕರ್ನಾಟಕದಾದ್ಯಂತ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ಗಳಿಗೆ ಹಾಗೂ ಬೈಕ್ ಷೋರೂಮ್ಗಳಿಗೆ, CASHIER RECEPTIONIST HR ADMIN ACCOUNT ಕೆಲಸಕ್ಕೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದರೆ (22k_36k) SSLC PUC DEGREE: 6366718368/ 9739121355

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000 7th, 10th, Any Degree 8095043191

TRAVEL CORNER

ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ Orchid
ನಂ. 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
Website : www.orchidtours.net
ನಿಮ್ಮ ಪ್ರವಾಸ ನಮ್ಮೊಂದಿಗೆ
DUBAI SHOPPING FESTIVAL 2026 ಜನವರಿ
ಬುರ್ಜ್ ಖಲೀಫಾ, ಡೆಸರ್ಟ್ ಸಫಾರಿ, ಮೋನೋ ರೈಲ್, ಗ್ಲೋಬಲ್ ವಿಲೇಜ್, ಮಿರಾಕಲ್ ಗಾರ್ಡನ್, ಪಾಂ ಅಟ್ಲಾಂಟಿಸ್ ದುಬೈ ಕ್ರೀಕ್ ಡೌ ಕ್ರೂಸ್, ದುಬೈ ಮಾಲ್, ಫೆರಾರಿ ವರ್ಲ್ಡ್, ಬೆಲ್ಲಿ ಡಾನ್ಸ್ ಇನ್ ಡೆಸರ್ಟ್ ಸಫಾರಿ, ಗೋಲ್ಡ್ ಶಾಪಿಂಗ್, ಫ್ಯೂಚರ್ ಮ್ಯೂಸಿಯಂ, (ಫೋಟೋಸ್ಟಾಪ್), ಶೇಖ್ ಜಾಯಿದ್ ಗ್ರ್ಯಾಂಡ್ ಮಾಸ್ಕ್, ಡೇಟ್ಸ್ ಮಾರ್ಕೆಟ್
18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯುರೋಪ್ 2026 ಏಪ್ರಿಲ್
10 ದೇಶಗಳು : ಯು.ಕೆ. ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಲಿಚೆನ್‌ಟೆನ್‌ಸ್ಟೈನ್, ಇಟಲಿ, ಆಸ್ಟ್ರೀಯಾ, ವಾಟಿಕನ್
20 ದಿನಗಳ ಆಸ್ಟ್ರೇಲಿಯಾ – ನ್ಯೂಜಿಲ್ಯಾಂಡ್
7 ದಿನಗಳ ಜಪಾನ್ – ಚೆರಿ ಬ್ಲಾಸಮ್
ನಮ್ಮ ಇತರೆ ಪ್ರವಾಸಗಳು
5 ದಿನಗಳ ಕಾಶಿ - ಅಯೋಧ್ಯೆ - ಪ್ರಯಾಗ್‌ರಾಜ್
3 ದಿನಗಳ ಅಹೋಬಿಲಂ - ನವನರಸಿಂಹ
11 ದಿನಗಳ ಕಾಂಬೋಡಿಯಾ - ವಿಯೆಟ್ನಾಮ್
6 ದಿನಗಳ ಶ್ರೀಲಂಕಾ-ರಾಮಾಯಣ ಸ್ಪೆಷಲ್
99000 99252

ಪ್ರವಾಸ

Travel

17.12.2025 ರಿಂದ 12 ದಿನಗಳ ಆಂಧ್ರ ಪುರಿಜಗನ್ನಾಥ್ ಕೋನಾರ್ಕ್ ಕಲ್ಕತ್ತಾ. 24.12.2025 ರಿಂದ 9 ದಿನಗಳ ಜಾರ್ಖಂಡ್ ವೈದ್ಯನಾಥ ಗಯಾ ಕಾಶಿ,ಚಿತ್ರಕೂಟ,ಅಯೋಧ್ಯ ಅಲಹಾಬಾದ್ ನೈಮಿಶಾರಣ್ಯ. 07.01.2026 ರಿಂದ 12 ದಿನಗಳ ಆಗ್ರಾ,ಮಥುರ ಜೈಪುರ್ ಪುಷ್ಕರ್ ಜೈಸಲ್‌ಮೇರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು ವಿಮಾನ ಎಸಿ ರೂಂ, ಎಸಿ ಬಸ್. ಸಂಪರ್ಕಿಸಿ. ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು.70 .9342287551 9482239855

EDUCATION
To Place your Classified Ads Contact: 9845114560

ASTRO YATRA

ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕರು
ತಾತ ಮುತ್ತಾತನ ಕಾಲದಿಂದ ವಂಶ ಪಾರಂಪರಿಕ ಮೋಡಿ ಮಾಂತ್ರಿಕರು ರಾಮಣ್ಣನವರು ಕೊಳ್ಳೆಗಾಲದಿಂದ ನೇರ ಪರಿಹಾರ. 7090929523
ಮದುವೆಯಲ್ಲಿ ವಿಳಂಬ, ಸಂತಾನ ದೋಷ, ಮನೆಯಲ್ಲಿ ಅಶಾಂತಿ, ಗಂಡ ಹೆಂಡತಿ ಕಲಹ, ಮರಣ ಭಯ, ಆರೋಗ್ಯ ಸಮಸ್ಯೆ, ವ್ಯಾಪಾರದಲ್ಲಿ ನಷ್ಟ, ರಾಜಕೀಯ ಸೋಲು, ಶತ್ರುಗಳ ಕಾಟ, ಮಾಟ-ಮಂತ್ರ ದೋಷ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ-ಪುರುಷ ವಶೀಕರಣ ಮಾಡಿಕೊಡುತ್ತಾರೆ.
ನಿಮ್ಮ ಸಮಸ್ಯೆ ಏನೇ ಇದ್ದರು 3 ದಿನದಲ್ಲಿ ಕೊಳ್ಳೆಗಾಲದ ಬಲಿಷ್ಠ, ಕೇರಳದ ನೀಗೂಡ ಪ್ರಯೋಗಗಳಿಂದ ಶಾಶ್ವತ ಪರಿಹಾರ ಶತ:ಸಿದ್ಧ.
ವಿಳಾಸ (ಕೊಳ್ಳೆಗಾಲ) ಮೋಡಿ ರಾಮಣ್ಣ. 7090929523

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಸ್‌ಐಆರ್: ಆಕ್ಷೇಪ ಸಲ್ಲಿಸಲು ರಾಜ್ಯಗಳ ನಾಯಕರಿಗೆ ಕಾಂಗ್ರೆಸ್ ಸೂಚನೆ

‘ಬಿಹಾರದಲ್ಲಿನ ತಪ್ಪು ಮರುಕಳಿಸಬಾರದು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಚುನಾವಣಾ ಆಯೋಗವು 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಸಿದ್ಧಪಡಿಸಲಾಗುವ ಕರಡು ಮತದಾರರ ಪಟ್ಟಿಯಲ್ಲಿನ ‘ತಪ್ಪು’ಗಳ ಬಗ್ಗೆ ಪ್ರಶ್ನೆ ಮಾಡಲೇಬೇಕು. ಬಿಹಾರದಲ್ಲಿ ಮಾಡಿದ ತಪ್ಪು ಮರುಕಳಿಸಬಾರದು’ ಎಂದು ಕಾಂಗ್ರೆಸ್‌ನ ರಾಜ್ಯ ನಾಯಕರಿಗೆ ಸೂಚಿಸಿದೆ.

ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾರ್ಯಕಾರಿಣಿ ಸಮಿತಿಯ ಸದಸ್ಯರು ಮತ್ತು ನಾಯಕರ ಸಭೆಯನ್ನು ಮಂಗಳವಾರ ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಹಿಸಿಕೊಂಡಿದ್ದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಭಾಗಿಯಾಗಿದ್ದರು.

ಎಸ್‌ಐಆರ್ ಹಾಗೂ ಮತಕಳ್ಳತನದ ವಿರುದ್ಧ ದೆಹಲಿಯ ರಾಮಲೀಲಾ ಮೈದಾನದಲ್ಲಿ ಡಿಸೆಂಬರ್ ಆರಂಭದಲ್ಲಿ ದೊಡ್ಡ ರ‍್ಯಾಲಿ ಹಮ್ಮಿಕೊಳ್ಳುವುದಾಗಿ ಪಕ್ಷವು ತಿಳಿಸಿದೆ. ‘ಸಮಾಜದ ಆಯ್ದ ವರ್ಗಗಳ ಜನರನ್ನು ಮತದಾರರ ಪಟ್ಟಿಯಿಂದ ಅಳಿಸುವ ‘ಪಾಪದ ಅಭಿಯಾನವನ್ನು’ ಆಯೋಗ ಕೈಗೊಂಡಿದೆ’ ಎಂದು ಪಕ್ಷ ದೂರಿದೆ.

‘ಅಸ್ಸಾಂನಲ್ಲಿ ಬೂತ್ ಮಟ್ಟದ ಏಜೆಂಟರನ್ನು ಎಸ್‌ಐಆರ್ ಪ್ರಕ್ರಿಯೆಯಿಂದ ದೂರ ಇಡಲಾಗಿದೆ. ಪ್ರಜಾಪ್ರಭುತ್ವವನ್ನು ನಾಶ ಮಾಡುವ ಪಾಪಕೃತ್ಯವಿದು’ ಎಂದು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ದೂರಿದರು.

> **ಬಿಜೆಪಿ ನೆರಳಿನಲ್ಲಿ ಎಸ್‌ಐಆರ್ ನಡೆಸಲಾಗುತ್ತಿಲ್ಲ ಎಂದು ಆಯೋಗವು ತಕ್ಷಣವೇ ಸಾಬೀತು ಮಾಡಬೇಕು. ಮತಗಳ್ಳತನಕ್ಕೆ ಬಿಜೆಪಿಯು ಇದನ್ನು ಅಸ್ತ್ರವಾಗಿಸಿಕೊಂಡಿದೆ**
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

> **ಎಸ್‌ಐಆರ್ ವಿರೋಧಿಸಲು ಪಕ್ಷವು ರಾಜಕೀಯವಾಗಿ, ಸಂಘಟನಾತ್ಮಕವಾಗಿ ಮತ್ತು ಕಾನೂನಾತ್ಮಕವಾಗಿ ಹೋರಾಡಬೇಕಿದೆ**
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ

ರಾಜ್ಯ ನಾಯಕರಿಗೆ ಸೂಚನೆ ಏನು?

- ಕರಡು ಮತದಾರರ ಪಟ್ಟಿಯಲ್ಲಿ ಉದ್ದೇಶಪೂರ್ವಕವಾಗಿ ಯಾವುದೇ ವ್ಯಕ್ತಿಯ ಹೆಸರು ಸೇರ್ಪಡೆ ಅಥವಾ ಹೆಸರು ತೆಗೆದು ಹಾಕುವುದು ಕಂಡುಬಂದರೆ, ತಕ್ಷಣವೇ ಈ ಬಗ್ಗೆ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸಬೇಕು. ಬಿಹಾರದಲ್ಲಿ ಪಕ್ಷವು ಯಾವ ಆಕ್ಷೇಪಣೆಯನ್ನೂ ಸಲ್ಲಿಸಿಲ್ಲ. ಇದರಿಂದ ಆಯೋಗದ ಕೆಲಸ ಸುಗಮವಾಯಿತು. ನಾವು ಯಾವುದೇ ವಿಷಯ ಪ್ರಸ್ತಾಪಿಸಿದರೂ ಯಾವ ಪಕ್ಷವೂ ಆಕ್ಷೇಪಣೆ ಸಲ್ಲಿಸಿಲ್ಲ ಎಂದು ಆಯೋಗ ಹೇಳುತ್ತಿದೆ.
- ಆಯೋಗವು ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ ಮೇಲೆ ಆ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕೆ ಕಾನೂನು ತಜ್ಞರ ತಂಡವನ್ನು ರೂಪಿಸಬೇಕು. ಅಂತಿಮ ಪಟ್ಟಿ ಸಲ್ಲಿಕೆಯಾದ ಮೇಲೆ ಎರಡನೇ ಅಥವಾ ಮೂರನೇ ಆಕ್ಷೇಪಣೆಗಳನ್ನು ಸಲ್ಲಿಸಲೂ ಇದರಿಂದ ಅನುಕೂಲವಾಗಲಿದೆ.
- ನಮ್ಮ ಕಾರ್ಯಕರ್ತರು, ಬೂತ್ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲಾ/ನಗರ/ಬ್ಲಾಕ್ ಮಟ್ಟದ ಅಧ್ಯಕ್ಷರು ಸದಾ ಜಾಗರೂಕರಾಗಿ ಇರಬೇಕು. ‘ಸಾಕಷ್ಟು ಬೂತ್ ಮಟ್ಟದ ಏಜೆಂಟರನ್ನು ನಿಯೋಜಿಸಿದ್ದೇವೆ. ಇವರಿಗೆ ತರಬೇತಿಯನ್ನೂ ನೀಡಲಾಗಿದೆ’ ಎಂದು ರಾಜ್ಯ ನಾಯಕರು ಹೈಕಮಾಂಡ್‌ಗೆ ಮಾಹಿತಿ ನೀಡಿದರು.

ಎಸ್‌ಐಆರ್ ಕಾರ್ಯಕ್ಕೆ ಬಹಿಷ್ಕಾರ

ತಮಿಳುನಾಡಿನ ಫೆಡರೇಷನ್ ಆಫ್ ರೆವೆನ್ಯೂ ಅಸೋಸಿಯೇಷನ್‌ನ ಸದಸ್ಯರು ಮಂಗಳವಾರದಿಂದ ಎಸ್‌ಐಆರ್ ಕಾರ್ಯಕ್ಕೆ ಬಹಿಷ್ಕಾರ ಹಾಕಿದ್ದಾರೆ. ‘ಅಧಿಕ ಕಾರ್ಯದೊತ್ತಡ, ಮಾನವ ಸಂಪನ್ಮೂಲ ಇಲ್ಲದಿರುವುದು, ಗಡುವಿನ ಒತ್ತಡ ಮತ್ತು ಪ್ರಕ್ರಿಯೆ ನಡೆಸಲು ಸಾಕಷ್ಟು ತರಬೇತಿ ನೀಡಿಲ್ಲ’ ಎಂದು ಸದಸ್ಯರು ದೂರಿದ್ದಾರೆ. ‘ಕಂದಾಯ ಇಲಾಖೆಯ ಕೆಲಸ ಕಾರ್ಯಗಳಿಗೆ ಬಹಿಷ್ಕಾರ ಹಾಕಿಲ್ಲ’ ಎಂದಿದ್ದಾರೆ.

ಮೋದಿ ಹೊಗಳಿದ ತರೂರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಉಪನ್ಯಾಸ ಕಾರ್ಯಕ್ರಮಕ್ಕೆ ಹಾಜರಾಗಿದ್ದ ಕಾಂಗ್ರೆಸ್ ಸಂಸದ ಶಶಿ ತರೂರ್, ಅವರನ್ನು ಹೊಗಳಿದ್ದಾರೆ. ಆದರೆ, 12 ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಕುರಿತು ಪರಿಶೀಲನೆಗೆ ಕಾಂಗ್ರೆಸ್ ಮಂಗಳವಾರ ಕರೆದಿದ್ದ ಸಭೆಗೆ ಗೈರಾಗಿದ್ದಾರೆ.

ತರೂರ್ ಅವರ ಈ ನಡೆ ಕಾಂಗ್ರೆಸ್ ಪಕ್ಷವನ್ನು ಮುಜುಗರಕ್ಕೀಡುಮಾಡಿದೆ. ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಲು ಪಕ್ಷ ಮುಂದಾಗಿಲ್ಲ. ಆದರೆ, ಅವರ ಹೇಳಿಕೆಗಳಿಂದ ಅಂತರ ಕಾಯ್ದುಕೊಳ್ಳುವುದಾಗಿ ಹೇಳಿದೆ.

ರಾಮನಾಥ ಗೋಯೆಂಕಾ ಉಪನ್ಯಾಸ ಮಾಲಿಕೆಯಲ್ಲಿ ಪ್ರಧಾನಿ ಮೋದಿ ಅವರು ಸೋಮವಾರ ಉಪನ್ಯಾಸ ನೀಡಿದ್ದರು. ಈ ಕಾರ್ಯಕ್ರಮದಲ್ಲಿ ತರೂರ್ ಸಹ ಪಾಲ್ಗೊಂಡಿದ್ದರು. ಬಳಿಕ, ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ನೆಗಡಿ ಹಾಗೂ ಕೆಮ್ಮಿನಿಂದ ನಾನು ಬಳಲುತ್ತಿದ್ದರೂ ಮೋದಿ ಅವರ ಉಪನ್ಯಾಸ ಕಾರ್ಯಕ್ರಮಕ್ಕೆ ಹಾಜರಾಗಿದ್ದೆ’ ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರ ಮಾತುಗಳ ಸಾರಾಂಶವನ್ನು ತರೂರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕೆ ಸಂತಸವಾಗಿದೆ ಎಂದೂ ಹೇಳಿದ್ದಾರೆ.

‘ಭಾರತ ಇನ್ನು ಮುಂದೆ ಕೇವಲ 'ಉದಯೋನ್ಮುಖ ಮಾರುಕಟ್ಟೆ' ಅಲ್ಲ, ಆದರೆ ಜಗತ್ತಿಗೆ 'ಉದಯೋನ್ಮುಖ ಮಾದರಿ' ಎಂದು ಪ್ರಧಾನಿ ಹೇಳಿದರು. ಎಲ್ಲಾ ಸಂದರ್ಭದಲ್ಲೂ ಚುನಾವಣಾ ಮನಸ್ಥಿತಿಯಲ್ಲಿರುತ್ತಾರೆ ಎಂಬುದು ಸಾಮಾನ್ಯವಾಗಿ ಮೋದಿ ಅವರ ವಿರುದ್ಧದ ಆರೋಪವಾಗಿದೆ. ಆದರೆ, ಅವರು ನಿಜವಾಗಿಯೂ ಜನರ ಸಮಸ್ಯೆಗಳನ್ನು ಪರಿಹರಿಸಲು ‘ಭಾವನಾತ್ಮಕ ಮನಸ್ಥಿತಿಯಲ್ಲಿರುತ್ತಾರೆ’ ಎಂದು ಶಶಿ ತರೂರ್ ಹೇಳಿದ್ದಾರೆ.

ಬಿಜೆಪಿಯ ಎಲ್.ಕೆ.ಅಡ್ವಾಣಿ ಅವರು ನಡೆಸಿದ್ದ ರಥಯಾತ್ರೆಯನ್ನು ನಿರ್ದಿಷ್ಟ ಅವಧಿಗೆ ಮುನ್ನಡೆಸಲು ಆಗ ನಿರ್ಧರಿಸಿದ್ದನ್ನು ಇತ್ತೀಚೆಗೆ ತರೂರ್ ಹೊಗಳಿದ್ದರು.

ಜೆದ್ದಾದಲ್ಲಿ ತಾತ್ಕಾಲಿಕ ಕಚೇರಿ ಸ್ಥಾಪನೆ

ದುಬೈ(ಪಿಟಿಐ): ಸೌದಿ ಅರೇಬಿಯಾದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಭಾರತದ ಉಮ್ರಾ ಯಾತ್ರಿಕರ ಕುಟುಂಬಗಳ ನೆರವಿಗಾಗಿ ಜೆದ್ದಾದಲ್ಲಿರುವ ಭಾರತೀಯ ಕಾನ್ಸುಲೇಟ್, ಮದೀನಾದಲ್ಲಿ ತಾತ್ಕಾಲಿಕ ಕಚೇರಿಯನ್ನು ಸ್ಥಾಪಿಸಿದೆ ಎಂದು ಕಾನ್ಸುಲೇಟ್ ಕಚೇರಿ ಮಂಗಳವಾರ ತಿಳಿಸಿದೆ.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಕಾನ್ಸುಲೇಟ್, ‘ಮದೀನಾದಲ್ಲಿರುವ ಹಜ್ ಯಾತ್ರಿಗಳ ಕಚೇರಿಯಲ್ಲಿ ಈ ಸೌಲಭ್ಯ ಆರಂಭಿಸಲಾಗಿದೆ’ ಎಂದು ತಿಳಿಸಿದೆ.

ಕಾನ್ಸುಲ್ ಜನರಲ್ ಫಹಾದ್ ಅಹ್ಮದ್ ಖಾನ್ ಸೂರಿ ಅವರು, ಈ ಅಪಘಾತದಲ್ಲಿ ಬದುಕಳಿದಿರುವ ಏಕೈಕ ಭಾರತೀಯ ಯಾತ್ರಿ ಅಬ್ದುಲ್ ಶೋಯೆಬ್ ಮೊಹಮ್ಮದ್ ಅವರನ್ನು ಭೇಟಿ ಮಾಡಿ, ಅವರ ಆರೋಗ್ಯ ವಿಚಾರಿಸಿದ್ದಾರೆ ಎಂದು ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದೆ. ಅಬ್ದುಲ್ ಶೋಯೆಬ್ ಮೊಹಮ್ಮದ್ ಅವರಿಗೆ ಮದೀನಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಗಾಜಾ: ಟ್ರಂಪ್ ಅವರ ಶಾಂತಿ ಸ್ಥಾಪನೆ ಯೋಜನೆಗೆ ಭದ್ರತಾ ಮಂಡಳಿ ಒಪ್ಪಿಗೆ

ವಿಶ್ವ ಸಂಸ್ಥೆ (ಪಿಟಿಐ): ಗಾಜಾ ದಲ್ಲಿ ಶಾಂತಿ ಸ್ಥಾಪನೆಗಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರೂಪಿಸಿ ರುವ ‘ಶಾಂತಿ ಯೋಜನೆ’ಯನ್ನು ಅನುಮೋದಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಸೋಮವಾರ ಕರಡು ನಿರ್ಣಯ ಅಂಗೀಕರಿಸಿದೆ. ಟ್ರಂಪ್ ಈ ನಿರ್ಧಾರವನ್ನು ‘ಐತಿಹಾಸಿಕ’ ಎಂದು ಬಣ್ಣಿಸಿದ್ದಾರೆ.

15 ದೇಶಗಳು ಇರುವ ಭದ್ರತಾ ಮಂಡಳಿಯಲ್ಲಿ 13 ದೇಶಗಳು ಅಮೆರಿಕದ ಯೋಜನೆಗೆ ಸಹಮತ ವ್ಯಕ್ತಪಡಿಸಿ ಮತ ಹಾಕಿವೆ. ಮತದಾನದ ವೇಳೆ ಚೀನಾ ಮತ್ತು ರಷ್ಯಾವು ಗೈರಾಗಿದ್ದವು. ‘ಗಾಜಾ ಸಂಘರ್ಷ ಅಂತ್ಯಕ್ಕೆ ಸಮಗ್ರ ಯೋಜನೆ’ಯನ್ನು ಟ್ರಂಪ್ ಅವರು ಸೆ.29ರಂದು ಘೋಷಣೆ ಮಾಡಿದ್ದರು.

‘ಫ್ಲರ್ಟ್’ ಮಾಡಲು ರೆಡಿಯಾದ ಚಂದನ್

ಚಂದನ್

ನಟ ಚಂದನ್ ನಿರ್ದೇಶಿಸಿ, ನಟಿಸಿರುವ ‘ಫ್ಲರ್ಟ್’ ಚಿತ್ರ ನ.28ರಂದು ತೆರೆಗೆ ಬರಲಿದೆ. ನ.7ರಂದು ಚಿತ್ರ ಬಿಡುಗಡೆ ಮಾಡುವುದಾಗಿ ಈ ಹಿಂದೆ ತಂಡ ಘೋಷಿಸಿತ್ತು. ಆದರೆ ಡಾರ್ಲಿಂಗ್ ಕೃಷ್ಣ ನಟನೆಯ ‘ಬ್ರ್ಯಾಟ್’ ಚಿತ್ರ ತೆರೆಗೆ ಬಂದಿದ್ದರಿಂದ ತಮ್ಮ ಚಿತ್ರ ಬಿಡುಗಡೆ ಮುಂದೂಡಿರುವುದಾಗಿ ಚಿತ್ರತಂಡ ಬಳಿಕ ಸ್ಪಷ್ಟನೆ ನೀಡಿತ್ತು.

‘ಎ ಪ್ಯೂರ್ ಡವ್ ಸ್ಟೋರಿ’ ಎಂಬ ಅಡಿಬರಹ ಫ್ಲರ್ಟ್ ಚಿತ್ರಕ್ಕಿದ್ದು, ನಿಮಿಕಾ ರತ್ನಾಕರ್, ಅಕ್ಷತಾ ಬೋಪಣ್ಣ ನಾಯಕಿಯರಾಗಿ ನಟಿಸಿದ್ದಾರೆ. ‘ಹುಡುಗಿಯರಿಗೆ ಫ್ಲರ್ಟ್ ಮಾಡಿಕೊಂಡು ಕಾಲ ಕಳೆಯುವ ಹುಡುಗನೊಬ್ಬನ ಕಥೆ. ಕೆಲ ದಿನಗಳ ಹಿಂದೆ ರಾಜಕಾರಣಿಯೊಬ್ಬರು 99 ಹುಡುಗಿಯರಿಗೆ ಫ್ಲರ್ಟ್ ಮಾಡಿದ್ದು ಸುದ್ದಿಯಾಗಿತ್ತು. ಅದೇ ರೀತಿ ನಾನು ಈ ಚಿತ್ರದಲ್ಲಿ 99 ಹುಡುಗಿಯರಿಗೆ ಫ್ಲರ್ಟ್ ಮಾಡಿದ್ದೇನೆ. ಇದೊಂದು ರಾಂಕಾಮ್ ಚಿತ್ರವಾದರೂ ಸ್ನೇಹ, ಪ್ರೀತಿ ಸೇರಿದಂತೆ ಎಲ್ಲ ಬಗೆಯ ಮನರಂಜನೀಯ ಅಂಶಗಳೂ ಇವೆ. ಹುಡುಗಿಯರಿಗೆ ಮೋಸ ಮಾಡುವ, ನಕಾರಾತ್ಮಕ ಸಂದೇಶ ಹೊಂದಿರುವ ಚಿತ್ರವಲ್ಲ. ಪ್ರೀತಿಯ ನಿಜವಾದ ಅರ್ಥವನ್ನು ಹೇಳುವ ಕಥೆ’ ಎಂದಿದ್ದಾರೆ ಚಂದನ್.

ಎವರೆಸ್ಟ್ ಪಿಕ್ಚರ್ಸ್ ಮೂಲಕ ಚಂದನ್ ಅವರೇ ಬಂಡವಾಳ ಹೂಡಿದ್ದಾರೆ. ಕಿಚ್ಚ ಸುದೀಪ್ ಚಿತ್ರದ ‘ನೀ ನನ್ನ ಜೀವ’ ಎಂಬ ಹಾಡನ್ನು ಹಾಡಿದ್ದಾರೆ. ನಕುಲ್ ಅಭಯಂಕರ್, ಜಸ್ಸಿ ಗಿಫ್ಟ್ ಸಂಗೀತ, ಹೆಚ್.ಸಿ. ವೇಣು ಛಾಯಾಚಿತ್ರಗ್ರಹಣವಿದೆ. ಹಿರಿಯ ನಟ ಅವಿನಾಶ್, ಶ್ರುತಿ, ಸಾಧು ಕೋಕಿಲ, ಗಿರೀಶ್ ಶಿವಣ್ಣ, ವಿನಯ್ ಗೌಡ ಪ್ರಮುಖ ಪಾತ್ರಗಳಲ್ಲಿದ್ದಾರೆ. ❖

ನ.28ರಂದು ನಾಯಿ ಇದೆ ಎಚ್ಚರಿಕೆ ತೆರೆಗೆ

ಡಾ.ಲೀಲಾ ಮೋಹನ್ ಪಿ.ವಿ.ಆರ್ ನಾಯಕನಾಗಿ ನಟಿಸಿರುವ ‘ನಾಯಿ ಇದೆ ಎಚ್ಚರಿಕೆ’ ಚಿತ್ರ ನ.28ರಂದು ತೆರೆಗೆ ಬರಲಿದೆ. ಕಲಿ ಗೌಡ ನಿರ್ದೇಶಿಸಿರುವ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

‘ಹದಿನೈದು ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ನಿರ್ದೇಶಕನಾಗಿ ಇದು ಎರಡನೇ ಚಿತ್ರ. ನಾಯಿ ನಿಯತ್ತಿನ ಪ್ರಾಣಿ ಎಂದು ಎಲ್ಲರಿಗೂ ಗೊತ್ತು. ಅದು ಬದುಕಿದ್ದಾಗಷ್ಟೇ ಅಲ್ಲ, ಸತ್ತ ಮೇಲೂ ಅದರ ನಿಯತ್ತು ಕಡಿಮೆಯಾಗದು ಎಂಬುದನ್ನು ನಮ್ಮ ಚಿತ್ರದ ಮೂಲಕ ತೋರಿಸಿದ್ದೇವೆ’ ಎಂದರು ನಿರ್ದೇಶಕ.

ಚಿತ್ರಕ್ಕೆ ಲೀಲಾ ಮೋಹನ್ ಅವರೇ ಬಂಡವಾಳ ಹೂಡಿದ್ದಾರೆ. ‘ನಾನು ವೃತ್ತಿಯಲ್ಲೂ ವೈದ್ಯ, ಈ ಚಿತ್ರದಲ್ಲೂ ವೈದ್ಯ. ಇದರಲ್ಲೂ ನನ್ನ ಹೆಸರು ಲೀಲಾ. ಇದು ನಾಯಿ ಹಾಗೂ ಮನುಷ್ಯನ ಬಾಂಧವ್ಯದ ಕುರಿತಾದ ಸಿನಿಮಾ. ಸಸ್ಪೆನ್ಸ್, ಥ್ರಿಲ್ಲರ್, ಹಾರರ್, ಸೆಂಟಿಮೆಂಟ್ ಎಲ್ಲವೂ ಇರುವ ಚಿತ್ರ. ದಿವ್ಯಶ್ರೀ ಈ ಚಿತ್ರದ ನಾಯಕಿ. ಪ್ರಮೋದ್ ಶೆಟ್ಟಿ, ದಿನೇಶ್ ಮಂಗಳೂರು, ನಾಗೇಂದ್ರ ಅರಸ್, ಮಾನಸ, ಚಂದನ ಮುಂತಾದವರು ತಾರಾಬಳಗದಲ್ಲಿದ್ದಾರೆ’ ಎಂದರು ನಾಯಕ. ❖

ಹೊಸಬರ ‘ಫೆಬ್ರವರಿ 30’

ಸಾಹಿತ್ಯ ಶೆಟ್ಟಿ

ಸೈಕಾಲಜಿಕಲ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ‘ಫೆಬ್ರವರಿ 30’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರಶಾಂತ್ ಎಂ.ಎಲ್. ನಿರ್ದೇಶನದ ಈ ಚಿತ್ರಕ್ಕೆ ಜೋಸೆಫ್ ಬೇಬಿ ನಿರ್ಮಾಣವಿದೆ.

‘ನಾನು ಸಾಫ್ಟ್‌ವೇರ್ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದು, ಬಿಡುವಿನ ವೇಳೆ ಕಥೆ ಬರೆಯುವುದು, ಕಿರುಚಿತ್ರ ಮಾಡುವ ಹವ್ಯಾಸವಿದೆ. ಆ ಪಯಣ ಇಲ್ಲಿಗೆ ಕರೆತಂದು ನಿಲ್ಲಿಸಿದೆ. ನಮ್ಮಲ್ಲಿರುವ ಅರಿಷಡ್ವರ್ಗಗಳೇ ಹೇಗೆ ನಮಗೆ ಮುಳುವಾಗುತ್ತವೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಐದು ಜನ ಸ್ನೇಹಿತರು ಒಂದು ಅಪರಿಚಿತ ಸ್ಥಳಕ್ಕೆ ಹೋದಾಗ, ಅವರಿಗೆ ಏನೆಲ್ಲ ಅನುಭವಗಳಾಗುತ್ತವೆ? ಒಂದು ಅಮಾನುಷ ಶಕ್ತಿಯ ವಿರುದ್ಧ ಹೇಗೆಲ್ಲ ಹೋರಾಡುತ್ತಾರೆ ಎಂಬುದೇ ಚಿತ್ರಕಥೆ. ಕೇರಳ ಹಾಗೂ ಮೈಸೂರಿನಲ್ಲಿ ಚಿತ್ರೀಕರಣ ನಡೆಸಿದ್ದೇವೆ’ ಎಂದರು ನಿರ್ದೇಶಕ.

ಅಭಿಷೇಕ್, ಸಾಹಿತ್ಯ ಶೆಟ್ಟಿ, ಅಕ್ಷಯ್, ಮನೋಜ್, ಶಿವಕುಮಾರ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಪಿ.ಎಂ. ಉನ್ನಿಕೃಷ್ಣನ್ ಛಾಯಾಚಿತ್ರಗ್ರಹಣ, ಲಿಜಿನ್ ಸಂಗೀತವಿದೆ. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ ಎಂದು ತಂಡ ಹೇಳಿದೆ. ❖

ಶಬರಿಮಲೆ: ಜನದಟ್ಟಣೆ, ಮಹಿಳೆ ಸಾವು

48 ಗಂಟೆಯಲ್ಲಿ ಎರಡು ಲಕ್ಷ ಭಕ್ತರ ಭೇಟಿ

- ನೀರು, ಆಹಾರ ಸಿಗದೆ ಪರಿತಪಿಸಿದ ಭಕ್ತರು

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ/ ಪತ್ತನಂತಿಟ್ಟ: ‘ಮಂಡಲ- ಮಕರವಿಳಕ್ಕು’ ತೀರ್ಥ ಯಾತ್ರೆ ಪ್ರಯುಕ್ತ ಶಬರಿಮಲೆ ದೇವಸ್ಥಾನದ ಬಾಗಿಲು ತೆರೆದ 48 ಗಂಟೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸಿದ್ದು, ಪರಿಸ್ಥಿತಿಯನ್ನು ನಿಭಾಯಿಸಲು ದೇವಾಲಯದ ಸಿಬ್ಬಂದಿ ಹಾಗೂ ಪೊಲೀಸರು ಹರಸಾಹಸಪಟ್ಟರು.

ಶಬರಿಮಲೆ ದೇವಸ್ಥಾನಕ್ಕೆ ಭೇಟಿ ನೀಡಿದ್ದ, ಕೋಯಿಕ್ಕೋಡ್ ಜಿಲ್ಲೆಯ ಕೊಯಿಲಾಂಡಿ ತಾಲ್ಲೂಕಿನ 58 ವರ್ಷದ ಮಹಿಳೆಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಯಾತ್ರೆಯ ಮೂರನೇ ದಿನವಾದ ಮಂಗಳವಾರ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದು, ದೇವರ ದರ್ಶನಕ್ಕಾಗಿ ಹತ್ತು ಗಂಟೆಗೂ ಹೆಚ್ಚು ಕಾಲ ಸರತಿ ಸಾಲಿನಲ್ಲಿ ನಿಂತಿದ್ದರು. ದೇವಾಲಯದ ಮುಖ್ಯ ದ್ವಾರಗಳನ್ನು ತಲುಪಲು ಹತ್ತಬೇಕಾದ 18 ಮೆಟ್ಟಿಲುಗಳ ಮುಂಭಾಗದಲ್ಲಿರುವ ಸಣ್ಣ ಪ್ರದೇಶದಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದರು. ಈ ವೇಳೆ, ನೂಕುನುಗ್ಗಲು ಉಂಟಾಗಿದ್ದು, ಮಕ್ಕಳು, ವೃದ್ಧರು ಸೇರಿದಂತೆ ಅನೇಕರಿಗೆ ತೊಂದರೆ ಉಂಟಾಯಿತು. ಕುಡಿಯುವ ನೀರು, ಆಹಾರ ಸಿಗದೆ ಪರಿತಪಿಸಿದರು.

ಶಬರಿಮಲೆಯ ತಪ್ಪಲಿನಲ್ಲಿರುವ ಪಂಪಾದಿಂದ ಸನ್ನಿಧಾನಕ್ಕೆ ಹೋಗುವ ತೀರ್ಥಯಾತ್ರೆಯ ಮಾರ್ಗದಲ್ಲಿ ಭಕ್ತರ ದೊಡ್ಡ ಗುಂಪು ಸೇರಿತ್ತು. ಬೆಟ್ಟ ಹತ್ತಲು ಗಂಟೆಗಟ್ಟಲೆ ಕಾಯಬೇಕಾಗಿತ್ತು. ಪರಸ್ಪರ ನೂಕುನುಗ್ಗಲು ಉಂಟಾಗುತ್ತಿದ್ದಂತೆ ಪೋಷಕರ ಹೆಗಲ ಮೇಲಿದ್ದ ಚಿಕ್ಕ ಮಕ್ಕಳು ಅಳುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು. ಸ್ಥಳದಲ್ಲಿದ್ದ ಬ್ಯಾರಿಕೇಡ್‌ಗಳನ್ನು ಅನೇಕ ಭಕ್ತರು ಹತ್ತುತ್ತಿರುವುದು ಕಂಡುಬಂತು. ಆದರೆ, ಅದನ್ನು ತಡೆಯಲು ಪೊಲೀಸರು ವಿಫಲರಾದರು.

ದೇವಾಲಯದ ಬಾಗಿಲು ತೆರೆದ ದಿನವಾದ ನ.16ರಂದು 53,278 ಹಾಗೂ 17ರಂದು 98,915 ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದರು.

‘ಕಳೆದ ವರ್ಷ ನಾಲ್ಕು ದಿನಗಳಲ್ಲಿ ಒಂದು ಲಕ್ಷ ಭಕ್ತರು ಭೇಟಿ ನೀಡಿದ್ದರೆ, ಈ ಬಾರಿ ಎರಡು ದಿನಗಳಲ್ಲೇ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಯಾತ್ರಿಕರು ಆಗಮಿಸಿದ್ದಾರೆ. ನ್ಯಾಯಾಲಯದ ನಿರ್ದೇಶನದಂತೆ ನಾವು ಸ್ಥಳದಲ್ಲೇ ಬುಕ್ಕಿಂಗ್ ಅನ್ನು 20 ಸಾವಿರಕ್ಕೆ ಮಿತಿಗೊಳಿಸಿದ್ದರೂ ಹೆಚ್ಚಿನ ಜನರು ಬರುತ್ತಿದ್ದಾರೆ. ಅವರನ್ನು ಹಿಂದೆ ಕಳುಹಿಸಲು ಸಾಧ್ಯವಾಗದ ಕಾರಣ 37 ಸಾವಿರ ಜನರಿಗೆ ಸ್ಥಳದಲ್ಲೇ ಬುಕ್ಕಿಂಗ್ ಮೂಲಕ ಅವಕಾಶ ನೀಡಬೇಕಾಯಿತು’ ಎಂದು ಎಡಿಜಿಪಿ ಎಸ್. ಶ್ರೀಜಿತ್ ಸುದ್ದಿಗಾರರಿಗೆ ತಿಳಿಸಿದರು.

ಬಸ್ ಪಲ್ಟಿ

ಶಬರಿಮಲೆ ಯಾತ್ರೆ ಕೈಗೊಂಡಿದ್ದ ಕರ್ನಾಟಕದವರು ಸೇರಿದಂತೆ 33 ಭಕ್ತರಿದ್ದ ಬಸ್ ಕೋಟಯಂ ಜಿಲ್ಲೆಯ ಎರುಮೇಲಿ ಬಳಿ ಪಲ್ಟಿಯಾಗಿದೆ. ಇಳಿಜಾರಿನಲ್ಲಿ ಮತ್ತೊಂದು ವಾಹನವನ್ನು ಹಿಂದಿಕ್ಕುವಾಗ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಪಡೆದ ಬಳಿಕ ಆಸ್ಪತ್ರೆಯಿಂದ ತೆರಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಬರಿಮಲೆ ಪ್ರವೇಶವನ್ನು ದಿನಕ್ಕೆ ಒಂದು ಲಕ್ಷಕ್ಕೆ ಸೀಮಿತಗೊಳಿಸಲಾಗುವುದು. ಸ್ಥಳದಲ್ಲೇ ಬುಕ್ಕಿಂಗ್ ಅನ್ನು ದಿನಕ್ಕೆ 20 ಸಾವಿರಕ್ಕೆ ಮಿತಿಗೊಳಿಸಲಾಗುವುದು

ಕೆ.ಜಯಕುಮಾರ್,
ತಿರುವಾಂಕೂರು ದೇವಸ್ವಂ ಮಂಡಳಿ ಅಧ್ಯಕ್ಷ

ಶಬರಿಮಲೆ ದೇವಸ್ಥಾನದಲ್ಲಿ ದೇವರ ದರ್ಶನಕ್ಕಾಗಿ ಮಂಗಳವಾರ ಸೇರಿದ್ದ ಭಕ್ತರ ದಂಡು –ಪಿಟಿಐ ಚಿತ್ರ

‘200 ಹೆಚ್ಚುವರಿ ಸಿಬ್ಬಂದಿ ನಿಯೋಜನೆ’

‘ಸರತಿ ಸಾಲಿನಲ್ಲಿ ನಿಂತಿರುವ ಭಕ್ತರ ಬಳಿ ತೆರಳಿ ಕುಡಿಯುವ ನೀರು ಒದಗಿಸಲು 200 ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ದರ್ಶನಕ್ಕಾಗಿ ಭಕ್ತರು 18 ಮೆಟ್ಟಿಲುಗಳನ್ನು ಸುಗಮವಾಗಿ ಹತ್ತಲು ಸಾಧ್ಯವಾಗುವಂತೆ ಮತ್ತು ಯಾರೂ ಸರದಿ ಸಾಲನ್ನು ಭೇದಿಸದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧ್ಯಕ್ಷ ಕೆ.ಜಯಕುಮಾರ್ ಹೇಳಿದರು.

‘ಸನ್ನಿಧಾನಕ್ಕೆ ಹೋಗುವ ಮಾರ್ಗದ ಅಲ್ಲಲ್ಲಿ ಭಕ್ತರು ವಿಶ್ರಾಂತಿ ಪಡೆಯಲು ವ್ಯವಸ್ಥೆ ಮಾಡಲಾಗಿದ್ದು, ನೀರು ಮತ್ತು ಬಿಸ್ಕತ್ತು ಒದಗಿಸಲಾಗುತ್ತದೆ. ಆದರೆ, ವಿರಮಿಸುತ್ತಾ ಕೂತರೆ ಬೇಗ ದರ್ಶನ ಭಾಗ್ಯ ಸಿಗದೇ ಹೋಗಬಹುದು ಎಂಬ ಕಾರಣಕ್ಕೆ ವಿಶ್ರಾಂತಿ ತಾಣಕ್ಕೆ ಭಕ್ತರು ಭೇಟಿ ನೀಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಶಬರಿಮಲೆ ದೇವಸ್ಥಾನದ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅನೇಕ ಪೊಲೀಸರು ಮತ್ತು ಇತರ ನೌಕರರು ಇನ್ನೂ ಕೆಲಸಕ್ಕೆ ಹಾಜರಾಗಿಲ್ಲ’ ಎಂದು ಹೇಳಿದರು.

ನೀಲಕ್ಕಲ್‌ನಲ್ಲೇ ಭಕ್ತರಿಗೆ ತಡೆ

ಪಂಪಾದಲ್ಲಿ ಜನಸಂದಣಿಯನ್ನು ನಿಯಂತ್ರಿಸುವ ಉದ್ದೇಶದಿಂದ ನೀಲಕ್ಕಲ್‌ನಲ್ಲೇ ಭಕ್ತರನ್ನು ತಡೆಹಿಡಿಯಲಾಯಿತು.

‘ನೀಲಕ್ಕಲ್‌ನಲ್ಲಿ ಭಕ್ತರಿಗೆ ಬೇಕಾದ ಸೌಲಭ್ಯಗಳಿವೆ. ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಬೇಕು. ಬಳಿಕ, ಸನ್ನಿಧಾನಕ್ಕೆ ತೆರಳಲು ಅವಕಾಶ ಕಲ್ಪಿಸಲಾಗುತ್ತದೆ. ಅಲ್ಲಿ ಏಳು ಹೆಚ್ಚುವರಿ ಬುಕ್ಕಿಂಗ್ ಕೌಂಟರ್‌ಗಳನ್ನು ಸ್ಥಾಪಿಸಲಾಗುವುದು’ ಎಂದು ಕೆ.ಜಯಕುಮಾರ್ ತಿಳಿಸಿದರು.

ಟ್ರಸ್ಟಿಗಳು, ಪ್ರವರ್ತಕರಿಗೆ ಸೇರಿದ 25 ಸ್ಥಳಗಳಲ್ಲಿ ಶೋಧ

ಅಲ್ ಫಲಾಹ್ ವಿ.ವಿಗೆ ಇ.ಡಿ ಬಿಸಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿಯ ಕೆಂಪು ಕೋಟೆ ಬಳಿ ಸಂಭವಿಸಿದ ಕಾರು ಸ್ಫೋಟ ಕುರಿತ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ಅಲ್ ಫಲಾಹ್ ವಿಶ್ವವಿದ್ಯಾಲಯ ಟ್ರಸ್ಟಿಗಳು ಹಾಗೂ ಪ್ರವರ್ತಕರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದೆ.

ರಾಷ್ಟ್ರ ರಾಜಧಾನಿ ದೆಹಲಿ ಹಾಗೂ ಸುತ್ತಲಿನ ನಗರ ಪ್ರದೇಶಗಳಲ್ಲಿನ ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಸಂಶಯಾಸ್ಪದ ಭಯೋತ್ಪಾದಕ ಚಟುವಟಿಕೆಗಳಲ್ಲಿ, ಅಲ್ ಫಲಾಹ್ ವಿಶ್ವವಿದ್ಯಾಲಯದ ಕೆಲ ಸಿಬ್ಬಂದಿ ಪಾತ್ರ ಇದೆ ಎಂಬ ಆರೋಪಗಳ ಕಾರಣದಿಂದ ಇ.ಡಿ ಈ ಕಾರ್ಯಾಚರಣೆ ನಡೆಸಿದೆ.

ಶೆಲ್ ಕಂಪನಿಗಳ (ಸಕ್ರಿಯವಾದ ಚಟುವಟಿಕೆ ಇಲ್ಲದ ಕಂಪನಿಗಳು) ಮೂಲಕ ಹಣದ ಅವ್ಯವಹಾರ ನಡೆಸಲಾಗಿದೆ, ಅಲ್ ಫಲಾಹ್ ಟ್ರಸ್ಟ್ ಹಾಗೂ ಅದರ ಇತರ ಅಂಗಸಂಸ್ಥೆಗಳಿಂದ ಹಣದ ಅಕ್ರಮ ವರ್ಗಾವಣೆ ನಡೆದಿದೆ ಎಂಬ ಆರೋಪಗಳ ಕುರಿತ ತನಿಖೆಯ ಭಾಗವಾಗಿ ಈ ಶೋಧ ನಡೆಸಲಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

‘ಬೆಳಿಗ್ಗೆ 5.15ಕ್ಕೆ ಶೋಧ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಅಲ್ ಫಲಾಹ್ ಟ್ರಸ್ಟ್, ವಿಶ್ವವಿದ್ಯಾಲಯ, ವಿ.ವಿ ಹಣಕಾಸು ಮತ್ತು ಆಡಳಿತ ಮೇಲ್ವಿಚಾರಣೆ ನಡೆಸುವ ಸಿಬ್ಬಂದಿಗೆ ಸೇರಿದ 25 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ದೆಹಲಿಯ ಓಖ್ಲಾದಲ್ಲಿರುವ ಟ್ರಸ್ಟ್‌ನ ಕಚೇರಿಯಲ್ಲೂ ಶೋಧ ನಡೆಸಲಾಗಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹರಿಯಾಣದ ಫರೀದಾಬಾದ್ ಜಿಲ್ಲೆಯ ಧೌಜ್ ಗ್ರಾಮದಲ್ಲಿ ವಿ.ವಿ. ಇದ್ದು, ದೆಹಲಿ ಗಡಿಯಿಂದ 30 ಕಿ.ಮೀ. ದೂರದಲ್ಲಿದೆ.

ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರ ಕುರಿತು ಇ.ಡಿ ಹಾಗೂ ಇತರ ಸಂಸ್ಥೆಗಳಿಂದ ಲೆಕ್ಕ ಪರಿಶೋಧನೆ ಮತ್ತು ತನಿಖೆ ನಡೆಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆದೇಶಿಸಿದ ಬೆನ್ನಲ್ಲೇ, ಇ.ಡಿ ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ.

ಅಲ್ ಫಲಾಹ್ ಗ್ರೂಪ್ ಅಧ್ಯಕ್ಷ ಸಿದ್ದಿಕಿ ಬಂಧನ

ನವದೆಹಲಿ (ಪಿಟಿಐ): ಅಲ್ ಫಲಾಹ್ ವಿಶ್ವವಿದ್ಯಾಲಯದ ಟ್ರಸ್ಟಿಗಳು ಹಾಗೂ ಪ್ರವರ್ತಕರಿಗೆ ಸೇರಿದ ಸ್ಥಳಗಳಲ್ಲಿ ಮಂಗಳವಾರ ಸುದೀರ್ಘ ಶೋಧದ ಬಳಿಕ, ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಅಲ್ ಫಲಾಹ್ ಗ್ರೂಪ್‌ನ ಅಧ್ಯಕ್ಷ ಜಾವದ್ ಅಹ್ಮದ್ ಸಿದ್ದಿಕಿ ಅವರನ್ನು ಬಂಧಿಸಿದ್ದಾರೆ.

ಇದೇ ವೇಳೆ, ₹48 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ಉಗ್ರರಿಗೆ ಹಣಕಾಸು ನೆರವು ನೀಡುವುದರ ಜೊತೆ ನಂಟಿನ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ಭಾಗವಾಗಿ ಇ.ಡಿ ಈ ಕ್ರಮ ಕೈಗೊಂಡಿದೆ.

9 ಶೆಲ್ ಕಂಪನಿಗಳ ವಿವರ ಪತ್ತೆ

- ಒಂದೇ ವಿಳಾಸದಲ್ಲಿ ನೋಂದಣಿಯಾಗಿರುವ 9 ಶೆಲ್ ಕಂಪನಿಗಳ ಕುರಿತ ವಿವರಗಳನ್ನು ಇ.ಡಿ ಅಧಿಕಾರಿಗಳು ಜಾಲಾಡಿದ್ದಾರೆ
- ಈ ಎಲ್ಲ ಶೆಲ್ ಕಂಪನಿಗಳು ಒಂದೇ ಮೊಬೈಲ್ ನಂಬರ್, ಇ-ಮೇಲ್ ವಿಳಾಸ ಬಳಸುತ್ತಿವೆ
- ಈ ಕಂಪನಿಗಳು ಕಚೇರಿಗಳನ್ನು ಹೊಂದಿಲ್ಲ. ಅವುಗಳು ಘೋಷಿಸಿರುವ ಸ್ಥಳಗಳಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳು ಇಲ್ಲ ಎಂದು ಅಧಿಕಾರಿಗಳ ಹೇಳಿಕೆ
- ಕಂಪನಿಗಳು ಘೋಷಿಸಿರುವ ಕಾರ್ಯಾಚರಣೆಗಳಿಗೂ ಹಾಗೂ ಇಪಿಎಫ್‌ಒ/ಇಎಸ್‌ಐಸಿಗೆ ಸಲ್ಲಿಸಿರುವ ದಾಖಲೆಗಳಿಗೆ ತಾಳೆ ಆಗುತ್ತಿಲ್ಲ ಎಂದು ಇ.ಡಿ ತಿಳಿಸಿದೆ
- ಕಂಪನಿಗಳ ಸಿಬ್ಬಂದಿಯ ಕೆವೈಸಿ ಸಮರ್ಪಕವಾಗಿ ಇಲ್ಲ. ಕನಿಷ್ಠ ಪ್ರಮಾಣದ ವೇತನವನ್ನು ಬ್ಯಾಂಕ್ ಖಾತೆಗಳ ಮೂಲಕ ವಿತರಿಸಿರುವುದು, ಮಾನವ ಸಂಪನ್ಮೂಲ ದಾಖಲೆಗಳು ಇಲ್ಲದಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದ್ದಾರೆ.

ಜಸೀರ್ ಬಿಲಾಲ್ ಎನ್‌ಐಎ ಕಸ್ಟಡಿಗೆ

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹ ಸಂಚುಕೋರ ಜಸೀರ್ ಬಿಲಾಲ್ ವಾನಿಯನ್ನು ದೆಹಲಿ ನ್ಯಾಯಾಲಯವು 10 ದಿನಗಳ ಕಾಲ ಎನ್‌ಐಎ ವಶಕ್ಕೆ ಒಪ್ಪಿಸಿದೆ.

‘ಆತ್ಮಹತ್ಯಾ ದಾಳಿ’ ಸಮರ್ಥಿಸಿದ ಉಮರ್; ವಿಡಿಯೊ ಲಭ್ಯ

ನವದೆಹಲಿ(ಪಿಟಿಐ): ಕೆಂಪು ಕೋಟೆ ಬಳಿ ಕಾರು ಸ್ಫೋಟ ಪ್ರಕರಣದ ‘ಆತ್ಮಾಹುತಿ ಬಾಂಬರ್’ ಡಾ.ಉಮರ್ ನಬಿಗೆ ಸೇರಿದ ಮೊಬೈಲ್ ಫೋನ್ ಅನ್ನು ಜಮ್ಮು–ಕಾಶ್ಮೀರ ಪೊಲೀಸರು ಪತ್ತೆ ಹಚ್ಚಿ, ವಶಪಡಿಸಿಕೊಂಡಿದ್ದಾರೆ.

‘ಆತ್ಮಾಹುತಿ ದಾಳಿ’ಯನ್ನು ‘ಹುತಾತ್ಮ ಕಾರ್ಯಾಚರಣೆ’ ಎಂಬುದಾಗಿ ಹೇಳಿರುವ ಡಾ.ಉಮರ್, ಆತ್ಮಾಹುತಿ ದಾಳಿಯನ್ನು ಸಮರ್ಥಿಸಿ ಮಾತನಾಡಿರುವ ವಿಡಿಯೊವೊಂದು ಈ ಫೋನ್‌ನಲ್ಲಿ ಇತ್ತು ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

‘ಉಮರ್ ಸಹೋದರ ಝುಹೂರ್ ಇಲಾಹಿಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ, ನಿರ್ಣಾಯಕ ಸಾಕ್ಷ್ಯವಾಗಬಲ್ಲ ಈ ವಿಡಿಯೊ ಸಿಕ್ಕಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹಿರಿಯ ಎಸ್‌ಪಿ (ಶ್ರೀನಗರ) ಜಿ.ವಿ. ಸಂದೀಪ್ ಚಕ್ರವರ್ತಿ ರಚಿಸಿರುವ ವಿಶೇಷ ತಂಡವು ಇಲಾಹಿಯನ್ನು ಬಂಧಿಸಿದೆ.

‘ವಿಚಾರಣೆ ವೇಳೆ, ತನಗೆ ಕಾರು ಸ್ಫೋಟ ಕುರಿತು ಏನೂ ಗೊತ್ತಿಲ್ಲ ಎಂದೇ ಇಲಾಹಿ ಹೇಳುತ್ತಿದ್ದ. ತನಿಖಾಧಿಕಾರಿಗಳು ನಿರಂತರ ವಿಚಾರಣೆ ನಡೆಸಿದ ಬಳಿಕ ಉಮರ್ ಕುರಿತು ಹಲವು ಸಂಗತಿಗಳನ್ನು ಇಲಾಹಿ ಬಾಯ್ಬಿಟ್ಟ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಅ.26 ಹಾಗೂ 29ರ ನಡುವೆ ನಾನು ಕಾಶ್ಮೀರ ಕಣಿವೆಯಲ್ಲಿ ಇದ್ದೆ. ಆಗ, ಈ ಮೊಬೈಲ್‌ಅನ್ನು ಉಮರ್ ನನಗೆ ನೀಡಿದ್ದ. ಆತನ ಕುರಿತು ಏನಾದರೂ ಸುದ್ದಿ ಬಯಲಿಗೆ ಬಂದಾಗ, ನೀರಿನಲ್ಲಿ ಮೊಬೈಲ್ ಬಿಸಾಡುವಂತೆ ಆತ ನನಗೆ ಸೂಚನೆ ನೀಡಿದ್ದ ಎಂಬುದಾಗಿ ಇಲಾಹಿ ತಿಳಿಸಿದ್ದಾನೆ’ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

‘ತನಿಖೆ ಚುರುಕುಗೊಂಡಾಗ, ಮೊಬೈಲ್ ಫೋನ್ ಎಸೆದಿದ್ದ ಸ್ಥಳಕ್ಕೆ ಪೊಲೀಸರನ್ನು ಇಲಾಹಿ ಕರೆದುಕೊಂಡು ಹೋಗಿದ್ದಾನೆ. ಮೊಬೈಲ್‌ಗೆ ಹಾನಿಯಾಗಿದ್ದರೂ ವಿಧಿವಿಜ್ಞಾನ ತಜ್ಞರು ಅದರಲ್ಲಿನ ಮಹತ್ವದ ದತ್ತಾಂಶ ಹೊರತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂಸೆಯನ್ನು ವೈಭವೀಕರಿಸುವ ವಿಷಯವಸ್ತುವಿನಿಂದಾಗಿ ಉಮರ್ ಮೂಲಭೂತವಾದಿಯಾಗಿ ಬದಲಾಗಿರುವುದಕ್ಕೆ, ಐಎಸ್, ಅಲ್‌ಕೈದಾ ನಡೆಸಿರುವ ಆತ್ಮಾಹುತಿ ದಾಳಿಗಳಿಗೆ ಸಂಬಂಧಿಸಿದ ವಿಡಿಯೊಗಳನ್ನು ಆತ ವೀಕ್ಷಿಸಿರುವುದಕ್ಕೆ ಬಲವಾದ ಸಾಕ್ಷ್ಯ ಸಿಕ್ಕಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಆತ್ಮಾಹುತಿ ದಾಳಿ ಕುರಿತು ಉಮರ್ ಮಾತನಾಡಿದ್ದಾನೆ. ಇಸ್ಲಾಂ ಧರ್ಮವು ಹೊಗಳಿರುವ ಕೃತ್ಯಗಳಲ್ಲಿ ಆತ್ಮಾಹುತಿ ದಾಳಿಯೂ ಒಂದಾಗಿದೆ ಎಂಬುದು ಸೇರಿ ಇಂತಹ ಅನೇಕ ಹೇಳಿಕೆಗಳಿರುವ ಅನೇಕ ವಿಡಿಯೊಗಳನ್ನು ಆತ ಮಾಡಿದ್ದಾನೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಮುಖಾಂಶಗಳು

- ಉಮರ್ ಮಾತುಗಳು ಇರುವ ಈ ವಿಡಿಯೊವನ್ನು ಏಪ್ರಿಲ್‌ನಲ್ಲಿ ಚಿತ್ರೀಕರಿಸಲಾಗಿದೆ
- ಹೆಚ್ಚಿನ ವಿಶ್ಲೇಷಣೆಗಾಗಿ ಮೊಬೈಲ್‌ಅನ್ನು ಎನ್‌ಐಎಗೆ ಹಸ್ತಾಂತರಿಸಲಾಗಿದೆ
- ಉಮರ್ ಮಾತನಾಡಿರುವ ವಿಡಿಯೊ 2 ನಿಮಿಷದ್ದಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ
- ತನ್ನ ವಿಚಾರಗಳನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಉಮರ್ ತಡವರಿಸಿದ್ದು, ವಿಡಿಯೊ ರೆಕಾರ್ಡಿಂಗ್ ಅನ್ನು ಏಕಾಏಕಿ ನಿಲ್ಲಿಸಿದ್ದಾನೆ

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
CITY MUNICIPAL COUNCIL, CHIKKAMAGALURU.

ಸಂಖ್ಯೆ:ಸಿಎಂಸಿ/ಸಿಕೆಎಂ/ಜ.ಹಿ.ಅ/ಸಿ.ಆರ್/01/2025–26 ದಿನಾಂಕ : 14.11.2025

: : ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ : :

ಅಮೃತ್ ಯೋಜನೆಯಡಿ ಒಳಚರಂಡಿ ನೀರಿನ ನಿರ್ವಹಣೆಗೆ ಸಂಬಂಧಿಸಿದ ಈ ಕೆಳಕಂಡಂತೆ ವಿವರವಾದ ಸಾಮಗ್ರಿಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟಗಾರರು/ವಿತರಕರು/ಸರಬರಾಜುದಾರರಿಂದ ಷರತ್ತುಗಳಿಗೊಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟ ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1	DMA/2025-26/IND5383	100.00	1,02,716/-

ಟೆಂಡರ್ ಫಾರಂ ಬೆಲೆ– ಇ–ಪ್ರೊಕ್ಯೂರ್‌ಮೆಂಟ್‌ನಂತೆ ಕಾಲಾವಧಿ– 03 ತಿಂಗಳು

1. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.12.2025 ರ 17.30 ಗಂಟೆಯವರೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.12.2025 ರ 11.00 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.12.2025 ರ 11.00 ಗಂಟೆಗೆ

ಹೆಚ್ಚಿನ ವಿವರವನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಿದ್ದಲ್ಲಿ. ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿದಾರರು ಕೆ.ಪಿ.ಪಿ ಪೋರ್ಟಲ್ ನಲ್ಲಿ ಗಮನಿಸಬಹುದಾಗಿದೆ.

ಸಹಿ/– (ಶ್ರೀಮತಿ ಬಿ ಶೀಲಾ ದಿನೇಶ್) ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– (ಶ್ರೀಮತಿ ಲಲಿತಾ ರವಿನಾಯ್ಕ್) ಉಪಾಧ್ಯಕ್ಷರು,ನಗರಸಭೆ, ಚಿಕ್ಕಮಗಳೂರು
ಸಹಿ/– (ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್) ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. ದೂರವಾಣಿ: 080–22265383,
website: www.kiadb.in, email: cdoce1@kiadb.in

ನಂ. ಐಎಡಿಬಿ/ಇಎನ್‌ಜಿಜೆ/ಪಿಎಂಸಿ/ಇಪಿಇಟಿಎನ್‌ಡಿ–ಇಪಿ–10/1360/2025–26 ದಿನಾಂಕ: 18.11.2025

ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ (ಪಿಎಂಸಿ)
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) Quality-and Cost-Based Selection (QCBS) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : (1) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣ ಕಾರ್ಯ ಒಳಗೊಂಡಂತೆ ಬೆಂಗಳೂರು ಮತ್ತು ಸುತ್ತಮುತ್ತಲ ಕೈಗಾರಿಕಾ ಪ್ರದೇಶಗಳಿಗೆ ಶುದ್ಧ ನೀರನ್ನು ಒದಗಿಸಲು ಮತ್ತು ಸರಬರಾಜು ಮಾಡಲು ಕಾವೇರಿ ನದಿ ಮತ್ತು ಅಗರ ಕೆರೆ ಹತ್ತಿರ ಪಂಪ್‌ಹೌಸ್ ಒಳಗೊಂಡಂತೆ ಜ್ಯಾಕ್‌ವೆಲ್ ಮತ್ತು ಅಗರ ಹಾಗೂ ಮದ್ದೂರು ಕೆರೆ ಹತ್ತಿರ ಇಂಪೌಂಡಿಂಗ್ ರಿಸರ್ವೇಯರ್ ನಿರ್ಮಾಣ ಮಾಡಿ ಕಾವೇರಿ ನದಿಯಿಂದ ಇಂಪೌಂಡಿಂಗ್ ರಿಸರ್ವೇಯರ್‌ವರೆಗೆ ಮತ್ತು ಅಗರ ಕೆರೆಯಿಂದ ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–1 (IPS-1) ವರೆಗೆ ಎಂಎಸ್ ಪೈಪ್ ಅಳವಡಿಸುವುದು ಸೇರಿದಂತೆ ಪಂಪಿಂಗ್ ಯಂತ್ರೋಪಕರಣಗಳು ಹಾಗೂ ಇತರೆ ಅಗತ್ಯ ಪರಿಕರಗಳು ಸೇರಿದಂತೆ SCADA ಮತ್ತು ಭೂಸ್ವಾಧೀನ ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–1).

(2) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣಕಾರ್ಯ ಒಳಗೊಂಡಂತೆ ಬೆಂಗಳೂರು ಮತ್ತು ಸುತ್ತಮುತ್ತಲ ಕೈಗಾರಿಕಾ ಪ್ರದೇಶಗಳಿಗೆ ಶುದ್ಧ ನೀರನ್ನು ಒದಗಿಸುವುದು ಮತ್ತು ಸರಬರಾಜು ಮಾಡಲು ಅಗತ್ಯವಿರುವ ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–1 (IPS-1) ಮತ್ತು ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–2 (IPS-2) ನಿರ್ಮಾಣ ಮಾಡಿ ಕಾರ್ಯಾರಂಭ ಮಾಡಲು ಹಾಗೂ ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–1 (IPS-1) ರಿಂದ ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–2 (IPS-2) ಹಾಗೂ ಇಂಟರ್ ಮೀಡಿಯೇಟ್ ಪಂಪಿಂಗ್ ಸ್ಟೇಷನ್–2 (IPS-2) ರಿಂದ ಮಾಸ್ಟರ್ ಬ್ಯಾಲೆನ್ಸಿಂಗ್ ರಿಸರ್ವೇಯರ್(ಎಂಬಿಆರ್)ವರೆಗೆ ಎಂಎಸ್ ಪೈಪ್ ಹಾಕುವುದು ಸೇರಿದಂತೆ ಪಂಪ್‌ಹೌಸ್‌ಗೆ ಪಂಪಿಂಗ್ ಯಂತ್ರೋಪಕರಣಗಳು ಹಾಗೂ ಇತರೆ ಅಗತ್ಯ ಪರಿಕರಗಳು ಸೇರಿದಂತೆ SCADA ಮತ್ತು ಭೂಸ್ವಾಧೀನ ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–2).

(3) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣಕಾರ್ಯ ಒಳಗೊಂಡಂತೆ ಬೆಂಗಳೂರಿನ ಸುತ್ತಮುತ್ತಲ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಿಗೆ ಶುದ್ಧ ನೀರನ್ನು ಒದಗಿಸಲು ಮತ್ತು ಸರಬರಾಜು ಮಾಡಲು ಅಗತ್ಯವಿರುವ ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–3 ರಿಂದ ಮಾಸ್ಟರ್ ಬ್ಯಾಲೆನ್ಸಿಂಗ್ ರಿಸರ್ವೇಯರ್(ಎಂಬಿಆರ್)ವರೆಗೆ ಎಂಎಸ್ ಪೈಪ್ ಗ್ರಾವಿಟಿ ಮೈನ್ ಹಾಕುವುದು, ಇಂಟರ್‌ಮೀಡಿಯೇಟ್ ಪಂಪಿಂಗ್ ಸ್ಟೇಷನ್–3 (IPS-3) ನಿರ್ಮಾಣ ಮಾಡುವುದು, ಪಂಪ್‌ಹೌಸ್‌ಗೆ ಪಂಪಿಂಗ್ ಯಂತ್ರೋಪಕರಣಗಳು ಹಾಗೂ ಇತರೆ ಅಗತ್ಯ ಪರಿಕರಗಳನ್ನು ಒದಗಿಸುವುದು ಮತ್ತು ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–3).

4) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣ ಕಾರ್ಯ ಒಳಗೊಂಡಂತೆ ಬೆಂಗಳೂರಿನ ಸುತ್ತಮುತ್ತಲ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಿಗೆ ಶುದ್ಧ ನೀರನ್ನು ಒದಗಿಸಲು ಮತ್ತು ಸರಬರಾಜು ಮಾಡಲು IPS-03 ರಿಂದ ಮಾಲೂರು ಮತ್ತು ಇತರೆ ಕೈಗಾರಿಕಾ ಪ್ರದೇಶಗಳವರೆಗೆ ಎಂಎಸ್ ಪೈಪ್ ರೈಸಿಂಗ್ ಮೈನ್ ಅಳವಡಿಸುವುದು, ಭೂಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–4).

(5) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣ ಕಾರ್ಯ ಒಳಗೊಂಡಂತೆ ದೊಡ್ಡಬಳ್ಳಾಪುರ ಜಂಕ್ಷನ್ ನಿಂದ ಗೌರಿಬಿದನೂರು ಮತ್ತು ಇತರೆ ಕೈಗಾರಿಕಾ ಪ್ರದೇಶಗಳಿಗೆ ಎಂ.ಎಸ್. ಪೈಪ್ ಗ್ರಾವಿಟಿ ಮೈನ್ ಮೂಲಕ ಶುದ್ಧ ನೀರನ್ನು ಒದಗಿಸಿ ಮತ್ತು ಸರಬರಾಜು ಮಾಡಲು ಮತ್ತು ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–5).

(6) EPC ಆಧಾರದ ಮೇಲೆ ಸರ್ವೆ, ಸಮೀಕ್ಷೆ, ವಿನ್ಯಾಸ, ಸರಬರಾಜು, ಸ್ಥಾಪನೆ, ನಿರ್ಮಾಣ ಕಾರ್ಯ ಒಳಗೊಂಡಂತೆ ಎತ್ತಿನಹೊಳೆ ಗ್ರಾವಿಟಿ ಕೆನಾಲ್ ಸಮೀಪ ಜಾಕ್‌ವೆಲ್ ಕಂ ಪಂಪ್ ಹೌಸ್, ಎಂ.ಎಸ್. ಪೈಪ್ ರೈಸಿಂಗ್ ಮೈನ್ ನಿರ್ಮಾಣ ಮಾಡಿ ಕ್ವಿನ್ ಸಿಟಿ ಹತ್ತಿರ ಎಂ.ಎಸ್. ಗ್ರಾವಿಟಿ ಮೈನ್ ವರೆಗೆ ಶುದ್ಧ ನೀರನ್ನು ಒದಗಿಸಿ ಮತ್ತು ಸರಬರಾಜು ಮಾಡಲು ಹಾಗೂ ಪಂಪ್ ಹೌಸ್ ನಿರ್ಮಾಣದೊಂದಿಗೆ ಪಂಪಿಂಗ್ ಯಂತ್ರೋಪಕರಣಗಳು ಹಾಗೂ ಇತರೆ ಕಾಮಗಾರಿಗಳು, SCADA ಮತ್ತು ಭೂಸ್ವಾಧೀನ ಪೂರ್ಣ ಕಾಮಗಾರಿಗೆ ಪಿ.ಎಂ.ಸಿ. ಸೇವೆ ಒದಗಿಸುವುದು. (ಪ್ಯಾಕೇಜ್–6).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06.12.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/3870/Zen/2025-26

ಸ್ಪಿನ್ ಕೈಚಳಕ; ಇನಿಂಗ್ಸ್ ಜಯದ ಪುಳಕ

ರಣಜಿ ಟ್ರೋಫಿ ಕ್ರಿಕೆಟ್: ಚಂಡೀಗಢ ವಿರುದ್ಧ ಗೆದ್ದ ಕರ್ನಾಟಕಕ್ಕೆ ಗುಂಪಿನಲ್ಲಿ ಅಗ್ರಸ್ಥಾನ

• ಸತೀಶ ಬಿ.

ಹುಬ್ಬಳ್ಳಿ: ಉತ್ತಮ ಲಯದಲ್ಲಿರುವ ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ (73ಕ್ಕೆ7 ಮತ್ತು 45ಕ್ಕೆ3) ಮತ್ತು ಶಿಖರ್ ಶೆಟ್ಟಿ (43ಕ್ಕೆ2 ಮತ್ತು 61ಕ್ಕೆ 5) ಅವರ ಸ್ಪಿನ್ ಮೋಡಿಗೆ ಚಂಡೀಗಢ ತಂಡ ರಣಜಿ ಟ್ರೋಫಿ ಪಂದ್ಯದ ಮೂರನೇ ದಿನವಾದ ಮಂಗಳವಾರ ಇನಿಂಗ್ಸ್ ಮತ್ತು 185 ರನ್‌ಗಳ ಭಾರಿ ಸೋಲು ಅನುಭವಿಸಿತು. ಮಯಂಕ್ ಅಗರವಾಲ್ ಬಳಗಕ್ಕೆ ಪ್ರಸಕ್ತ ಋತುವಿನಲ್ಲಿ ಇದು ಎರಡನೇ ಗೆಲುವು.

ಕರ್ನಾಟಕ ತಂಡ 5 ಪಂದ್ಯಗಳಿಂದ 21 ಅಂಕ ಸಂಗ್ರಹಿಸಿ ‘ಬಿ’ ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಏರಿತು. ಮಹಾರಾಷ್ಟ್ರ ತಂಡ (5 ಪಂದ್ಯಗಳಿಂದ 18) ಎರಡನೇ ಸ್ಥಾನದಲ್ಲಿದೆ. ಚಂಡೀಗಢಕ್ಕೆ ಇದು ನಾಲ್ಕನೇ ಸೋಲು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಊಟದ ವಿರಾಮದ ನಂತರ ಚಂಡೀಗಢ (ಸೋಮವಾರ: 4 ವಿಕೆಟ್‌ಗೆ 72) ಮೊದಲ ಇನಿಂಗ್ಸ್‌ನಲ್ಲಿ 222 ರನ್‌ಗಳಿಗೆ ಆಲೌಟ್ ಆಯಿತು. ಫಾಲೊಆನ್‌ಗೆ ಒಳಗಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಚಂಡೀಗಢ ಹೋರಾಟ ತೋರದೇ ಶರಣಾಯಿತು. ಕೇವಲ ಎರಡೂವರೆ ಗಂಟೆಯಲ್ಲಿ 140 ರನ್‌ಗಳಿಗೆ ಆಲೌಟ್ ಆಯಿತು.

ಮೂರನೇ ದಿನ 16 ವಿಕೆಟ್‌ಗಳು ಪತನವಾದವು. ಅದರಲ್ಲಿ 14 ವಿಕೆಟ್‌ಗಳು ಸ್ಪಿನ್ನರ್‌ಗಳ ಪಾಲಾದವು. ಸೌರಾಷ್ಟ್ರ ವಿರುದ್ಧ ಈ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಎಡಗೈ ಸ್ಪಿನ್ನರ್ ಶಿಖರ್ ಮೊದಲ ಬಾರಿ ಐದು ವಿಕೆಟ್ ಗೊಂಚಲು ಗಳಿಸಿದರು. ಇದು ಅವರಿಗೆ ಮೂರನೇ ಪಂದ್ಯ.

ಮಂಗಳವಾರ ಬೆಳಿಗ್ಗೆ ಪ್ರವಾಸಿ ತಂಡಕ್ಕೆ ಶ್ರೇಯಸ್ ಮೊದಲ ಎಸೆತದಲ್ಲೇ ಪೆಟ್ಟು ಕೊಟ್ಟರು. ಅಂಕಿತ್ ಕೌಶಿಕ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ತಾಳ್ಮೆಯಿಂದ ಆಡುತ್ತಿದ್ದ ರಾಜ್ ಬಾವಾ (10, 42ಎ) ಅವರ ವಿಕೆಟ್ ಸಹ ಶ್ರೇಯಸ್ ಪಾಲಾಯಿತು.

ಈ ಹಂತದಲ್ಲಿ ನಾಯಕ ಮನನ್ ವೋಹ್ರಾ ಮತ್ತು ಗೌರವ್ ಪುರಿ (32, 62ಎ, 4X6) ಏಳನೇ ವಿಕೆಟ್‌ಗೆ 84 (132) ರನ್ ಸೇರಿಸಿ ಪ್ರತಿರೋಧದ ಮುನ್ಸೂಚನೆ ನೀಡಿದರು. ಗೌರವ್ ಅವರನ್ನು ಬೌಲ್ಡ್ ಮಾಡಿದ ಶಿಖರ್ ಜತೆಯಾಟ ಮುರಿದರು. ಔಟ್ ಆಗುವ ಮೊದಲು ಶ್ರೇಯಸ್ ಬೌಲಿಂಗ್‌ನಲ್ಲಿ ಗೌರವ್ ಸತತ ಮೂರು ಬೌಂಡರಿಗಳನ್ನು ಬಾರಿಸಿದರು.

ಒಂದೆಡೆ ವಿಕೆಟ್ ಉರುಳುತ್ತಿದ್ದರೂ ಏಕಾಂಗಿಯಾಗಿ ಹೋರಾಡಿದ ಮನನ್ ವೋಹ್ರಾ ಅಜೇಯ ಶತಕ (106, 161ಎ, 4X12, 6X1) ಬಾರಿಸಿದರು. ಎರಡನೇ ದಿನದಾಟದಲ್ಲಿ ಮೂರು ವಿಕೆಟ್ ಕಬಳಿಸಿದ್ದ ಶ್ರೇಯಸ್, ಮೂರನೇ ದಿನದಾಟದಲ್ಲಿ ಮತ್ತೆ ನಾಲ್ಕು ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. ಅವರು ಈ ಋತುವಿನಲ್ಲಿ ಎರಡನೇ ಬಾರಿ ಐದು ವಿಕೆಟ್ (73ಕ್ಕೆ 7) ಗೊಂಚಲು ಗಳಿಸಿದರು.

325 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಪ್ರವಾಸಿ ತಂಡಕ್ಕೆ ವೇಗಿ ವಿದ್ವತ್ ಕಾವೇರಪ್ಪ ಆರಂಭದಲ್ಲೇ ಆಘಾತ ನೀಡಿದರು. ವಿದ್ವತ್ ಹಾಕಿದ ಮೂರನೇ ಓವರ್‌ನಲ್ಲಿ ಆರಂಭಿಕ ಆಟಗಾರ ಅರ್ಜುನ್ ಆಜಾದ್ ಮಿಡ್ ವಿಕೆಟ್‌ನಲ್ಲಿ ಮೊಹ್ಸಿನ್ ಖಾನ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಶಿವಂ ಭಾಂಬ್ರಿ (43, 47ಎ, 4X4, 6X2) ಮತ್ತು ನಿಖಿಲ್ ಠಾಕೂರ್ (19, 59ಎ, 4X2) ಎರಡನೇ ವಿಕೆಟ್‌ಗೆ 64 ರನ್ (74ಎ) ಸೇರಿಸಿದ್ದೇ ಇನಿಂಗ್ಸ್‌ನ ದೊಡ್ಡ ಜತೆಯಾಟವಾಯಿತು. ಶಿಖರ್ ಹಾಕಿದ 16 ಓವರ್‌ನ ಮೊದಲ ಎಸೆತದಲ್ಲಿ ಶಿವಂ ಮೊದಲ ಸ್ಲಿಪ್‌ನಲ್ಲಿದ್ದ ಸ್ಮರಣ್ ರವಿಚಂದ್ರನ್ ಅವರಿಗೆ ಕ್ಯಾಚಿತ್ತು ನಿರ್ಗಮಿಸಿದರು. ನಂತರ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು.

ದಿನದಾಟ ಮುಗಿಯಲು ಎಂಟು ಓವರ್‌ಗಳು ಬಾಕಿ ಇದ್ದಾಗ ವಿಶು ಕಶ್ಯಪ್ ಅವರ ವಿಕೆಟ್ ಕಿತ್ತ ಶಿಖರ್ ಇನಿಂಗ್ಸ್‌ಗೆ ತೆರೆ ಎಳೆದರು. ಬ್ಯಾಟಿಂಗ್‌ನಲ್ಲೂ ಅವರು ಅರ್ಧಶತಕ (59) ಗಳಿಸಿದ್ದರು.

ಚಂಡೀಗಢ ವಿರುದ್ಧದ ಪಂದ್ಯದಲ್ಲಿ ಇನಿಂಗ್ಸ್ ಜಯಗಳಿಸಿದ ಕರ್ನಾಟಕ ತಂಡದ ಆಟಗಾರರ ಸಂಭ್ರಮ

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್; ಕರ್ನಾಟಕ: 8ಕ್ಕೆ 547 ಡಿಕ್ಲೇರ್ (160 ಓವರ್‌ಗಳಲ್ಲಿ)

ಚಂಡೀಗಢ: 222 (63.2 ಓವರ್‌ಗಳಲ್ಲಿ) (ಸೋಮವಾರ: 4ಕ್ಕೆ 72)

ಮನನ್ ವೋಹ್ರಾ ಔಟಾಗದೇ 106
ಅಂಕಿತ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 0
ರಾಜ್ ಬಾವಾ ಸಿ ಶ್ರೀಜಿತ್ ಬಿ ಗೋಪಾಲ್ 10
ಗೌರವ್ ಬಿ ಶಿಖರ್ ಶೆಟ್ಟಿ 32
ತರಣ್‌ಪ್ರೀತ್ ಸಿ ಅನೀಶ್ ಬಿ ಗೋಪಾಲ್ 7
ಜಗಜೀತ್ ಸಿಂಗ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 0
ನಿಶುಂಕ್ ಬಿ ಶಿಖರ್ ಶೆಟ್ಟಿ 9
ಇತರೆ: 4 (ಬೈ 4)
ವಿಕೆಟ್ ಪತನ: 5-72 (ಅಂಕಿತ್ ಕೌಶಿಕ್, 17.5), 6-104 (ರಾಜ್ ಬಾವಾ, 31.5), 7-188 (ಗೌರವ್ ಪುರಿ, 53.5), 8-199 (ತರಣ್‌ಪ್ರೀತ್ ಸಿಂಗ್, 56.6), 9-201 (ಜಗಜಿತ್ ಸಿಂಗ್, 58.2), 10-222 (ನಿಶುಂಕ್ ಬಿರ್ಲಾ, 63.2).
ಬೌಲಿಂಗ್: ವಿದ್ವತ್ ಕಾವೇರಪ್ಪ 5-1-14-0; ವಿದ್ಯಾಧರ ಪಾಟೀಲ 7-2-34-0; ಮೊಹ್ಸಿನ್ ಖಾನ್ 12-0-54-1; ಶ್ರೇಯಸ್ ಗೋಪಾಲ್ 23-2-73-7; ಶಿಖರ್ ಶೆಟ್ಟಿ 16.2-3-43-2

ಎರಡನೇ ಇನಿಂಗ್ಸ್: (ಫಾಲೊಆನ್) ಚಂಡೀಗಢ: 140 (33.5 ಓವರ್‌ಗಳಲ್ಲಿ)

ಭಾಂಬ್ರಿ ಸಿ ಸ್ಮರಣ್ ಬಿ ಶಿಖರ್ 43
ಅರ್ಜುನ್ ಸಿ ಮೊಹ್ಸಿನ್ ಬಿ ವಿದ್ವತ್ 0
ನಿಖಿಲ್ ಎಲ್‌ಬಿಡಬ್ಲ್ಯು ಶ್ರೇಯಸ್ 19
ಮನನ್ ವೋಹ್ರಾ ಸಿ ಸ್ಮರಣ್ ಬಿ ಶಿಖರ್ 6
ಅಂಕಿತ್ ಸಿ ಸ್ಮರಣ್ ಬಿ ಶಿಖರ್ 0
ರಾಜ್ ಬಾವಾ ರನೌಟ್ (ವಿದ್ವತ್) 27
ಗೌರವ್ ಸಿ ಅಭಿನವ್ ಬಿ ಶಿಖರ್ 13
ತರುಣ್‌ಪ್ರೀತ್ ಸಿ ಕರುಣ್ ಬಿ ಶ್ರೇಯಸ್ 4
ಕಶ್ಯಪ್ ಸಿ ಮೊಹ್ಸಿನ್ ಬಿ ಶಿಖರ್ 5
ಜಗಜೀತ್ ಬಿ ಶ್ರೇಯಸ್ 4
ನಿಶುಂಕ್ ಔಟಾಗದೇ 1
ಇತರೆ: 18 (ಬೈ 8, ಲೆಗ್‌ಬೈ 10)
ವಿಕೆಟ್ ಪತನ: 1-1 (ಅರ್ಜುನ್ ಆಜಾದ್; 2.5), 2-65 (ಶಿವಂ ಭಾಂಬ್ರಿ; 15.1) 3-71 (ಮನನ್ ವೋಹ್ರಾ; 19.5), 4-75 (ಅಂಕಿತ್ ಕೌಶಿಕ್; 21.5), 5-95 (ನಿಖಿಲ್ ಠಾಕೂರ್; 26.1), 6-120 (ಗೌರವ್ ಪುರಿ; 29.1), 7-125 (ತರಣ್‌ಪ್ರೀತ್ ಸಿಂಗ್; 30.6), 8-130 (ರಾಜ್ ಬಾವಾ; 32.1), 9-134 (ಜಗಜೀತ್ ಸಿಂಗ್ ಸಂಧು; 32.6), 10-140 (ವಿಶು; 133.5)
ಬೌಲಿಂಗ್: ವಿದ್ವತ್ ಕಾವೇರಪ್ಪ 4-2-2-1; ವಿದ್ಯಾಧರ ಪಾಟೀಲ 3-1-10-0; ಶ್ರೇಯಸ್ ಗೋಪಾಲ್ 13-1-45-3; ಶಿಖರ್ ಶೆಟ್ಟಿ 12.5-2-61-5; ಮೊಹ್ಸಿನ್ ಖಾನ್ 1-0-4-0
ಪಂದ್ಯದ ಆಟಗಾರ: ಸ್ಮರಣ್ ರವಿಚಂದ್ರನ್

ಫಲಿತಾಂಶ: ಕರ್ನಾಟಕಕ್ಕೆ ಇನಿಂಗ್ಸ್ ಮತ್ತು 185 ರನ್ ಜಯ

ವಿಶ್ವಕಪ್ ಸ್ನೂಕರ್ ಪಂಕಜ್‌ಗೆ ಆಘಾತ

ಮಸ್ಕತ್ (ಪಿಟಿಐ): ಪಾಕಿಸ್ತಾನದ ಅಸ್ಜದ್ ಇಕ್ಬಾಲ್ ಅವರು ಮಂಗಳವಾರ ನಡೆದ ವಿಶ್ವಕಪ್ ಸ್ನೂಕರ್ ಕ್ವಾರ್ಟರ್ ಫೈನಲ್‌ನಲ್ಲಿ ಮೂರು ಬಾರಿಯ ಐಬಿಎಸ್‌ಎಫ್ ವಿಶ್ವ ಚಾಂಪಿಯನ್ ಪಂಕಜ್ ಅಡ್ವಾಣಿ ಅವರಿಗೆ ಆಘಾತ ನೀಡಿದರು.

ಅಸ್ಜದ್ 3-0 ಯಿಂದ ಭಾರತದ ಪಂಕಜ್ ಅವರನ್ನು ಮಣಿಸಿ ಸೆಮಿಫೈನಲ್‌ಗೆ ಮುನ್ನಡೆದರು.



ಸ್ಪಿನ್ ಜೊತೆ ನಮ್ಮ ಬ್ಯಾಟ್ಸ್‌ಮನ್‌ಗಳು ಹೋರಾಟ ಮುಂದುವರೆಸಿದ್ದಾರೆ!

ಚೆಸ್ ವಿಶ್ವಕಪ್: ಸೆಮಿಫೈನಲ್‌ಗೆ ಯಾಕುಬೊಯೇವ್

ಅರ್ಜುನ್ ಹೋರಾಟ ಟೈಬ್ರೇಕರ್‌ಗೆ

ಪಣಜಿ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಚೆಸ್ ವಿಶ್ವಕಪ್ ಕ್ವಾರ್ಟರ್‌ಫೈನಲ್‌ನಲ್ಲಿ ಮಂಗಳವಾರ ಚೀನಾದ ವೀ ಯಿ ವಿರುದ್ಧ ಎರಡನೇ ಕ್ಲಾಸಿಕಲ್ ಆಟವನ್ನೂ ಡ್ರಾ ಮಾಡಿಕೊಂಡರು. ಇವರಿಬ್ಬರು ಬುಧವಾರ ಟೈಬ್ರೇಕರ್ ಪಂದ್ಯ ಆಡಬೇಕಾಗಿದ್ದು ಗೆದ್ದ ಆಟಗಾರ ಸೆಮಿಫೈನಲ್ ತಲುಪಲಿದ್ದಾರೆ.

ಸೋಮವಾರ ಇವರಿಬ್ಬರ ನಡುವೆ ಮೊದಲ ಕ್ಲಾಸಿಕಲ್ ಆಟವೂ ಡ್ರಾ ಆಗಿತ್ತು. ದಿನದ ಇತರ ಎರಡು ಕ್ವಾರ್ಟರ್‌ಫೈನಲ್ ಪಂದ್ಯಗಳೂ 1-1ರಲ್ಲಿ ಸಮಬಲಗೊಂಡವು.

ಮೊದಲ ಆಟದಲ್ಲಿ ಜಯಗಳಿಸಿದ್ದ ಉಜ್ಬೇಕ್ ಆಟಗಾರ ನದಿರ್ಬೆಕ್ ಯಾಕುಬೊಯೇವ್, ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ಜೊತೆ ಎರಡನೇ ಆಟವನ್ನು ಡ್ರಾ ಮಾಡಿಕೊಳ್ಳುವ ಮೂಲಕ 1.5-0.5ರಲ್ಲಿ ಜಯಗಳಿಸಿ ಸೆಮಿಫೈನಲ್ ತಲುಪಿದ ಮೊದಲ ಆಟಗಾರ ಎನಿಸಿದರು. ಡೊನ್ಚೆಂಕೊ ಕೊನೆಯವರೆಗೂ ಗೆಲುವಿಗೆ ಯತ್ನಿಸಿದರೂ, ಯಾಕುಬೊಯೇವ್ ಯಾವ ಹಂತದಲ್ಲೂ ಬಿಟ್ಟುಕೊಡಲಿಲ್ಲ.

ಮೊದಲ ಆಟವನ್ನು ಅಷ್ಟೇನೂ ಪ್ರಯಾಸವಿಲ್ಲದೇ ಡ್ರಾ ಮಾಡಿಕೊಂಡಿದ್ದ ಅರ್ಜುನ್ ಅವರಿಗೆ ಎರಡನೇ ಆಟದಲ್ಲಿ ಚೀನಾದ ವೀ ಮೇಲುಗೈ ಸಾಧಿಸಲು ಅವಕಾಶ ನೀಡಲಿಲ್ಲ. ಕಪ್ಪು ಕಾಯಿಗಳಲ್ಲಿ ಆಡಿದ ಚೀನಾದ ಆಟಗಾರ ಉತ್ತಮ ನಡೆಗಳಿಂದ ಗಮನಸೆಳೆದರಲ್ಲದೇ, ನಿರಾಯಾಸವಾಗಿ ಡ್ರಾ ಮಾಡಿಕೊಳ್ಳುವಲ್ಲಿ ಸಫಲರಾದರು. ಈ ಆಟ 32 ನಡೆಗಳನ್ನು ಕಂಡಿತು.

ಉಜ್ಬೇಕಿಸ್ತಾನದ ಜಾವೊಖಿರ್ ಸಿಂಧರೋವ್ ಅವರು ಮೆಕ್ಸಿಕೊದ ಹೊಸೆ ಎಡುವಾರ್ಡೊ ಮಾರ್ಟಿನೆಝ್ ಅಲ್ಕಂತಾರ ಜೊತೆ ಎರಡನೇ ಆಟವನ್ನೂ ಡ್ರಾ ಮಾಡಿಕೊಂಡರು. ಹೀಗಾಗಿ ಈ ಪಂದ್ಯದಲ್ಲೂ ಟೈಬ್ರೇಕರ್‌ಗಳ ಮೂಲಕ ವಿಜೇತ ಆಟಗಾರನ ನಿರ್ಧಾರವಾಗಲಿದೆ.

ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಮತ್ತು ರಷ್ಯಾದ ಆ್ಯಂಡ್ರೆ ಇಸಿಪೆಂಕೊ ಸಹ ಎರಡನೇ ಕ್ಲಾಸಿಕಲ್ ಆಟ ಡ್ರಾ ಮಾಡಿಕೊಂಡು ಟೈಬ್ರೇಕರ್ ಸುತ್ತಿಗೆ ಸಜ್ಜಾದರು.

ಸೆಮಿಫೈನಲ್ ತಲುಪಿದ ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬೊಯೇವ್ ಫಿಡೆ ಚಿತ್ರ

ಏಷ್ಯಾ ಕಪ್ ರೈಸಿಂಗ್ ಸ್ಟಾರ್ ಕ್ರಿಕೆಟ್: ಸೆಮಿಗೆ ಭಾರತ ಎ ತಂಡ

ದೋಹಾ (ಪಿಟಿಐ): ಹರ್ಷ್ ದುಬೆ (53; 44ಎ) ಅವರ ಅಜೇಯ ಅರ್ಧಶತಕದ ನೆರವಿನಿಂದ ಭಾರತ ಎ ತಂಡವು ಮಂಗಳವಾರ ಏಷ್ಯಾ ಕಪ್ ರೈಸಿಂಗ್ ಸ್ಟಾರ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಮಾನ್ ಎ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿತು.

ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದಿರುವ ಜಿತೇಶ್ ಶರ್ಮಾ ನಾಯಕತ್ವದ ಭಾರತ ಎ ತಂಡವು ಸೆಮಿಫೈನಲ್‌ಗೆ ಮುನ್ನಡೆಯಿತು. ಯುಎಇ ವಿರುದ್ಧ ಗೆದ್ದು ಅಭಿಯಾನ ಆರಂಭಿಸಿದ್ದ ಭಾರತ ಎ ತಂಡವು ಪಾಕಿಸ್ತಾನ ಶಾಹೀನ್ಸ್ ಎ ವಿರುದ್ಧ ಮುಗ್ಗರಿಸಿತ್ತು.

ಮೊದಲು ಬ್ಯಾಟಿಂಗ್ ಮಾಡಿದ ಒಮಾನ್ ಎ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 135 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ಎ ಇನ್ನೂ 13 ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 138 ರನ್ ಗಳಿಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಒಮಾನ್ ಎ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 135 (ವಸೀಂ ಅಲಿ ಔಟಾಗದೇ 54; ಗುರ್ಜನ್‌ಪ್ರೀತ್ ಸಿಂಗ್ 37ಕ್ಕೆ 2, ಸುಯಾಶ್ ಶರ್ಮಾ 12ಕ್ಕೆ 2). ಭಾರತ ಎ: 17.5 ಓವರ್‌ಗಳಲ್ಲಿ 4 ವಿಕೆಟ್‌ಗೆ 138 (ಹರ್ಷ್ ದುಬೆ ಔಟಾಗದೇ 53; ನಮನ್ ಧೀರ್). ಫಲಿತಾಂಶ: ಭಾರತ ಎ ತಂಡಕ್ಕೆ ಆರು ವಿಕೆಟ್‌ಗಳ ಗೆಲುವು. ಪಂದ್ಯದ ಆಟಗಾರ: ಹರ್ಷ್ ದುಬೆ.

ರದ್ದಾದ ವಿಮಾನ: ಬಿಲ್ಗಾರರ ದುಮ್ಮಾನ

ಕೋಲ್ಕತ್ತ (ಪಿಟಿಐ): ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ ನಂತರ ತವರಿಗೆ ಮರಳಬೇಕಾದ ಭಾರತ ಬಿಲ್ಗಾರರ (ಆರ್ಚರಿ ಪಟುಗಳ) ಒಂದು ಗುಂಪು ವಿಮಾನ ರದ್ದಾದ ಕಾರಣ ಢಾಕಾದಲ್ಲಿ ಆತಂಕ, ಅವ್ಯವಸ್ಥೆಗಳ ನಡುವೆ ಸೋಮವಾರ ರಾತ್ರಿಯನ್ನು ಕಳೆಯಬೇಕಾಯಿತು. ಪದಕಗಳನ್ನು ಗೆದ್ದು ತವರಿಗೆ ಮರಳುವ ತವಕದಲ್ಲಿದ್ದ ಬಿಲ್ಗಾರರಿಗೆ ಸುಮಾರು 10 ಗಂಟೆಗಳ ಅವಧಿ ದುಃಸ್ವಪ್ನದಂತಾಯಿತು.

ಬಾಂಗ್ಲಾದೇಶದ ರಾಜಧಾನಿಯಲ್ಲಿ ಅನ್ಯಮಾರ್ಗವಿಲ್ಲದೇ ‘ಧರ್ಮಶಾಲೆ’ಯಂತೆ ಇದ್ದ ಕಳಪೆ ವಸತಿಗೃಹದಲ್ಲಿ ತಂಡ ತಂಗಬೇಕಾಯಿತು. ಇಬ್ಬರು ಬಾಲಕರು, ಏಳು ಮಹಿಳಾ ಸ್ಪರ್ಧಿಗಳು ಸೇರಿದಂತೆ 11 ಮಂದಿ ಪ್ರಯಾಣಿಸಬೇಕಿದ್ದ ವಿಮಾನ ರದ್ದಾಯಿತು.

23 ಮಂದಿಯ ತಂಡ ಮೂರು ಗುಂಪುಗಳಲ್ಲಿ ತವರಿಗೆ ಮರಳಬೇಕಿತ್ತು. ಏಳು ಮಂದಿಯನ್ನು ಹೊಂದಿದ್ದ ಒಂದು ಗಂಪು ಸಕಾಲದಲ್ಲಿ ಕೋಲ್ಕತ್ತ ತಲುಪಿತು. ಮಹಾರಾಷ್ಟ್ರದ ಸ್ಪರ್ಧಿಗಳಿದ್ದ ತಂಡವೂ ಸಮಯಕ್ಕೆ ಸರಿಯಾಗಿ ಮುಂಬೈ ತಲುಪಿತು. ಆದರೆ ರಾತ್ರಿ 9.30ಕ್ಕೆ ಡೆಲ್ಲಿಗೆ ಹೊರಡಬೇಕಿದ್ದ ವಿಮಾನ ರದ್ದಾಗಿ ಕೊನೆಯ ಗುಂಪು ಸಂಕಷ್ಟಕ್ಕೆ ಸಿಲುಕಿತು.

ಬುಕ್ ಮಾಡಿದ್ದ ವಿಮಾನಯಾನ ಸಂಸ್ಥೆ ಬದಲಿ ವ್ಯವಸ್ಥೆ ಅಥವಾ ಯಾವುದೇ ರೀತಿಯ ಬೆಂಬಲ ನೀಡಲಿಲ್ಲ. ಅಭಿಷೇಕ್ ವರ್ಮಾ, ಜ್ಯೋತಿ ಸುರೇಖಾ ವೆನ್ನಂ, ಒಲಿಂಪಿಯನ್ ಧೀರಜ್ ಬೊಮ್ಮದೇವರ ಅವರು ದೆಹಲಿಗೆ ತೆರಳಬೇಕಾದ ತಂಡದಲ್ಲಿದ್ದರು. ಆದರೆ ತಾಂತ್ರಿಕ ದೋಷ ಕಾಣಿಸಿಕೊಂಡು ವಿಮಾನ ಸಕಾಲಕ್ಕೆ ಹೊರಡಲಿಲ್ಲ.

ಬಾಂಗ್ಲಾದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಮಾಜಿ ಪ್ರಧಾನಿ ಶೇಖ್ ಹಸೀನಾ ಮರಣ ದಂಡನೆ ಶಿಕ್ಷೆ ಪ್ರಕಟಿಸಿದ್ದು, ಜನ ಬೀದಿಗಿಳಿದಿದ್ದರು. ಮುಂದಿನ ವ್ಯವಸ್ಥೆ ಬಗ್ಗೆ ಸ್ಪಷ್ಟತೆಯಿಲ್ಲದೇ ರಾತ್ರಿ 2 ಗಂಟೆಯವರೆಗೆ ಟರ್ಮಿನಲ್‌ನಲ್ಲೇ ಇದ್ದ ಸ್ಪರ್ಧಿಗಳು, ವಿಮಾನ ರದ್ದಾಗಿರುವುದನ್ನು ಮತ್ತು ರಾತ್ರಿ ಬದಲಿ ವಿಮಾನ ವ್ಯವಸ್ಥೆ ಇಲ್ಲ ಎಂದು ಪ್ರಕಟಿಸಿದ ಬಳಿಕ ತಂಡ ಅನ್ಯಮಾರ್ಗವಿಲ್ಲದೇ ನಿಲ್ದಾಣದಿಂದ ನಿರ್ಗಮಿಸಬೇಕಾಯಿತು.

ಹೊರಟ ‘ಸ್ಥಳೀಯ ಬಸ್’ನಲ್ಲೂ ಕಿಟಕಿಗಳಿರಲಿಲ್ಲ. ಅರ್ಧ ಗಂಟೆ ಪ್ರಯಾಣಿಸಿದ ಬಳಿಕ ‘ಧರ್ಮಶಾಲೆ’ಯಂತಿದ್ದ ತಾತ್ಕಾಲಿಕ ಲಾಡ್ಜ್‌ನಲ್ಲಿ ತಂಡ ಉಳಿದುಕೊಳ್ಳಬೇಕಾಯಿತು.

ಫುಟ್‌ಬಾಲ್: ಬಾಂಗ್ಲಾಕ್ಕೆ ಮಣಿದ ಭಾರತ

ಢಾಕಾ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಮಂಗಳವಾರ ನಡೆದ ಏಷ್ಯನ್ ಕಪ್ ಅರ್ಹತಾ ಸುತ್ತಿನ ಸಿ ಗುಂಪಿನ ಪಂದ್ಯದಲ್ಲಿ 0-1 ರಿಂದ ಬಾಂಗ್ಲಾದೇಶ ವಿರುದ್ಧ ಸೋಲು ಅನುಭವಿಸಿತು.

ಇಲ್ಲಿನ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶೇಖ್ ಮೊರ್ಸಲಿನ್ 11ನೇ ನಿಮಿಷದಲ್ಲಿ ಬಾಂಗ್ಲಾ ಪರ ಗೆಲುವಿನ ಗೋಲು ದಾಖಲಿಸಿದರು. ಆತಿಥೇಯ ತಂಡದ ವಿರುದ್ಧ ಭಾರತಕ್ಕೆ 22 ವರ್ಷಗಳ ನಂತರ ಮೊದಲ ಸೋಲು ಇದಾಗಿದೆ. ಉಭಯ ತಂಡಗಳು 2027ರಲ್ಲಿ ನಡೆಯುವ ಟೂರ್ನಿಗೆ ಅರ್ಹತೆ ಪಡೆಯುವ ಹಾದಿಯಿಂದ ಹೊರಬಿದ್ದಿವೆ.

ಬೆಂಗಳೂರಿಗೆ ಆತಿಥ್ಯ • ಮೆಡ್ವೆಡೇವ್, ರಿಬಾಕಿನಾ ಭಾಗಿ

ಡಿ.17ರಿಂದ ವಿಶ್ವ ಟೆನಿಸ್ ಲೀಗ್

ಬೆಂಗಳೂರು: ಅಮೆರಿಕ ಓಪನ್ ಮಾಜಿ ಚಾಂಪಿಯನ್ ಡೇನಿಯಲ್ ಮೆಡ್ವೆಡೇವ್, ವಿಂಬಲ್ಡನ್ ಮಾಜಿ ಚಾಂಪಿಯನ್ ಎಲೆನಾ ರಿಬಾಕಿನಾ ಸೇರಿದಂತೆ ಅಂತರರಾಷ್ಟ್ರೀಯ ಟೆನಿಸ್ ತಾರೆಯರು ಬೆಂಗಳೂರಿನಲ್ಲಿ ಡಿಸೆಂಬರ್ 17 ರಿಂದ ನಡೆಯಲಿರುವ ವಿಶ್ವ ಟೆನಿಸ್ ಲೀಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಮೂರು ವರ್ಷ ಯುಎಇಯಲ್ಲಿ ನಡೆದ ಈ ಲೀಗ್ ಇದೇ ಮೊದಲ ಬಾರಿ ದೇಶದಲ್ಲಿ ನಡೆಯುತ್ತಿದೆ.

2022ರಲ್ಲಿ ಈ ಲೀಗ್ ಆರಂಭವಾಗಿತ್ತು. ಐಕಾನಿಕ್ ಸ್ಪೋರ್ಟ್ಸ್ ಅಂಡ್ ಇವೆಂಟ್ಸ್ ನಿರ್ವಹಿಸುವ ಈ ಲೀಗ್ ನಾಲ್ಕು ದಿನಗಳ ಅವಧಿಯದ್ದಾಗಿದ್ದು, ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಎಸ್‌.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಮೆಡ್ವೆಡೇವ್, ರಿಬಾಕಿನಾ ಜೊತೆಗೆ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್, ಫ್ರಾನ್ಸ್‌ನ ತಾರೆ ಗೇಲ್ ಮಾನ್ಫಿಲ್ಸ್, ವಿಶ್ವದ ಮಾಜಿ ಎರಡನೇ ಕ್ರಮಾಂಕದ ಆಟಗಾರ್ತಿ ಪೌಲಾ ಬಡೋಸಾ ಅಲ್ಲದೇ, ಇತ್ತೀಚೆಗೆ ಅಂತರರಾಷ್ಟ್ರೀಯ ಟೆನಿಸ್‌ಗೆ ವಿದಾಯ ಹೇಳಿದ ಭಾರತದ ರೋಹನ್ ಬೋಪಣ್ಣ, ಅಂಕಿತಾ ರೈನಾ, ಸುಮಿತ್ ನಗಾಲ್, ಯುಕಿ ಭಾಂಬ್ರಿ, ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರೂ ಭಾಗವಹಿಸಲಿದ್ದಾರೆ.



ಡೇನಿಯಲ್ ಮೆಡ್ವೆಡೇವ್

‘ಭಾರತದ ಟೆನಿಸ್ ಸಂಸ್ಕೃತಿಯ ಬಗ್ಗೆ ಸಾಕಷ್ಟು ಕೇಳಿದ್ದೆ. ಡಬ್ಲ್ಯುಟಿಎಲ್ ಮೂಲಕ ಇಲ್ಲಿಗೆ ಆಡಲು ಬರುತ್ತಿರುವುದು ರೋಮಾಂಚನ ಮೂಡಿಸುತ್ತಿದೆ’ ಎಂದು ವಿಶ್ವದ ಐದನೇ ಕ್ರಮಾಂಕದ ಆಟಗಾರ್ತಿ ರಿಬಾಕಿನಾ ಪ್ರತಿಕ್ರಿಯಿಸಿದ್ದಾರೆ. ಅವರು ಭಾರತದಲ್ಲಿ ಇದೇ ಮೊದಲ ಬಾರಿ ಆಡಲಿದ್ದಾರೆ.

ಡಬ್ಲ್ಯುಟಿಎಲ್‌ನಲ್ಲಿ ನಾಲ್ಕು ತಂಡಗಳು ಭಾಗವಹಿಸಲಿದ್ದು, ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುತ್ತದೆ. ಪ್ರತಿ ಪಂದ್ಯವು ಪುರುಷರ ಸಿಂಗಲ್ಸ್, ಮಹಿಳಾ ಸಿಂಗಲ್ಸ್ ಮತ್ತು ಎರಡು ಡಬಲ್ಸ್ ಮುಖಾಮುಖಿ ಒಳಗೊಳ್ಳಲಿದೆ.

ರೌಂಡ್‌ರಾಬಿನ್ ಪಂದ್ಯಗಳ ನಂತರ ಅಗ್ರ ಎರಡು ತಂಡಗಳು ಫೈನಲ್‌ನಲ್ಲಿ ಆಡಲಿವೆ.

ಡಬ್ಲ್ಯುಟಿಎಲ್‌ನ ಸಹ ಸ್ಥಾಪಕರಾದ ಮಹೇಶ್ ಭೂಪತಿ ಮಾತನಾಡಿ, ‘ಭಾರತವು ಟೆನಿಸ್‌ನೊಂದಿಗೆ ಗಾಢ ಸಂಬಂಧ ಹೊಂದಿದೆ. ಡಬ್ಲ್ಯುಟಿಎಲ್‌ನ ಆತಿಥ್ಯದಿಂದ ಈ ನಂಟು ಇನ್ನಷ್ಟು ಗಟ್ಟಿಯಾಗಲಿದೆ’ ಎಂದು ಹೇಳಿದರು.

ಶೂಟರ್‌ಗಳಿಗೆ ಮತ್ತೆ ಎರಡು ಪದಕ

ಟೋಕಿಯೊ (ಪಿಟಿಐ): ಭಾರತದ ಶೂಟರ್‌ಗಳು, 25ನೇ ಡೆಫಿಲಿಂಪಿಕ್ಸ್‌ನಲ್ಲಿ (ಶ್ರವಣದೋಷವಿರುವರಿಗೆ ನಡೆಯುವ ಕ್ರೀಡೆ) ಮಂಗಳವಾರ 10 ಮೀ.ಏರ್ ರೈಫಲ್ ಮಿಶ್ರ ಸ್ಪರ್ಧೆಯಲ್ಲಿ ಚಿನ್ನ ಮತ್ತು ಕಂಚಿನ ಪದಕಗಳನ್ನು ಗೆದ್ದು ಗಮನ ಸೆಳೆದರು.

ಧನುಷ್ ಶ್ರೀಕಾಂತ್- ಮಹಿತ್ ಸಂಧು ಜೋಡಿ ಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಜಿಯೊನ್ ದೆಯಿನ್- ಕಿಮ್ ವೂರಿಮ್ ಜೋಡಿಯನ್ನು 17-7 ರಿಂದ ಸೋಲಿಸಿತು. ಮೊಹಮ್ಮದ್ ಮುರ್ತಾಜಾ ವನಿಯಾ- ಕೋಮಲ್ ಮಿಲಿಂದ್ ವಾಘ್ಮಾರೆ ಜೋಡಿ ಕಂಚಿನ ಪದಕಕ್ಕಾಗಿ ನಡೆದ ಸೆಣಸಾಟದಲ್ಲಿ ಉಕ್ರೇನಿನ ವಾಯ್ಲೆಟಾ ಲಿಕೋವಾ- ಅಲೆಕ್ಸಾಂಡರ್ ಕೊಸ್ಸಿಕ್ ಜೋಡಿಯನ್ನು ಮಣಿಸಿತು.

ಇದು ಧನುಷ್ ಅವರಿಗೆ ಡೆಫಿಲಿಂಪಿಕ್ಸ್‌ನಲ್ಲಿ ಎರಡನೇ ಚಿನ್ನ. ಮಹಿತ್ ವೈಯಕ್ತಿಕ ಸ್ಪರ್ಧೆಯಲ್ಲಿ ಈ ಮೊದಲ ಬೆಳ್ಳಿ ಗೆದ್ದಿದ್ದರು.

ಭಾರತದ ಶೂಟರ್‌ಗಳು ಮೂರು ದಿನಗಳ ಸ್ಪರ್ಧೆಗಳಲ್ಲಿ ಒಟ್ಟು 9 ಪದಕಗಳನ್ನು ಗೆದ್ದಿದ್ದಾರೆ. ಬುಧವಾರ ಏರ್ ಪಿಸ್ತೂಲ್ ಮಿಶ್ರ ವಿಭಾಗದ ಸ್ಪರ್ಧೆ ನಡೆಯಲಿದೆ.

ಬಾಂಗ್ಲಾ ವಿರುದ್ಧ ಮಹಿಳಾ ತಂಡದ ತವರು ಸರಣಿ ಮುಂದೂಡಿಕೆ

ನವದೆಹಲಿ (ಪಿಟಿಐ): ಬಾಂಗ್ಲಾದೇಶ ವಿರುದ್ಧ ಮುಂದಿನ ತಿಂಗಳು ಭಾರತ ಮಹಿಳಾ ತಂಡವು ಆಡಬೇಕಾಗಿದ್ದ ಏಕದಿನ ಮತ್ತು ಟಿ20 ಪಂದ್ಯಗಳ ಸರಣಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಕ್ಕೆ ಹಾಕಿದೆ. ಇದೇ ಅವಧಿಯಲ್ಲಿ ವಿಶ್ವ ಚಾಂಪಿಯನ್ ತಂಡಕ್ಕೆ ಬೇರೊಂದು ಸರಣಿ ಆಯೋಜಿಸಲು ಮಂಡಳಿ ಯೋಚಿಸುತ್ತಿದೆ.

ಐಸಿಸಿ ಫ್ಯೂಚರ್ ಟೂರ್ಸ್ ಕಾರ್ಯಕ್ರಮದ ಭಾಗವಾಗಿ ಭಾರತ ಮಹಿಳಾ ತಂಡವು ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳನ್ನು ನೆರೆಯ ರಾಷ್ಟ್ರದ ವಿರುದ್ಧ ಆಡಬೇಕಾಗಿತ್ತು. ಪಂದ್ಯಗಳನ್ನು ಕೋಲ್ಕತ್ತ ಮತ್ತು ಕಟಕ್‌ನಲ್ಲಿ ಆಡಿಸುವ ನಿರೀಕ್ಷೆಯಿತ್ತು.

‘ಡಿಸೆಂಬರ್‌ನಲ್ಲಿ ಈ ಸರಣಿಗೆ ಪರ್ಯಾಯವಾಗಿ ಬೇರೊಂದು ಸರಣಿ ಏರ್ಪಾಡು ಮಾಡಲು ಪ್ರಯತ್ನಿಸುತ್ತಿದ್ದು, ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ. ಬಾಂಗ್ಲಾ ವಿರುದ್ಧ ಸರಣಿಗೆ ಸಂಬಂಧಿಸಿ ನಾವು ಮುಂದುವರಿಯುವುದಿಲ್ಲ’ ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ. ಆದರೆ ವಿವರಗಳನ್ನು ನೀಡಿಲ್ಲ.

ಪ್ರಸ್ತುತ ಉಭಯ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಸಂಬಂಧ ಅಷ್ಟೇನೂ ಉತ್ತಮವಾಗಿಲ್ಲದಿರುವುದು ಸರಣಿ ಮುಂದೂಡಲು ಕಾರಣ ಎನ್ನಲಾಗುತ್ತಿದೆ.

ಬ್ಯಾಡ್ಮಿಂಟನ್: ಎರಡನೇ ಸುತ್ತಿಗೆ ಸಾತ್ವಿಕ್– ಚಿರಾಗ್

ಸಿಡ್ನಿ (ಪಿಟಿಐ): ಭಾರತದ ಅಗ್ರ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿ ಪಂದ್ಯದಲ್ಲಿ ಮಂಗಳವಾರ ತೈವಾನ್‌ನ ಚಾಂಗ್ ಕೊ-ಚಿ ಮತ್ತು ಪೊ ಲಿ-ವೀ ಜೋಡಿಯನ್ನು ನೇರ ಆಟಗಳಿಂದ ಸೋಲಿಸಿ ಎರಡನೇ ಸುತ್ತಿಗೆ ತಲುಪಿತು.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತದ ಆಟಗಾರರು 25-23, 21-16 ರಿಂದ ತೈವಾನ್‌ನ ಜೋಡಿಯನ್ನು ಸೋಲಿಸಿದರು. ಭಾರತದ ಜೋಡಿ, ಈ ಮೊದಲು ಸತತವಾಗಿ ನಡೆದ ಹಾಂಗ್‌ಕಾಂಗ್ ಸೂಪರ್ 500 ಮತ್ತು ಚೀನಾ ಮಾಸ್ಟರ್ಸ್ ಸೂಪರ್ 750 ಟೂರ್ನಿಯಲ್ಲಿ ಫೈನಲ್ಸ್ ತಲುಪಿದ್ದರು.

ಭಾರತದ ಸಿಂಗಲ್ಸ್ ಆಟಗಾರರಾದ ಲಕ್ಷ್ಯ ಸೇನ್, ಎಚ್‌.ಎಸ್. ಪ್ರಣಯ್, ಕಿದಂಬಿ ಶ್ರೀಕಾಂತ್ ಮತ್ತು ಆಯುಷ್ ಶೆಟ್ಟಿ ಅವರು ಬುಧವಾರ ಅಭಿಯಾನ ಆರಂಭಿಸಲಿದ್ದಾರೆ.

ಟ್ರ್ಯಾಕ್‌ನಲ್ಲಿ ಓಡಾಡುವ ಬೀದಿನಾಯಿಗಳು • ಗಬ್ಬೆದ್ದು ನಾರುತ್ತಿರುವ ಶೌಚಾಲಯಗಳು

ನಿರ್ವಹಣೆಯಿಲ್ಲದೆ ಸೊರಗುತ್ತಿದೆ ‘ಕಂಠೀರವ’

• ಪ್ರದೀಶ್ ಎಚ್‌.ಮರೋಡಿ

ಬೆಂಗಳೂರು: ಕಿತ್ತುಹೋಗಿರುವ ಸಿಂಥೆಟಿಕ್ ಟ್ರ್ಯಾಕ್‌ಗಳು, ನಿರ್ವಹಣೆಯಿಲ್ಲದ ಆಸನಗಳು, ಎಲ್ಲೆಂದರಲ್ಲಿ ಬಿದ್ದಿರುವ ಕಸಕಡ್ಡಿಗಳು, ಗಬ್ಬೆದ್ದು ನಾರುತ್ತಿರುವ ಶೌಚಾಲಯಗಳು, ಅಡ್ಡಾದಿಡ್ಡಿಯಾಗಿ ಓಡಾಡುವ ಬೀದಿನಾಯಿಗಳು, ಕಗ್ಗತ್ತಲೆಯಲ್ಲೇ ತಾಲೀಮು ನಡೆಸುವ ಅಥ್ಲೀಟ್‌ಗಳು... ಇದು ಬೆಂಗಳೂರಿನ ಹೆಗ್ಗುರುತಾಗಿರುವ ಕಂಠೀರವ ಹೊರಾಂಗಣ ಕ್ರೀಡಾಂಗಣದ ದುಸ್ಥಿತಿ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಒಡೆತನದಲ್ಲಿರುವ ಈ ಕ್ರೀಡಾಂಗಣವು ನಿರ್ವಹಣೆಯಿಲ್ಲದೆ ಸೊರಗುತ್ತಿದೆ. 18 ಸಾವಿರಕ್ಕೂ ಅಧಿಕ ಆಸನ ಸಾಮರ್ಥ್ಯವುಳ್ಳ ಈ ಕ್ರೀಡಾಂಗಣವು ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಿಗೆ ಸಾಕ್ಷಿಯಾಗಿದೆ.

ಆದರೆ, ಬಾಡಿಗೆ ದರದಲ್ಲಿ ಲಭ್ಯವಿರುವ ಈ ಕ್ರೀಡಾಂಗಣವು ಕ್ರೀಡೇತರ ಚಟುವಟಿಕೆಗಳಿಗೂ ಬಳಕೆಯಾಗುತ್ತಿದೆ. ಸರ್ಕಾರದ ಪ್ರಮುಖ ಸಭೆ ಸಮಾರಂಭಕ್ಕೆ, ಗಣ್ಯರ ಪಾರ್ಥಿವ ಶರೀರದ ಸಾರ್ವಜನಿಕರ ದರ್ಶನಕ್ಕೆ, ಸಿನಿಮಾ ಚಿತ್ರೀಕರಣಕ್ಕೂ ಬಳಕೆಯಾಗುತ್ತಿದೆ. ಹೀಗಾಗಿ, ರಾಜ್ಯ ಅಥವಾ ರಾಷ್ಟ್ರವನ್ನು ಪ್ರತಿನಿಧಿಸುವ ಅಥ್ಲೀಟ್‌ಗಳ ಅಭ್ಯಾಸಕ್ಕೆ ಕೇಂದ್ರವಾಗಬೇಕಿದ್ದ ಈ ತಾಣವು ‘ಸಾರ್ವಜನಿಕ’ ಬಳಕೆಯಿಂದಾಗಿ ಅವ್ಯವಸ್ಥೆಯ ಆಗರವಾಗಿದೆ.

‘ಕರ್ನಾಟಕ ಮಿನಿ ಕ್ರೀಡಾಕೂಟ’ ಇದೇ ಕ್ರೀಡಾಂಗಣದಲ್ಲಿ ನ.2ರಿಂದ 9ರತನಕ ನಡೆದಿತ್ತು. ಅಂದು ಭಾಗವಹಿಸಿದ್ದ ಸಾವಿರಾರು ಕ್ರೀಡಾಪಟುಗಳಿಗೆ ಹಂಚಿದ್ದ ತಂಪು ಪಾನೀಯದ ಪ್ಯಾಕೆಟ್‌ಗಳು ಒಂದು ವಾರ ಪ್ರೇಕ್ಷಕರ ಗ್ಯಾಲರಿಯಲ್ಲಿ ರಾಶಿಯಾಗಿ ಬಿದ್ದಿದ್ದವು.

‘ಕೋಟ್ಯಂತರ ರೂಪಾಯಿ ವೆಚ್ಚಮಾಡಿ ಮೂರು ವರ್ಷಗಳ ಹಿಂದೆ ಅಳವಡಿಸಿದ್ದ ಸಿಂಥೆಟಿಕ್ ಟ್ರ್ಯಾಕ್ ಕಿತ್ತುಹೋಗಿದೆ. ಕಳೆದ ವರ್ಷ ನಡೆದಿದ್ದ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಸಂದರ್ಭದಲ್ಲಿ ಕೆಲ ಅಥ್ಲೀಟ್‌ಗಳು ಬ್ಲಾಕ್‌ನಲ್ಲಿ ಜಾರಿದ್ದರು. ಪಕ್ಕದ ಚೆನ್ನೈನಲ್ಲಿ ಅಥ್ಲೀಟ್‌ಗಳ ಮತ್ತು ಸಾರ್ವಜನಿಕರ ಅಭ್ಯಾಸಕ್ಕೆ ಪ್ರತ್ಯೇಕ ಟ್ರ್ಯಾಕ್ ಇದೆ. ಆದರೆ, ಇಲ್ಲಿ ಪುಟ್ಟಮಕ್ಕಳಿಂದ ಹಿಡಿದು ರಾಷ್ಟ್ರೀಯ ಅಥ್ಲೀಟ್‌ಗಳು ಒಂದೇ ಟ್ರ್ಯಾಕ್‌ನಲ್ಲಿ ತಾಲೀಮು ನಡೆಸಬೇಕಿದೆ. ನಾಯಿಗಳೂ ಟ್ರ್ಯಾಕ್‌ನಲ್ಲಿ ಓಡಾಡುತ್ತಿರುವುದರಿಂದ ಅಥ್ಲೀಟ್‌ಗಳಿಗೆ ತೊಂದರೆಯಾಗುತ್ತಿದೆ’ ಎಂದು ರಾಷ್ಟ್ರೀಯ ಸ್ಪ್ರಿಂಟ್ ಅಥ್ಲೀಟ್ ಜೋನಾ ಅಸಮಾಧಾನ ವ್ಯಕ್ತಪಡಿಸಿದರು.

‘ಕ್ರೀಡಾಂಗಣ ಪ್ರವೇಶಕ್ಕೆ ಶುಲ್ಕ ವಸೂಲು ಮಾಡುತ್ತಿದ್ದರೂ ಅದಕ್ಕೆ ತಕ್ಕಂತೆ ನಿರ್ವಹಣೆ ಮಾಡಿಲ್ಲ. ಜಿಮ್‌ನಲ್ಲೂ ನಮಗೆ ಬೇಕಾದ ಸಲಕರಣೆಗಳಿಲ್ಲ. ಐಸ್ ಬಾತ್ ವ್ಯವಸ್ಥೆಯೇ ಇಲ್ಲ. ಶೌಚಾಲಯಗಳಂತೂ ಬಳಸಲು ಯೋಗ್ಯವಾಗಿಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ಅಥ್ಲೀಟ್ ಆಕ್ರೋಶ ಹೊರಹಾಕಿದರು.

‘ಹಿಂದೆ ಸಂಪಂಗಿ ಕೆರೆಯಿದ್ದ ಜಾಗದಲ್ಲಿ ಈ ಕ್ರೀಡಾಂಗಣ ನಿರ್ಮಿಸಲಾಗಿದೆ. ಸುತ್ತ ಎತ್ತರದ ಪ್ರದೇಶವಿದ್ದು, ಕ್ರೀಡಾಂಗಣ ತಗ್ಗು ಪ್ರದೇಶದಲ್ಲಿ ಇರುವುದರಿಂದ ಮಳೆಗಾಲದಲ್ಲಿ ನೀರು ನುಗ್ಗುವುದು ಸಾಮಾನ್ಯವಾಗಿದೆ. ಭವಿಷ್ಯದ ಸವಾಲುಗಳ ಬಗ್ಗೆ ಯೋಚಿಸದೆ ಅಂದಿನ ಎಂಜಿನಿಯರ್‌ಗಳು ಮಾಡಿರುವ ಎಡವಟ್ಟಿನಿಂದ ಪ್ರತಿ ವರ್ಷವೂ ಸಮಸ್ಯೆ ಅನುಭವಿಸುವಂತಾಗಿದೆ’ ಎಂದು ಹಿರಿಯ ಕೋಚ್ ಒಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಕಂಠೀರವ ಹೊರಾಂಗಣ ಕ್ರೀಡಾಂಗಣ ಒಳನೋಟ (ಎಡಚಿತ್ರ) ಪ್ರೇಕ್ಷಕರ ಗ್ಯಾಲರಿಯಲ್ಲಿ ಬಿದ್ದಿದ್ದ ಕಸ ಪ್ರಜಾವಾಣಿ ಚಿತ್ರ

ರಾಷ್ಟ್ರೀಯ ಅಥ್ಲೀಟ್‌ಗಳಿಗೆ ಅಭ್ಯಾಸ ನಡೆಸಲು ಪ್ರಶಾಂತ ವಾತಾವರಣ ಬೇಕು. ಸುತ್ತಮುತ್ತಲಿನ ಪರಿಸರವು ನೈರ್ಮಲ್ಯದಿಂದ ಕೂಡಿರಬೇಕು. ಆದರೆ, ಕಂಠೀರವ ಕ್ರೀಡಾಂಗಣದಲ್ಲಿ ಅಂತಹ ವ್ಯವಸ್ಥೆ ಇಲ್ಲ.
ಜೋನಾ, ರಾಷ್ಟ್ರೀಯ ಸ್ಪ್ರಿಂಟ್ ಅಥ್ಲೀಟ್

ಕಂಠೀರವ ಹೊರಾಂಗಣ ಕ್ರೀಡಾಂಗಣದ ಸಮರ್ಪಕ ನಿರ್ವಹಣೆಗೆ ಕ್ರಮ ಕೈಗೊಳ್ಳುತ್ತೇವೆ. ಎರಡು ವಾರಗಳಲ್ಲೇ ಬದಲಾವಣೆ ತರುತ್ತೇವೆ
ಚೇತನ್ ಆರ್, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

‘ನಾಯಿಗಳ ಉಪಟಳ; ಸಮಸ್ಯೆಗೆ ಪರಿಹಾರ’

‘ಕ್ರೀಡಾಂಗಣದೊಳಗೆ ಬೀದಿನಾಯಿಗಳು ಬರುವ ಬಗ್ಗೆ ದೂರುಗಳು ಬಂದಿವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಸಭೆಯಲ್ಲಿ ಬೀದಿನಾಯಿಗಳ ನಿಯಂತ್ರಣ ಕುರಿತು ಚರ್ಚೆ ನಡೆದಿದೆ. ಶೀಘ್ರದಲ್ಲೇ ಈ ಸಮಸ್ಯೆಗೆ ಪರಿಹಾರ ದೊರೆಯಲಿದೆ’ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಆರ್. ಭರವಸೆ ನೀಡಿದ್ದಾರೆ.

‘ಕಂಠೀರವ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಅಥ್ಲೀಟ್‌ಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ. ಅಂತಹ ಅಥ್ಲೀಟ್‌ಗಳು ಇಲಾಖೆಗೆ ಸಂಬಂಧಪಟ್ಟ ದಾಖಲೆಯನ್ನು ಒದಗಿಸಿ ವಿನಾಯಿತಿ ಪಡೆಯಬಹುದು’ ಎಂದು ಅವರು ಹೇಳಿದ್ದಾರೆ.

‘ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಲು ಅಥ್ಲೀಟ್‌ಗಳು ಸೇರಿದಂತೆ ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡುವುದಕ್ಕೆ ನಮ್ಮ ವಿರೋಧವಿದೆ. ಈ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಿಗೆ ಶೀಘ್ರದಲ್ಲೇ ಪತ್ರ ಬರೆದು, ಶುಲ್ಕ ವಿನಾಯಿತಿ ನೀಡುವಂತೆ ಒತ್ತಾಯಿಸುತ್ತೇವೆ’ ಎಂದು ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಕಾರ್ಯದರ್ಶಿ ಎ. ರಾಜವೇಲು ತಿಳಿಸಿದ್ದಾರೆ.